ರಾಘವೇಂದ್ರ ಪಾಟೀಲ ಅವರ
ತೇರು ಕಾದಂಬರಿ ಒಂದು ವಿವೇಚನೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ
ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕ
ಹನಗಂಡಿ ಸುರೇಶ ಭೀಮಪ್ಪ

ಮಾರ್ಗದರ್ಶಕರು
ಡಾ. ಎಸ್.ಎಸ್.ಅಂಗಡಿ
ಪ್ರವಾಚಕರು

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೮

ರಾಘವೇಂದ್ರ ಪಾಟೀಲ ಅವರ
ತೇರು ಕಾದಂಬರಿ ಒಂದು ವಿವೇಚನೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ
ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕ
ಹನಗಂಡಿ ಸುರೇಶ ಭೀಮಪ್ಪ

ಮಾರ್ಗದರ್ಶಕರು
ಡಾ. ಎಸ್.ಎಸ್.ಅಂಗಡಿ
ಪ್ರವಾಚಕರು

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

೨೦೦೮

ಮಾರ್ಗದರ್ಶಕರ ದೃಢೀಕರಣ ಪತ್ರ

ರಾಘುವೇಂದ್ರ ಪಾಟೀಲ ಅವರ ತೇರು ಕಾದಂಬರಿ ಒಂದು ವಿವೇಚನೆ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ ಹನಗಂಡಿ ಸುರೇಶ ಭೀಮಪ್ಪ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ.ಎಸ್.ಎಸ್.ಅಂಗಡಿ
ಪ್ರವಾಚಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : ೩೦-೯-೨೦೦೮

ಸಂಶೋಧಕರ ಪ್ರಮಾಣ ಪತ್ರ

ರಾಘುವೇಂದ್ರ ಪಾಟೀಲ ಅವರ ತೇರು ಕಾದಂಬರಿ ಒಂದು ವಿವೇಚನೆ ಎಂಬ ನಿಬಂಧವನ್ನು ಡಾ.ಎಸ್.ಎಸ್.ಅಂಗಡಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಭಾಷಾ ನಿಕಾಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಹನಗಂಡಿ ಸುರೇಶ ಭೀಮಪ್ಪ
ಸಂಶೋಧಕ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : ೨೦-೯-೨೦೦೮

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್.ಅಧ್ಯಯನ ಮಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಕುಲಪತಿಗಳಾದ ಡಾ.ಎ.ಮುರಿಗೆಪ್ಪ ಮತ್ತು ಈ ಹಿಂದಿನ ಕುಲಪತಿಗಳಾದ ಡಾ.ಕೆ.ವಿ.ನಾರಾಯಣ ಅವರಿಗೆ ಹಾಗೂ ಪ್ರಸ್ತುತ ಕುಲಸಚಿವರಾದ ಡಾ.ಹಿ.ಚಿ.ಬೋರಲಿಂಗಯ್ಯ ಅವರಿಗೆ, ಅಧ್ಯಯನಾಂಗದ ನಿರ್ದೇಶಕರಾದ ಡಾ.ಡಿ.ಪಾಂಡುರಂಗಬಾಬು ಅವರಿಗೆ, ಅಧ್ಯಯನದ ಕ್ರಮವನ್ನು ಬೋಧಿಸಿ ಪ್ರೀತಿಯಿಂದ ಕಾಳಜಿ ವಹಿಸಿ ಮಾರ್ಗದರ್ಶನ ಮಾಡಿದ ಡಾ.ಎಸ್.ಎಸ್.ಅಂಗಡಿ ಅವರಿಗೆ, ಅಧ್ಯಯನದ ಅವಧಿಯಲ್ಲಿ ಪೂರಕ ಮಾಹಿತಿಯನ್ನು ನೀಡಿದ ಹಸ್ತಪ್ರತಿಶಾಸ್ತ್ರ ವಿಭಾಗದ ನನ್ನ ವಿದ್ಯಾಗುರುಗಳಾದ ಡಾ.ವೀರೇಶ ಬಡಿಗೇರ, ಡಾ.ಎಫ್.ಟಿ.ಹಳ್ಳಿಕೇರಿ, ಡಾ.ಎಸ್.ಆರ್.ಚನ್ನವೀರಪ್ಪ, ಡಾ.ಕೆ.ರವೀಂದ್ರನಾಥ ಅವರಿಗೆ,

ವಿಭಾಗದ ಹಿರಿಯ ಸ್ನೇಹಿತರಿಗೆ, ನನ್ನ ಅಧ್ಯಯನಕ್ಕೆ ಒತ್ತಾಸೆಯಾಗಿ ನಿಂತ ನನ್ನಪ್ಪ ಭೀಮಪ್ಪ, ನನ್ನವ್ವ ಮಲ್ಲವ್ವ, ಸಹೋದರರು ಬಸವರಾಜ, ಅಶೋಕ, ಸಹೋದರಿ ಕಮಲ, ನನ್ನ ಕಳ್ಳುಬಳ್ಳಿಯ ಸಂಬಂಧಿಕರಿಗೆ, ನನ್ನ ಅಧ್ಯಯನದ ಆಸಕ್ತಿಯನ್ನು ಹೆಚ್ಚಿಸಿದ ಶ್ರೀಯುತ ಲಕ್ಷ್ಮಣರಾವ್ ಹುಳ್ಳೇರ, ಕೊಣ್ಣೂರ ಸರ್ ಹಾಗೂ ರಾಘವೇಂದ್ರ ಪಾಟೀಲ ಮತ್ತು ಅವರ ಶ್ರೀಮತಿ ಜಯಶ್ರೀ, ಡಾ.ಸಿ.ಕೆ.ನಾವಲಗಿ, ಪ್ರೊ.ಜಿ.ವಿ.ಮಳಗಿ, ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪದವಿ ಮಹಾವಿದ್ಯಾಲಯ ಪ್ರಾಚಾರ್ಯರಾದ ಯು.ಬಿ.ಮುಳ್ಳೂರ, ಸಹ ಅಧ್ಯಾಪಕರುಗಳಿಗೆ, ಅಧ್ಯಕ್ಷರಿಗೆ, ಆಡಳಿತ ಮಂಡಳಿಯ ಸದಸ್ಯರಿಗೆ,

ನನ್ನ ಆತ್ಮೀಯ ಮಿತ್ರರಾದ ಎಸ್.ಆರ್.ನಿಂಗನ್ನವರ, ರಾಜುಕಂಬಾರ, ಡಾ.ಎ.ಸಿ.ವಾಲಿ, ರಾಜು ಮೂರಗೊಡ, ಕೆಂಪಣ್ಣಾಪರವ್ವಗೋಳ, ಎಸ್.ಆರ್.ಕೆಂಚನ್ನವರ, ಬಿ.ಮೈಲಾರಪ್ಪ, ಈಶ್ವರಗೌಡ ಚೌಬಾರಿ, ಕೃಷ್ಣಾಲಮಾಣಿ, ಮಹಾದೇವ ಹೊಸಮನಿ, ಬಿ.ಎ.ದೇಸಾಯಿ, ಆರ್.ಕೆ.ಕಳಸನ್ನವರ, ಆಯ್, ಆರ್.ಕಳಸನ್ನವರ, ಎ.ಆರ್.ಪಾಟೀಲ, ರಾಮಲಿಂಗ ಡಬಾಜ ಹಾಗೂ ಅನಿಕೇತನ ವಸತಿ ನಿಲಯದ ನನ್ನ ಎಲ್ಲಾ ಆತ್ಮೀಯ ಗೆಳೆಯರಿಗೆ, ಪುಸ್ತಗಳನ್ನು ಪರಾಮರ್ಶಿಸಲು ಅವಕಾಶ ಕಲ್ಪಿಸಿಕೊಟ್ಟ ಗ್ರಂಥಾಲಯದ ಗ್ರಂಥಪಾಲಕರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ, ಹಸ್ತಪ್ರತಿಶಾಸ್ತ್ರ ವಿಭಾಗದ ಆಡಳಿತ ಸಿಬ್ಬಂದಿಗಳಾದ ನಾಯಕ್, ಸತ್ಯಮೂರ್ತಿ, ಈರಪ್ಪ ಅವರುಗಳಿಗೆ, ಅಚ್ಚುಕಟ್ಟಾಗಿ ಅಕ್ಷರ ಸಂಯೋಜಿಸಿಕೊಟ್ಟ ಶ್ರೀಮತಿ ರಶ್ಮಿ ಹಾಗೂ ಶ್ರೀ ಎ.ಎಂ.ಕೃಪಾಶಂಕರ್ ಅವರಿಗೆ

ಕೃತಜ್ಞತೆಗಳು

ಹನಗಂಡಿ ಸುರೇಶ ಭೀಮಪ್ಪ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ಸ್ವರೂಪ

೧

ಅಧ್ಯಯನದ ಉದ್ದೇಶ ಮತ್ತು ಸ್ವರೂಪ

ಸಾಹಿತ್ಯ ಚಲನಶೀಲವಾಗಿರುತ್ತದೆ. ಹಳೆಯ ನೀರನ್ನು ಹೊಸ ನೀರು ಕೊಚ್ಚಿಕೊಂಡೊಯ್ಯುವಂತೆ ಸಾಹಿತ್ಯವು ಸಹಿತ ಕಾಲಕಾಲಕ್ಕೆ ಸೃಷ್ಟಿಯಾಗುತ್ತ ಅಂದಂದಿನ ಸಾಮಾಜಿಕ ಚಿತ್ರಣವನ್ನು, ಸಂಸ್ಕೃತಿಯ ಮಟ್ಟವನ್ನು ಬಿಂಬಿಸುವ, ಮಾನವನ ಜೀವನವನ್ನು ಪ್ರತಿಬಿಂಬಿಸುವ ಕೆಲಸ ಮಾಡುತ್ತದೆ. ಕನ್ನಡ ಸಾಹಿತ್ಯವು ಇದಕ್ಕೆ ಹೊರತಲ್ಲ. ಹಳಗನ್ನಡದಿಂದ ಹೊಸಗನ್ನಡದವರೆಗೆ ಕನ್ನಡ ಸಾಹಿತ್ಯ ಹಲವು ರೀತಿ ಬೆಳೆದಿದೆ. ಹೊಸಗನ್ನಡ ಸಾಹಿತ್ಯವು ಪ್ರಮುಖವಾಗಿ ನಾಲ್ಕು ಘಟ್ಟಗಳಲ್ಲಿ ಬೆಳೆದಿದೆ. ನವೋದಯ, ಪ್ರಗತಿಶೀಲ, ನವ್ಯ, ದಲಿತ ಮತ್ತು ಬಂಡಾಯ. ಈ ನಾಲ್ಕು ಘಟ್ಟಗಳು ವೈವಿಧ್ಯಮಯವಾಗಿ ಹುಲುಸಾಗಿ ಬೆಳೆದಿವೆ. ಹೀಗೆ ಸಮೃದ್ಧವಾಗಿ ಬೆಳೆಯಲು ಹಲವಾರು ಸಾಹಿತ್ಯ ಪ್ರಕಾರಗಳು ಕಾರಣವಾಗಿವೆ. ಅವುಗಳಲ್ಲಿ ಕಾದಂಬರಿ ಸಾಹಿತ್ಯ ಒಂದು ಹೊಸ ಹೆದ್ದಾರಿಯನ್ನೇ ನಿರ್ಮಿಸಿದೆ.

ಆಧುನಿಕ ಸಾಹಿತ್ಯದಲ್ಲಿ ಕಾದಂಬರಿಯು ಅತ್ಯಂತ ಜನಪ್ರಿಯವಾದ ಸಾಹಿತ್ಯ ಪ್ರಕಾರವಾಗಿ ಬೆಳೆದುಬಂದಿದೆ. ಈ ಕಾದಂಬರಿ ಸಾಹಿತ್ಯ ಸಾಮಾನ್ಯ ಜನರ ಆಶೆ, ಅಭಿರುಚಿ ಹಾಗೂ ಸಂಸ್ಕೃತಿಯ ಮಟ್ಟವನ್ನು ವಿವರಿಸುವ ಮಾಧ್ಯಮವಾಗಿದೆ. ಇದಕ್ಕಾಗಿಯೇ ಕಾದಂಬರಿ ಸಾಹಿತ್ಯಕ್ಕೆ ರೂಪ, ಗುಣಲಕ್ಷಣಗಳು, ನಿಯಮ, ನಿರ್ಬಂಧಗಳು ವಿಶೇಷವಾಗಿ ಕಂಡುಬರದಿದ್ದರೂ ಸಹಿತ ಅದಕ್ಕೆ ಅದರದೇ ಆದ ತಾತ್ವಿಕ ಚೌಕಟ್ಟು ಇರುತ್ತದೆ. ಸಾಮಾನ್ಯವಾಗಿ ಕಾದಂಬರಿ ಎಂದರೆ ಜೀವನ ಸಿದ್ಧಾಂತವನ್ನು ಪ್ರಯೋಗಾತ್ಮಕವಾಗಿ ವಸ್ತು, ಪಾತ್ರ, ಘಟನೆಗಳಿಂದ ವಿಸ್ತರಿಸುವ ರೂಪವನ್ನು ಕಾದಂಬರಿ ಎಂದು ಕರೆಯುತ್ತಾರೆ. "ಕಾದಂಬರಿಯನ್ನು 'ಕರತಲರಂಗಭೂಮಿ' ಎಂದು ಔಚಿತ್ಯಪೂರ್ಣವಾಗಿ ಕರೆಯುತ್ತಾರೆ. ಮಸಿ ಮತ್ತು ಕಾಗದ, ಸಾಕಷ್ಟು ವಿರಾಮ, ತಾಳ್ಮೆಗಳಿದ್ದರೆ ಯಾರು ಬೇಕಾದರೂ ಕಾದಂಬರಿಯನ್ನು ಬರೆಯಬಹುದೆಂಬ ಮಾತು ಕಾದಂಬರಿಯ ಸರಳ, ಸ್ವತಂತ್ರ ಸ್ವಚ್ಛಂದತೆಯನ್ನು ಕುರಿತು ಹೇಳುತ್ತದೆ. ಕಾದಂಬರಿ ಎಂದರೆ ಘಟನೆಗಳು ಮತ್ತು ಕ್ರಿಯೆಗಳೊಡನೆ ಅನುಭವಿಸಿದ ಮತ್ತು ಮಾಡಿದ ಸಂಗತಿಗಳು, ಇವು ಜನಜೀವನದಲ್ಲಿ ಉಂಟಾಗಿ ಕಾದಂಬರಿಯ ಪಾತ್ರಗಳಾಗುತ್ತವೆ. ಇನ್ನು ಕಾದಂಬರಿಯಲ್ಲಿ ಪಾತ್ರಗಳ ಸಂಭಾಷಣೆ, ಶೈಲಿ, ಜೀವನದ ಬಗೆಗಿನ ಒಂದು ನಿಶ್ಚಿತ ದೃಷ್ಟಿ ಬದುಕಿನ ಕೆಲವು ಸಮಸ್ಯೆಗಳು ಅವಶ್ಯಕವಾಗಿ ನಿರೂಪಿಸಲ್ಪಟ್ಟಿರುತ್ತದೆ."[೧]

ಕಾದಂಬರಿಯಲ್ಲಿ ಪ್ರಮುಖವಾಗಿ ಕಥಾ ಸಂವಿಧಾನ, ಪಾತ್ರಚಿತ್ರಣ, ಸಂಭಾಷಣೆ ಅಥವಾ ಸಂವಾದ, ಆವರಣ, ಭಾಷೆ, ತಂತ್ರ ಮತ್ತು ಶೈಲಿ ಜೊತೆಗೆ ಜೀವನ ಸಿದ್ಧಾಂತವನ್ನು ಒಳಗೊಂಡಿರುವುದನ್ನು ಕಾಣುತ್ತೇವೆ. ಅದೇ ರೀತಿ ನಾಟಕ ಸಾಹಿತ್ಯಕ್ಕೆ ಬೇಕಿರುವ ರಂಗಭೂಮಿ, ಪ್ರೇಕ್ಷಕ, ನಟ, ಇದಕ್ಕೆ ಬೇಕಾಗಿರುವುದಿಲ್ಲ. ಇಲ್ಲಿ ನವಿರಾದ ನಿರೂಪಣೆಯಿಂದ ಕೂಡಿದ ಒಂದು ಕಥೆಯನ್ನು ಪರಿಣಾಮಕಾರಿಯಾಗಿ ವಸ್ತುವಿನ ಮನಸ್ಥಿತಿಯನ್ನು ಅರ್ಥಮಾಡಿಕೊಂಡು ಕಾದಂಬರಿಕಾರ ನಿರೂಪಿಸಿದರೆ, ಅದೊಂದು ಒಳ್ಳೆಯ ಕಾದಂಬರಿಯಾಗುತ್ತದೆ. ಈ ಹಿನ್ನಲೆಯಲ್ಲಿ ರಾಘವೇಂದ್ರ ಪಾಟೀಲರ 'ತೇರು' ಕಾದಂಬರಿಯು ಕುತೂಹಲಕಾರಿಯಾದ ಕಥೆಯನ್ನು ಒಳಗೊಂಡಿರುವ ಮಹತ್ವದ ಕಾದಂಬರಿಯಾಗಿದೆ. ಈ ಕಾದಂಬರಿಯ ಪ್ರಾದೇಶಿಕ ಭಾಷೆ, ಶೈಲಿ, ಕಥಾ ಆವರಣ, ಚರಿತ್ರೆ, ಇತಿಹಾಸ, ವರ್ತಮಾನ ಈ ಮೂರು ಘಟ್ಟಗಳಲ್ಲಿ ಪ್ರಾದೇಶಿಕ ವ್ಯಕ್ತಿಗಳು, ಊರುಗಳ ಹೆಸರುಗಳು, ಸಾಂಸ್ಕೃತಿಕವಾಗಿ, ಜನಪದರ ಆಶೆ, ಆಸಕ್ತಿ, ಗೊಂದಲಿಗರ ಹಾಡಿನ ಕಥಾ ನಿರೂಪಣೆ ಮತ್ತು ದೇಶಿ ಸೊಗಡಿನಿಂದ ತುಂಬಾ ಸೊಗಸಾಗಿ ಮೂಡಿಬಂದಿರುವುದರಿಂದ ಕನ್ನಡ ಕಾದಂಬರಿ ಸಾಹಿತ್ಯದಲ್ಲಿ ಆ ಕಾದಂಬರಿಗೆ ಅದರದ್ದೇ ಆದ ಅನನ್ಯತೆಯಿದೆ. ಆದ ಕಾರಣ "ಬೆಳಗಾವಿ ಜಿಲ್ಲೆಯಲ್ಲಿ ಹುಟ್ಟಿಬೆಳೆದ ಪಾಟೀಲರು ನವ್ಯರಿಗಿಂತ ಆ ಪ್ರದೇಶದ ಬರಹಗಾರರಾದ ಆನಂದಕಂದ, ಚಂದ್ರಶೇಖರ ಕಂಬಾರ ಇವರಿಗೆ ಸಮೀಪದವರಾಗಿದ್ದಾರೆ. ಆನಂದಕಂದರಂತೆ ಅವರ ಪ್ರಮುಖ ಅಸ್ಥೆಯೂ ಚರಿತ್ರೆ, ಆದರೆ ಆನಂದಕಂದರು ಚರಿತ್ರೆ ಹಾಗೂ ಸಮಕಾಲೀನ ವಾಸ್ತವಗಳಲ್ಲಿ ಭೇದ ಕಲ್ಪಿಸಿದರೆ ಪಾಟೀಲರು ಅವುಗಳನ್ನು ಒಟ್ಟಾಗಿಯೇ ನೋಡುತ್ತಾರೆ. ಅವರ ವಾಸ್ತವ ಕಲ್ಪನೆಯೂ ಬೇರೆಯಾಗಿದೆ."[೨] ಅಂದರೆ ಪಾಟೀಲರು ತಮ್ಮ ಪ್ರದೇಶದ ಬರಹಗಾರರಿಂದ ಹಾಗೂ ಸಂಸ್ಕೃತಿಯಿಂದ ಪ್ರೇರಣೆ ಪಡೆದಿದ್ದರೂ. ಅಭಿವ್ಯಕ್ತಿಯ ವಿಧಾನದಲ್ಲಿ ಕಥಾ ಹಂದರದಲ್ಲಿ ಅವರಿಗಿಂತ ಭಿನ್ನರಾಗಿದ್ದಾರೆ. ಹಾಗೂ ಅವರದ್ದೇ ಆದ ವಿನ್ಯಾಸ ಕ್ರಮ ಅವರ ಬರಹಗಳಲ್ಲಿದೆ.

ಹೊಸಬಗೆಯ ಪ್ರಯೋಗಶೀಲತೆಯಿಂದ ಕೂಡಿದ 'ತೇರು' ಕನ್ನಡಕ್ಕೊಂದು ವಿಶಿಷ್ಟವಾದ ಕಾದಂಬರಿಯಾಗಿದೆ. ರಂಗೋಪಟವರ್ಧನ ದೇಸಾಯಿ ತನ್ನ ಮನೆದೇವರಾದ ವಿಠ್ಠಲ ದೇವರ ದೇವಾಲಯವನ್ನು ಕಟ್ಟಿಸುತ್ತಾನೆ. ಆ ದೇವಾಲಯಕ್ಕೊಂದು ಬಂಗಾರಕಳಸದ, ಬೃಹತ್ ಗಾತ್ರದ ಕಲ್ಲಿನ ಚಕ್ರವನ್ನುಳ್ಳ ಸುಂದರ ಕೆತ್ತನೆಯಿಂದ ಕೂಡಿದ ತೇರು, ದೇಶಗತಿಯ ಪ್ರತಿಷ್ಠೆಯ ಸಂಕೇತವಾಗಿದೆ. ಆ ತೇರು ಮೊದಲನೆಯ ರಥೋತ್ಸವದಲ್ಲಿ ಮುಂದೆ ಹೋಗದೆ ನರಬಲಿಯನ್ನು ಕೇಳುವುದರಿಂದ, ಮೇಲವರ್ಗದ ಜನರು ಯಾರು ಬಲಿಯಾಗದೆ, ಆ ಜನರು ಕೆಲವರ್ಗದವರನ್ನು ಸೂಚಿಸಿದಾಗ, ಗೊಂಬಿರಾಮರ ದ್ಯಾವಪ್ಪನ ಮಗನನ್ನು ಬಲಿ ಕೊಡುವುದರಿಂದ ಆ ತೇರು ಮುಂದೆ ಚಲಿಸುತ್ತದೆ. ನಂತರ ಧಾರ್ಮಿಕ ಕಾರ್ಯಕ್ಕೆ ಬಲಿಯಾದ ದ್ಯಾನಪ್ಪನ ಕುಟುಂಬಕ್ಕೆ ದೇಸಾಯಿಯವರು ಕಳ್ಳಿಗುದ್ದಿ ಎಂಬ ಊರಲ್ಲಿ ಎಂಟು ಎಕರೆ ಭೂಮಿಯನ್ನು ಕಾಣಿಕೆ ರೂಪದಲ್ಲಿ ಕೊಡುತ್ತಾರೆ. ಮತ್ತು ಆ ಕುಟುಂಬಕ್ಕೆ ಪ್ರತಿವರ್ಷವು ತೇರಿನ ಚಕ್ರಕ್ಕೆ ಹಣೆ ಒಡೆದುಕೊಂಡು ರಕ್ತ ತಿಲಕದ ಸೇವೆಯನ್ನು ಮಾಡಬೇಕೆಂದು ತಿಳಿಸುತ್ತಾರೆ. ಇದರಂತೆ ಪ್ರತಿವರ್ಷವು ದ್ಯಾನಪ್ಪನ ವಂಶದವರು ಧರಮನಟ್ಟಿಯ ತೇರಿನ ರಕ್ತ ತಿಲಕದ ಸೇವೆಯನ್ನು

ಪ್ರಾರಂಭಿಸುತ್ತಾರೆ. ಮುಂದೆ ಕಾಲಕ್ರಮೇಣ ಮೂರನೆಯ ತಲೆಮಾರಿನ ದ್ಯಾವಪ್ಪನ ಕಾಲಕ್ಕೆ ಈ ರಕ್ತ ತಿಲಕದ ಸೇವೆ ನಿಲ್ಲುವುದು ಮತ್ತು ದ್ಯಾವಪ್ಪನ ಕುಟುಂಬಕ್ಕೆ ನೀಡಿದ ಭೂಮಿಯನ್ನು ಕಳ್ಳಿಗುದ್ದಿ ಗೌಡ ಮರಳಿ ತೆಗೆದುಕೊಳ್ಳುವುದು. ಹಾಗೂ ಕೊನೆಗೆ ಆಧುನಿಕ ದ್ಯಾವಪ್ಪ ಬಾಬಾ ಆಮ್ಟೆ ಅವರ ಸೇವಾಶ್ರಮ ಸೇರುವ ಮೂಲಕ ಕಥೆಯು ಮುಗಿಯುತ್ತದೆ.

ಹೀಗೆ, ಮೂರು ತಲೆಮಾರಿನ ಕಥೆಯನ್ನು ಒಳಗೊಂಡು ಗೊಂದಲಿಗರ ಹಾಡಿನ ಆಧುನಿಕ ಪರಿಕಲ್ಪನೆಯ ನಿರೂಪಣೆಯನ್ನು ಪಡೆದುಕೊಂಡು, ಗತಿಸಿಹೋದ ಘಟನೆಯನ್ನು ವರ್ತಮಾನದಲ್ಲಿ ಪುನರ್ ನೆನಪಿಸುತ್ತಾ, ಅದರಿಂದ ಬಿಡುಗಡೆಯಾಗುವ ಕಥೆಯನ್ನು ಒಳಗೊಂಡು ಕಾದಂಬರಿಯಾಗಿದೆ. "ತುಂಬ ಮನೋಹರವಾಗಿ ಆರಂಭಗೊಂಡು, ಲಲಿತವಾಗಿ ಬೆಳೆಯುತ್ತಾ ಹೋಗುವ ಈ ಕಾದಂಬರಿಯು ಮುಕ್ತಾಯದ ಹೊತ್ತಿಗೆ ಆರಂಭದ ರಮ್ಯಗುಣವನ್ನು ಕಳೆದುಕೊಂಡು ಸಂಕೀರ್ಣವಾಗುತ್ತಾ ವಿಷಾದದ ಎಳೆಗಳನ್ನು ನೇಯುತ್ತಾ ಮನರಂಜನೆಯಾಚೆ ಸಾಗುತ್ತದೆ. ಈ ಅರ್ಥದಲ್ಲಿ ಇದು ಜಾನಪದದ ಅಂಶಗಳನ್ನು ಒಡಲಲ್ಲಿ ಇರಿಸಿಕೊಂಡೂ, ಕೇವಲ ಜಾನಪದವಾಗಿ ಉಳಿಯುವುದಿಲ್ಲ. ನಮ್ಮ ಕಾಲದ ಪತನ ಮುಖೀ ಮೌಲ್ಯಗಳಿಗೆ ಸಂಕೇತವಾಗಿ ಉಳಿಯುತ್ತದೆ."[೩] ಹೀಗೆ ಚಾರಿತ್ರಿಕವಾದ ಘಟನೆ ಕಾಲಾಂತರದಲ್ಲಿ ಐತಿಹ್ಯವಾಗಿ ಕೊನೆಗೆ ಪುರಾಣವಾದ ಘಟನೆಗಳನ್ನು ಚಿತ್ರಿಸುತ್ತದೆ.

ಗೊಂದಲಿಗರ ಕಥನ ಕವನದ ಮೂಲಕ ಕೃತಿ ನಿರೂಪನೆಗೊಂಡಿರುವುದು, ಕನ್ನಡ ಸಾಹಿತ್ಯದಲ್ಲಿ ವೈಶಿಷ್ಟ್ಯತೆಯಿಂದ ಕೂಡಿದ ಪ್ರಯೋಗಶೀಲತೆಯಾಗಿದೆ. ರಾಘವೇಂದ್ರ ಪಾಟೀಲರು ತಮ್ಮ ಸೃಜನಶೀಲ ಮನಸ್ಸಿನ ಮೂಲಕ ಇಂತಹ ಒಂದು ಒಳ್ಳೆಯ ಕಾದಂಬರಿಯನ್ನು ಬೆಳಗಾವಿ ಪ್ರದೇಶದ ಆಡುನುಡಿಯಲ್ಲಿ ರಚಿಸಿರುವುದು ಸಹೃದಯರ ಆಕರ್ಷಣೆಗೆ ಪಾತ್ರವಾಗಿದೆ. "ರಾಘವೇಂದ್ರ ಪಾಟೀಲರ 'ತೇರು' ಕಾದಂಬರಿ ಸಾಂಸ್ಕೃತಿಕ ಭಿನ್ನತೆಗಳನ್ನು ದಾಖಲಿಸುತ್ತಲೇ, ಆಧುನಿಕವಾದ ವಿಚಾರಗಳಿಗೆ, ವೈಚಾರಿಕ ಪ್ರಜ್ಞೆಯಡೆಗೆ ತೆರೆದುಕೊಳ್ಳುವ ಅನನ್ಯ ಸಾಂಸ್ಕೃತಿಕ ಪಠ್ಯವಾಗಿ ಊಳಿಗಮಾನ್ಯ ವ್ಯವಸ್ಥೆಯ ಶೋಷಣೆಯ ಪ್ರತೀಕವಾಗಿ ತನ್ನ ಸಾಹಿತ್ಯಿಕ ಅಂಶಗಳನ್ನು ಬಿಟ್ಟುಕೊಡದೆ ವಿಭಿನ್ನ ಸಾಹಿತ್ಯ ಕೃತಿಯಾಗಿ ಕಾಣಿಸಿಕೊಳ್ಳುತ್ತದೆ."[೪] ಈ ಎಲ್ಲ ಅಂಶಗಳನ್ನು ಅಧ್ಯಯನದಲ್ಲಿ ಅಳವಡಿಸಿ 'ತೇರು' ಕಾದಂಬರಿಯನ್ನು, ಕಥಾವಸ್ತುವನ್ನು ಹೋಲುವ ಇತರ ಸಮಕಾಲೀನ ಕಾದಂಬರಿಗಳೊಡನೆ ತೌಲನಿಕವಾಗಿ ವಿವೇಚಿಸಿ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ 'ತೇರು' ಕಾದಂಬರಿಯ ಅನನ್ಯತೆಯನ್ನು ಗುರುತಿಸಬೇಕಾಗಿದೆ. ಈ ಉದ್ದೇಶದಿಂದ ಅಧ್ಯಯನಕ್ಕೆ ಈ ಕೃತಿಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಈ ಅಧ್ಯಯನದಲ್ಲಿ ಆರು ಅಧ್ಯಾಯಗಳು ಹಾಗೂ ರಾಘವೇಂದ್ರ ಪಾಟೀಲರ ಜೀವನ ಸಾಧನೆಗೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳ ವಿವರಗಳಿವೆ. ೫ ಅನುಬಂಧಗಳು ಇವೆ. ಅವುಗಳ

ಸ್ಥೂಲ ನೋಟ ಹೀಗಿದೆ. ಮೊದಲನೆಯ ಅಧ್ಯಾಯವು ಅಧ್ಯಯನದ ಉದ್ದೇಶ, ಸ್ವರೂಪಕ್ಕೆ ಸಂಬಂಧಿಸಿದೆ. ಎರಡನೆಯ ಅಧ್ಯಯನವು ರಾಘವೇಂದ್ರ ಪಾಟೀಲರ ಬದುಕು-ಬರಹ, ಸಾಹಿತ್ಯ ಸಾಧನೆ, ಇತ್ಯಾದಿ ವಿಷಯಗಳನ್ನು ಒಳಗೊಂಡಿದೆ. ಮೂರನೆಯ ಅಧ್ಯಾಯ 'ತೇರು' ಕಾದಂಬರಿಯ ಆಶಯ ಹಾಗೂ ಸಾಂಸ್ಕೃತಿಕ ಮಹತ್ವ ಕುರಿತು ವಿಮರ್ಶಾತ್ಮಕವಾಗಿ ಪರಿಶೀಲಿಸಲಾಗಿದೆ. ಸಮುದಾಯಕ್ಕೆ 'ತೇರು' ಕಾದಂಬರಿಯ ಸಂದೇಶ ಹಾಗೂ ಸಾಂಸ್ಕೃತಿಕವಾಗಿ ಅದು ಹೇಗೆ ಮಹತ್ವವನ್ನು ಪಡೆದುಕೊಂಡಿದೆ ಎಂಬುದನ್ನು ವಿವೇಚಿಸಲಾಗಿದೆ. ಇದರಲ್ಲಿ ರಾಜಕೀಯ, ಧಾರ್ಮಿಕ ಜೀವನ, ಜಾತ್ರೆ ಉತ್ಸವಗಳು, ಧಾರ್ಮಿಕ ನಂಬಿಕೆ ಮತ್ತು ಸೇವಾವಿಧಿವಿಧಾನಗಳು, ಮಹತ್ವದ ದಿನಗಳ ಉಲ್ಲೇಖ, ಜಾನಪದೀಯ ಕಲೆಗಳು ಹಾಗೂ ನಾಟೀವೈದ್ಯ ಪದ್ಧತಿ, ಹಾಸ್ಯ ಮುಂತಾದ ಅಂಶಗಳ ಕುರಿತು ಅಧ್ಯಯನ ಮಾಡಲಾಗಿದೆ. ನಾಲ್ಕನೆಯ ಅಧ್ಯಾಯ 'ತೇರು' ಕಾದಂಬರಿಯ ಪಾತ್ರಗಳ ಮನೋವಿಶ್ಲೇಷಣೆ ಕುರಿತಾಗಿದೆ. ಇಲ್ಲಿಯ ಪಾತ್ರಗಳನ್ನು ಯಾವ ರೀತಿಯಲ್ಲಿ ಸೃಷ್ಟಿಸಿದ್ದಾರೆ. ಹಾಗೂ ಅವುಗಳ ಸಾಮಾಜಿಕ ಮಹತ್ವ ಮತ್ತು ಅವಶ್ಯಕತೆಯ ಬಗ್ಗೆ ಆಯಾ ಪಾತ್ರಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ 'ತೇರು' ಕಾದಂಬರಿಯ ಭಾಷೆ ಮತ್ತು ಶೈಲಿ ಕುರಿತು ಭಾಷಾಶಾಸ್ತ್ರದ ನೆಲೆಯಲ್ಲಿ ವಿವೇಚಿಸಲಾಗಿದೆ. ಇದರಲ್ಲಿ ಉಪಮೆ-ರೂಪಕಗಳು, ಗಾದೆ ಮಾತುಗಳು, ಬೈಗುಳಗಳು, ಉಪಭಾಷೆಯ ಪದಗಳು, ಗ್ರಾಮನಾಮಗಳು, ನಾಟಕೀಯ ಸಂಭಾಷಣೆಯ ಅಂಶಗಳು ಹೀಗೆ ಈ ಎಲ್ಲ ಅಂಶಗಳನ್ನು ಕುರಿತು ಚರ್ಚೆ ಬೆಳೆಸಲಾಗಿದೆ. ಆರನೆಯ ಅಧ್ಯಾಯವು ಸಮಾರೋಪವಾಗಿದ್ದು, ಒಟ್ಟು ಅಧ್ಯಯನದ ಫಲಿತವನ್ನು ಕುರಿತು ವಿವೇಚಿಸಲಾಗಿದೆ. ಹಾಗೂ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ತೇರು' ಕಾದಂಬರಿ ಸ್ಥಾನವನ್ನು ಕುರಿತು ಹೇಳಲಾಗಿದೆ. ಕೊನೆಯ ಅನುಬಂಧ ಭಾಗದಲ್ಲಿ ರಾಘವೇಂದ್ರ ಪಾಟೀಲ ಅವರ ಸಾಹಿತ್ಯ : ವಿದ್ವಾಂಸರು ಕಂಡಂತೆ, ಪಾಟೀಲ ಅವರ ಮನೆತನ ವಂಶವೃಕ್ಷ, ಪಾಟೀಲ ಅವರ ಬದುಕಿನ ಮುಖ್ಯ ಘಟನೆಗಳು, ಕೃತಿಸೂಚಿ ಹಾಗೂ ಗ್ರಂಥಋಣವನ್ನು ಕೊಡಲಾಗಿದೆ. ಹೀಗೆ ಅಧ್ಯಯನದ ಶಿಲ್ಪರೂಪಗೊಂಡಿದೆ.

ಅಡಿಟಿಪ್ಪಣಿಗಳು

೧. **ಕನ್ನಡ ಸಾಹಿತ್ಯಕೋಶ**, ಸಂಪಾದಕರು ರಾಜಪ್ಪ ದಳವಾಯಿ ಕದಿರು ಪ್ರಕಾಶನ ಮೈಸೂರು, ೨೦೦೩, ಪು.೮೭

೨. **ಕನ್ನಡ ಕಥನ ಸಾಹಿತ್ಯ : ಸಣ್ಣ ಕಥೆ**, ಡಾ.ಜಿ.ಎಸ್.ಆಮೂರ ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು, ೨೦೦೩, ಪು.೩೯೩

೩. **ತೇರು ಬೆನ್ನಿಗೆ ನಿಂತು... ಪುರುಷೋತ್ತಮ ಬಿಳಿಮಲೆ** ಹಸಿರುಕ್ರಾಂತಿ ದಿನಪತ್ರಿಕೆ ಸಾಪ್ತಾಹಿಕ ಸಂಪದ ೧೦-೨-೨೦೦೭, ಪು.೫

೪. **ವರ್ತಮಾನದಲ್ಲಿ ಭೂತ, ಕುಮಾರ ಕೆ.,** ಸಾಹಿತ್ಯ - ಸಂವಾದ ೬-೬೧(ಜನವರಿ-ಮಾರ್ಚ್ ೨೦೦೫) ಸಂಪಾದಕರು. ರಾಘವೇಂದ್ರ ಪಾಟೀಲ, ಸಂವಾದ ಪ್ರಕಾಶನ ಮಲ್ಲಾಡಿಹಳ್ಳಿ, ೨೦೦೫, ಪು.೧೩೦

ಅಧ್ಯಾಯ ೨

ರಾಘವೇಂದ್ರ ಪಾಟೀಲ ಅವರ ಜೀವನ - ಸಾಧನೆ

೨

ರಾಘುವೇಂದ್ರ ಪಾಟೀಲ ಅವರ ಜೀವನ - ಸಾಧನೆ

ಕರ್ನಾಟಕದ ಇತಿಹಾಸದಲ್ಲಿ ಬೆಳಗಾವಿ ಜಿಲ್ಲೆ ತನ್ನದೇ ಆದ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಕಿತ್ತೂರು ಚನ್ನಮ್ಮ, ಸಂಗೋಳ್ಳಿ ರಾಯಣ್ಣ ಮುಂತಾದವರ ತ್ಯಾಗ ಬಲಿದಾನದ ನೆಲವೆಂದು ಖ್ಯಾತಿಪಡೆದು, ಚಾಲುಕ್ಯರು, ರಟ್ಟರು, ಸೇವುಣರು, ಮೊದಲಾದ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟ ಐತಿಹಾಸಿಕ ತಾಣವಾಗಿದೆ. ಬೆಳಗಾವಿ ಜಿಲ್ಲೆ ಹತ್ತು ತಾಲೂಕುಗಳನ್ನು ಒಳಗೊಂಡ ದೊಡ್ಡ ಜಿಲ್ಲೆ. ಈ ಹತ್ತು ತಾಲೂಕುಗಳಲ್ಲಿ ಗೋಕಾಕ ತಾಲೂಕೂ ಒಂದಾಗಿದೆ. ಗೋಕಾಕ ಸಾಮಾಜಿಕ, ಆರ್ಥಿಕ, ರಾಜಕೀಯ, ಕೃಷಿ, ಶಿಕ್ಷಣ ಮೊದಲಾದವುಗಳಿಗೆ ಹೆಸರು ಪಡೆದಿದೆ. ಗೋಕಾಕ "ಮೂಲತಃ ಬಹಳಷ್ಟು ಗೋವುಗಳನ್ನು ಸಾಕಿಕೊಂಡು ಇರುವ ಪಶುಪಾಲಕರ ಗ್ರಾಮವಾದುದರಿಂದ ಇದಕ್ಕೆ ಗೋಗ್ರಾಮ ಎಂದು ಕರೆಯುತ್ತಿದ್ದರು. ಬರುಬರುತ್ತಾ ಅದು ಗೋಕಾವಿಯಾಯಿತು."[೧] ಈಗ ಗೋಕಾಕ ಎಂದು ಹೆಸರನ್ನು ಪಡೆದುಕೊಂಡಿದೆ. ಗೋಕಾಕ ನಗರದ ಸುತ್ತಲೂ ಹರಡಿಕೊಂಡಿರುವ ಸುಂದರವಾದ ಬೆಟ್ಟ. ಆ ಬೆಟ್ಟದ ಮೇಲೆ ಮಲ್ಲಿಕಾರ್ಜುನ ದೇವಸ್ಥಾನ. ಈ ಬೆಟ್ಟದ ಸುತ್ತಲು ಸುಮಾರು ೩೦-೩೫ ಕಿ.ಮೀ.ವರೆಗೆ ಈ ಪ್ರದೇಶ ವಿಸ್ತಾರವನ್ನು ಪಡೆದುಕೊಂಡಿದೆ. ಈ ಪ್ರದೇಶದಲ್ಲಿ ಪ್ರಮುಖವಾಗಿ ಮಾರ್ಕಂಡೆಯ ಮತ್ತು ಘಟಪ್ರಭಾ ನದಿಗಳು ಹರಿದಿವೆ. ಬಯಲು ಪ್ರದೇಶದಲ್ಲಿ ಮಮದಾಪೂರ, ಬೇಟಗೇರಿ, ಕಲ್ಲೋಳ್ಳಿ ಹಳ್ಳಗಳು ಹರಿಯುತ್ತಿವೆ. ಇಂತಹ ನಿಸರ್ಗ ಸೌಂದರ್ಯದಿಂದ ತುಂಬಿದ ಫಲವತ್ತಾದ ಪ್ರದೇಶವು "ಜನರನ್ನು ಆಕರ್ಷಿಸುವಂತೆ ಸಾಧು ಸಂತರನ್ನು, ಯೋಗಿ-ಶಿವಯೋಗಿಗಳನ್ನು, ಋಷಿ-ಮುನಿಗಳನ್ನು, ಕವಿ-ಕಲೆಗಾರರನ್ನು ಮನಸೆಳೆಯದೆ ಬಿಟ್ಟಿಲ್ಲ."[೨] ಎಂದು ಗೋಕಾಕ ನಾಡನ್ನು ಕುರಿತು ಕವಿಗಳು ಈ ರೀತಿಯಲ್ಲಿ ಸೊಗಸಾಗಿ ಬಣ್ಣಿಸಿದ್ದಾರೆ.

ಈ ಮಣ್ಣಿನಲ್ಲಿ ನಾಡಿನ ಶ್ರೇಷ್ಠ ಸಾಹಿತಿಗಳು, ವಿದ್ವಾಂಸರು, ಶಿಕ್ಷಣ ತಜ್ಞರು ಬೆಳೆದುಬಂದಿದ್ದಾರೆ. ಅವರುಗಳು, ಕೆ.ಜಿ.ಕುಂದಣಗಾರ, ಡಿ.ಸಿ.ಪಾವಟೆ, ಬೆಟಗೇರಿ ಕೃಷ್ಣಶರ್ಮ (ಆನಂದಕಂದ), ಎಸ್.ಸಿ.ನಂದಿಮಠ, ಕುಲಗೋಡ ತಮ್ಮಣ್ಣ, ಕೌಜಲಗಿಯ ನಿಂಗಮ್ಮ, ಬಸವರಾಜ ಕಟ್ಟಿಮನಿ, ಚಂದ್ರಶೇಖರ ಕಂಬಾರ ಮೊದಲಾದವರು ಹುಟ್ಟಿಬೆಳೆದಿದ್ದಾರೆ. ಆ ಪರಂಪರೆಯ ಮುಂದುವರಿಕೆಯಾಗಿ, ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದಲ್ಲಿ ರಾಘುವೇಂದ್ರ ಪಾಟೀಲ ಅವರು ಕಾಣಿಸಿಕೊಳ್ಳುತ್ತಾರೆ.

ಮನೆತನ ಹಿನ್ನೆಲೆ

ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಪುಟ್ಟಹಳ್ಳಿ ಬೆಟಗೇರಿ. ಬೆಟಗೇರಿಯಲ್ಲಿನ ಪಾಟೀಲರ ಮನೆತನವು ಹಲವು ಹೆಸರುಗಳನ್ನು ಇಟ್ಟುಕೊಂಡಿದೆ. ಪಾಟೀಲ, ಹುದ್ದಾರ, ಬೆಟಗೇರಿ, ಕುಲಕರ್ಣಿ ಇಂತಹ ಹೆಸರನ್ನು ಇಟ್ಟುಕೊಂಡ ದೊಡ್ಡ ಮನೆತನ. ಈ ಮನೆತನದ ಹಿರಿಯ ಶ್ರೀನಿವಾಸರಾಯರು ಸಾತ್ವಿಕವ್ಯಕ್ತಿ. ದೇವರಲ್ಲಿ ಅಪಾರ ಭಕ್ತಿಯನ್ನು ಹೊಂದಿದವನು. ಹಲವು ಕಷ್ಟ-ನಷ್ಟಗಳನ್ನು ಎದುರಿಸಿದ ಹಿರಿಯ ಜೀವ. ತನ್ನ ಸ್ವಂತ ತಮ್ಮ ಇವರಿಗೆ ಮೋಸಮಾಡಿ ಕೂಡಿಟ್ಟಹಣವನ್ನು ತೆಗೆದುಕೊಂಡು ಬೇರೆಯಾಗಿ ತನ್ನ ಸಂಸಾರ ಸಮೇತ ಬೇರೆ ಊರಿಗೆ ಹೋಗಿ ನೆಲೆಸಿದ. ಇದರಿಂದ ತೀವ್ರವಾಗಿ ಮನನೊಂದುಕೊಂಡು, ಇಡೀ ಜೀವಮಾನವನ್ನು ದುಡಿಯುವುದರಲ್ಲಿಯೇ ಕಳೆಯಬೇಕಾಯಿತು. ಇಂತಹ ಕಠಿಣವಾದ ಪರಿಸ್ಥಿತಿಯಲ್ಲಿ ತನ್ನ ಎರಡನೆಯ ಮಗನು ಸಹ ತಂದೆಗೆ ಇದೇ ರೀತಿ ಮಾಡಿದ. ಹೀಗಾಗಿ ಶ್ರೀನಿವಾಸರಾಯರ ಕುಟುಂಬವು. ಬಡತನವನ್ನು ಸತತವಾಗಿ ಅನುಭವಿಸಿತು. ಇಷ್ಟೆಲ್ಲಾ ಕಷ್ಟವನ್ನು ಅನುಭವಿಸಿದರು ಸಹ ಶ್ರೀನಿವಾಸರಲ್ಲಿ ಕುಗ್ಗದ ಆತ್ಮ ವಿಶ್ವಾಸದಿಂದ ಜೀವಿಸುತ್ತಿದ್ದರು. ಶ್ರೀನಿವಾಸರು ವಿಶೇಷ ವ್ಯಕ್ತಿತ್ವವನ್ನು ರೂಪಿಸಿಕೊಂಡವರು. ಜೋತಿಷ್ಯ, ಸಂಗೀತ, ತಂಬೂರಿ, ತಬಲಾವಾದ್ಯವನ್ನು ಬಲು ಸೊಗಸಾಗಿ ನುಡಿಸುತ್ತಿದ್ದರು. ಇವುಗಳ ಜೊತೆ ಶಿಲ್ಪಕಲೆ, ಕಲ್ಲಿನ ಮೂರ್ತಿ, ಮಣ್ಣಿನಿಂದ ಗಣಪತಿ ಮೂರ್ತಿಯನ್ನು ಅಂದವಾಗಿ ಮಾಡಿ, ಅವುಗಳಿಗೆ ಸುಂದರವಾಗಿ ಬಣ್ಣವನ್ನು ಕೊಡುತ್ತಿದ್ದರು. ಇಂತಹ ಅನೇಕ ಕಲೆಗಳನ್ನು ಹೊಂದಿದ ಕಲೆಗಾರರಿಗೆ ಹತ್ತು ಜನ ಮಕ್ಕಳು.

೧೮೮೦ರ ದಶಕದ ಆರಂಭದಲ್ಲಿ ಶ್ರೀನಿವಾಸರಾಯರ ಮೊದಲಪತ್ನಿ ರಾಧಾಬಾಯಿ ತೀರಿದರು. ಅವರಿಗೆ ಇಬ್ಬರು ಮಕ್ಕಳು. ರಾಘವೇಂದ್ರ ಕುಲಕರ್ಣಿ, ಉಡುಪಿಕುಲಕರ್ಣಿ, ನಂತರ ಶ್ರೀನಿವಾಸರಾಯರು ಎರಡನೆಯ ಮದುವೆಯಾದರು. ಅವಳ ಹೆಸರು ಸಹ ರಾಧಾಬಾಯಿ. ಇವರಿಗೆ ಎಂಟು ಜನಮಕ್ಕಳು ಇವರುಗಳು ಕೃಷ್ಣಬಾಯಿ, ಸುಂದರಾಬಾಯಿ, ಹಣಮಂತ, ಬಲವಂತ(ಬಲರಾಮ) ಬೆಟಗೇರಿ ಕೃಷ್ಣಶರ್ಮ, ಗೋಪಾಲ, ವಿಜಯೇಂದ್ರ, ತಂಗೆವ್ವ. ಹೀಗೆ ಶ್ರೀನಿವಾಸರಾಯರಿಗೆ ಒಟ್ಟು ಹತ್ತು ಜನಮಕ್ಕಳು. ಶ್ರೀನಿವಾಸರಾಯರ ಎರಡನೆಯ ಮಗ ಉಡುಪಿ(ಉದ್ದಪ್ಪಣ್ಣಾ)ಯು ಬಹಳ ಜಾಣನಾಗಿದ್ದನು. 'ಇವನು ತನ್ನ ವಿದ್ಯಾಭ್ಯಾಸವನ್ನು ಮುಗಿಸಿದ ತಕ್ಷಣ ನೇರವಾಗಿ ತಹಸೀಲ್ದಾರಾಗಿ ನೇಮಕಗೊಂಡನು. ಆದರೆ ತಹಸೀಲ್ದಾರ ಹುದ್ದೆಗೆ ಹೋಗಲು ಆಗಲಿಲ್ಲ. ಏಕೆಂದರೆ ಈ ಮನೆಯವರಿಗೆ ಇಂತಹ ಸರ್ಕಾರಿ ನೌಕರಿಯಲ್ಲಿ ಆಸಕ್ತಿಯಿಲ್ಲದಿರುವುದು ಮತ್ತು ಇವರದು ದೊಡ್ಡ ಮನೆತನವಾಗಿರುವುದರಿಂದ ಈ ನೌಕರಿ ಮಾಡುವುದು ಬೇಡ ಎನ್ನುವುದು. ಇವರ ಮನೆಯವರ ಆಶೆಯಾಗಿತ್ತು. ಇನ್ನೂ ಶ್ರೀನಿವಾಸರ ಐದನೆಯ ಮಗ ಹಣಮಂತ ಶಿಕ್ಷಕ ಟ್ರೆನಿಂಗ್ ಪಡೆದು ಶಾಲೆಯಲ್ಲಿ ಮಾಸ್ತರನಾಗಿದ್ದನು. ಆದರೆ ವಿಧಿಯ ಎಳೆಯುವಯಸ್ಸಿನಲ್ಲಿಯೇ ಬಲಿ ತೆಗೆದುಕೊಂಡಿತು. ಶ್ರೀನಿವಾಸರಾಯರ ಆರನೆಯಮಗ

ಬಲವಂತ(ಬಲರಾಮ)ನು ತನ್ನ ಉಳಿದ ತಮ್ಮಂದಿರ ಶಾಲೆ ಕಲಿಸುವುದಕ್ಕಾಗಿ ಹಗಲಿರುಳು ಕಷ್ಟಪಡುತ್ತಿದ್ದನು. ಶ್ರೀನಿವಾಸರರಾಯರ ಏಳನೆಯ ಮಗ ಕೃಷ್ಣಶರ್ಮ (ಆನಂದಕಂದ) ಶ್ರೇಷ್ಠ ಕವಿ, ಸಾಹಿತಿ, ಜಾನಪದ ವಿದ್ವಾಂಸ, ಕವಿಭೂಷಣ ಎಂಬ ಪ್ರಶಸ್ತಿ ಪಡೆದವರು. ಕರ್ನಾಟಕ ಸಾಹಿತ್ಯ ದಿಗ್ಗಜರಲ್ಲಿ ಇವರು ಒಬ್ಬರು. ಶ್ರೀನಿವಾಸರಾಯರ ಎಂಟನೆಯ ಮಗ ಗೋಪಾಲರಾವ್‌ನು ಕಲೆಗಾರನಾಗಿದ್ದನು. ಇತನಿಗೆ ೧೯೨೧ರಲ್ಲಿ ಇಂಗ್ಲೆಂಡಿಗೆ ಹೋಗಿ ತತ್ವಶಾಸ್ತ್ರ ವಿಷಯದಲ್ಲಿ ಅಭ್ಯಾಸ ಮಾಡಲಿಕ್ಕೆ ಅವಕಾಶ ದೊರೆಯಿತು. ಶ್ರೀನಿವಾಸರಾಯರ ಒಂಬತ್ತನೆಯ ಮಗ ವಿಜಯೆಂದ್ರನು ಕನ್ನಡ ವಿಷಯದಲ್ಲಿ ಎಂ.ಎ.ಪದವಿಯನ್ನು ಪಡೆದಿದ್ದನು. ಆಕಸ್ಮಿಕವಾಗಿ ೧೯೩೮ರಲ್ಲಿ ತನ್ನ ೩೩ನೆಯ ವಯಸ್ಸಿನಲ್ಲಿ ತೀರಿಕೊಂಡನು. ಇದಕ್ಕಾಗಿ ವಿಶ್ವವಿದ್ಯಾಲದವರು ೩ ದಿನ ರಜೆಯನ್ನು ಘೋಷಿಸಿ ಗೌರವ ಸೂಚಿಸಿದರು.

ಶ್ರೀನಿವಾಸರಾಯರ ಮಕ್ಕಳು ತುಂಬಾ ಪ್ರತಿಭಾವಂತರು. ಆದರೆ ಬಡತನ ಬವಣೆ ಅವರನ್ನು ಕಾಡುತ್ತಿತ್ತು. ಅದಕ್ಕಾಗಿ ಬಲರಾಮ ತನ್ನ ಜೀವನವನ್ನೇ ಹೊಲದಲ್ಲಿ ಕಳೆಯಬೇಕಾಯಿತು. ಇವುಗಳ ಜೊತೆಗೆ ಜನಪದ ಕಲೆಗಳಲ್ಲಿ ಒಂದಾದ ಕರಡಿ ಮಜಲು ಕರಗತ ಮಾಡಿಕೊಂಡಿದ್ದರು. ಈ ಬಲರಾಮನಿಗೆ ಇಬ್ಬರು ಹೆಂಡದಿರು. ಮೊದಲನೆಯ ಇಂದಿರಾ ಕೌಜಲಗಿ ಕುಟುಂಬಕ್ಕೆ ಸೇರಿದವರು. ಇವರಿಗೆ ಇಬ್ಬರು ಮಕ್ಕಳು. ರಾಧಾ, ಸುಂದಕ್ಕಾ. ಆದರೆ ಇಂದಿರಾ ಅವರು ಇನ್ನು ಯವ್ವನಾವಸ್ಥೆಯಲ್ಲಿಯೇ ತೀರಿಹೋದರು. ನಂತರ ಬಲರಾಮನು ಎರಡನೆಯ ಮದುವೆಯಾದನು. ಈ ಎರಡನೆಯ ಇಂದಿರಾ ಅವರಿಗೆ ಎಂಟು ಜನ ಮಕ್ಕಳು. ಅವರುಗಳು ಶಶಿಕಾಂತ, ವಸುಂಧರಾ, ಸರಯೂ, ಅಲಕನಂದಾ, ರಾಘವೇಂದ್ರ ವಿಜೆಯೇಂದ್ರ, ಹಣಮಂತ, ಧನಂಜಯ. ಹೀಗೆ ಪಾಟೀಲರ ಮನೆತನ ವಿದ್ವತ್ತಿನಿಂದ ತುಂಬಿದ ಮನೆತನವಾಗಿತ್ತು.

ರಾಘವೇಂದ್ರ ಪಾಟೀಲರು ೧೯-೮-೧೯೫೧ರಲ್ಲಿ ಬೆಟಗೇರಿಯಲ್ಲಿ ಜನಿಸಿದರು. ಪಾಟೀಲರ ಮನೆಯಲ್ಲಿ ಕಲಾವಿದರು. ಸಾಹಿತಿಗಳು, ಶಿಕ್ಷಣವನ್ನು ಪಡೆದ ಸುಶಿಕ್ಷಿತ ಜನರಿದ್ದರು. ಸ್ವತಃ ಪಾಟೀಲರ ತಂದೆ ಬಲವಂತರಾವ್ ಅವರು ಕರಡಿ ಮಜಲಿನಲ್ಲಿ ಸಿದ್ಧಹಸ್ತರು. ಚಿಕ್ಕಪ್ಪ ಆನಂದಕಂದ (ಕೃಷ್ಣಶರ್ಮ) ಶ್ರೇಷ್ಠ ಕವಿ, ಸಾಹಿತಿಯಾಗಿದ್ದವರು. ಪಾಟೀಲರಿಗೆ ಬಾಲ್ಯದಲ್ಲಿ ದೊರೆತ ಸುಶಿಕ್ಷಿತ ಸಂಸ್ಕಾರ ಮುಂದೆ ಒಳ್ಳೆಯ ಸಾಹಿತಿಯಾಗಲು ಪ್ರೇರೇಪಿಸಿತು. ತಮ್ಮ ಮನೆಯ ಪರಿಸರವನ್ನು ಪಾಟೀಲರು ಒಂದೆಡೆ ಈ ರೀತಿಯಲ್ಲಿ ಹೇಳುತ್ತಾರೆ. "ಅಕ್ಷರ ಲೋಕದ ಈ ಮೋಹಿನಿಯು ನನ್ನನ್ನು ಹಿಡಿದುಕೊಳ್ಳಲು ಸಾಧ್ಯವಾಗುವಂತೆ ಮಾಡಿದ್ದು ಬಾಲ್ಯದಲ್ಲಿ ನನಗೆ ಒದಗಿದ ಮನೆಯೊಳಗಿನ ಆವರಣ ಮತ್ತು ನನಗೆ ಲಭ್ಯವಾದ ಓದು, ನಮ್ಮದು ದೊಡ್ಡ ಕುಟುಂಬ. ಜೊತೆಗೆ ಮನೆಗೆ ಬರುತ್ತಿದ್ದ ಸಂಬಂಧಗಳು ಸಂಜೆಯಾಗುತ್ತಲೇ ನಮ್ಮ ಮನೆಯಲ್ಲಿ ಹಾಡಿನ ಸಂದುಕಗಳು ತೆರೆದುಕೊಳ್ಳುತ್ತಿದ್ದವು. ನಮ್ಮ ತಂದೆ-ಅಕ್ಕಂದಿರು ದೇವರ ನಾಮಗಳನ್ನು ಹೇಳುತ್ತಿದ್ದರು. ಈ ಹಾಡಿನ ಒಡನಾಟದಲ್ಲಿ ನನಗೆ ಶಬ್ದಗಳು ಅವುಗಳ ನಾದ ಮಾಧುರ್ಯದ ಜೊತೆಗೆ

ಕಾಣಿಸಿಕೊಂಡವು. ಸಾಹಿತ್ಯದಲ್ಲಿ ಅಂತರ್ಗತವಾಗಿರುವ ಬಹು ಪ್ರಮುಖವಾದ ಊರ್ಜೆ, ನಾದ ಅಥವಾ ಸಂಗೀತ ಎಂದು ನನ್ನ ಮನಸ್ಸಿಗೆ ತೋರಿತು."[೩]

ಪ್ರತಿಯೊಬ್ಬ ಲೇಖಕನು ಬಾಲ್ಯದಲ್ಲಿ ತಾನು ಕಂಡುಂಡ ಅನುಭವ, ವ್ಯಕ್ತಿ ಮತ್ತು ಪ್ರದೇಶ, ತನ್ನ ಸಾಹಿತ್ಯದಲ್ಲಿ ಸೂಕ್ಷ್ಮವಾಗಿ ಬೇರೆ ಬಿಟ್ಟಿರುತ್ತವೆ. ಹಾಗೂ ಅವುಗಳು ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡಿರುತ್ತವೆ. ಪಾಟೀಲರ ಬಾಲ್ಯದಲ್ಲಿ ಅನಕೃ-ತರಾಸು, ಕೃಷ್ಣಮೂರ್ತಿ ಪುರಾಣಿಕರ ಕಾದಂಬರಿಗಳ ಪ್ರಭಾವಕ್ಕೆ ನಾಲ್ಕನೆಯ ತರಗತಿಯಲ್ಲಿರುವಾಗಲೇ ಒಳಗಾದರು. ಬೆಟಗೇರಿಯ 'ಗಿರಿಪುರಿವಾಚನಾಲಯ' ಪಾಟೀಲರ ಓದಿಗೆ ಆರಂಭವನ್ನು ನೀಡಿತು. ಐದನೆಯ ತರಗತಿ ವಿದ್ಯಾರ್ಥಿಯಾಗಿದ್ದಾಗ ಶಾಲೆಯ ವಾಚನಾಲಯಕ್ಕೆ ಬಂದಿದ್ದ ಶೇಕ್ಸ್ಪಿಯರ್‌ನ ನಾಟಕಗಳ ಕಥನ ರೂಪ ಪುಸ್ತಿಕೆಗಳ ಓದು ಮತ್ತು ಶೇಕ್ಸ್ಪಿಯರ್‌ನ ಸೃಜನಶೀಲ ಪರಿಚಯವಾಯಿತು. ಆರನೆಯ ತರಗತಿ ವಿದ್ಯಾರ್ಥಿಯಾಗಿದ್ದಾಗ ಬೇಸಿಗೆ ರಜೆಗಾಗಿ ಚಿಕ್ಕಪ್ಪ ಆನಂದಕಂದರ ಮನೆಗೆ ಹೋದಾಗ, ಅವರ ಸಂಗ್ರಹದಲ್ಲಿದ್ದ ಗಂಗಾಧರ ಮಡಿವಾಳೇಶ್ವರ ತುರುಮರಿಯವರು ಕನ್ನಡಕ್ಕೆ ಅನುವಾದಿಸಿದ 'ಮೃಚ್ಛಕಟಿಕ' ನಾಟಕ ಓದಿ ಪ್ರಭಾವಿತರಾದರು. ಈ ನಾಟಕದಲ್ಲಿ ಬರುವ ಶಕಾರನ ಪಾತ್ರ ಪಾಟೀಲರ ಮನಸ್ಸಿನ ಮೇಲೆ ಅಚ್ಚೊತ್ತಿದಂತೆ ಆಯಿತು.

ಪಾಟೀಲರು ತಮ್ಮ ವಿದ್ಯಾಭ್ಯಾಸದ ಆರಂಭದ ಹಂತವನ್ನು ನೆನಪಿಸುತ್ತಾ ಹೀಗೆ ಹೇಳುತ್ತಾರೆ. "ಈ ಅಕ್ಷರ ಲೋಕದ ಮೋಹಿನಿ ನನ್ನನ್ನು ಸೆಳೆದದ್ದು ಹೇಗೆ ಎನ್ನುವುದೇ ನನ್ನ ನೆನಪಿಗೆ ಬರುತ್ತಿಲ್ಲ. ಸಣ್ಣ ಬಾಲಕ ನಾನು ಗೊತ್ತಿಲ್ಲದಂತೆ ಬಲೆಗೆ ಕೆಡವಿಕೊಂಡು ಬಿಟ್ಟಿದ್ದಳು. ಒಂಬತ್ತನೆಯ ಕ್ಲಾಸಿನಲ್ಲಿ ಓದುತ್ತಿದ್ದಾಗ ಧಾರವಾಡ ಆಕಾಶವಾಣಿಯವರು (೧೯೬೫) ನಾಟಕ ರಚನೆಯ ಸ್ಪರ್ಧೆಯೊಂದನ್ನು ಏರ್ಪಡಿಸಿದರು. ಆ ಸ್ವಯಂವರದಲ್ಲಿ ನಾನೂ ಪಾಲ್ಗೊಳ್ಳಬೇಕೆನ್ನುವ ಹುಡುಗುತನದ ಧೈರ್ಯ ಮಾಡಿಯೇ ಬಿಟ್ಟೆ. ಮಾಸ್ತಿಯವರ 'ನಿಜಗಲ್ಲಿನ ರಾಣಿ' ಕಥೆಯನ್ನು ತೆಗೆದುಕೊಂಡು ಅದನ್ನು ನಾಟಕಕ್ಕೆ ಅಳವಡಿಸಿದೆ. ಒಂದು ವಾರ ಕೂತು ಬರೆದು ಕಾಟು ಹಾಕಿ - ಬರೆದು, ಅಂತೂ ನಿಜಗಲ್ಲಿನ ರಾಣಿ ನಾಟಕವನ್ನು ಸಿದ್ಧಪಡಿಸಿದೆ."[೪] ಆ ನಾಟಕವನ್ನು ಅಣ್ಣ ಅಕ್ಕಂದಿರುಗಳಿಗೆ ತೋರಿಸಿ ಮೆಚ್ಚುಗೆಯ ಮಾತುಗಳನ್ನು ಪಡೆದು, ಶಾಲೆಯ ಮುಖ್ಯ ಶಿಕ್ಷಕರಾದ ಗದಗನವರ ಅವರಿಗೆ ಓದಲು ಹೇಳೀದರೆ, ಆ ಶಿಕ್ಷಕ ಈ ಬಾಲಕನ ಬರಹವನ್ನು ನೋಡಿ ನಮ್ಮ ಶಾಲೆಯಲ್ಲಿ ಒಬ್ಬ ಯುವ ಲೇಖಕ ಬೆಳೆಯುತ್ತಿದ್ದಾನೆ ಎಂದೂ ಎಲ್ಲ ಮಕ್ಕಳಿಗೆ ಹೇಳಿ ಪಾಟೀಲರನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸಿದರು. ಮುಂದೆ ಆನಂದಕಂದರು ಈ ನಾಟಕ ಕುರಿತು ಮೌಖಿಕವಾಗಿ ವಿಮರ್ಶಿಸಿ, ಅರಕೆಗಳ ಬಗ್ಗೆ ತಿಳಿ ಹೇಳಿದರು. ಹೀಗೆ ಪಾಟೀಲರ ಬಾಲ್ಯದಲ್ಲಿ ಹೆಚ್ಚು ಪ್ರಭಾವ ಬೀರಿದ ಸಾಹಿತ್ಯ ನಾಟಕವೇ ಆಗಿದೆ. ಈ ಬಾಲ್ಯದ ಅಕ್ಷರದ ಸಂಸ್ಕಾರವು ಪಾಟೀಲರನ್ನು ಒಬ್ಬ ಒಳ್ಳೆಯ ಸಾಹಿತಿಯಾಗಲು ಪ್ರೇರೇಪಿಸಿತು. ಕಾಲೇಜಿನ ದಿನಗಳಲ್ಲಿ ಕಾರಂತರ ಕಾದಂಬರಿಗಳು ಪಾಟೀಲರ ಮೇಲೆ ಬಹಳಷ್ಟು ಪರಿಣಾಮವನ್ನು

ಬೀರಿದವು. ಅವುಗಳ ವಿನ್ಯಾಸ ಹಾಗೂ ಬರೆಯುವುದನ್ನು ಕುರಿತಂತೆ ಒಂದು ಬಗೆಯ ಹೊಸ ತರಬೇತಿಯನ್ನು ನೀಡಿದವು.

ಪಾಟೀಲರು ಬಾಲ್ಯದಲ್ಲಿ ಅನುಭವಿಸಿದ ಹಲವು ನೋವು, ಅವಮಾನ, ಬಡತನ, ಇವುಗಳನ್ನು ಎದುರಿಸಿ ತಮ್ಮ ಬರವಣಿಗೆಯನ್ನು ಪ್ರಾರಂಭಿಸಿದವರು. ತಮ್ಮ ಬಾಲ್ಯದಲ್ಲಿ ಅನುಭವಿಸಿದ ತೀವ್ರವಾಗಿ ಕಾಡಿದ ದ್ವಂದ್ವಗಳನ್ನು ಪಾಟೀಲರು ಈ ರೀತಿಯಲ್ಲಿ ವ್ಯಕ್ತಪಡಿಸುತ್ತಾರೆ. "ನಮ್ಮದು ದೊಡ್ಡ ಜಮೀನುದಾರರ ಮನೆತನ. ನೂರೋ ಎಷ್ಟೋ ಕೂರಿಗಿ ಜಮೀನು ನಮ್ಮದಾಗಿತ್ತು. ಆದರೆ ಪ್ರಾಪ್ತಿ ಮಾತ್ರ ನಾಸ್ತಿ! ಹೊಟ್ಟೆಗೆ ಸಾಕಾಗುವಷ್ಟು ಕಾಳುಕಡಿ ಮಾತ್ರ ಬರುತ್ತಿದ್ದವು. ಬಟ್ಟೆ ಬರೆಗೆ ಮುದುವೆ ಮುಂಜಿಗಳಿಗೆ ಯಾವಗಲೂ ತತ್ವಾರ, ಇಷ್ಟರ ಮೇಲೆ ದೊಡ್ಡ ಸಂಸಾರ ಮತ್ತು ಪರಂಪರೆಯಿಂದ ಬಂದ ಹಬ್ಬ ಹರಿದಿನಗಳನ್ನು ಮತ್ತು ಶ್ರಾದ್ಧ ಕರ್ಮಾಧಿಗಳ ಹಾವಳಿ, ಬೆಲ್ಲವಿದ್ದರೆ ಬೆಳೆಯಿಲ್ಲ, ಬೆಳೆಯಿದ್ದರೆ ಬೆಲ್ಲವಿಲ್ಲ. ನಮ್ಮ ತಂದೆ ಒಂದು ರೀತಿಯ ಮುಗ್ಧ ದೊಡ್ಡಸ್ತಿಕೆಯಲ್ಲಿಯೇ ಇದ್ದು ಬಿಡುತ್ತಿದ್ದರು. ಜೊತೆಗೆ ಯಾವಾಗಲೂ ಬೆಳಗಾವಿ-ಗೋಕಾಕ ಅಂತೆನ್ನುವ ಓಡಾಟಗಳು ಪರಂಪರೆಯ ಸಂಪೂರ್ಣ ಭಾರವನ್ನು ನಿರ್ವಹಿಸುವುದು ನನ್ನ ತಾಯಿಯ ಹಣೆಯಬರಹವಾಗಿದ್ದಿತು. ಬೆಟಗೇರಿ ಗೌಡ ಜಮೀನದಾರನ ಹೆಂಡತಿಯ ಕೈಯಲ್ಲಿ ವಾಸ್ತವವಾಗಿ ಒಂದು ಅಗೋಚರವಾದ ಭಿಕ್ಷಾಪಾತ್ರೆ! ನನ್ನ ಕಣ್ಣಿಗೆ ಅವಳ ಕೈಯಲ್ಲಿನ ಭಿಕ್ಷಾಪಾತ್ರೆ ಕಾಣುತ್ತಿದ್ದಿತು! ನಾನು ಒಳಚಡ್ಡಿಯಿಲ್ಲದೇ ಬರೀ ಹಾಫ್ ಪ್ಯಾಂಟ್ ಹಾಕಿಕೊಳ್ಳುತ್ತಿದ್ದೆ. ಆರನೆಯ ತರಗತಿಯಲ್ಲಿದ್ದಾಗಿನ ಸಂಗತಿಯದು... ಭೀಮಣ್ಣ ಮಾಸ್ತರರು ನನಗೆ ಬೈದು ಹೇಳಿದರು: "ಏ ತಮ್ಮಾ... ದೊಡ್ಡಾಂವ ಆಗಿs ಮಗನs... ಇನ್ನರೇ ಚಡ್ಡಿ ಒಳಗ ಒಂದ ಅಂಡರ್ ವಿಯರು ಹಾಕ್ಕೊ..." ಕ್ಲಾಸಿನಲ್ಲಿ ನನ್ನ ಜೋಡೀ ಕುಳಿತಿದ್ದ ಹುಡುಗ-ಹುಡುಗಿಯರು 'ಗೊಳ್ ...' ಎಂದು ನಕ್ಕರು, ಉಳ್ಳವರಂತಿದ್ದೂ ಇಲ್ಲದವರಾಗಿರುವುದೂ ಬಹುಶಃ ಹೆಚ್ಚು ತೀಕ್ಷ್ಣವಾದ ನೋವು-ಅವಮಾನಗಳನ್ನು ನೀಡುತ್ತಿರಬಹುದು."[9]

ಈ ರೀತಿಯಲ್ಲಿ ಪಾಟೀಲರ ಬಾಲ್ಯದಲ್ಲಿ ಕಾಡಿದ ಬಡತನದ ಅನುಭವ, ಅನುಭವಿಸಿದ ದ್ವಂದ್ವಗಳು ಇವುಗಳ ಜೊತೆಗೆ ಓರಗೆಯ ಸ್ನೇಹಿತರು ಕೈಲಾಸದ ಬ್ರಾಹ್ಮಣ, ಏ ಅಳ್ಳಿಟ್ಟು ಎಂದು ಕರೆದಾಗ ಪಾಟೀಲರನ್ನು ಅಂತ ಮುರ್ಖತೆಯ ರೂಪಕ್ಕೆ ತಳ್ಳುತ್ತಿದ್ದವು. ಈ ಗೊಂದಲದಿಂದ ಕಂಗೆಟ್ಟ ಪಾಟೀಲರ ಮನಸ್ಸು ಹುಡುಕಿಕೊಂಡ ಹೊರದಾರಿಯೇ ಬರಹವಾಯಿತು.

ಶಿಕ್ಷಣ

ವ್ಯಕ್ತಿತ್ವದ ಪರಿಪೂರ್ಣ ವಿಕಸನವೇ ಶಿಕ್ಷಣ. ಹಾಗೂ ವ್ಯಕ್ತಿಯು ಜೀವನದ ನೆಲೆಕಂಡುಕೊಳ್ಳಲು ಶಿಕ್ಷಣ ಅವಶ್ಯಕವಾಗಿ ಬೇಕು. ಈ ಹಿನ್ನಲೆಯಲ್ಲಿ ಪಾಟೀಲರ ಶಿಕ್ಷಣವನ್ನು ನೋಡಿದಾಗ ನಮಗೆ

ಗೋಚರಿಸುತ್ತದೆ. ಪಾಟೀಲರ ಪ್ರಾಥಮಿಕ ಶಿಕ್ಷಣವು ಹುಟ್ಟೂರಾದ ಬೆಟಗೇರಿಯಲ್ಲಿ ನಡೆಯಿತು. ಆಗ ಅನಕೃ, ಕೃಷ್ಣಮೂರ್ತಿ ಪುರಾಣಿಕರ ಕಾದಂಬರಿಗಳು ಹಾಗೂ ಶೇಕ್‌ಸ್ಪಿಯರ್‌ನ ನಾಟಕಗಳು ಮತ್ತು ಗಂಗಾಧರ ಮಡಿವಾಳೇಶ್ವರ ತುರಮುರಿಯವರು ಕನ್ನಡಕ್ಕೆ ಅನುವಾದಿಸಿದ 'ಮೃಚ್ಛಕಟಿಕ' ನಾಟಕ ಪ್ರಭಾವ ಬೀರಿದವು. ಹಾಗೂ ಶಿಕ್ಷಕರಾದ ಭೀಮಣ್ಣ ಮಾಸ್ತರರು ವಿದ್ಯಾಭ್ಯಾಸದ ಕೊರತೆಯನ್ನು ತುಂಬಿದರು. ಮುಂದೆ ೧೯೬೪ ರಿಂದ ೧೯೬೫ರವರೆಗೆ ಎಂಟನೆಯ ಮತ್ತು ಒಂಬತ್ತನೇಯ ತರಗತಿಯ ಮಾಧ್ಯಮಿಕ ಶಿಕ್ಷಣವನ್ನು ಪಕ್ಕದ ಹಳ್ಳಿ ಮಮದಾಪೂರದ ಚಿಂತಾಮನಿ ಪಾವಟೆ ಮಾಧ್ಯಮಿಕ ಶಾಲೆಯಲ್ಲಿ ಮುಗಿಸಿದರು. ಒಂಬತ್ತನೆಯ ತರಗತಿಯಲ್ಲಿರುವಾಗಲೇ ಸಾಹಿತ್ಯದ ರುಚಿ ಹತ್ತಿತ್ತು. ಮಾಸ್ತಿಯವರ 'ನಿಜಗಲ್ಲಿನ ರಾಣಿ' ಕಥೆಯನ್ನು ನಾಟಕಕ್ಕೆ ಅಳವಡಿಸಿ ಮನೆಯವರಿಂದ ಮತ್ತು ಶಾಲೆಯ ಮುಖ್ಯಶಿಕ್ಷಕರಿಂದ ಮೆಚ್ಚುಗೆಯನ್ನು ಗಳಿಸಿಕೊಂಡವರು. ನಂತರ ೧೯೬೬ರಲ್ಲಿ ಹತ್ತನೆಯ ತರಗತಿಗೆ ಗೋಕಾಕದ ಪ್ರತಿಷ್ಠಿತ ಎಂ.ಎಚ್.ಹೈಸ್ಕೂಲಿನಲ್ಲಿ ಓದಿದರು. ಈ ಶಾಲೆಯ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದ ಕೃಷ್ಣಮೂರ್ತಿ ಪುರಾಣಿಕರ ಶಿಷ್ಯತ್ವವನ್ನು ಪಡೆದುಕೊಂಡರು. ಅದು ಅವರ ಬದುಕಿನ ಮುಖ್ಯ ಘಟ್ಟವಾಗಿದೆ.

ಪಾಟೀಲರ ಕಾಲೇಜು ಶಿಕ್ಷಣವು ವಿಜ್ಞಾನ ವಿಷಯವನ್ನು ತೆಗೆದುಕೊಂಡು ಪ್ರಾರಂಭಿಸಿದರು. ೧೯೬೭ ರಿಂದ ೧೯೬೯ರವರೆಗೆ ಪಿಯುಸಿ ಪ್ರಥಮ ಹಾಗೂ ದ್ವಿತೀಯ ಮತ್ತು ಬಿ.ಎಸ್ .ಸಿ ಪ್ರಥಮ ವರ್ಷದ ವ್ಯಾಸಾಂಗವನ್ನು ಗೋಕಾಕದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಜಗದ್ಗುರು ಶಿವಲಿಂಗೇಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪೂರೈಸಿದರು. ಇಲ್ಲಿ ಶ್ರೀ.ಬಿ.ವಿ.ತೋಟದ ಹಾಗೂ ಯರಗಂಬಳಿಮಠ ಮುಂತಾದ ಶ್ರೇಷ್ಠ ಗುರುವೃಂದದ ಮಾರ್ಗದರ್ಶನ ಪಡೆದುಕೊಂಡರು. ಮುಂದೆ ೧೯೭೦ ರಿಂದ ೧೯೭೧ರವರೆಗೆ ಬಿ.ಎಸ್.ಸಿ. ದ್ವಿತೀಯ ಹಾಗೂ ತೃತೀಯ ವರ್ಷದ ವ್ಯಾಸಾಂಗಕ್ಕಾಗಿ ಬೆಳಗಾವಿಯ ಗೋವಿಂದರಾವ್ ಶೆಕ್ಸೇರಿಯಾ ವಿಜ್ಞಾನ ಮಹಾವಿದ್ಯಾಲಯದಲ್ಲಿ ಪೂರೈಸಿದರು. ಪದವಿ ಶಿಕ್ಷಣವನ್ನು ಮುಗಿಸಿಕೊಂಡು ಉನ್ನತ ಶಿಕ್ಷಣಕ್ಕಾಗಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ೧೯೭೨ ರಿಂದ ೧೯೭೩ರವರೆಗೆ ಎಂ.ಎಸ್ಸಿ.ಸ್ನಾತಕೋತ್ತರ ಪದವಿಯನ್ನು ಜೀವಶಾಸ್ತ್ರದ ವಿಭಾಗದಲ್ಲಿ ಅಭ್ಯಾಸ ಮಾಡಿದರು. ಹೀಗೆ ಪಾಟೀಲರ ಶಿಕ್ಷಣವು ವಿಜ್ಞಾನ ವಿಷಯವನ್ನು ಅಭ್ಯಾಸ ಮಾಡಿಕೊಂಡು ನಡೆಯಿತು. ಆದರೆ ಒಂದು ವಿಚಿತ್ರ ಸಂಗತಿಯೆಂದರೆ ವಿಜ್ಞಾನಕ್ಕೂ ಮತ್ತು ಸಾಹಿತ್ಯಕ್ಕೂ ಒಂದಕ್ಕೊಂದು ಸಂಬಂಧವಿಲ್ಲದ ವಿಷಯಗಳು, ಆದರೂ ಸಹ ಪಾಟೀಲರು ತಮ್ಮ ಮನೆಯ ಪರಿಸರ, ಪ್ರೇರಣೆ ಹಾಗೂ ತಾವು ಕಂಡ ಬಾಲ್ಯದ ಚಿತ್ರಗಳು ಇವರನ್ನು ಸಾಹಿತಿಯನ್ನಾಗಿ ರೂಪಿಸಿದವು.

ರಾಘವೇಂದ್ರ ಪಾಟೀಲರು ೧೯೭೩ ಜುಲೈ ೧೬ ರಂದು ಚಿತ್ರದುರ್ಗ ಜಿಲ್ಲೆಯ ಮಲ್ಲಾಡಿ ಹಳ್ಳಿಯ ಅನಾಥ ಸೇವಾಶ್ರಮದ ಪದವಿಪೂರ್ವ ಕಾಲೇಜಿನಲ್ಲಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದರು. ಅದೇ ದಿನ ಪಾಟೀಲರ ಸಾಹಿತ್ಯದಲ್ಲಿ ಮಹತ್ವದ ಪಾತ್ರವಹಿಸಿದ ಕನ್ನಡ ಖ್ಯಾತ ಕವಿ ಡಾ.ಎಚ್.ಎಸ್.

ವೆಂಕಟೇಶಮೂರ್ತಿಯವರ ಪರಿಚಯ ಮತ್ತು ಸ್ನೇಹ ಬೆಳೆಯಿತು. ೧೯೭೪ರಲ್ಲಿ ಕೇರ್ ಟೇಕರ್ ಎನ್.ಸಿ.ಸಿ. ಆಫೀಸರ್ ಆಗಿ ಪದವಿ ಪೂರ್ವ ಕಾಲೇಜಿನಲ್ಲಿ ಸಿನಿಯರ್ ಡಿವಿಜನ್ ಎನ್.ಸಿ.ಸಿ. ಆರಂಭಿಸಿ, ೧೯೭೬ರಲ್ಲಿ ನಾಗಪೂರ ಜಿಲ್ಲೆಯ ಕಾಮಟಿ ಮಿಲಿಟರಿ ಕೇಂದ್ರದಲ್ಲಿ (ಆಫೀಸರ್ಸ್ ಟ್ರೆನಿಂಗ್ ಸ್ಕೂಲ್) ತರಬೇತಿ ಮತ್ತು ಎನ್.ಸಿ.ಸಿ. ಆಫೀಸರಾಗಿ ರೂಪುಗೊಂಡರು. ಹೀಗೆ ಸುದೀರ್ಘ ೩೦ ವರ್ಷಗಳ ಕಾಲ ಉಪನ್ಯಾಸಕರಾಗಿ ಅದೇ ಕಾಲೇಜಿನ ಪ್ರಾಚಾರ್ಯರಾಗಿ ಆ ಸಂಸ್ಥೆಯ ಆಡಳಿತಾಧಿಕಾರಿಗಳಾಗಿ ಈಗ ಸದ್ಯ ಸೇವೆ ಸಲ್ಲಿಸುತ್ತಿದ್ದಾರೆ. ಸರಳ ಮತ್ತು ಸಜ್ಜನಿಕೆಯ ವ್ಯಕ್ತಿತ್ವ ಹೊಂದಿದ ಪಾಟೀಲರು ಪ್ರಾಮಾಣಿಕವಾಗಿ, ದಕ್ಷ ಆಡಳಿತಾಧಿಕಾರಿಯಾಗಿ, ಒಳ್ಳೆಯ ಉಪನ್ಯಾಸಕರಾಗಿ, ಯುವ ಪ್ರತಿಭೆಗಳನ್ನು ಗುರುತಿಸುವ, ಪ್ರೋತ್ಸಾಹಿಸುವ ಮತ್ತು ಸೃಜನಶೀಲ ಬರಹಗಾರರಾಗಿ ಸಂಸ್ಥೆಯ ಏಳ್ಗೆಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ. ಅದರ ಫಲವೇ ಆ ಸಂಸ್ಥೆ ಇವತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಅಷ್ಟೇ ಅಲ್ಲ ಕರ್ನಾಟಕದ ಗಮನ ಸೆಳೆದಿದೆ.

ರಾಘವೇಂದ್ರ ಪಾಟೀಲರ ವಿವಾಹವು ೧೯೭೮ರಲ್ಲಿ ಅವರ ೨೬ನೆಯ ವಯಸ್ಸಿನಲ್ಲಿ ಜಯಶ್ರೀ(ಸರಸ್ವತಿ) ಅವರ ಜೊತೆ ನೆರವೇರಿತು. ಈ ದಂಪತಿಗಳಿಗೆ ಒಂದು ಗಂಡು ಮಗು ಶ್ರೀಹರ್ಷ. ಒಂದು ಹೆಣ್ಣುಮಗಳು ವರ್ಧನಾ ಎಂಬ ಎರಡು ಮಕ್ಕಳು, ಶ್ರೀಹರ್ಷಾ ಅವರ ವಿವಾಹವು ೨೦೦೪ರಲ್ಲಿ ರೂಪಲಕ್ಷ್ಮಿ ಅವರೊಂದಿಗೆ ನಡೆಯಿತು. ವರ್ಧನಾ ಅವರ ವಿವಾಹವು ೨೦೦೩ರಲ್ಲಿ ಡಾ.ರಾಮಪ್ರಸಾದ ಅವರೊಂದಿಗೆ ನೆರವೇರಿತು. ಹಾಗೂ ಮೊಮ್ಮಗ ಪರಿತೋಷನ್ (ಮಗಳ ಮಗ) ೨೦೦೪ರಲ್ಲಿ ಜನನವಾಯಿತು. ಈ ಇಬ್ಬರು ಮಕ್ಕಳು ಹಾಗೂ ಮೊಮ್ಮಗನೊಂದಿಗೆ ಪಾಟೀಲರ ಈ ಚಿಕ್ಕ ಕುಟುಂಬ ಈಗ ಸದ್ಯ ಮಲ್ಲಾಡಿಹಳ್ಳಿಯಲ್ಲಿ ವಾಸವಾಗಿದ್ದಾರೆ.

ಸಾಹಿತ್ಯ ಕೃತಿಗಳ ಸಮೀಕ್ಷೆ

ರಾಘವೇಂದ್ರ ಪಾಟೀಲರ ಸಾಹಿತ್ಯ ಕೃಷಿಯ ಮೊದಲ ಹೆಜ್ಜೆಗಳು ಅವರ ಬಾಲ್ಯದಿಂದಲೇ ಪ್ರಾರಂಭಗೊಂಡದ್ದು. ೯ನೇ ತರಗತಿಯಲ್ಲಿದ್ದಾಗಲೇ ಅವರು ಎರಡು ಸಣ್ಣ ಕಥೆಗಳ ಬರಹ, ಮಾಸ್ತಿಯವರ 'ನಿಜಗಲ್ಲಿನ ರಾಣಿ' ಕಥೆಯ ನಾಟಕ ರೂಪಾಂತರ ಹೀಗೆ ಪ್ರಾರಂಭಗೊಂಡ ಅವರ ಸಾಹಿತ್ಯ ಮಾರ್ಗ ೧೯೭೨ರಲ್ಲಿ ಎಂ.ಎಸ್.ಸಿ. ಇರುವಾಗಲೇ ಬರಹದ ತೀವ್ರ ಒತ್ತಡಕ್ಕೆ ಮಣಿದು, ಸುಮಾರು ಹದಿನೈದು ಪುಟಗಳಷ್ಟು ಒಂದು ಕಿರುಕಾದಂಬರಿಯ ವ್ಯಾಪ್ತಿಯ ಅಪೂರ್ಣಬರಹ ಬರೆದಿದ್ದರು. ಇದರಲ್ಲಿ ಪಾಟೀಲರು ತಮ್ಮ ಅಜ್ಜನನ್ನು ಕಾಣದ (ಫೋಟೋ ನೋಡದ) ವ್ಯಕ್ತಿಯನ್ನು ಕಥಾನಾಯಕ ಮಾಡಿದ್ದು. ಈ ಬರಹವು ಕಳೆದು ಹೋಗಿರುವುದರಿಂದ ಅದನ್ನು ಮುಂದುವರೆಸಲಿಲ್ಲ. ಮುಂದೆ ಅವರ ನಿಜವಾದ ಸಾಹಿತ್ಯ ಕೃಷಿ ಸುರುವಾದದ್ದು ೧೯೭೬ರಲ್ಲಿ. ಮೊದಲು ಪದ್ಯ ಬರೆದರು. ಅವುಗಳನ್ನು ಪ್ರಕಟಿಸುವ ಹಂಬಲವಿಲ್ಲದೆ ಬರೆದಿದ್ದರು.

ಪಾಟೀಲರ ಬರವಣಿಗೆಯ ಮೇಲೆ ಅವರ ಬಾಲ್ಯದ ಪರಿಸರ ಮನಸ್ಸಿನ ಮೇಲೆ ಗಾಢವಾದ ಪ್ರಭಾವ ಬೀರಿದ್ದು ಅಲ್ಲಗಳೆವುವಂತಿಲ್ಲ. ತಮ್ಮ ಸಾಹಿತ್ಯದ ಬರವಣಿಗೆಯನ್ನು ಕುರಿತು ಪಾಟೀಲರು ಈ ರೀತಿಯಲ್ಲಿ ಹೇಳುತ್ತಾರೆ. "ನಾನು ಮತ್ತೆ ಬರೆಯಲು ಆರಂಭಿಸಿದ್ದು ಕವನಗಳೊಂದಿಗೆ. ನವ್ಯದ ಹಣೆಪಟ್ಟಿ ಕಟ್ಟಿಕೊಂಡ ಸಾಲುಗಳು (ಬರೇ ಸಾಲುಗಳೇ ಇದ್ದಿರಬಹುದು... ಕಾವ್ಯದ ಸುದ್ದಿ ಇರಲಿಕ್ಕಿಲ್ಲ). ೧೯೭೭ರಲ್ಲಿ ಪ್ರೇಮದ ಗೊಂದಲ, ಪ್ರೇಮಿಸಿದ ಹುಡುಗಿಯ ಚಲ್ಲುತನ (ತನ್ನ ಚಲ್ಲುತನವೂ ಇರಲಿಲ್ಲವೆ? ಇಲ್ಲ ಐವಾಚ್ ಸೀರಿಯಸ್ ಐ ನೆವರ್ ಮಿಸ್ ಯೂಜಡ್ ಹರ್) ಹಿಪಾಕ್ರಸಿ ನನ್ನ ಕೌಟುಂಬಿಕ ಜವಾಬ್ದಾರಿ, ಇವುಗಳ ಜಗ್ಗಾಟಗಳು, ನನ್ನ ಅಂತರಂಗದಲ್ಲಿ ಹೊಸಗೊಂದಲಗಳನ್ನು ಹೊಸ ತಳಮಳಗಳನ್ನು ಹುಟ್ಟು ಹಾಕಿದವು. ಈ ಗೊಂದಲಗಳಿಂದ ತಪ್ಪಿಸಿಕೊಳ್ಳಲು ಪದ್ಯ ಬರೆದೆ. ಈ ಪದ್ಯಗಳ ನಡುವೆ 'ವೈಲ್ಡ್ ಸೀಡ್' ಎನ್ನುವ ಝುಕ್ ಕಾದಂಬರಿಯನ್ನು ಓದಿ ಥಕ್ಕಾದೆ. ರಶಿಯದ ಆಕ್ರಮಣದ ಸಂದರ್ಭದಲ್ಲಿ ತನ್ನ ತಂದೆ ತಾಯಿಗಳನ್ನು ಕಳೆದುಕೊಂಡ ಹುಡುಗಿಯೊಬ್ಬಳು ಮುಂದೆ ಬೆಳೆದು ದೊಡ್ಡವಳಾಗಿ ತನ್ನ ಕಳೆದು ಹೋದ ತಂದೆ ತಾಯಿಗಳನ್ನು ಹುಡುಕಿಕೊಳ್ಳಲು ಧಾವಂತಪಡುವ ಕಥೆ... ಆ ಕಾದಂಬರಿಯ ಭಾವಲೋಕ ಅದನ್ನು ಹಿಡಿದು ಕೊಡುವ ಚೋಪಾದ ಭಾಷೆ, ಅನುಭವಗಳ ತೀವ್ರ ಪ್ರಾಮಾಣಿಕತೆ ಇವೆಲ್ಲ (ನವ್ಯ ಸಾಹಿತ್ಯದ ಲಕ್ಷಣಗಳು) ನನ್ನನ್ನು ಗದ್ಯ ಬರೆಯುವಂತೆ ಪ್ರಚೋದಿಸಿದವು. ನನ್ನ ಮನದ ತಿರುಗಣಿ ಮಡುವಿನ ಚಿತ್ರ ಬರೆಯಲು ಆಗ ಗದ್ಯದ ಮೂರು ಪುಟಗಳನ್ನು ಬರೆದೆ. ಬರೀ ಬಣ್ಣಗಳು...ಭಾವವನ್ನು ಹಿಡಿಯಲು ಪ್ರಯತ್ನಿಸಿದ ಬಣ್ಣಗಳ ಅಮೂರ್ತ ವಿನ್ಯಾಸ!... ನಾನು ಆ ಮೂರು ಪುಟಗಳಿಂದ ಕಥೆಗಾರನಾಗಿ ಹುಟ್ಟಿಬಂದೆ. ಆ ಮೂರು ಪುಟಗಳನ್ನು ಓದಿ ಹೇಳಿ ಗೆಳೆಯ ಎಚ್.ಎಸ್.ವೆಂಕಟೇಶಮೂರ್ತಿಯವರು ನನ್ನನ್ನು ಪದ್ಯದ ಕ್ಯಾಪ್ಟಿವಿಟಿಯಿಂದ ಬಿಡುಗಡೆಗೊಳಿಸಿ ಕಥನದ ಸೆರಗಿಗೆ ಕಟ್ಟಿದರು!"[೬] ಹೀಗೆ ಪಾಟೀಲರು ಕವನವನ್ನು ಬರೆಯುವುದು ಬಿಟ್ಟು ಕಥೆ, ಕಾದಂಬರಿ, ವಿಮರ್ಶೆ, ಪ್ರವಾಸಕಥನ, ಸಂಪಾದಕ ಕಾರ್ಯ, ಈ ಕಡೆ ತಮ್ಮ ಬರವಣಿಗೆಯನ್ನು ಪ್ರಾರಂಭಿಸಿದರು. ಅದರ ಜೊತೆಗೆ ತಮ್ಮದೇ ಆದ ಭಾಷೆ ಮತ್ತು ಶೈಲಿಯ ಗತ್ತಿನಿಂದ ಶ್ರೇಷ್ಠ ಮಟ್ಟದ ಕತೆಗಾರರಾಗಿ ಹೆಸರನ್ನು ಪಡೆದುಕೊಂಡವರು. ಪಾಟೀಲರು ಇಲ್ಲಿಯವರೆಗೆ ಸುಮಾರು ೧೬ ಕೃತಿಗಳನ್ನು ಹೊರತಂದಿದ್ದಾರೆ. ಮತ್ತು ೨೦೦ಕ್ಕೂ ಹೆಚ್ಚು ಬಿಡಿ ಲೇಖನಗಳನ್ನು ಬರೆದಿದ್ದಾರೆ. ಒಟ್ಟಾರೆಯಾಗಿ ಪಾಟೀಲರ ಬರಹ ಸ್ವರೂಪ ಹೀಗಿದೆ.

ಕಥಾಸಂಕಲನಗಳು

'ಒಡಪುಗಳು : ೧೯೭೮'

ಈ ಕೃತಿಯು ಪ್ರಾಟೀಲರ ಪ್ರಥಮ ಕಥಾಸಂಕಲನವಾಗಿದೆ. ಪಾಟೀಲರು ಉತ್ತಮ ಕಥೆಗಾರರಾಗಿ ಬೆಳೆಯಲು ಇಲ್ಲಿಯ ಕಥೆಗಳು ಒಂದು ನಿದರ್ಶನವಾಗಿವೆ. ಈ ಕಥಾ ಸಂಕಲನದಲ್ಲಿ ಒಂಬತ್ತು ಕಥೆಗಳಿವೆ

: ಒಡಪುಗಳು, ನೀನು ಕೆಮಲಿಯಾನ್ ಮತ್ತು ಸಾಪೇಕ್ಷತೆ, ತಪ್ಪೊಪ್ಪಿಗೆ, ಅಂತರಗಂಗಿ, ಬೆತ್ತಲು, ಬ್ಯಾಟ... ಬ್ಯಾಟ, ಗಿಡಾಕಡಿಯಾಕ ಹೋದದ್ದು, ಸುಂಕದ ಪಟ್ಟಣದ ಪಟೇಲರು, ಆಶಾ ಮೇಡಂ, ಕಥೆಗಳನ್ನು ಒಳಗೊಂಡಿದೆ. ಇಲ್ಲಿಯ ಕಥೆಗಳು ವ್ಯಕ್ತಿ-ವ್ಯಕ್ತಿಗಳ ಸಂಬಂಧಗಳ ಒಗಟನ್ನು ವಿಸ್ತರಿಸುವ ಹಾಗೂ ಅವುಗಳ ಮಾನಸಿಕ ಸ್ಥಿತಿಯನ್ನು ಭಾಷೆಯ ಮೂಲಕ ಬಿಡಿಸುವ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬಿತ್ತರಿಸುವ ನಿಟ್ಟಿನಲ್ಲಿ ಹಿನ್ನೆಲೆಯನ್ನು ಅನುಭವಿಸುವ, ಸೃಷ್ಟಿಯ ಮೂಲ ಪ್ರವೃತ್ತಿಗಳಲ್ಲಿ ಒಂದಾಗಿರುವ, ಪ್ರೇಮ-ಕಾಮಗಳ ರಹಸ್ಯಕ್ಕೆ ಒಂದು ಆಕಾರಕೊಡುವ ಮತ್ತು ವ್ಯಕ್ತಿ ಇಷ್ಟಪಟ್ಟ ವಸ್ತು ತನಗೆ ಸಿಗದೆ ಬೇರೆಯವರ ಪಾಲಾದಾಗ ಆ ವ್ಯಕ್ತಿಯ ಮೇಲೆ ಸೇಡನ್ನು ತೀರಿಸಿಕೊಳ್ಳಲು ನಡೆಸುವ ದ್ವೇಷದ ಭಾವನೆ, ಕೊನೆಯಲ್ಲಿ ಅಸೂಯೆಯನ್ನು ಹುಟ್ಟಿಸಿ, ತಾನು ಮಾಡಿದ ಕಾರ್ಯಕ್ಕೆ ಪಶ್ಚಾತಾಪಪಡುವ, ಸಮಾಜದ ವ್ಯಕ್ತಿಗಳನ್ನು ಒಂದು ಸಾಮಾಜಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ಪಾಟೀಲರು ಸಂಕಲನದಲ್ಲಿ ಚಿತ್ರಿಸಿದ್ದಾರೆ. ಮನಸ್ಸು ಬಯಸಿದ್ದನ್ನು ಪಡೆಯಲು ಹಾಗೂ ಅದರಂತೆ ನಡೆಯಲು ಆಗದೆ ಇರುವ ವ್ಯಕ್ತಿ ತನ್ನ ಆತ್ಮದ ಅರಿವಿಲ್ಲದೇ ಅಥವಾ ಅರಿವಿನಲ್ಲಿಯೇ ಅನೇಕ ವಿಷಯಗಳನ್ನು ಬಚ್ಚಿಟ್ಟುಕೊಂಡು, ಅವುಗಳಿಗೆ ಹೊರಜಗತ್ತಿನಲ್ಲಿ ಬಣ್ಣದ ರೂಪಕೊಡುವುದನ್ನು ಪಾಟೀಲರು 'ಒಡಪುಗಳು' ಕಥಾ ಸಂಕಲನದಲ್ಲಿ ಚೆನ್ನಾಗಿ ಬಿಂಬಿಸಿದ್ದಾರೆ.

ಪ್ರತಿಮೆಗಳು : (೧೯೮೨)

ಈ ಕಥಾ ಸಂಕಲನವು ಎಂಟು ಕಥೆಗಳನ್ನು ಒಳಗೊಂಡಿದೆ. ಪ್ರತಿಮೆಗಳು, ದುಂ-ಡುಮಕ್, ಮಾಧುರಿ, ಜೈಲಿನಲ್ಲಿ, ಕಾಡಜ್ಜ, ನಿರೀಕ್ಷೆಗಳು, ಕನಸುಗಳೇ ಹಾಗೇ, ಬಸತ್ತಿ ಈ ಎಂಟು ಕಥೆಗಳಲ್ಲಿ ಅತಿ ಚಿಕ್ಕವಾದ ಕಥೆ 'ಕನಸುಗಳೇ ಹಾಗೇ' ಕೇವಲ ಮೂರು ಪುಟ ಒಳಗೊಂಡಿದೆ. ಬಸತ್ತಿ ೪೪ ಪುಟದ ದೀರ್ಘವಾದ ಕಥೆ. ಇಲ್ಲಿಯ ಕಥೆಗಳು ಬೇರೆ ಬೇರೆ ರೀತಿಯ ಆಶಯವನ್ನು ವ್ಯಕ್ತಪಡಿಸುತ್ತದೆ. ವಾಸ್ತವ ಸಮಾಜದಲ್ಲಿ ಭಾವನಾತ್ಮಕ ಮತ್ತು ಆರ್ಥಿಕ ಸಂಬಂಧಗಳು, ರಾಜಕೀಯ ಹಿತಕ್ಕಾಗಿ, ಅಧಿಕಾರಕ್ಕಾಗಿ, ದ್ವೇಷವನ್ನು ಸಾಧಿಸುವುದು, ಜನರನ್ನು ಒಲಿಸಿಕೊಳ್ಳಲು ಹೊಸ ತಂತ್ರಗಳನ್ನು ರೂಪಿಸುವುದು. ವ್ಯಕ್ತಿಗಳಲ್ಲಿ ಸೋಲು ಎದುರಾದಾಗ ಆತನ ವ್ಯಕ್ತಿತ್ವವೇ ಕುಂದಿದಂತಾಗಿ ಅವನನ್ನು ದುರ್ಬಲನನ್ನಾಗಿ ಮಾಡುವುದರ ಜೊತೆಗೆ ವ್ಯಕ್ತಿಗಳಲ್ಲಿ ಎಷ್ಟೊಂದು ಸೇಡು, ಹಠದ ಪ್ರಭಾವವಿದೆ ಎನ್ನುವುದನ್ನು ತಿಳಿಸುತ್ತವೆ. ಜೈಲಿಗೆ ಹೋದರು ಸಹ ಊರಿನ ಯಜಮಾನಿಕೆ ತನ್ನದೇ ಆಗಬೇಕು, ಊರಿನ ರಾಜಕೀಯದಲ್ಲಿ ಅಧಿಕಾರದ ಚುಕ್ಕಣಿಯನ್ನು ಬಿಡುವ ಹಾಗಿಲ್ಲ. ಒಬ್ಬೊಬ್ಬ ವ್ಯಕ್ತಿಯಲ್ಲಿ ಒಂದೊಂದು ತರಹದ ವ್ಯಕ್ತಿತ್ವ ಧೋರಣೆಗಳು ಕೂಡಿರುತ್ತವೆ. ಅವು ಒಂದನ್ನೊಂದು ತೊರೆಯಲು ಹಾತೊರೆಯುತ್ತವೆ. ಮತ್ತು ಒಂದಾಗಲು ಪ್ರಯತ್ನಿಸುತ್ತವೆ. ಹಳ್ಳಿ ಪರಿಸರದಲ್ಲಿ ಶ್ರೇಷ್ಠತೆಯನ್ನು ಕಾಯ್ದುಕೊಳ್ಳುವುದು. ತನ್ನ ಪ್ರತಿಷ್ಠೆಯನ್ನು ಊರ ಪಂಚಾಯಿತಿ ಚುನಾವಣೆಯಲ್ಲಿ ಗೆಲ್ಲುವ ಮೂಲಕ ತೋರಿಸುವ ವ್ಯಕ್ತಿಗಳು, ತಂದೆ-

ಮಗ ಒಂದೇ ಪರಿಸರದಿಂದ ಕೂಡಿದವರಾದರು ಸಹ ಅವರಲ್ಲಿ ಭಿನ್ನವಾದ ಆಲೋಚನೆಗಳು ಹಾಗೂ ಭಿನ್ನವಾದ ವ್ಯಕ್ತಿತ್ವವನ್ನು ಪ್ರದರ್ಶಿಸುತ್ತವೆ. ಹೀಗೆ ಈ ಕಥಾ ಸಂಕಲನದಲ್ಲಿ ಕುಟುಂಬ, ಹುಡುಕಾಟ, ದ್ವೇಷ, ರಾಜಕೀಯ, ಹಠ, ಭಾವನಾತ್ಮಕವಾದ ಸಂಬಂಧಗಳನ್ನು ಪಾಟೀಲರು ಸೊಗಸಾಗಿ ಚಿತ್ರಿಸಿದ್ದಾರೆ.

ದೇಸಗತಿ : (೧೯೯೫)

ಪಾಟೀಲರು ಈ ಕಥಾಸಂಕಲನವನ್ನು ಪ್ರತಿಮೆಗಳು ಕಥಾ ಸಂಕಲನ ಬರೆದ ಹದಿಮೂರ ವರ್ಷಗಳ ನಂತರ ಹೊರತಂದಿದ್ದಾರೆ. ಈ ದೀರ್ಘವಾದ ಅವಧಿಯಲ್ಲಿ ಕೇವಲ ಆರು ಕಥೆಗಳನ್ನು ಮಾತ್ರ ಬರೆದಿದ್ದಾರೆ. ಅವುಗಳು ಕಥೆಯ ಹುಚ್ಚಿನ ಕರಿಟೋಪಿಗೆಯ ರಾಯ, ದೇಸಗತಿ, ಬೆಳ್ಳಕ್ಕಿಗಳ ಲೋಕದಲ್ಲಿ, ಒಂದು ಸೋಲಿಗಿಗೋದಿ, ಉರುಳುವಗಾಲಿ, ಗುಡುಗುಡು ಮುಗಿಲು, ಈ ಎಲ್ಲ ಕಥೆಗಳು ಭಿನ್ನ ಭಿನ್ನವಾದ ಕಥಾ ಆವರಣ ಹಾಗೂ ವಾಸ್ತವ ಮತ್ತು ಇತಿಹಾಸದ ಅನುಸಂಧಾನದಲ್ಲಿ ಹಳೆಯದರ ನೆನಪನ್ನು ವಾಸ್ತವಿಕ ನೆಲೆಯಲ್ಲಿ ಕಟ್ಟಿಕೊಡುವ ಹಾಗೂ ನೋಡುವ ಪ್ರಯತ್ನದಲ್ಲಿವೆ. ಸಮುದಾಯದಲ್ಲಿ ಮನುಷ್ಯನ ಅಸಹಾಯಕತೆ, ಕ್ರೌರ್ಯ, ಇಕ್ಕಟ್ಟಿನ ಪರಿಸ್ಥಿತಿ ಇವುಗಳ ಜೊತೆಗೆ ಮಾನವೀಯತೆಯ ಸಂಬಂಧಗಳ ನೋಟ ತುಂಬಾ ಸೊಗಸಾಗಿ ಮೂಡಿಬಂದಿವೆ. ನಮ್ಮ ಬದುಕಿನ ಭವನೆಯಲ್ಲಿ ಲಯವೇ ಇಲ್ಲದಿರುವಾಗ ಜೀವನವು ಹೇಗೆ ಪರಿಪೂರ್ಣತೆಯನ್ನು ಸಾಧಿಸುತ್ತದೆ. ಹಾಗೂ ವ್ಯಕ್ತಿ-ಸಮಾಜದ ಗಾಢವಾದ ಸಂಬಂಧಗಳು ಒಂದು ತಾರ್ಕಿಕ ಅರ್ಥದಲ್ಲಿ ವಿಶ್ಲೇಷಿಸುವ ಪ್ರಯತ್ನಗಳು ಇಲ್ಲಿವೆ. ಸಮುದಾಯ ನಿಷ್ಠತೆಯನ್ನು, ಗಂಭೀರವಾದ ಆಲೋಚನೆ ವಿಧಾನದಲ್ಲಿ ಮುನ್ನಡಿಸುವ, ಹೊಸ ಪ್ರಯೋಗಶೀಲತೆಯ ಜಳಕಿನಿಂದ ಓದುಗರನ್ನು ತನ್ನತ್ತ ಸೆಳೆದುಕೊಳ್ಳುವ ಗುಣವನ್ನು ಈ ಕಥಾಸಂಕಲನ ಹೊಂದಿದೆ.

ಮಾಯಿಯ ಮುಖಗಳು :(೧೯೯೮)

ಈ ಕಥಾ ಸಂಕಲನದಲ್ಲಿ ಪ್ರಮುಖವಾಗಿ ಮೂರು ಕಥೆಗಳಿವೆ. ಮಾಯಿಯ ಮುಖಗಳು, ದೀಬರ ದಿಂಡೀ ದೀಬರ ದಿಂಡೀ ಕುಬಸಾ ಎಲ್ಲಿಟ್ಟೀ, ತುದಿಯೊಂಬೊ ತುದಿಯಲ್ಲ. ಈ ಮೂರು ಕಥೆಗಳು ದೀರ್ಘ, ಅತಿದೀರ್ಘ ಮತ್ತು ಸುದೀರ್ಘವಾದವುಗಳು. ಇಲ್ಲಿಯ ಕಥೆಗಳೂ ಜಾನಪದದ ಸೊಗಡನ್ನು ಹೊತ್ತುಕೊಂಡು ಸಂಗೀತದ ನಾದವನ್ನು ಓದುಗರಿಗೆ ಕೊಡುತ್ತವೆ. ವ್ಯಕ್ತಿಯ ಅಂತರಂಗದಲ್ಲಿ ಅರಳುವ ಸಾಧನೆಯನ್ನು ಹೊರ ಸೂಸಲು ಲೋಕದಲ್ಲಿನ ವ್ಯವಸ್ಥೆ ಯಾವ ರೀತಿಯಲ್ಲಿ ಕಾರಣವಾಗುತ್ತವೆ ಎಂಬುದನ್ನು, ಜಿಪುಣತನದಿಂದ ಹಣವನ್ನು ಕೂಡಿಟ್ಟುಕೊಂಡು ಜೀವನ ಸಾಗಿಸುವ ವ್ಯಕ್ತಿಗಳು ಬದುಕಿನ ಕೊನೆಯಲ್ಲಿ ಏನನ್ನು ಬಯಸದೆ ಇರುವಾಗ, ಕನಸಿನ ರೂಪದಲ್ಲಿ ಸುಳಿಯುವ ಆಸೆಗಳಿಗೆ ಜೋತುಬೀಳುವ, ಒಂದು ಹೊಸದಾದ ಅನುಭವವನ್ನು ನೀಡುತ್ತವೆ. ಹಾಗೂ ಜನಸಮುದಾಯದಲ್ಲಿ ಹೊಸಬಗೆಯ

ಲಯಗಳು ಹುಟ್ಟಿಬರುವುದರಿಂದ ಅವುಗಳನ್ನು ಪಡೆದುಕೊಳ್ಳಲು ಸಮಾಜದಲ್ಲಿ ವ್ಯಕ್ತಿಗಳು ಹೇಗೆ ಕಷ್ಟಪಡುತ್ತಾರೆಂಬುದು ತಿಳಿಯಪಡಿಸುತ್ತವೆ. ಸಮಕಾಲೀನ ಬದುಕಿನ ಘಟನೆಗಳನ್ನು ಸೂಕ್ತವಾದ ನೆಲೆಯಲ್ಲಿ ಭಾವನಾತ್ಮಕತೆಯಿಂದ ಬೀಡುವ ಪರಿ ಅದ್ಭುತವಾಗಿದೆ. ಇಲ್ಲಿಯ ಭಾಷೆ ಸಂಗೀತಮಯವಾಗಿ ಇಂಪನ್ನು ನೀಡುತ್ತಾ, ಕಾವ್ಯಮಯವಾಗಿ ರಮ್ಯತೆಯನ್ನು ಸೂಸುತ್ತಾ, ಕಥೆಯಾಗಿ ಹೋಗುವುದರಿಂದ, ಇಲ್ಲಿಯ ಭಾಷೆ ಓದುಗರ ಹೃದಯವನ್ನು ಸ್ಪರ್ಶಿಸಿ ಹೊಸದಾದ ಒಂದು ಅನುಭವವನ್ನು ಕೂಡುವ ಸಾಮರ್ಥ್ಯ ಈ ಕಥಾಸಂಕಲನಕ್ಕೆ ಇದೆ.

ವಿಮರ್ಶಾಕೃತಿಗಳು

ವಾಗ್ವಾದ : (೧೯೯೭)

ಇದು ಪಾಟೀಲರು ಹತ್ತು-ಹನ್ನೆರಡು ವರ್ಷಗಳಲ್ಲಿ ಬರೆದ ವಿಮರ್ಶಾ ಬಿಡಿಲೇಖನಗಳನ್ನು ಒಂದು ಕೃತಿ ರೂಪದಲ್ಲಿ ಹೊರತಂದಿದ್ದಾರೆ. ಈ ಕೃತಿಯಲ್ಲಿ ಎರಡು ಭಾಗಗಳಿವೆ. ಒಂದು : ಬಯಲು ರಂಗ, ಈ ವಿಭಾಗದಲ್ಲಿ ಎಂಟು ಲೇಖನಗಳಿವೆ. ಅದರಲ್ಲಿ ಒಂದು ಸಂದರ್ಶನ ಲೇಖನವು ಒಳಗೊಂಡಿದೆ. ಭಾಗ ಎರಡು : 'ಅಂತರಂಗದ ಅಂಗಳ'ದಲ್ಲಿ ಒಂಬತ್ತು ಲೇಖನಗಳನ್ನು ಒಳಗೊಂಡಿದೆ. ಕಥೆಗಾರರಾಗಿ ರಾಘವೇಂದ್ರ ಪಾಟೀಲರು ತಮ್ಮ ಸಾಹಿತ್ಯದ ಆಳ ಅನುಭವಗಳನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಇಲ್ಲಿಯ ಲೇಖನಗಳು ಸಾಹಿತ್ಯದ ಹೊಸಹೊಸ ರೂಪವನ್ನು, ಮಜಲನ್ನು, ವಿಮರ್ಶೆಸುತ್ತಾ ದಾಖಲಿಸುತ್ತವೆ. ಇಲ್ಲಿನ ಲೇಖನಗಳು ಅವರ ವೈಯಕ್ತಿಕ ಪ್ರತಿಕ್ರಿಯೆ ಎಂತಲೆ ಗುರುತಿಸಿದ್ದಾರೆ. ಹೀಗೆ ಈ 'ವಾಗ್ವಾದ' ಕೃತಿಯ ಬದಲಾದ ಸಾಹಿತ್ಯ ಸಂದರ್ಭವನ್ನು ತೋರಿಸುವ ಹೊಸದೃಷ್ಟಿಕೋನವನ್ನಿಟ್ಟುಕೊಂಡು, ವೈಚಾರಿಕತೆಯಲ್ಲಿ ಮೂಡಿರುವುದರಿಂದ, ಹಳೆಯದು ಮತ್ತು ಹೊಸದರ ಇವುಗಳ ನಡುವಿನ ಸೂಕ್ಷ್ಮವಾದ ಸಂಘರ್ಷವನ್ನು ಈ ಕೃತಿಯು ವಿಮರ್ಶಿಸುತ್ತಾ, ಪರಿಚಯಿಸುತ್ತದೆ.

ಆನಂದಕಂದ : (೧೯೯೬)

ಈ ಕೃತಿಯು ಆನಂದಕಂದರ ಜೀವನ ಚರಿತ್ರೆ ಮತ್ತು ಸಾಧನೆಯನ್ನು ಅಧಿಕೃತವಾಗಿ ತಿಳಿದುಕೊಳ್ಳುವ ಕೃತಿಯಾಗಿದೆ. ಕೃತಿಯಲ್ಲಿ ಪ್ರಮುಖವಾಗಿ ಮೂರು ಭಾಗಗಳಿವೆ. ಒಂದು : "ಬದುಕು ಕಡಲ ಕುದಿತದ ಎಣ್ಣೆಕೊಪ್ಪರಿಗೆ" ಇದರಲ್ಲಿ ಆನಂದಕಂದರ ಮನೆತನದ ಹಿನ್ನೆಲೆ, ಬದುಕು, ಕನ್ನಡ ದೀಕ್ಷೆ ಹಾಗೂ ಬದುಕಿನ ಕೊನೆ, ಈ ಎಲ್ಲ ವಿಷಯಗಳನ್ನು ಒಳಗೊಂಡಿದೆ. ಭಾಗ ಎರಡು : "ಪ್ರಕೃತಿಯಂತೆ ಕವಿಯ ಮನಸ್ಸು" ಇದರಲ್ಲಿ ಆನಂದಕಂದರ ಪತ್ರಿಕಾ ವ್ಯವಸಾಯ, ಕೃಷ್ಣಶರ್ಮರ 'ಜಯಂತಿ' 'ವೈಭವದ' ಹಿನ್ನೋಟ ಹಾಗೂ ವೈವಿಧ್ಯ ಇವುಗಳನ್ನು ಪರಿಚಯಿಸಿದ್ದಾರೆ. ಭಾಗ ಮೂರು : ವಿಮರ್ಶೆ ಇದರಲ್ಲಿ ಆನಂದ ಕಂದರ ಕಾವ್ಯ, ಸಣ್ಣಕಥೆಗಳು, ಕಾದಂಬರಿಗಳನ್ನು ಕುರಿತು ವಿಮರ್ಶಾತ್ಮಕವಾಗಿ ಚರ್ಚಿಸಿದ್ದಾರೆ.

ಕೊನೆಯಲ್ಲಿ ಉಪಸಂಹಾರದಲ್ಲಿ 'ಸಾಹಿತ್ಯ ನಿರ್ಮಾಣಕಾರ' ಬೆಟಗೇರಿ ಕೃಷ್ಣಶರ್ಮ ಅವರ ಜೀವನ, ಸಾಹಿತ್ಯ, ಪತ್ರಿಕೆಗಳು ಮುಂತಾದವುಗಳನ್ನು ವಿಮರ್ಶಿಸಿದ್ದಾರೆ. ಈ ರೀತಿಯಲ್ಲಿ ಆನಂದಕಂದ ಕೃತಿಯು, ಕವಿಯು ಜೀವನದ ಸ್ಥಿತ್ಯಂತರಗಳನ್ನು ಒಂದು ರೂಪದಲ್ಲಿ ಹಿಡಿದಿಟ್ಟು ಅವರ ಸಾಹಿತ್ಯ, ಸಾಹಿತ್ಯದ ಕೃತಿಗಳನ್ನು ಪರಿಚಯಿಸಲು ಈ ಕೃತಿ ತುಂಬ ಸಹಕಾರಿಯಾಗಿದೆ.

ಕಾದಂಬರಿಗಳು

ಬಾಳವ್ವನ ಕನಸುಗಳು (ಕಳಕೊಂಡವಳು) : (೧೯೮೪)

ಈ ಕಾದಂಬರಿ ಮೊದಲು 'ಕಳಕೊಂಡವಳು' ಎಂಬ ಹೆಸರಿನಿಂದ ೧೯೮೨ರ ಸುಧಾ ಕಾದಂಬರಿ ಸ್ಪರ್ಧೆಯಲ್ಲಿ ಮೆಚ್ಚುಗೆಯ ಬಹುಮಾನ ಪಡೆದುಕೊಂಡಿದೆ. ನಂತರ ೧೯೮೪ರಲ್ಲಿ ಕಾದಂಬರಿಯ ಹೆಸರನ್ನು ಬದಲಿಸಿ 'ಬಾಳವ್ವನ ಕನಸುಗಳು' ಎಂದು ತಲೆ ಬರಹವನ್ನು ಕೊಟ್ಟಿದ್ದಾರೆ. ಇದು ಅವರ ಮೊದಲ ಕಾದಂಬರಿಯಾಗಿದೆ. ಈ ಕಾದಂಬರಿಯು ಒಂದು ಮನೆಯ ಕಥೆಯನ್ನು ಹೊತ್ತುಕೊಂಡು ಸಾಗುತ್ತದೆ. ಬಾಳವ್ವ ತನ್ನ ಕುಟುಂಬದ ಬಗ್ಗೆ ಇಟ್ಟುಕೊಂಡ ಆಸೆ ಮತ್ತು ಕನಸುಗಳು ಅವುಗಳಿಗಾಗಿ ಪಡುವಶ್ರಮ, ಕನಸನ್ನು ನನಸಾಗಿಸಲು ಹರಳಿರುಳು ದುಡಿಯುವ ಮಹಿಳೆ ಕೊನೆಗೂ ತಾನುಕಂಡ ಕನಸು ನನಸಾಗದೆ ಆಗೆಯೇ ಕನಸಾಗಿ ಉಳಿದು ಬಿಡುವ ಕಥೆಯನ್ನು ಒಳಗೊಂಡಿದೆ. ದೈನಂದಿನ ಚಟುವಟಿಕೆಗಳು ವ್ಯಕ್ತಿಯ ಜೀವನದಲ್ಲಿ ಪ್ರಮುಖವಾದ ನೆಲೆಯನ್ನು ಭದ್ರಪಡಿಸುತ್ತವೆ. ಆ ಚಟುವಟಿಕೆಯಿಲ್ಲದ ವ್ಯಕ್ತಿಗಳು ಅಥವಾ ಜವಾಬ್ದಾರಿಯಿಲ್ಲದೆ ಸೋಮಾರಿತನದಿಂದ ತನ್ನ ಇರುವಿಕೆಯನ್ನು ಸುಧಾರಿಸಿಕೊಳ್ಳದೇ ಅದರಲ್ಲಿಯೆ ಉಳಿದು ಹೋಗುವ ವ್ಯಕ್ತಿಗಳು, ಒಂದು ಕೌಟುಂಬಿಕ ಪರಿಸರದ ಜೀವನದಲ್ಲಿ ಕಂಡುಬರುತ್ತವೆ. ಬಡತನದ ಒಂದು ಮನೆಯ ಕಥೆಯೆಂದು ಮೇಲ್ನೋಟಕ್ಕೆ ಅನಿಸಿದರು ಸಹ, ಸಾಮಾನ್ಯ ಜನರಲ್ಲಿ ಹುದುಗಿರುವ ಬದುಕಿನ ಸ್ಥಿತಿಗತಿ, ಜೀವನದ ಉದಾತ್ತವಾದ ಆದರ್ಶಪಾಲನೆಯನ್ನು ಹುಡುಕುವ ಮತ್ತು ತೋರಿಸುವ ಕೃತಿಯಾಗಿದೆ.

ಶ್ರೀಯುತರು 'ತೇರು' ಕಾದಂಬರಿಯನ್ನು ರಚಿಸಿದ್ದಾರೆ. ಪ್ರಸ್ತುತ ಅಧ್ಯಯನವು ಆ ಕಾದಂಬರಿಗೇ ಸಂಬಂಧ ಪಟ್ಟಿರುವುದರಿಂದ ಅದರ ಬಗ್ಗೆ ಮುಂದಿನ ಅಧ್ಯಯದಲ್ಲಿ ವಿಸ್ತಾರವಾಗಿ ವಿವರಿಸಲಾಗಿದೆ.

ಪ್ರವಾಸ ಕಥನ

ಅಜ್ಞಾತ ಮುಂಬಯಿ : (೧೯೯೧)

೧೯೮೯ರಲ್ಲಿ ಪಾಟೀಲರು ಮುಂಬಯಿ ಪ್ರವಾಸಕ್ಕೆ ಹೋದಾಗ ಅಲ್ಲಿ ಕಂಡಿರುವ ವಿವಿಧ ಮುಖಗಳನ್ನು ಈ ಪ್ರವಾಸ ಕಥನದಲ್ಲಿ ಚಿತ್ರಿಸಿದ್ದಾರೆ. ಈ ಕೃತಿಯ ಪ್ರವಾಸ ಕಥನದಲ್ಲಿ ಒಂದು

ಹೊಸದಾದ ಪ್ರಯೋಗ, ರೂಪ, ಲಕ್ಷಣಗಳನ್ನು ಹೊಂದಿದ, ಭಿನ್ನವಾಗಿ ಬದುಕಿನ ಗ್ರಹಿಕೆಯನ್ನು ವ್ಯಕ್ತಪಡಿಸುವ ಕೃತಿಯಾಗಿದೆ. ಈ ಕೃತಿಯನ್ನು ಓದುತ್ತಾ ಹೋದಂತೆ, ಕಾವ್ಯ ನಮ್ಮ ಎದುರಿಗೆ ಗೋಚರಿಸುತ್ತದೆ. ಸಣ್ಣ ಕಥೆಯಂತೆ ನಮ್ಮನ್ನು ಒಮ್ಮೆಲೆ ಬೇರೆ ಲೋಕಕ್ಕೆ ಕರೆದುಕೊಂಡು ಹೋಗುತ್ತದೆ. ಹೀಗಿರುವಾಗ ಈ ಕೃತಿಯನ್ನು ವ್ಯಾಖ್ಯಾನಿಸಲು ಅಷ್ಟು ಸುಲಭವಲ್ಲ. ಇದು ಪ್ರವಾಸಕಾವ್ಯ, ಪ್ರವಾಸ ಕಥನ, ಪ್ರವಾಸಕಥೆ, ಈ ಮೂರು ಅಂಶವನ್ನು ಪಡೆದುಕೊಂಡಕೃತಿ. ಈ ಕೃತಿಯನ್ನು ಕುರಿತು ಮುನ್ನುಡಿಯಲ್ಲಿ ಎಚ್.ಎಸ್.ವೆಂಕಟೇಶಮೂರ್ತಿಯವರು ಈ ರೀತಿಯಲ್ಲಿ ಹೇಳುತ್ತಾರೆ. "ಅಜ್ಞಾತ ಮುಂಬಯಿ ಶುದ್ಧಾಂಗ ಕಥೆಯಲ್ಲ. ಅಥವಾ ಶುದ್ಧಾಂಗ ಪ್ರವಾಸ ಲೇಖನವೂ ಅಲ್ಲ. ಅವೆರಡರ ಗುಣಗಳನ್ನು ರಾಸಾಯನಿಕ ಪಾಕಮಾಡಿ ಸಿದ್ಧಪಡಿಸಿದ ಒಂದು ವಿಶಿಷ್ಟ ಪ್ರಯೋಗವಿದು. ಇನ್ವರ್ಟೆಡ್ ಕಾಮಾಗಳಲ್ಲಿ 'ಪ್ರವಾಸಕಥೆ' ಎಂದು ಅಭಿಪ್ರಾಯ ಪಟ್ಟಿದ್ದಾರೆ. ಈ ಕೃತಿಯಲ್ಲಿ ಪ್ರಮುಖವಾಗಿ ನಾಲ್ಕು ಭಾಗಗಳಿವೆ. ನೆನಪು, ಭಯ, ಪ್ರವೇಶ, ಶೋಧ ಎಂಬ ನಾಲ್ಕು ಭಾಗಗಳಲ್ಲಿ ಮರಾಠಿ ಭಾಷೆ ಮತ್ತು ವ್ಯಕ್ತಿ ಸಂಬಂಧಗಳು, ಮುಂಬಯಿ ನಗರಕ್ಕೆ ಹೋಗಲು ಭಯ, ಅಲ್ಲಿಯ ಜನರ ಸ್ನೇಹ, ಮುಂಬಯಿ ನಗರದ ಜನಜೀವನದ ಜೊತೆಗೆ ಕೊನೆಯಲ್ಲಿ ಎರಡು ಸಂದರ್ಶನವನ್ನು ಕೊಟ್ಟಿದ್ದಾರೆ. ಮರಾಠಿ ದಲಿತ ಸಾಹಿತ್ಯವನ್ನು ಕುರಿತು ನಾರಾಯಣ ಸುರ್ವೆ ಮತ್ತು ಆಯುಷ್ಮಾನ್ ಕೇಶದ ಮೆತ್ರಾಮ ಜೊತೆ ಎರಡು ಸಂದರ್ಶನಗಳಿವೆ. ಹೀಗೆ ಈ ಕೃತಿಯು ಮುಂಬಯಿ ನಗರದಲ್ಲಿ ಕಂಡ ಘಟನೆಗಳನ್ನು ಚಿತ್ರಿಸುವ, ಅಲ್ಲಿಯ ಸೃಜನಶೀಲ ಸಾಹಿತ್ಯಕ್ಕೆ ಕರೆದುಕೊಂಡು ಹೋಗುವ, ಅಲ್ಲಿಯ ಕವಿಗಳ ಸಂದರ್ಶನ ಮುಂತಾದವುಗಳನ್ನು ವಿಶಿಷ್ಟ ರೂಪದಲ್ಲಿ ಕಟ್ಟಿಕೊಡುತ್ತದೆ. ಇವುಗಳ ಜೊತೆಗೆ ಭಯ, ಕುತೂಹಲ, ನಗೆ ಮತ್ತು ವಿಷಾದವನ್ನು ವ್ಯಕ್ತಪಡಿಸುತ್ತ, ಅಲೋಚನಾ ಮಾರ್ಗವನ್ನು ನಮ್ಮ ಮುಂದೆ ಈ ಕೃತಿಯು ಇಡುತ್ತದೆ.

ಸಂಪಾದಿಸಿದ ಕೃತಿಗಳು

ಅ. ಸ್ವತಂತ್ರವಾಗಿ ಸಂಪಾದಿಸಿದ ಕೃತಿಗಳು

ನವಮೇಘರೂಪಿ : (೧೯೯೪)

ಕನ್ನಡ ಕಾವ್ಯ ಉದ್ಯಾನದಲ್ಲಿ ಒಂದು ಸಂಚಾರ. ಈ ಸಂಚಾರವು ಕನ್ನಡ ಕಾವ್ಯದ ಬಗ್ಗೆ ಒಂದು ಸ್ಥೂಲವಾದ ಚಿತ್ರಣವನ್ನು ನೀಡುತ್ತದೆ. ಕವಿಯಕಾವ್ಯ ಸಾಮಾಜಿಕನ ಹೃದಯದಲ್ಲಿ ಇವತ್ತಿನ ಸಂದರ್ಭದಲ್ಲಿ ತನ್ನ ಸ್ಪಂದಲಶೀಲ ಗುಣವನ್ನು ಯಾವ ರೀತಿಯಲ್ಲಿ ಇಟ್ಟುಕೊಂಡಿದೆ ಎಂಬುದನ್ನು ಈ ಕೃತಿಯು ಚರ್ಚಿಸುತ್ತದೆ. ಕವಿಯ ಕಾವ್ಯ ಬಿಚ್ಚಿಡುವುದಕ್ಕಿಂತ ಅದು ಮುಚ್ಚಿಡುವ ಸಾಮಾಜಿಕ ಸಂಗತಿಗಳ ಬಗ್ಗೆ ಸೊಗಸಾಗಿ ಈ ಕೃತಿಯು ಚಿತ್ರಿಸುತ್ತದೆ. ಈ ಕೃತಿಯಲ್ಲಿ ಪ್ರಮುಖವಾಗಿ ಮೂರು ಭಾಗಗಳಿವೆ. ಒಂದು :

ಮೀಮಾಂಸೆ, ವಿಮರ್ಶೆ, ರಸಿಕಸಿಕಸ್ಪಂದನೆ. ಇದರಲ್ಲಿ ಉಲಿಯ ಉಯ್ಯಲೆ, ಅಭಿವ್ಯಕ್ತಿ ಸ್ವರೂಪ ಮತ್ತು ಸಮಸ್ಯೆಗಳು, ಪುನರ್ಲಿಖಿತ ಭಾರತೀಯ ಕಾವ್ಯಶಾಸ್ತ್ರದತ್ತ, ಪಿಂಛಾ ಆಡಿಸಬಾರದು, ಕನ್ನಡ ನವೋದಯದ ಪ್ರಕೃತಿ ದರ್ಶನ, ಕನ್ನಡ ನವ್ಯ ಕವಿತೆಯಲ್ಲಿಯ ಮನೋಧರ್ಮ, ಬಂಡಾಯ ಕಾವ್ಯಸ್ವರೂಪ, ರಸಿಕ ಸ್ಪಂದನೆ ಎಂಬ ಬಹುಬೆಲೆಯುಳ್ಳ ಲೇಖನಗಳಿವೆ. ಭಾಗ ಎರಡು : ಕಾವ್ಯ ಮಾಧ್ಯಮನಾದ ಕವಿ, ಯಾವ ರೂಟ್ಸ್? ಯಾರು ಅನುಮೋದಿಸುತ್ತಿರುವ ಸಂವಹನ ಶೀಲತೆ?, ನವ್ಯತೆಯ ಗೀಳು..., ನನ್ನ ಕಾವ್ಯ ಪ್ರತಿಮೆಗಳು, ಕಾವ್ಯಕಾರಣ, ನಾನೇನೋ ನನ್ನ ಕಾವ್ಯವೂ ಅದೇ, ಮುಟ್ಟಿ ಇಡುವ ಶಬ್ದ... ಸೋಸಿ ಹೋಗುವ ಸಿದ್ಧಾಂತ, ನಾವೇ ಯಾವುದಕ್ಕೂ ಕಾವ್ಯಜಗಕೆ, ಕಾವ್ಯವೆಂದರೆ, ನಾನು, ನನ್ನ ಕಾವ್ಯ. ಹಿಂಗೆ ಬದುಕುತ್ತಾ ಬರೆಯುತ್ತಿರುವಾಗ, ಮಿತವಾದ ಕ್ಷೇತ್ರದಲ್ಲಿ ಲಯಬದ್ಧಕುಣಿತ, ಏನೋ ಹೇಳಬೇಕೆಂಬ ತಹ ತಹಿಕೆ ಹಾಗೂ ಕಾವ್ಯ-ಸಂವಹನಶೀಲತೆ ಇತ್ಯಾದಿ ಲೇಖನಗಳು ಒಳಗೊಂಡಿದೆ. ಭಾಗ ಮೂರು; ಕಾವ್ಯಗುಚ್ಛ; ಇತ್ತೀಚಿನ ಕನ್ನಡ ಕಾವ್ಯ. ಆಚಾರ್ಯ ಅಡಿಗ, ಈ ಕಾವ್ಯಗುಚ್ಛಕ್ಕೊಂದು ಚೌಕಟ್ಟುಗಳನ್ನು ಒಳಗೊಂಡು ಹಲವಾರು ಕವಿತೆಗಳಿಂದ, ಈ ಕೃತಿಯು ಆಧುನಿಕ ಸಾಹಿತ್ಯದಲ್ಲಿ ಹೊಸ ಹೊಸ ವಿಚಾರ, ವಿಮರ್ಶೆ ಮತ್ತು ವೈಚಾರಿಕತೆಯಿಂದ ನೋಡುವ ದೃಷ್ಟಿಯನ್ನು ಈ ಕೃತಿಯು ಹೊಂದಿದೆ.

ಬೋದಿಲೇರನ ಸಖ : (೨೦೦೧)

ಬೋದಿಲೇರನ ಸಖವು ಲಂಕೇಶರ ನೆನಪಿನ ಸಂಪುಟ. ಲಂಕೇಶರು ನಿಧನರಾಗಿ ಒಂದು ವರ್ಷದಲ್ಲಿ ಈ ಕೃತಿಯು ಪ್ರಕಟನೆಗೊಂಡಿದೆ. ಈ ಕೃತಿಯ ಮುನ್ನುಡಿಯಲ್ಲಿ ರಾಘವೇಂದ್ರ ಪಾಟೀಲರು ಲಂಕೇಶ ಅವರೊಂದಿಗೆ ಜಗಳ ಎಂಬುದನ್ನು ಬಹಳಷ್ಟು ಚೆನ್ನಾಗಿ ಹೇಳಿದ್ದಾರೆ. ಈ ನೆನಪಿನ ಸಂಪುಟದಲ್ಲಿ ಐದು ಭಾಗಗಳಿವೆ. ಒಂದು : ಕಾವ್ಯಾಂಜಲಿ ಇದರಲ್ಲಿ ನಾಲ್ಕು ಕವನಗಳಿವೆ. ಎರಡು : ಲಂಕೇಶ್ ಒಂದಿಷ್ಟು ಹತ್ತಿರ ಸ್ನೇಹಗರಗಸದಲ್ಲಿ, ಲಂಕೇಶ ನೆನಪು-ಜಗಳ-ಆತ್ಮೀಯತೆ-ಲೋಕಾಭಿರಾಮ ಇತ್ಯಾದಿ ಲೇಖನಗಳು ಒಳಗೊಂಡಿದೆ. ಮೂರು : ಲಂಕೇಶ ಒಂದು ಸಾಂಸ್ಕೃತಿಕ ವಿದ್ಯಮಾನ, ಇದರಲ್ಲಿ ಸಾಂಸ್ಕೃತಿಕ ವಿದ್ಯಮಾನವಾಗಿ ಲಂಕೇಶ, ಲಂಕೇಶ ವ್ಯಕ್ತಿವಾದಿ ಹೋರಾಟಗಾರ, ಸಾಯುವ ತನಕ ಓದು, ಹೊಸ ಚೇತನ ನೀಡಿದ ಪತ್ರಿಕೆ, ಲಂಕೇಶ ಪತ್ರಿಕೆ ಇಪ್ಪತ್ತುವರ್ಷ, ಎರಡು ಪ್ರತಿಕ್ರಿಯೆಗಳು ಒಳಗೊಂಡಿವೆ. ನಾಲ್ಕು : ಲಂಕೇಶ ಸೃಜನಶೀಲತೆ : ಇದರಲ್ಲಿ ಲಂಕೇಶ ಕಾದಂಬರಿಗಳನ್ನು ಮತ್ತೆ ಓದಿದಾಗ, ಬಿರುಕು ಮತ್ತು ಅಕ್ಕ ಚೆಲ್ಲಾಡಿದ ಒಂದಿಷ್ಟು ಟಿಪ್ಪಣಿಗಳು, ಲಂಕೇಶರ ನಾಟಕಗಳ ಭಾಷೆ, 'ಗುಣಮುಖ'ದ ದೃಶ್ಯವಿನ್ಯಾಸ, ಪಿ.ಲಂಕೇಶರ 'ಅವ್ವ', ಲಂಕೇಶರ ಕಥೆಗಳು, ಒಂದು ಸ್ತ್ರೀವಾದಿ ಪ್ರವೇಶದ ಸಾಧ್ಯತೆಯ ಲೇಖನಗಳನ್ನು ಒಳಗೊಂಡಿದೆ. ಐದು : ಲಂಕೇಶ : ಸ್ವತಃ ನೆನಪುಕೆದರಿದ ಒಂದು ಭಾಷಣ ಎಂಬ ಲೇಖನವನ್ನು ಒಳಗೊಂಡಿದೆ. ಹೀಗೆ ಲಂಕೇಶ ಅವರ ವ್ಯಕ್ತಿ ವಿಚಾರ, ಸಾಹಿತ್ಯ ವಿಚಾರ, ಸ್ನೇಹ, ಪತ್ರಿಕಾ ವಿಚಾರ, ನವ್ಯದ ಸಾಮ್ರಾಜ್ಯ ಸ್ಥಾಪಿಸಿದ ಬಗ್ಗೆ ಹಲವು ಅಂಶಗಳನ್ನು ಈ ಮೇಲಿನ ಲೇಖನ ಮತ್ತು ಕವನಗಳು ಕೃತಿಯಲ್ಲಿ ಚರ್ಚಿಸುತ್ತವೆ.

ಪ್ರತ್ಯೇಭಿಜ್ಞಾನ ಕೀರ್ತಿ : (೨೦೦೫)

ಕೀರ್ತಿನಾಥ ಕುರ್ತಕೋಟಿಯವರ ನೆನಪಿನ ಸಂಪುಟವಿದು. ಇಲ್ಲಿ ಕೀರ್ತಿನಾಥರ ವ್ಯಕ್ತಿತ್ವ, ಅವರ ಸಾಹಿತ್ಯದ ಸ್ಥೂಲನೋಟ ಹಾಗೂ ಅವರ ವಿಮರ್ಶೆ ಮತ್ತು ವಿದ್ವತ್‌ನ್ನು ಕುರಿತು ಈ ಕೃತಿಯು ಚಿತ್ರಿಸುತ್ತದೆ. ಕೃತಿಯಲ್ಲಿ ಕೀತಿನಾಥರ ಕುರಿತು ಕಾವ್ಯಾಂಜಲಿ, ಕುರ್ತಕೋಟಿಯ ಕೀರ್ತಿನಾಥ ಗೌಡರು, ಪ್ರತ್ಯಜ್ಞಾನ, ಕೀರ್ತಿ, ಅಭಿಜಾತ ಪ್ರತಿಭೆ ಮತ್ತು ಸ್ವಂತಿಕೆಯ ಚಡಪಡಿಕೆ, ಕೀರ್ತಿನಾಥರವರ ವಿಮರ್ಶಾ ವಿವೇಕ, ದಣಿವರಿಯದ ವಿದ್ವತ್ ವಿಲಾಸ, ಕೀರ್ತಿಮುಖ, ಸೃಜನ ಪಕ್ಷಪಾತಿಯಾದ ಪ್ರತ್ಯಭಿಜ್ಞಾನ. ಕನ್ನಡ ವಿಮರ್ಶೆಗೆ ಸ್ವರೂಪ ನೀಡಿದ ಕೀರ್ತಿನಾಥ ಗೌಡರು, ಕುರ್ತಕೋಟಿ ಮತ್ತು ಭಗ್ನ ಸೇತುವೆ ಮುಂತಾದ ಲೇಖನಗಳು ಕೀರ್ತಿನಾಥರ ಸ್ಮರಣೆ ಮತ್ತು ಅವರ ಸಾಹಿತ್ಯ ಕೃಷಿಯನ್ನು ಒಂದು ನೆನಪಿನ ಹಿನ್ನಲೆಯಲ್ಲಿ ನಾಡಿನ ಶ್ರೇಷ್ಠ ಸಾಹಿತಿಗಳು ಬರೆದ ಲೇಖನಗಳಿಂದ ಈ ಸಂಪುಟ ಹೊರಬಂದಿದೆ. ಕೀರ್ತಿನಾಥರ ಸೃಜನಶೀಲತೆಗೆ ಈಕೃತಿ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಅವರ ಸ್ನೇಹ ಜೀವನ, ವಿನಯ, ಸಾಹಿತಿಗಳ ಜೊತೆ ಒಡನಾಟ ಹಾಗೂ ಅವರ ವಿಮರ್ಶಾ ಬರಹ ಮುಂತಾದವುಗಳನ್ನು ಈ ಕೃತಿಯು ನೆನಪಿಸುತ್ತದೆ.

ಆ. ಇತರರ ಜೊತೆ ಸಂಪಾದಿಸಿದ ಕೃತಿಗಳು

ಸಂಕಿರಣ : (೧೯೭೯)

ಈ ಕೃತಿಯನ್ನು ರಾಘವೇಂದ್ರ ಪಾಟೀಲರು ಎನ್ .ಎಸ್ .ಚಿದಂರಾವ್ ಜೊತೆ ಸೇರಿ ಸಂಪಾದಿಸಿದ್ದಾರೆ. ಈ ಕೃತಿಯು ಜ್ಞಾನಪೀಠ ಪ್ರಶಸ್ತಿ ಪಡೆದ ಮೂವರು(ಕುವೆಂಪು, ಬೇಂದ್ರೆ, ಕಾರಂತ) ಸಾಹಿತಿಗಳ ಕಾವ್ಯ, ಮತ್ತು ಕಾದಂಬರಿ ಕುರಿತು ವಿಮರ್ಶಾತ್ಮಕ ಲೇಖನಗಳನ್ನು ಒಳಗೊಂಡ ಕೃತಿ. ಇದರಲ್ಲಿ ಮೂರು ವಿಭಾಗಗಳಿವೆ. ಒಂದು : ಕುವೆಂಪು ವಿಭಾಗ :ಇದರಲ್ಲಿ ಕುವೆಂಪು ಕಾದಂಬರಿಗಳು, ಕುವೆಂಪು ರಮ್ಯತೆ, ಕುವೆಂಪು ಆಧ್ಯಾತ್ಮಕ ದೃಷ್ಟಿ, ಶ್ರೀರಾಮಾಯಣ ದರ್ಶನಂ ಕೆಲವು ವಿಚಾರಗಳು ಹಾಗೂ ಸಮಾರೋಪದಿಂದ ಕೂಡಿದೆ. ಎರಡು : ಬೇಂದ್ರೆ ವಿಭಾಗ. ಇದರಲ್ಲಿ ಬೇಂದ್ರೆಯವರ ಕಾವ್ಯದರ್ಶನ, ನಾಕುತಂತಿ ಒಂದು ಅವಲೋಕನ ಮತ್ತು ಸಮಾರೋಪ ಎಂಬ ಲೇಖನಗಳಿಂದ ಕೂಡಿದೆ. ಮೂರು : ಕಾರಂತ ವಿಭಾಗ. ಇದರಲ್ಲಿ ಡಾ.ಕೋ.ಣಿ.ಕಾರಂತರ 'ಯಕ್ಷರಂಗ'. ಕಾರಂತರ ಕಾದಂಬರಿಗಳಲ್ಲಿ ವೈಚಾರಿಕತೆ, ಮೂಕಜ್ಜಿಯ ಕನಸುಗಳು, ಕಾರಂತರು ಮತ್ತು ಕಾದಂಬರಿ ಮಾಧ್ಯಮ ಹಾಗೂ ಸಮಾರೋಪದಿಂದ ಕೂಡಿದ ಲೇಖನಗಳಿವೆ. ಹೀಗೆ ಕುವೆಂಪು, ಬೇಂದ್ರೆ, ಕಾರಂತ. ಈ ಮೂವರು ಸಾಹಿತಿಗಳ ಸಾಹಿತ್ಯವನ್ನು ಅವರ ವಿಶಿಷ್ಟ ಕೃತಿಗಳನ್ನು, ವೈಚಾರಿಕತೆಯ ಹಿನ್ನೆಲೆಯಲ್ಲಿ ವಿಮರ್ಶಾತ್ಮಕ ನೆಲೆಯಲ್ಲಿ ಈ ಕೃತಿಯು ಗುರುತಿಸಿದೆ.

ಹೊಸ ಕಾವ್ಯದ ಮುನ್ನಲೆ : ೧೯೭೯ (ಭಾಗ ೧ ಮತ್ತು ೨)

ಡಾ.ಎಚ್.ಎಸ್.ವೆಂಕಟೇಶಮೂರ್ತಿ ಅವರೊಂದಿಗೆ ರಾಘುವೇಂದ್ರಪಾಟೀಲರು ಈ ಕೃತಿಯನ್ನು ಸಂಪಾದಿಸಿದ್ದಾರೆ. ಭಾಗ ೧ ಮತ್ತು ೨ರಲ್ಲಿ ಕನ್ನಡ ಹೊಸಕಾವ್ಯದ ಎರಡನೆಯ ಪೀಳಿಗೆಯ ಪ್ರಮುಖ ತರುಣ ಕವಿಗಳ ಬಗ್ಗೆ, ಅವರ ಕಾವ್ಯದ ಮನೋಧೋರಣೆಯ ಕುರಿತು, ಗುಣ-ದೋಷಗಳ ವಿಮರ್ಶೆಗಳನ್ನು ಒಳಗೊಂಡ ಕನ್ನಡ ಕಾವ್ಯದ ಮುನ್ನಡೆಯ ಹೆಜ್ಜೆಯನ್ನು ಗುರುತಿಸುವ ಪ್ರಯತ್ನವು ಈ ಕೃತಿಯಲ್ಲಿ ಒಳಗೊಂಡಿದೆ. ಭಾಗ ೧ರಲ್ಲಿ: ಕ.ವೆಂ.ರಾಜಗೋಪಾಲ, ಅರವಿಂದ ನಾಡಕರ್ಣಿ, ಪಿ.ಲಂಕೇಶ, ಎಚ್.ಎಂ.ಚೆನ್ನಯ್ಯ, ಸುಮತೀಂದ್ರ ನಾಡಿಗ, ಕೆ.ಎಸ್.ನಿಸಾರಅಹಮದ್, ಎನ್.ಎಸ್.ಲಕ್ಷ್ಮೀ ನಾರಾಯಣ ಭಟ್ಟ, ಚಂದ್ರಶೇಖರ ಕಂಬಾರ, ವೇಣುಗೋಪಾಲ ಸೊರಬ ಮುಂತಾದವರ ಕಾವ್ಯವನ್ನು ಹಾಗೂ ಕವಿಗಳ ಕುರಿತು ಚರ್ಚಿಸಿದ್ದಾರೆ. ಭಾಗ-೨ರಲ್ಲಿ ದೇಶ ಕುಲಕರ್ಣಿ, ಸಿದ್ಧಲಿಂಗ ಪಟ್ಟಣಶೆಟ್ಟಿ, ಚಂದ್ರಶೇಖರ ಪಾಟೀಲ, ಕೆ.ವಿ.ತಿರುಮಲೇಶ್, ಎಚ್.ಎಸ್.ವೆಂಕಟೇಶಮೂರ್ತಿ, ಬಿ.ಆರ್.ಲಕ್ಷ್ಮಣರಾವ್, ಜಯ ಸುದರ್ಶನ, ರಾಮಚಂದ್ರದೇವ, ಎಂ.ಎಸ್.ಜೈಪ್ರಕಾಶ, ಜಯಂತ ಕಾಯ್ಕಿಣಿ ಮತ್ತು ಶಿದ್ಧಲಿಂಗಯ್ಯ, ಈ ಎಲ್ಲ ಕವಿಗಳ ಕವನಗಳನ್ನು ವಿಮರ್ಶಾತ್ಮಕ ದೃಷ್ಟಿಯಿಂದ ವಿವೇಚಿಸಲಾಗಿದೆ.

ಕಾಡಿನ ಹುಡುಗಕೃಷ್ಣ : (೧೯೯೦)

ಡಿ.ಎಸ್.ನಾಗಭೂಷಣ ಮತ್ತು ಸ.ಉಷಾ ಅವರ ಜೊತೆ ಪಾಟೀಲರು ಈ ಕೃತಿಯನ್ನು ಸಂಪಾದಿಸಿದ್ದಾರೆ. ಈ ಕೃತಿಯು ಶ್ರೀಕೃಷ್ಣ ಆಲನಹಳ್ಳಿಯವರ ನೆನಪಿನ ಸಂಪುಟವಾಗಿದೆ. ಆಲನಹಳ್ಳಿಯವರು ನಿಧನರಾದ ಒಂದು ವರ್ಷಗತಿಸಿದ ಮೇಲೆ ಈ ಕೃತಿಯು ಹೊರಬಂದಿದೆ. ಶ್ರೀಕೃಷ್ಣ ಆಲನಹಳ್ಳಿಯವರ ವ್ಯಕ್ತಿತ್ವ ಮತ್ತ ಅವರ ಸಾಹಿತ್ಯಕೃತಿಗಳನ್ನು, ಅವರ ಸ್ನೇಹ, ವಿದ್ಯಾರ್ಥಿಯ ಜೀವನ ಮೊದಲಾದ ಅವರ ಬದುಕಿನ ಪ್ರಮುಖ ಘಟನೆಗಳೊಂದಿಗೆ ಬಿತ್ತರಿಸುವ ಕಾರ್ಯ ಈ ಕೃತಿಯಲ್ಲಿದೆ. ಈ ಕೃತಿಯಲ್ಲಿ ಸ್ಮರಣೆ ಭಾಗ : ಕುವೆಂಪು, ಪು.ತಿ.ನ, ಕೆ.ಎಸ್.ಎನ್. ಚದುರಂಗ, ದೇಜಗೌ, ಜಿ.ಎಸ್.ಶಿವರುದ್ರಪ್ಪ ಮುಂತಾದವರು ತಮ್ಮ ಲೇಖನಗಳಲ್ಲಿ ಶ್ರೀಕೃಷ್ಣಾ ಆಲನಹಳ್ಳಿಯವರನ್ನು ಸ್ಮರಣೆ ಮಾಡಿದ್ದಾರೆ. ಸಾಹಿತ್ಯಾವಲೋಕನ. ಈ ಭಾಗದಲ್ಲಿ ಕಾಲಾಂತರದಲ್ಲಿ ಕೃಷ್ಣ. ಕನ್ನಡ ಕಾದಂಬರಿ ಪರಂಪರೆ ಮತ್ತು ಶ್ರೀಕೃಷ್ಣ ಆಲನಹಳ್ಳಿ, ಕಾಕ ಮೂಲಕವೇ ಪಥ ಆಗಸಕ್ಕೆ, ಭುಜಂಗಯ್ಯನ ದಶಾವತಾರಗಳು, ಒಂದು ಅನುಭವ, ಭುಜಂಗಯ್ಯನ ಪಾತ್ರಸೃಷ್ಟಿ ಕೆಲವು ಆಲೋಚನೆಗಳು, ಶ್ರೀ ಕೃಷ್ಣರ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳು ಇತ್ಯಾದಿ ಲೇಖನಗಳಿಂದ ಕೂಡಿದೆ. ಕಥೆಗಾರ ಕೃಷ್ಣ ಎಂಬ ಭಾಗದಲ್ಲಿ ಒಂದು ವೈಯಕ್ತಿಕ ಪ್ರತಿಕ್ರಿಯೆ, ಮಣ್ಣಿನ ಹಾಡು, ಒಂದು ಪತ್ರ, ಸ್ನೇಹ ಭಾಗದಲ್ಲಿ ವಿದ್ಯಾರ್ಥಿ ಮಿತ್ರ, ಮನಮೋಹಕ ಕೃಷ್ಣ, ಬೈಕು ಮತ್ತು ಅಂಗನೆಯರು, ನಗುವ ಬಾಲಕ, ನೆನಪುಗಳ ಕಾಡಿನಲ್ಲಿಯ ಚಿತ್ರಗಳು, ಕೊನೆಗೆ ಕಾವ್ಯಂಜಲಿ : ಇದರಲ್ಲಿ ಶ್ರೀಕೃಷ್ಣ ಸ್ಮರಣೆ, ಕೃಷ್ಣಾ-ಮೃಗತೃಷ್ಣಾ, ಕೃಷ್ಣನ ಪ್ರತಿಮೆ ಮುಂತಾದ ಕವನಗಳಿವೆ. ಹೀಗೆ ಈ ಕೃತಿಯ

ಶ್ರೀಕೃಷ್ಣ ಆಲನಹಳ್ಳಿಯ ವಿವಿಧ ಮುಖಗಳ ವ್ಯಕ್ತಿತ್ವ ಮತ್ತು ಸಾಹಿತ್ಯ ಸಾಧನೆ ಹಾಗೂ ಅವರ ಸಾಹಿತ್ಯವನ್ನು ವಿಮರ್ಶಿಸುವ, ಪರಿಚಯಿಸುವ, ಅವಲೋಕಿಸುವ ಮತ್ತು ಆತನನ್ನು ನೆನಪಿಸುವ ಕೃತಿಯಾಗಿದೆ.

ಮಾಸ್ತಿ ಸಾಹಿತ್ಯ ಸಮಗ್ರದರ್ಶನ : (೧೯೯೨)

ಡಿ.ಎನ್.ನಾಗಭೂಷಣ ಮತ್ತು ಸ.ಉಷಾ ಅವರೊಂದಿಗೆ ಪಾಟೀಲರು ಈ ಕೃತಿಯನ್ನು ಸಂಪಾದಿಸಿದ್ದಾರೆ. ಈ ಕೃತಿಯು ಮಾಸ್ತಿಯವರ ಸಾಹಿತ್ಯೋತ್ಸವಗಳಲ್ಲಿ ಮಂಡಿಸಲ್ಪಟ್ಟ ಪ್ರಬಂಧಗಳು ಮತ್ತು ಉದ್ಘಾಟನಾ ಭಾಷಣಗಳು ಹಾಗೂ ಗೋಷ್ಠಿಗಳ ಅಧ್ಯಕ್ಷತೆಯ ಭಾಷಣಗಳು ಕೃತಿಯಲ್ಲಿ ಸಂಕಲಿತವಾಗಿವೆ. ಕೃತಿಯಲ್ಲಿ ಮಾಸ್ತಿ ಕಥಾ ಲೋಕ. ಸ್ಥಿತ್ಯಂತರಗಳ ಶತಮಾನದ ಕತೆಗಾರ ಮಾಸ್ತಿ, ಮಾಸ್ತಿಕತೆಗಳಲ್ಲಿ ಸಾಮಾಜಿಕ ಘರ್ಷನೆಯ ನಿರ್ವಹಣೆ, ಮಾಸ್ತಿ ಕತೆಗಳಲ್ಲಿ ಸ್ತ್ರೀಪಾತ್ರಗಳು, ಮಾಸ್ತಿಕತೆಗಳಲ್ಲಿ ಧರ್ಮ, ಚೆನ್ನಬಸವನಾಯಕ; ಮಾಸ್ತಿಯವರ 'ಮಲ್ಲಿಗೆ', ಚಿಕ್ಕವೀರ ರಾಜೇಂದ್ರ ಕಾದಂಬರಿಯಲ್ಲಿ ದುರಂತ ಪ್ರಜ್ಞೆ, ನಾಟಕಕಾರ ಮಾಸ್ತಿ, ಮಾಸ್ತಿಯವರ ಕಾವ್ಯ ಒಂದು ಪರಿಶೀಲನೆ, ಮಾಸ್ತಿಯವರ ವಿಮರ್ಶೆ ಇತಿಮಿತಿಗಳು, ಮಾಸ್ತಿ ಮತ್ತು ಕುವೆಂಪು ತುಲನಾತ್ಮಕ ಸಂಗತಿಗಳು, ಮಾಸ್ತಿ ಕಾರಂತರ ಸಾಂಸ್ಕೃತಿಕ ಚಿಂತನೆ, 'ಭಾವ'ದಲ್ಲಿ ಮೂಡುವ ಮಾಸ್ತಿ, 'ಜೀವನ' ಕಾರ್ಯಾಲಯದ ಮಾಸ್ತಿ ಮುಂತಾದ ಲೇಖನಗಳು ಮಾಸ್ತಿಯವರ ಒಟ್ಟು ಸಾಹಿತ್ಯ ಮತ್ತು ವ್ಯಕ್ತಿತ್ವ ಹಾಗೂ ಅವುಗಳನ್ನು ಒಂದು ಕೃತಿಯಲ್ಲಿ ಸಮಗ್ರವಾಗಿ ಕಟ್ಟಿಕೊಡುವ ಪ್ರಯತ್ನ ಈ ಕೃತಿಯದಾಗಿದೆ.

ರಾಘವೇಂದ್ರ ಪಾಟೀಲ ಅವರ ಸಾಹಿತ್ಯಕೃತಿಗಳ ನಾಟಕ ರೂಪಾಂತರಗಳು

- 'ತೇರು' ಕಾದಂಬರಿಯನ್ನು ಎಸ್ .ರಾಮಮೂರ್ತಿಯವರು ೨೦೦೫ರಲ್ಲಿ 'ತೇರು ನಾಟಕ' ಎಂಬ ರಂಗರೂಪವನ್ನು ನೀಡಿ 'ತಿರುಕರಂಗ' ಸಾಂಸ್ಕೃತಿಕ ವೇದಿಕೆಯಿಂದ ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮ ರಂಗಮಂದಿರದಲ್ಲಿ ನಾಟಕವನ್ನು ಪ್ರದರ್ಶಿಸಿದ್ದಾರೆ.
- 'ಮಾಯಿಯ ಮುಖಗಳು' ಕಥಾ ಸಂಕಲನದ 'ತುದಿಯೆಂಬೋ ತುದಿಯಿಲ್ಲ...' ಎಂಬ ಕಥೆಯನ್ನು ಎಸ್ .ರಾಮಮೂರ್ತಿಯವರು ೨೦೦೬ರಲ್ಲಿ ನಾಟಕ ರೂಪ ನೀಡಿ 'ತಿರುಕರಂಗ' ಸಾಂಸ್ಕೃತಿಕ ವೇದಿಕೆಯಿಂದ ಮಲ್ಲಾಡಿಹಳ್ಳಿಯ ಆನಾಥ ಸೇವೆಶ್ರಮದ ರಂಗಮಂದಿರದಲ್ಲಿ ನಾಟಕವನ್ನು ಪ್ರದರ್ಶಿಸಿದ್ದಾರೆ.
- 'ದೇಸಗತಿ' ಕಥಾಸಂಕಲನದ 'ಲಯ' ಎಂಬ ಕಥೆಯನ್ನು ಎಸ್ .ರಾಮಮೂರ್ತಿಯವರು ನಾಟಕ ರೂಪ ನೀಡಿ 'ತಿರುಕರಂಗ' ಸಾಂಸ್ಕೃತಿಕ ವೇದಿಕೆಯಿಂದ ೨೦೦೭ರಲ್ಲಿ ಮಲ್ಲಾಡಿ ಹಳ್ಳಿಯ ಅನಾಥ ಸೇವಾಶ್ರಮದ ರಂಗಮಂದಿರದಲ್ಲಿ ನಾಟಕವನ್ನು ಪ್ರದರ್ಶನ ಮಾಡಿದ್ದಾರೆ.

ರಾಘುವೇಂದ್ರ ಪಾಟೀಲ ಅವರ ಸೃಜನಾತ್ಮಕ ಚಟುವಟಿಕೆಗಳು

ಪಾಟೀಲರು ಎನ್.ಸಿ.ಸಿ. ಅಧಿಕಾರಿಯಾಗಿ ತಮ್ಮ ಜೀವನದಲ್ಲಿ ಹಾಗೂ ಸಾಹಿತ್ಯದಲ್ಲಿ ಒಂದು ಶಿಸ್ತನ್ನು ಪಡೆದುಕೊಂಡವರು. ಸದಾ ಒಂದಿಲ್ಲೊಂದು ಕೆಲಸ ಕಾರ್ಯದಲ್ಲಿ ಉತ್ಸಾಹ ಚಿಲುಮೆಯರಾಗಿ ತಮ್ಮನ್ನು ತೊಡಗಿಸಿಕೊಂಡಿರುವವರು. ಸಾಹಿತ್ಯಕ್ಕೆ ಸಂಬಂಧಿಸಿರಲಿ, ಸಾಂಸ್ಕೃತಿಕರಂಗಕ್ಕೆ ಸಂಬಂಧಿಸಿರಲಿ, ಪತ್ರಿಕಾರಂಗಕ್ಕೆ, ಆಡಳಿತಾತ್ಮಕವಾಗಿರಲಿ, ಒಂದಿಲ್ಲೊಂದು ಚಟುವಟಿಕೆಯನ್ನು ಮಾಡುತ್ತಿರುವವರು. ಅವುಗಳಲ್ಲಿ ಪ್ರಮುಖವಾದ ಕೆಲವೊಂದನ್ನು ಈ ಕೆಳಗಿನಂತೆ ನೋಡಲಾಗಿದೆ.

ಸಾಹಿತ್ಯ ಸಂವಾದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಪತ್ರಿಕೆ : (೧೯೮೫)

ಸಾಹಿತ್ಯ ಸಂವಾದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ದ್ವೈಮಾಸಿಕ ಪತ್ರಿಕೆಯನ್ನು, ನಮ್ಮ ಸಾಹಿತ್ಯಿಕ ಸಾಂಸ್ಕೃತಿಕ ಬದುಕಿನ ಸ್ಪಂದನಕ್ಕೆ, ಬಹುಮುಖೀ ಸತ್ಯದ ಆವಿಷ್ಕಾರಕ್ಕಾಗಿ ಈ ಪತ್ರಿಕೆಯನ್ನು ಸ್ಥಾಪಿಸಿ, ಅದರ ಸಂಪಾದಕರಾಗಿದ್ದಾರೆ. ಈ ಪತ್ರಿಕೆಯನ್ನು ೧೯೮೫ರಲ್ಲಿ ಡಿ.ಎಸ್ .ನಾಗಭೂಷಣ, ಸವಿತಾ ನಾಗಭೂಷಣ, ಸ.ಉಷಾ ಜಿ.ಎಲ್.ರಾಮಪ್ಪ, ವೈ.ಮಂಜಪ್ಪ ಮುಂತಾದವರೊಂದಿಗೆ ಪ್ರಾರಂಭಿಸಿದವರು. ಪ್ರತಿ ಎರಡು ತಿಂಗಳಿಗೊಮ್ಮೆ ಸಾಹಿತ್ಯ ಕುರಿತು ಲೇಖನಗಳನ್ನು, ಹಾಗೂ ವಿಮರ್ಶೆ, ಕವನ, ಕಥೆ ಮುಂತಾದವುಗಳನ್ನು ಪ್ರಕಟಿಸುವುದರ ಮೂಲಕ ಈ ಪತ್ರಿಕೆ ನಾಡಿನಲ್ಲಿ ಉತ್ತಮ ಹೆಸರನ್ನು ಪಡೆದಿದೆ. ಈ ಪತ್ರಿಕೆಯನ್ನು ನಡೆಸುವುದರ ಜೊತೆಗೆ ಯುವ ಪ್ರತಿಭೆಗಳಿಗೆ ಇಲ್ಲಿಯ ಸಂಚಿಕೆಯಲ್ಲಿ ಅವಕಾಶ ಮಾಡಿಕೊಡುವುದು, ವಿವಿಧ ಸಾಹಿತಿಗಳ ಸಂದರ್ಶನ ಪಡೆಯುವುದು, ಸಾಹಿತಿಗಳ ಕೃತಿಗಳನ್ನು ಪರಿಚಯಿಸುವುದು, ವಿಮರ್ಶಿಸುವುದು. ಈ ಪತ್ರಿಕೆಯನ್ನು ಸಂವಾದ ಪ್ರಕಾಶನವತಿಯಿಂದ ಮುದ್ರಿಸುತ್ತಿರುವ ಇವರು. ಅನೇಕ ಸಾಹಿತಿಗಳ ಕೃತಿಗಳನ್ನು ಈ ಪ್ರಕಾಶನ ಮೂಲಕ ಪ್ರಕಟಿಸಿದ್ದಾರೆ. ಹಾಗೂ ಅವುಗಳ ಮೂಲಕ ಸಾಹಿತ್ಯವನ್ನು ಬೆಳೆಸಲು ತಮ್ಮ ಪ್ರಯತ್ನವನ್ನು ಈಗಲೂ ಸಹ ಮುಂದುವರಿಸಿದ್ದಾರೆ. ಈ ಪತ್ರಿಕೆಯ ಸಂಪಾದಕ ಮಂಡಳಿಯಲ್ಲಿ ಪ್ರಮುಖವಾಗಿ ಗುರುಸಿಕೊಂಡವರು. ಮಲ್ಲಿಕಾರ್ಜುನ ಹಿರೇಮಠ, ಚಂದ್ರಶೇಖರ ತಾಳ್ಯ, ಶ್ರೀಧರ, ಬಳಗಾರ, ವಿಜಯೆಂದ್ರ ಪಾಟೀಲ, ಮಹೇಶ ತಿಪ್ಪಶೆಟ್ಟಿ, ಎಂ.ಪ್ರಭಾಕರ, ಆನಂದ ಲಕ್ಕೂರ ಮುಂತಾದವರು. ಇವರೆಲ್ಲರು ಈ ಪತ್ರಿಕೆಯ ಏಳ್ಗೆಗಾಗಿ ಪಾಟೀಲರ ಜೊತೆ ಸೇರಿ ಶ್ರಮಿಸುತ್ತಿದ್ದಾರೆ. ಆ ಪತ್ರಿಕೆಯ ಸಾಹಿತ್ಯ ವಲಯದಲ್ಲಿ ಹೊಸ ಬಗೆಯ ತಾತ್ವಿಕ ಚರ್ಚೆಗಳನ್ನು ಹುಟ್ಟ ಹಾಕುತ್ತ ಹೊಸ ಬರಹಗಾರರನ್ನು ಗುರುತಿಸಿ ಬೆಳೆಸಿತು ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ.

ಆನಂದ ಗ್ರಂಥಮಾಲೆ : (೧೯೯೫)

ಆನಂದಕಂದ (ಬೆಟಗೇರಿ ಕೃಷ್ಣಶರ್ಮ)ರ ನೆನಪಿನ ಸಂಕೇತವಾಗಿ 'ಆನಂದಕಂದ' ಗ್ರಂಥಮಾಲೆಯನ್ನು ೧೯೯೫ರಲ್ಲಿ ಸ್ಥಾಪಿಸಿ, ಅದರ ಸಂಚಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಗ್ರಂಥಮಾಲೆಯಿಂದ

ಇಲ್ಲಿಯವರೆಗೆ ಸುಮಾರು ೩೫ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಒಂದು ಕೃತಿ ಹಾಗೂ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಐದು ಕೃತಿಗಳಿವೆ. ಅವುಗಳು 'ತೇರು' (ಕಾದಂಬರಿ) ರಾಘವೇಂದ್ರ ಪಾಟೀಲ, ಕೇಂದ್ರ ಮತ್ತು ರಾಜ್ಯಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದೆ. ಇನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದವುಗಳು, ಮಾಯಿಯ ಮುಖಗಳು (ಕಥಾಸಂಕಲನ) ರಾಘವೇಂದ್ರ ಪಾಟೀಲ, ಬೋಧಿವೃಕ್ಷದ ಕೆಳಗೆ (ಸ್ವಾತಂತ್ರ್ಯೋತ್ತರ ಭಾರತದಲ್ಲಿನ ಬದಲಾವಣೆಗಳ ವಿನ್ಯಾಸ) ಜಿ.ಎನ್. ಮಲ್ಲಿಕಾರ್ಜುನ. ಲೌಕಿಕ-ಅಲೌಕಿಕ (ಮಧ್ಯಕಾಲೀನ ಭಾರತೀಯ ಸಾಂಸ್ಕೃತಿಕ ಇತಿಹಾಸ) ಡಾ. ರಾಜಾರಾಮ ಹೆಗಡೆ, ಗೆಣೆಯನಾದ (ಕಾವ್ಯಸಂಕಲನ) ಶಂಕರ ಕಟಗಿ, ಆತ್ಮಸಾಕ್ಷಿಯ ಹಾವಳಿಗಳು (ಲಲಿತ ಪ್ರಬಂಧಗಳು) ವಿಜಯೇಂದ್ರ ಪಾಟೀಲ. ಇಳೆಯಂಬ ಕನಸು (ಕಥಾ ಸಂಕಲನ) ಶ್ರೀಧರ ಬಳಗಾರ, ಹೀಗೆ ಈ ಕೃತಿಗಳು 'ಆನಂದಕಂದ' ಗ್ರಂಥಮಾಲೆಯಿಂದಲೇ ಪ್ರಕಟನೆಗೊಂಡ ಉನ್ನತವಾದ ಪ್ರಶಸ್ತಿಯನ್ನು ಪಡೆದುಕೊಂಡಿವೆ. ಈ ಎಲ್ಲಾ ಅಂಶಗಳನ್ನು ನೋಡಿದರೆ, ಈ ಗ್ರಂಥಮಾಲೆಯಿಂದ ಎಂತಹ ಶ್ರೇಷ್ಠ ಕೃತಿಗಳು ಹೊರಬಂದಿವೆ ಎಂಬುದನ್ನು ನಾವು ಗಮನಿಸಬೇಕು. ಪಾಟೀಲರು ಈ ಗ್ರಂಥಮಾಲೆಯನ್ನು ಸ್ಥಾಪಿಸುವುದರ ಜೊತೆಗೆ ಕನ್ನಡ ಸಾಹಿತ್ಯದಲ್ಲಿ ಬಹುಕಾಲ ಉಳಿಯಬಲ್ಲ ಕೃತಿಗಳನ್ನು ಪ್ರಕಟಿಸಿದ್ದಾರೆ. ಈ ಎಲ್ಲ ಪುಸ್ತಕ ಪ್ರಶಸ್ತಿಯ ಬಹುಮಾನಗಳ ಶ್ರೇಯಸ್ಸು ಪಾಟೀಲರಿಗೆ ಮೊದಲು ಸಲ್ಲುತ್ತವೆ. ಆ ಗ್ರಂಥಮಾಲೆಯ ಮೂಲಕ ಪಾಟೀಲರು ಹೊಸ ಪೀಳಿಗೆಯ ಬರಹಗಾರರನ್ನು ಗುರುತಿಸಿ ಬೆಳೆಸಿದ್ದಾರೆ ಮತ್ತು ಬೆಳೆಸುತ್ತಿದ್ದಾರೆ.

ತಿರುಕಂಗ ಸಾಂಸ್ಕೃತಿಕ ವೇದಿಕೆ : (೨೦೦೩)

ತಿರುಕರಂಗ ಸಾಂಸ್ಕೃತಿಕ ವೇದಿಕೆಯನ್ನು ಸ್ಥಾಪಿಸಿ, ಅದರ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿರುವ ಪಾಟೀಲರು, ಈ ವೇದಿಕೆಯಿಂದ ಪ್ರತಿವರ್ಷ ಐದು ದಿನಗಳ ಕಾಲ 'ನಾಟಕೋತ್ಸವ' ಕಾರ್ಯಕ್ರಮವನ್ನು ಹಮ್ಮಿಕೊಂಡು ನೂರಾರು ಕಲಾವಿದರಿಂದ ನಾಟಕ ಪ್ರದರ್ಶನವನ್ನು ಮಾಡಿಸುತ್ತಿದ್ದಾರೆ. ಈ ವೇದಿಕೆಯಿಂದ ಇಲ್ಲಿಯವರೆಗೆ ಸುಮಾರು ಹದಿನೈದು ನಾಟಕಗಳು ಪ್ರದರ್ಶನಗೊಂಡಿವೆ. ಅವುಗಳಲ್ಲಿ ರಾಘವೇಂದ್ರ ಪಾಟೀಲರ 'ತುದಿಯೆಂಬೋ ತುದಿಯಿಲ್ಲ...' ಕಥೆಯ ನಾಟಕ, ತೇರು ಕಾದಂಬರಿಯನ್ನಾಧರಿಸಿ 'ತೇರುನಾಟಕ' ಲಯಕಥೆಯನ್ನಾಧರಿಸಿ 'ಲಯ' ನಾಟಕಗಳು ಪ್ರಮುಖವಾಗಿ ಪ್ರದರ್ಶನವನ್ನು ಕಂಡಿವೆ.

ಹೀಗೆ, ರಾಘವೇಂದ್ರ ಪಾಟೀಲರು ಸಾಹಿತ್ಯದ ಜೊತೆಗೆ ಸಾಹಿತ್ಯೇತರವಾದ ಸೃಜನಾತ್ಮಕ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಸಾಂಸ್ಕೃತಿಕವಾದ ಚಟುವಟಿಕೆಗಳು, ಪತ್ರಿಕಾರಂಗದ ಚಟುವಟಿಕೆಗಳು, ಇವುಗಳ ಜೊತೆಗೆ ವಿಚಾರ ಗೋಷ್ಠಿಗಳನ್ನು, ಸಂದರ್ಶನಗಳನ್ನು ಇತ್ಯಾದಿ ಕೆಲಸವನ್ನು ದಣಿವರಿಯದೆ ಮಾಡುತ್ತಿರುವ ಪಾಟೀಲರು, ಒಬ್ಬ ಶ್ರೇಷ್ಠ ಕಥೆಗಾರರಾಗಿ, ಕಾದಂಬರಿಕಾರರಾಗಿ, ವಿಮರ್ಶಕರಾಗಿ, ಸಂದರ್ಶಕರಾಗಿ, ಪತ್ರಿಕಾ ಸಂಪಾದಕರಾಗಿ, ಗ್ರಂಥಮಾಲೆಯ ಪ್ರಕಾಶಕರಾಗಿ, ಸಾಂಸ್ಕೃತಿಕ ವೇದಿಕೆಯ

ಕಾರ್ಯದರ್ಶಿಯಾಗಿ, ಒಂದು ಸಂಸ್ಥೆಯ ಆಡಳಿತಾಧಿಕಾರಿಯಾಗಿ, ಸಾಧನೆಯನ್ನು ಮೆರೆದಿದ್ದಾರೆ. ೩ ಬಾರಿ ಡೈರೆಕ್ಟರ್ ಜನರಲ್ ಎನ್.ಸಿ.ಸಿ.ಯವರಿಂದ ಉತ್ತಮ ಸಾಧನೆಗಾಗಿ ಅಭಿನಂದನೆಯ ಪತ್ರವನ್ನು ಪಡೆದು, ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಪ್ರಾಚಾರ್ಯರ, ಉಪನ್ಯಾಸಕರ, ಸಿಬ್ಬಂದಿ ವರ್ಗದವರ ಫೆಡರೇಶ್‌ನ ರಾಜ್ಯ ಉಪಾಧ್ಯಕ್ಷರಾಗಿ ೨ ಬಾರಿ ಸೇವೆ ಸಲ್ಲಿಸಿದ ಪಾಟೀಲರು ಹಲವಾರು ಪ್ರಶಸ್ತಿ-ಪುನಸ್ಕಾರವನ್ನು ಪಡೆದವರು. ಇಷ್ಟೆಲ್ಲ ಸಾಧನೆಯನ್ನು ಮಾಡಿದ ಮತ್ತು ಮಾಡುತ್ತಿರುವ ರಾಘವೇಂದ್ರ ಪಾಟೀಲರು ಕನ್ನಡ ಸಾಹಿತ್ಯರಂಗದಲ್ಲಿ ಸೃಜನಶೀಲ ಪ್ರತಿಭೆಯಿಂದ ತಮ್ಮನ್ನು ಗುರುತಿಸಿಕೊಂಡವರು.

ಅಡಿಟಿಪ್ಪಣಿಗಳು

೧. **ಶ್ರೀ ಚೆನ್ನಬಸವಸ್ವಾಮಿಗಳವರ ಚರಿತ್ರಾಮೃತ,** ಶ್ರೀ ಬಾಳಪ್ಪ ಮಲ್ಲಪ್ಪ ಯಲಗಟ್ಟಿ, ಶ್ರೀಮ.ನಿ.ಪ್ರ.ಸ್ವ.ಬಸವ ಸ್ವಾಮಿಗಳವರು ಸಂಪಾದನೆಮಠ, ಗೋಕಾವಿ, ೧೯೮೩, ಪು.೧೨

೨. ಅದೇ, ಪು.೧೨

೩. 'ಕಂಗೆಟ್ಟ ಮನಸ್ಸು ಹುಡುಕಿಕೊಂಡು ಹೊರದಾರ', ರಾಘವೇಂದ್ರ ಪಾಟೀಲ, **ಕನ್ನಡ ಅಧ್ಯಯನ ಚಳಿ-ಬಾಳಿ ಸಂಯುಕ್ತ ಸಂಚಿಕೆ,** ಸಂಪಾದಕ : ರಹಮತ್ ತರೀಕೆರೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೧, ಪು.೮೦-೮೧

೪. ಅದೇ, ಪು.೮೦

೫. ಅದೇ, ಪು.೮೨

೬. ಅದೇ, ಪು.೮೪

ಅಧ್ಯಾಯ ೩

ತೇರು ಕಾದಂಬರಿ : ಆಶಯ ವಿನ್ಯಾಸ

೩

ತೇರು ಕಾದಂಬರಿ : ಆಶಯ ವಿನ್ಯಾಸ

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೊಸದಿಕ್ಕು-ದೆಸೆಗಳನ್ನು ತೋರಿಸಿದ 'ನವ್ಯೋತ್ತರ' ಕತೆಗಾರರಲ್ಲಿ ಪ್ರಮುಖರಾದವರು ರಾಘವೇಂದ್ರ ಪಾಟೀಲರು 'ತೇರು' ಕಾದಂಬರಿಯು ಕನ್ನಡ ಸಾಹಿತ್ಯದಲ್ಲಿ ಹೊಸ ಬಗೆಯ ಪ್ರಯೋಗವನ್ನು ಸಮರ್ಥವಾಗಿ, ಸೃಜನಶೀಲತೆಯಿಂದ ಪ್ರಯೋಗಿಸಿದ್ದು ಗಮನಾರ್ಹವಾದುದ್ದಾಗಿದೆ. 'ತೇರು' ಕಾದಂಬರಿಯು 'ಆಧುನಿಕ ಪುರಾಣ' ಎಂಬ ಉಪಶೀರ್ಷಿಕೆಯನ್ನು ಹೊತ್ತು ಪ್ರಕಟವಾಗಿದೆ. ಈ 'ಆಧುನಿಕ ಪುರಾಣ' ಎಂಬ ಉಪಶೀರ್ಷಿಕೆಯು ವರ್ತಮಾನವನ್ನು ಸೂಚಿಸುತ್ತದೆ. 'ತೇರು' ಭೂತವನ್ನು ಸೂಚಿಸುತ್ತದೆ. ಹೀಗಾಗಿ ವರ್ತಮಾನ ಮತ್ತು ಭೂತದ ನಡುವೆ ನಡೆದ ಕತೆಯನ್ನು ಈ ಕಾದಂಬರಿಯ ಶೀರ್ಷಿಕೆಯು ಹೋತ್ತಿದೆ.

'ತೇರು' ಕಾದಂಬರಿಯ "ಚರಿತ್ರೆ ಗತ ಕಥನವಲ್ಲ. ಅದು ವರ್ತಮಾನದ ಕಥನ. ಚರಿತ್ರೆಯಲ್ಲಿ ತುಂಬಿಕೊಂಡಿರುವುದು ಮಾನವನ ಅನುಭವಗಳು. ಅದಕ್ಕೆ ಕಾಲದೇಶಗಳ ಗಡಿಗಳಿರುವುದಿಲ್ಲ. ಮಾನವ ಜೀವಿಸಿದ್ದು ಹಾಗೂ ಜೀವಿಸುತ್ತಿರುವುದು ವರ್ತಮಾನದಲ್ಲಿಯೇ ಹೊರತು ಗತದಲ್ಲಲ್ಲ. ಗತ, ಅನುಭವದ ರೂಪದಲ್ಲಿ ಮಾನವನೊಂದಿಗಿರುತ್ತದೆ. ಆದರೆ ಮಾನವ ತಾನು ಜೀವಿಸುತ್ತಿರುವುದು ವರ್ತಮಾನದಲ್ಲಿ ಬದುಕನ್ನು ಕಟ್ಟಿಕೊಳ್ಳುವಲ್ಲಿ ವಿಫಲನಾದರೆ ಅಥವಾ ವರ್ತಮಾನದ ಗ್ರಹಿಕೆ ಅವನಲ್ಲಿ ಇಲ್ಲವಾದರೆ ವರ್ತಮಾನದಲ್ಲಿದ್ದರೂ ಗತದಲ್ಲಿ ಇದ್ದಂತೆ. ಏಕೆಂದರೆ ಈ ಎರಡೂ ಸಂದರ್ಭಗಳಿಗೂ ಸ್ಪಂದಿಸುವಲ್ಲಿ ಆತ ವಿಫಲನಾಗಿರುತ್ತಾನೆ. ಗತದ ಅನುಭವಗಳು ವರ್ತಮಾನದ ಬದುಕನ್ನು ಪ್ರಭಾವಿಸುತ್ತಿರುತ್ತವೆ. ಹಾಗೂ ಹೊಸ ಬದುಕನ್ನು ಕಟ್ಟುವಲ್ಲಿ ನೆರವಾಗುತ್ತದೆ".[೧] ಈ ಹಿನ್ನಲೆಯಲ್ಲಿ 'ತೇರು' ಕಾದಂಬರಿಯು ಚಾರಿತ್ರಿಕ ಘಟನೆಯನ್ನು ಒಳಗೊಂಡ ವರ್ತಮಾನದ ಕತೆಯಾಗಿದೆ. ವರ್ತಮಾನದಲ್ಲಿ ನಿಂತು ಚಾರಿತ್ರಿಕ ಘಟನೆಯನ್ನು ತಿರುಗಿ ನೋಡಿದಾಗ 'ತೇರು' ಕಾದಂಬರಿಯು ತನ್ನ ಕತೆಯನ್ನು ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಎಂಬ ಅಂಶ ಬಹಳಷ್ಟು ಮಹತ್ವದಾಗಿದೆ.

ವರ್ತಮಾನದಲ್ಲಿ ಭೂತವೋ ಅಥವಾ ಭೂತದಲ್ಲಿ ವರ್ತಮಾನವೋ ಎಂಬುದು ಗೊಂದಲದ ಪ್ರಶ್ನೆಯಾಗಿದೆ? ಈ ಅಂಶವನ್ನು ನೋಡಿದರೆ "ಆಧುನಿಕ ಸಮಾಜ ಬಹುದೊಡ್ಡ ಸವಾಲು

ಎದುರಿಸುತ್ತಿರುವುದು ಅದು ತನ್ನ ಪರಂಪರೆಯ ಹಿಡಿತದಿಂದ ವಿಮುಕ್ತಿ ಹೊಂದಲು ಹಾತೊರೆದಾಗ, ವರ್ತಮಾನ ಎನ್ನುವುದು ಆಧುನಿಕವೂ ಎನಿಸಿಕೊಳ್ಳಬೇಕಾದರೆ ಅದು ತನ್ನ ಭೂತದ ಹಿಡಿತದಿಂದ ಬಿಡಿಸಿಕೊಂಡು ತನ್ನದೇ ಅಸ್ತಿತ್ವವನ್ನು ಪ್ರಕಟಪಡಿಸಿಕೊಳ್ಳಬೇಕು. ಇಲ್ಲದಿದ್ದಲ್ಲಿ ಅದು ಭೂತದ ಕರಿನೆರಳಿನಲ್ಲೇ ತೆವಳುತ್ತಾ ಭೂತದಲ್ಲೇ ವಿಲೀನವಾಗಿ ಅದರ ಒಂದು ಭಾಗವಾಗಿಯೇ ಪರಂಪರೆಯಲ್ಲಿ ಸ್ಥಾನ ಪಡೆಯುತ್ತದೆ. ಹಾಗಾಗದೇ ಅದು ಭೂತಕ್ಕೆ, ತನ್ನ ಪರಂಪರೆಗೆ ವಿಭಿನ್ನ ಮುಖಿಯಾಗಿ, ಅವುಗಳಲ್ಲಿನ ವಿರೋಧಾಭಾಸವನ್ನು, ಅನ್ಯಾಯಗಳನ್ನು, ಮೌಢ್ಯಗಳನ್ನು ಶೋಷಣೆಯನ್ನು ವಿರೋಧಿಸಿ ಅವು ಒಡ್ಡುವ ಸವಾಲುಗಳನ್ನು ಎದುರಿಸಿ ಅವುಗಳಿಗೆ ಪರ್ಯಾಯವನ್ನು ಕಂಡುಕೊಂಡಾಗ ಅದು ಆಧುನಿಕವೆನಿಸಿಕೊಂಡು ತನ್ನದೇ ಪರಂಪರೆಯನ್ನು ಸೃಷ್ಟಿಸುತ್ತದೆ.''[೨] ಈ ಮಾತನ್ನು ಆದಾರವಾಗಿಟ್ಟುಕೊಂಡು 'ತೇರು' ಕಾದಂಬರಿಯು ಆಧುನಿಕ ಪುರಾಣ ಎಂಬ ಹೆಸರನ್ನು ಪಡೆದುಕೊಂಡು, ಪ್ರಗತಿಪರ ಧೋರಣೆಯನ್ನು ತನ್ನ ಒಡಲಲ್ಲಿ ಇರಿಸಿಕೊಂಡು ಆಧುನಿಕವಾದ ಚಿಂತನಕ್ರಮವನ್ನು ನೋಡುವ ದೃಷ್ಟಿಯನ್ನು ಒಳಗೊಂಡಿದೆ.

"ತೇರು ಕೃತಿಯನ್ನು ನಾವು ನೀಳ್ಗತೆಯಂತೆಯೂ ನೋಡಬಹುದು. ಅಥವಾ ಅದನ್ನು ಒಂದು ಜಾನಪದ/ಜನಾಂಗೀಯ ಅಧ್ಯಯನದಂತೆಯೂ ನೋಡಬಹುದು. ಈ ಹೇಳಿಕೆ ತೇರು ಕೃತಿಯನ್ನು ಅದರ ಪ್ರಥಮ ಆವೃತ್ತಿಯಂತೆ ಕಾಣುವ 'ದೇಸಗತಿ' ಕಥೆಯೊಡನೆ ಹೋಲಿಸಿದಾಗ ಹೆಚ್ಚು ಸ್ಪಷ್ಟವಾಗುತ್ತದೆ.''[೩] ದೇಸಗತಿ ಕಥಾ ಸಂಕಲನದಲ್ಲಿರುವ 'ದೇಸಗತಿ' ಎಂಬ ಕಥೆ 'ತೇರು' ಕಾದಂಬರಿಯ ಮೂಲ ರೂಪ. ಅದು ಧರಮನಟ್ಟಿಯ ರಾಜಕೀಯದ ಇತಿಹಾಸವನ್ನು ಒಳಗೊಂಡ ಕಥೆಯಾಗಿದೆ. ಧರಮನಟ್ಟಿಯ ದೇಸಗತಿಯನ್ನು ಸ್ಥಾಪಿಸಿದ ವೆಂಕೋಬರಾವ ಒಬ್ಬ ಪಿಂಡಾರನಾಯಕ. ಇತ ಪೇಶ್ವೆಗಳ ಸೈನಿಕರಿಂದ ತಪ್ಪಿಸಿಕೊಳ್ಳಲು ಓಡುತ್ತಿರುವಾಗ ಧರಮನಟ್ಟಿ ಗ್ರಾಮಕ್ಕೆ ಬರುತ್ತಾನೆ. ಅಲ್ಲಿಯವರೆಗೂ ಸ್ಥಳೀಯವಾಗಿ ಯಾರೊಬ್ಬರು ಸಮರ್ಥವಾಗಿ ಆಡಳಿತ ನಡೆಸಲು ಇಲ್ಲದ ಕಾರಣ ಪದೇ ಪದೇ ದರೋಡೆಯಿಂದ ತತ್ತರಿಸಿದ ಗ್ರಾಮ, ವೆಂಕೋಬರಾವ್ ಉರುಫ್ ರಂಗೋ ಪಟವರ್ಧನ್ ದೇಸಾಯಿ ಎಂಬ ಹೆಸರಿನಿಂದ ಆ ಊರಿನ ಆಡಳಿತ ಚುಕ್ಕಾಣಿ ಹಿಡಯುತ್ತಾನೆ.

ಹೀಗೆ ಆಡಳಿತ ನಡೆಸಲು ಸ್ಥಳೀಯ ವ್ಯಕ್ತಿ ತ್ರಿಯಂಬಕ ಭಟ್ಟನ ಕಾರಭಾರಿತನ ಹಾಗೂ ಅಧಿಕಾರಕ್ಕಾಗಿ ಹೂಡಿದ ಹೊಸತಂತ್ರ ಮತ್ತು ತನ್ನ ಮಗಳಿಗೆ ಒಳ್ಳೆಯ ಪತಿಯನ್ನು ಕೊಡಿಸುವ ಆಸೆ, ಇವೆಲ್ಲವು ಧರಮನಟ್ಟಿಯಲ್ಲಿ 'ದೇಸಗತಿ' ಸ್ಥಾಪಿಸಲು ರಂಗೋ ಪಟವರ್ಧನ ದೇಸಾಯಿಗೆ ಸಹಾಯಕವಾಗಿ ಬಂದವು. ಇದರ ಜೊತೆ ಧರಮನಟ್ಟಿಯ ಜನರ ಮೌಢ್ಯತೆ ಹಾಗೂ ಮುಗ್ಧತೆಯಿಂದ ಈ ಕಾರ್ಯ ಸರಾಗವಾಗಿ ನೆರವೇರುತ್ತದೆ. ಮುಂದೆ ಬ್ರಿಟಿಷರ ಆಳ್ವಿಕೆ ಹಾಗೂ ಸ್ವಾತಂತ್ರ್ಯದ ನಡುವೆ ಎಲ್ಲ ರಾಜ್ಯ ದೇಸಗತಿಗಳು ತನ್ನ ಅಸ್ತಿತ್ವವನ್ನು ಕಳೆದುಕೊಂಡು, ಕೊನೆಯ ದೇಸಾಯಿ ಮಾಣಿಕ ಅಮೇರಿಕಾದ ಮಹಿಳೆಯ ಜೊತೆಗೆ ಮದುವೆಯಾಗಿ ಅಮೇರಿಕಾ ದೇಶಕ್ಕೆ ತನ್ನ ಎಳೆಯ ಕಂದ ಅಮೃತ ಹಾಗೂ ಅಜ್ಜ

ಕಲ್ಪನಾಥ ದೇಸಾಯಿಯನ್ನು ಧರಮನಟ್ಟಿಯಲ್ಲಿಯೇ ಬಿಟ್ಟು ಪರದೇಶಕ್ಕೆ ವಲಸೆ ಹೋದ ನಂತರ ಅಮೃತ ಹಾಗೂ ಕಲ್ಪನಾಥ ದೇಸಾಯಿ ಮರಣ ಹೊಂದುವುದರ ಜೊತೆಗೆ ಧರಮನಟ್ಟಿಯ ದೇಸಗತಿಯ ಕಥೆಯು ಮುಗಿಯುತ್ತದೆ. ಹೀಗೆ ಈ ದೇಸಗತಿಯ ವ್ಯವಸ್ಥೆಯಲ್ಲಿಯೇ ಮರು ಹುಟ್ಟು ಪಡೆದ 'ತೇರು' ಕಾದಂಬರಿ ಅದರ ಇನ್ನುಳಿದ ಕಥೆಯನ್ನು ಆಳವಾಗಿ ವಿಶ್ಲೇಷಿಸುವ ಹಾಗೂ ತೋರಿಸುವ ಪ್ರಯತ್ನವನ್ನು ಈ ಕೃತಿಯಲ್ಲಿ ಪಾಟೀಲರು ಮಾಡಿದ್ದಾರೆ. ಈ ರೀತಿಯಲ್ಲಿ ನಾವು ದೇಸಗತಿಯ ಕಥೆಯನ್ನು ಉಲ್ಲೇಖಿಸಿಯೇ ಈ 'ತೇರು' ಕೃತಿಯನ್ನು ಅಧ್ಯಯನ ಮಾಡಿದರೆ ಅದು ತನ್ನ ಪೂರ್ಣ ಮತ್ತು ಸ್ಪಷ್ಟ ಚಿತ್ರಣವನ್ನು ಬಿಚ್ಚಿಕೊಡುತ್ತದೆ.

'ತೇರು' ಕಾದಂಬರಿಯು ಧರಮನಟ್ಟಿ ದೇಸಗತಿಯ ಸ್ಥಾಪನೆಯ ಕಾಲದಿಂದಲೇ ಪ್ರಾರಂಭವಾಗುತ್ತದೆ. ಆ ಆರಂಭದ ಕಾಲಕ್ಕೆ 'ದೇಸಗತಿ'ಯನ್ನು ಕಟ್ಟಿದ ರಂಗೋಪಟವರ್ಧನ ದೇಸಾಯಿ ತನ್ನ ದೇಶಗತಿಯ ಪ್ರತಿಷ್ಠೆಯ ಸಲುವಾಗಿ ತನ್ನ ಮನೆ ದೇವರಾದ ವಿಠ್ಠಲನ ಒಂದು ಗುಡಿ ಕಟ್ಟಿಸುತ್ತಾನೆ. ಆ ಗುಡಿಯು "ಸಣ್ಣಾಗಿ ಕಟದ ಬಿಳೀ ಕಲ್ಲಿನ ಕಟ್ಟಡ... ಗ್ವಾಡಿ ಮತ್ತ ಶಿಖರದ ಮ್ಯಾಲೆಲ್ಲಾ ಸುಳವಗೋಳು ಮತ್ತು ಚಿತ್ತಾರಗೋಳು... ಒಂದೊಂದು ಕಂಬನೂ ಹೂವಿನ ಬಳ್ಳಿ ಇದ್ದಂಗs ನೋಡ್ರಿ! ಗರ್ಭಗುಡ್ಯಾಗಿನ ವಿಠ್ಠಲ ರುಕುಮಾಯಿ ಅಂತೂ ಥೇಟ್ ಅವರs!... ಅಗದೀ ಎದ್ದ ಬರೂಹಂಗ ಕಾಣತಾರು! ದೇಸಗತಿ ಕಟ್ಯಾಕ ಬಲಾಕೊಟ್ಟ ಬಲವಂತ ದೈವ ಅದಾ... ತ್ರಾಹಿ ಅಂಬುವ ಮಂದಿನ್ನ ಕಾಪಾಡುವಂಥಾ ದೇವರು... ದೇಹಿ ಅಂಬುವ ಮಂದಿಗೆ ಬೇಡಿದ್ದು ನೀಡುವ ಜಾಗ್ರುತ ಕ್ಷೇತ್ರ ಅಂತ ನಾಡಿನ ಎಂಟೂ ದಿಕ್ಕಿಗೆ ಹಬ್ಬ... ನಮ್ಮ ಊರಿನ ವಿಠ್ಠಲ ಜಗತ್ ಪ್ರಸಿದ್ದ ಆಗೇತಿ"(ತೇರು, ಪು.೪)ಹೀಗೆ ಗುಡಿ ಪ್ರಸಿದ್ಧಿಯನ್ನು ಪಡೆದುಕೊಂಡಿತು. ಗುಡಿಗೊಂದು ತೇರನ್ನು ಕಟ್ಟಿಸುತ್ತಾನೆ. ಆ ತೇರು ಧರಮನಟ್ಟಿ ಹಾಗೂ ಸುತ್ತಮುತ್ತಲಿನ ಊರಿನ ಜನರಿಗೆ ಮತ್ತು ದೇಸಗತಿಗೆ ಪ್ರತಿಷ್ಠೆಯ ದ್ಯೂತಕವಾಗಿ ಕಂಡಿತ್ತು.

ಆ ತೇರು "ಏನಿಲ್ಲಂದರೂ ಒಂದು ಗೇಣು ದೀಪಗೇಣು ದಪ್ಪನಾದ ಎರಡು ಮಾರು ಎತ್ತರವಿದ್ದ ಕಲ್ಲಿನ ಗಾಲಿಗಳು... ಮಂದಿ ಆ ಗಾಲಿಗೋಳನ ಅವು ಕಲ್ಲಿನವೂ ಅಂತ ಖಾತ್ರೀ ಮಾಡಿಕೊಳ್ಳವವರಹಂಗ-ಅವನ್ನ ಮುಟ್ಟೀ ಬಾರಿಸೀ ನೋಡತಾರ... ಆ ಗಾಲಿಗಳ ಮ್ಯಾಲ ಮರಾ ಗಿಡಾ ಬಳ್ಳಿಗೋಳ ಸುಳವುಗಳು... ಗಾಲಿಗಳ ನಟ್ಟನಡಕ ಎರಡು ಮಳದಗಲದ ಗುಂಭ... ಗುಂಭದ ನಡೂಮಧ್ಯೆ ಮಳದಗಲದ ಆರುಪಾರು ರಂಧ್ರ... ಆ ರಂಧ್ರದೊಳಗಿಂದ ಹಾದು ಒಂದು ಮಳದುದ್ದ ಹೊರಗೆ ಚಾಚಿದ ಮರದ ಕೆಚ್ಚಿನ ಅಚ್ಚು ಮತ್ತ ಆ ಅಚ್ಚಿಗೆ ಸಿಗಿಸಿದ ರಟ್ಟೆಗಾತ್ರದ ಕಬ್ಬಿಣದ ಕೀಲುಗಳು... ಎರಡೆರಡು ಮಳ ಹಮ್ಮ ಚೌಕದಷ್ಟು ದಪ್ಪನಾದ ಅಂಥಾ ಕೆಚ್ಚು ನೀಡದ ಆ ಮರವಾದರೂ ಯಾವ ಆಕಾರದ್ದು ಇದ್ದಿರಬೇಕು ಶಿವನೇ ಅಂತ ಸೋಜಿಗ ಆಗತೈತಿ..."

"ಆ ತೇರು ಕಟ್ಟಿದ ವಿಶ್ವಕರ್ಮ ಈ ಅಜ್ಜಿನ ಮ್ಯಾಲೂ ಸುಳವು ಕತ್ಯಾನೆ... ನದೀ... ಕಾಳಿಂದೀಮಡು... ಮುಗಲು-ಸೂರ್ಯ... ಚಂದ್ರಾಮ... ಮತ್ತ ಚಿಕ್ಕಿಗೋಳು! ಆ ಎರಡು ಅಚ್ಚುಗಳ ಮ್ಯಾಲೆ ಕುಂತ-ಮಾರು ದೀಡ ಮಾರಿನಷ್ಟು ಎತ್ತರವಾದ, ದಪ್ಪನೆಯ ಕೆಚ್ಚಿನಿಂದ ಮಾಡಿದ ಮರದ ಚೌಕಟ್ಟು... ಆಚೌಕಟ್ಟಿನ ತೋಳುಗಳ ಮ್ಯಾಲೂ ಚಿಕ್ಕಿ ಚಂದ್ರಾಮರ ರಾಜ್ಯ! ಗಾಲಿಗಳಿಗಿಂತ ಒಂದು ಮಳದಷ್ಟು ಮ್ಯಾಲೆ ಎತ್ತರಕ್ಕೆ... ಎತ್ತರವಾದ ಈ ಚೌಕಟ್ಟಿನ ಮ್ಯಾಲೆ ಕುಂತಿದೆ ಆರು ಮಜಲಿನ ಅಷ್ಟಕೋನಾಕಾರದ ತೇರು..."(ತೇರು, ಪು.೦೪-೦೫)

ಈ ತೇರು ಒಂದೊಂದು ಮಜಲಿನ ಒಂದೊಂದು ವಿಶೇಷತೆಯನ್ನು ಒಳಗೊಂಡು ನಿಂತಿದೆ. ಮೊದಲನೆಯ ಮಜಲಲ್ಲಿ ಆದಿಶೇಷ, ಎಂಟು ದಿಕ್ಕನ್ನು ಆದಿಶೇಷನೆಂಬ ಸರ್ಪವು ಇಡೀ ಬ್ರಹ್ಮಾಂಡವನ್ನೇ ಹೊತ್ತುಕೊಂಡು ನಿಂತಿದೆ. ಎರಡನೆಯ ಮಜಲಲ್ಲಿ ಐರಾವತ, ಎಂಟು ದಿಕ್ಕಿಗೆ ಎಂಟು ಐರಾವತ ಮುಖ ಮಾಡಿ ನಿಂತಿವೆ. ಮೂರನೆಯ ಮಜಲಲ್ಲಿ ಮತ್ಸ್ಯ-ಕೂರ್ಮ-ಇಲಿ-ಹೆಗ್ಗಣ, ಹಂದಿ ಹಾಗೂ ಕಾಟುಕ ಜೀವಿಗಳು, ನಾಲ್ಕನೆಯ ಮಜಲಲ್ಲಿ ಎತ್ತು, ಕುರಿಗಳು, ಹೈನದ ಆಕಳು, ಕುಂಟಿ, ಕೂರಿಗಿ, ನೊಗ, ಗಾಲಿ, ತಕ್ಕಡಿ, ಐದನೆಯ ಮಜಲಾಗೆ ಬಿಲ್ಲು ಬಾಣಗಳು, ಬಿಲ್ಲಾಳು ಬಂಟಾರು, ಕತ್ತಿ ಕಠಾರಿಗಳು, ಬೇಟೆಯಾಡುವ ಸಿಂಹ, ಆರನೆಯ ಮಜಲಿನಲ್ಲಿ ವಾಣಿ ಸರಸ್ವತಿ, ಗೆಜ್ಜೆ ಕಟ್ಟಿದ ನವಿಲು, ವೇದದ ಗ್ರಂಥ, ತಂಬೂರಿ ಢೋಲಕ, ಆರನೆಯ ಮಜಲಿನ ಮಾಲ್ಕ ಸಿಂಗಾರಗೊಂಡ ಬಂಗಾರದ ಕಳಸ, ಈ ತೇರು ಇನ್ನು ಒಂದು ವಿಶೇಷವಾದ ಅಂಶವನ್ನು ಒಳಗೊಂಡಿದೆ. ಒಂದನೆಯ ಮತ್ತು ಎರಡನೆಯ ಮಜಲುಗಳು ದೈವದ ಮಜಲುಗಳಾದರೆ, ಮೂರನೆಯ ಮಜಲು ಕಾಟುಕರ ಕುಲವನ್ನು ಸೂಚಿಸುವ ಶೂದ್ರ ಜನಾಂಗದ ಮಜಲು, ನಾಲ್ಕನೆಯ ಮಜಲು ವ್ಯವಸಾಯವನ್ನು ಮಾಡುವ ವೈಶ ಕುಲವನ್ನು ಹೊತ್ತಿದೆ. ಐದನೆಯ ಮಜಲವು ಯುದ್ಧವನ್ನು ಮಾಡುವ ಕ್ಷತ್ರೀಯ ಕುಲವನ್ನು ಸೂಚಿಸುತ್ತದೆ. ಇವುಗಳ ಮೇಲೆ ಯಜಮಾನಿಕೆಯನ್ನು ಮಾಡುವ ಬ್ರಾಹ್ಮಣ ಕುಲ ತೇರುವಿನ ಆರನೇಯ ಮಜಲಲ್ಲಿದೆ. ಇದರ ಮೇಲೆ ಕಳಸ. ಹೀಗೆ ಈ ತೇರು ಸಾಮಾಜಿಕ ಏಣಿಶ್ರೇಣಿಯನ್ನು ಹೊತ್ತುಕೊಂಡು, ಶೃಂಗರಿಸಿಕೊಂಡು ರಥೋತ್ಸವಕ್ಕಾಗಿ ನಿಂತಿದೆ.

ಮೊದಲನೆಯ ರಥೋತ್ಸವದಲ್ಲಿ ತೇರು ಮುಂದಕ್ಕೆ ಚಲಿಸದೆ ನಿಂತಾಗ, ದೇಸಗತಿಗೆ ಅಪಶಕುನವಾದಂತೆ ಆಗಿ ಹೇಗಾದರೂ ಮಾಡಿ ರಥೋತ್ಸವ ಕಾರ್ಯವನ್ನು ಪೂರೈಸುವ ಕಸರತ್ತಿಗೆ ಬೀಳುತ್ತಾರೆ. ಕಾರಭಾರಿ ತ್ರಿಬಂಕು ಭಟ್ಟನು ದಂಣಾಯಕನನ್ನು ಕರೆದು ಪಾಗಾದಾಗಿನ ಕುದುರಿ, ಎತ್ತುಗಳನ್ನು ಕಟ್ಟಿ ತೇರನ್ನು ಎಳೆಸಲು ಪ್ರಾರಂಭಿಸುತ್ತಾರೆ. ಆದರೆ ಆ ತೇರು ಒಂದು ಹೆಜ್ಜೆಯು ಮುಂದಕ್ಕೆ ಹೋಗುವುದಿಲ್ಲ. ಇದರಿಂದ ಮತ್ತಷ್ಟು ದೃತಿಗೆಟ್ಟ ದೇಸಾಯಿ ಮತ್ತು ಕಾರಭಾರಿ ನಿಂತ "ತೇರು ಮುನ್ನಡಿಯದಿದ್ದರೆ ತಮ್ಮ ನೆಲೆಯನ್ನೇ ಕಳೆದುಕೊಳ್ಳಬೇಕಾಗುತ್ತದೆ ಎಂಬುದನ್ನರಿತ ಇವರು ಅದರ

ಪರಿಹಾರಕ್ಕಾಗಿ ಶಾಸ್ತ್ರದ ಅಯ್ಯನವರನ್ನು ಕರಸಿ ಪ್ರಶ್ನಿಸಿದಾಗ, ತಮ್ಮ ಬುದ್ಧಿಯನ್ನೆಲ್ಲಾ ಸುರಿದು, ಅಳೆದು ಲೆಕ್ಕಾ ಹಾಕಿದ ಶಾಸ್ತ್ರದ ಅಯ್ಯನವರು ತೇರು ಮುನ್ನಡೆಯಲು ಲಂಚ ಕೇಳುತ್ತಿದೆ ಎನ್ನುವ ಸತ್ಯವನ್ನು ಬಯಲು ಮಾಡುತ್ತಾರೆ."[೪] ದೇಸಾಯಿ ಮತ್ತು ಕಾರಭಾರಿಯನ್ನು ಕುರಿತು ಶಾಸ್ತ್ರದ ಅಯ್ಯನವರು ತೇರಿಗೆ ಬೇಕಿರುವ ಲಂಚದ ವಿವರವನ್ನು ಈ ರೀತಿಯಲ್ಲಿ ಹೇಳುತ್ತಾರೆ.

"ಹಿಂಡಿ ಹಾಕದ ಆಕಳು ಹಿಂಡೀತು ಹೆಂಗೊ
ಕಾಳು ಹಾಕದೆ ಕುದರಿ ಓಡೀತು ಹೆಂಗೊ
ನರಮನುಸ ಕಟ್ಟಿಸಿದ ತೇರು ನಿನ್ನಾದೂ
ನನಗೇನು ಕೊಟ್ಟೀಯೊ ಮುಂದೆ ನಡೆಸಾಕೆ
ನರಮನುಸನ್ನೊರ್ರತು ಮತ್ತೇನು ಬ್ಯಾಡೊ"(ತೇರು, ಪು೧೪)

ಎಂಬ ಮಾತುಗಳು ಒಟ್ಟು ಸನ್ನಿವೇಶವನ್ನು ಚಿತ್ರಿಸುತ್ತವೆ. ನರಮನುಷ್ಯ ಕಟ್ಟಿಸಿದ ತೇರಾಗಿರುವುದರಿಂದ ಆ ತೇರು ನರಮನುಷ್ಯನ ಬಲಿಯೇ ಕೊಡಬೇಕೆಂದು ಕೇಳುತ್ತದೆ. ಈ ಮಾತು ಕೇಳಿದ ದೇಸಾಯಿ ವಾಡೇಯಲ್ಲಿ ಇರುವವರು ನಾವು ಇಬ್ಬರೇ ನಾವೇ ಬಲಿಯಾದರೆ ದೇಶಗತಿ ಹೇಗೆ ಮುನ್ನಡಿಸಲು ಸಾಧ್ಯ ಎಂದಾಗ, ಕಾರಭಾರಿಯೂ ಸಹ ದೇಸಗತಿ ಮುನ್ನಡೆಸಲು ನಾನು ಬೇಕು, ಡಂಣಾಯಕ ದೇಶಗತಿಗೆ ನಾನು ಸಹಬೇಕು ಎಂದು ಯಾರು ಮೇಲವರ್ಗದ ಜನರು ಬಲಿಯಾಗಲು ಒಪ್ಪುವುದಿಲ್ಲ. ಇದರ ಬದಲಾಗಿ ಅಧಿಕಾರಶಾಹಿ ಈ ವರ್ಗ ಕೆಳವರ್ಗದ ಜನರ ಮೇಲೆ ಬಲಿಯನ್ನು ನೇಯುತ್ತಾರೆ. "ಹೆಣ್ಣು ಗಂಡೆಂಬುವ ಭೇದ ಇಲ್ಲ - ಸಣ್ಣವರು ದೊಡ್ಡವರು ಅಂಬುವ ವಯಸ್ಸಿನ ನಿರ್ಬಂಧವಿಲ್ಲ. ಪಕ್ತ ಉತ್ತಮರ ಕುಲದವರು ಮಾತ್ರ ಬ್ಯಾಡ - ಉತ್ತಮರ ಕುಲದವರನ್ನು ಬಿಟ್ಟು ಯಾವುದಾದರೂ ಕಾಟುಕರ ಕುಲದ ಒಂದು ಇಸಮನ್ನ ಹಿಡಿದು ತೇರಿನ ಬಲಿಗೆ ತರಬೇಕು..."(ತೇರು, ಪು.೨೪) ಎಂದು ಕಾರಬಾರಿ ತ್ರಿಬಂಕುಭಟ್ಟ, ದೇಸಾಯರು ಹೇಳಿದ ಮಾತನ್ನು ನಿಮಗೆ ಹೇಳುತ್ತಿದ್ದೇನೆ ಎಂದು ಡಂಣಾಯಕನಿಗೆ ಬಲಿಯ ವ್ಯವಸ್ಥೆಗೆ ಸಂಚನ್ನು ರೂಪಿಸಲು ಹೇಳುತ್ತಾನೆ. ಆದರೆ ಬಲಿಕೊಡುವ ಸುದ್ದಿ ಊರಿಗೆಲ್ಲ ತಿಳಿದು ಊರಿನಲ್ಲಿರುವ ಎಲ್ಲ ಕಾಟುಕರ ಜಾತಿಯ ಜನರು ಊರುಬಿಟ್ಟು ಬೇರೆ ಊರಿಗೆ ಹೋಗಿದ್ದರಿಂದ ಯಾರೊಬ್ಬರು ಊರಲ್ಲಿ ಉಳಿದಿರಲಿಲ್ಲ. ಮೂರು ದಿನ ಸುತ್ತಮುತ್ತಲಿನ ಊರುಗಳಲ್ಲಿ ಬಲಿಗಾಗಿ ಡಂಣಾಯಕ ತಿರುಗಾಡಿದರೂ ಯಾವೊಬ್ಬ ಆಸಾಮಿ ಸಿಗಲಿಲ್ಲ. ಕೊನೆಗೆ ತನ್ನ ಹೆಂಡತಿಯ ಮುಂದೆ ತನ್ನ ಅಳಲನ್ನು ತೋಡಿಕೊಂಡಾಗ, ಪಾರ್ವತಿ ತನ್ನ ಗಂಡನಿಗೆ ಧೈರ್ಯವನ್ನು ಹೇಳಿ ಬಲಿವ್ಯವಸ್ಥೆಗಾಗಿ ವಿಠ್ಠಲನ ದೇವಸ್ಥಾನಕ್ಕೆ ಬರುತ್ತಾಳೆ.

ಅಲ್ಲಿ ಬಂದು ನೋಡಿದರೆ ಪೌಳಿಯ ತೆಂಕಣದ ಮೂಲೆಯಲ್ಲಿ ತೊಗಲು ಗೊಂಬೆಯನ್ನು ಆಡಿಸುವ ದ್ಯಾವಪ್ಪ ತನ್ನ ಹೆಂಡತಿ ಮತ್ತು ಮಕ್ಕಳನ್ನು ಕಟ್ಟಿಗೊಂಡು ಬಂದಿರುತ್ತಾನೆ. ಪಾರ್ವತಿ ಈ ಕುಟುಂಬವನ್ನು ನೋಡಿ, ಹೇಗಾದರೂ ಮಾಡಿ ಇವರನ್ನು ಬಲಿಗೆ ಸಿದ್ಧಪಡಿಸಲು ಉಪಾಯವನ್ನು ಕಂಡು ಹಿಡಿಯುತ್ತಾಳೆ.

ಗೊಂಬೀ ಆಡಿಸುವ ದ್ಯಾವಪ್ಪನ ಸಂಪರ್ಕ ಸಾಧಿಸಿ ಆತನಿಗೆ ಹಾಗೂ ಅವನ ಹೆಂಡತಿ ಮತ್ತು ಮಕ್ಕಳಿಗೆ, ಜೋಳ, ಅಕ್ಕಿ, ಬೆಳೆ, ಬೆಲ್ಲವನ್ನು ಇಟ್ಟು ತಾತ್ಕಾಲಿಕ ಹಸಿವನ್ನು ನೀಗಿಸುವ ಜೊತೆಗೆ ತನ್ನ ಬಲೆಯನ್ನು ನೇಯಲು ಪ್ರಾರಂಭಿಸುತ್ತಾಳೆ.

"ಹಿರಿಯ ಮಗನನ್ನು ಸ್ವಾಮಿ ತೇರಿಗೆ ನೀಡೊ
ಮೂಡಾಲ ಸೀಮೇಲಿ ಮೂರೆಕೆರೆ ಭೂಮಿ

ಕಡೀಯ ಮಗನನ್ನಾರ ಸ್ವಾಮೀಗೆ ಕೊಡುಬಾರೆ
ಪಡುವಣ ದಿಕ್ಕಿನ್ಯಾಗೇ ಆರೆಕರೆ ಭೂಮಿ

ನಡಕೀನ ಮಗನನ್ನು ಸ್ವಾಮಿಗೆ ಕೊಡುಬಾರೊ
ತೆಂಕಾಣ ದಿಕ್ಕಿನ್ಯಾಗೆ ಎಂಟೆಕರೆ ಭೂಮೀ"(ತೇರು, ಪು.೩೦)

ಎಂದು ಡಂಣಾಯಕನ ಹೆಂಡತಿ ಪಾರ್ವತಿ ದ್ಯಾಪ್ಪನಿಗೆ ಶಾಶ್ವತ ಹಸಿವನ್ನು ನೀಗಿಸುವ ಭೂಮಿಯ ಆಸೆ ತೋರಿಸಿ ದ್ಯಾವಪ್ಪನ ಸಂಪರ್ಕ ಸಾಧಿಸಿ ಆತನ ನಡುಕಿನ ಮಗ ಚಂದ್ರ(ಚಂದ್ರ್ಯಾ)ನನ್ನು ಬಲಿಕೊಡಲು ಒಪ್ಪಿಸುತ್ತಾಳೆ. ಮನಸ್ಸಿಲ್ಲದ ಮನಸ್ಸಿನಿಂದ ಹಾಗೂ ಹೇಗಾದರೂ ಮಾಡಿ ರಾತ್ರಿ ಊರು ಬಿಟ್ಟು ಹೋದರಾಯಿತು ಎನ್ನುವ ಮನಸ್ಸಿನಿಂದ ದ್ಯಾವಪ್ಪ ತನ್ನ ಮಗನನ್ನು ಬಲಿಕೊಡಲು ಒಪ್ಪಿಕೊಳ್ಳುತ್ತಾನೆ. ಆದರೆ ಹೆತ್ತ ಕರಳು ಇದಕ್ಕೆ ವಿರೋಧವನ್ನು ವ್ಯಕ್ತಪಡಿಸಿದರೂ ಸಹ ದ್ಯಾವಪ್ಪ ಅವಳಿಗೆ ಕಣ್ಣು ಸನ್ನೆ ಮಾಡಿ ಸಮಾಧಾನ ಮಾಡುತ್ತಾನೆ.

ಬಲಿಯ ವ್ಯವಸ್ಥೆಯು ಸಿಕ್ಕ ಕೂಡಲೇ ದ್ಯಾವಪ್ಪನ ಕುಟುಂಬ ಬೇರೆ ಊರಿಗೆ ಪರಾರಿ ಆಗಬಾರದೆಂದು ಕಾವಲನ್ನು ಹಾಕಿಸುತ್ತಾರೆ. ಮುಂದೆ ತೇರಿನ ಮಹೋರ್ತದಲ್ಲಿ ಬಲಿಯನ್ನು ಕೊಡಲು ದ್ಯಾವಪ್ಪನ ಮಗನನ್ನು ಸಿದ್ಧಪಡಿಸಲು ಪ್ರಾರಂಭಿಸುತ್ತಾರೆ. ಅಷ್ಟರಲ್ಲಿ ದೇಸಾಯಿ ಮತ್ತು ರಾಣೀ ಸಾಹೇಬರು ದೇವರಿಗೆ ಪೂಜೆ ಸಲ್ಲಿಸಿ ಆ ಹುಡುಗನ ಕೈ ಹಿಡಿದು ತೇರಿನ ಹತ್ತಿರ ತರುತ್ತಾರೆ. ಮುಂದೆ ಆ ಹುಡುಗ ತೇರಿನ ಸುತ್ತಲು ಪ್ರದಕ್ಷಿಣೆ ಹಾಕುತ್ತಿರಬೇಕಾದರೆ ಮಡಿವಾಳ ಗೌಡ ಮಡಿಮಾಡಿದ ಧೋತರಗಳನ್ನು ಆ ಹುಡುಗನ ಮುಂದೆ ಹಾಸುತ್ತಿದ್ದನು. ಹೀಗೆ ಆ ಹುಡುಗನನ್ನು ತೇರಿನ ಎಡಗಾಲಿಗೆ ಅಡ್ಡಲಾಗಿ ಮಲಗಿಸುತ್ತಾರೆ. ಅಷ್ಟರಲ್ಲಿ ಹೆತ್ತಕರಳು ತಾಯಿ ಲಗಮವ್ವ ಮಗನನ್ನು ಕುರಿತು ಚಂದ್ರ್ಯಾ ಅವರ ಕಡೆಯಿಂದ ತಪ್ಪಿಸಿಕೊಂಡು ಬಾ ಎಂದು ಕೂಗಿದರು. ಸುತ್ತಮುತ್ತಲಿನ ಜನರು ಮುಡಚಟ್ಟು ಆಗುತ್ತದೆ ಎಂದು ಅವಳನ್ನು ಹಿಡಿದುಕೊಂಡು ಬಿಡುತ್ತಾರೆ. ಅಷ್ಟರೊಳಗೆ "ಆ ತೇರೆಂಬುವದು ಇಳಕಲ್ಲಿನ್ಯಾಗ ಉಳ್ಳುವ ಗೋಲಿಯ ಗುಂಡದ ಹಂಗ ಸುರಳೀತ ನಡದೀತಲ್ಲೋ"(ತೇರು, ಪು.೩೪) ಹೀಗೆ ಮುನ್ನಡಿದ ತೇರಿಗೆ ಅಧಿಕಾರ ಶಾಹಿವರ್ಗ ಮತ್ತೇ ಕೆಲವೊಂದು ಷರತ್ತುಗಳನ್ನು ಹಾಕುತ್ತಾರೆ.

"ಸೂರ್ಯಾ ಚಂದ್ರಾಮ ಇರುವ ತನಕಾ...

....

ಆಕಾಸದಾಗೆ ಚಿಕ್ಕಿಗೋಳು ಇರೂಮಟಾ

ಆ ರಂಥವೆಂಬುವುದು ಮುಂದಕ ನಡಿಯೂದಿಕೆ

ಕಾಟುಗರ ರಗುತವನ್ನು ಬಯಸುತ್ತಾದಲ್ಲೊ ಶಿವನೆ"(ತೇರು, ಪು.೩೪)

ಎಂದು ಷರತ್ತನ್ನು ವಿಧಿಸುವಲ್ಲಿ ಮತ್ತಷ್ಟು ಕೆಳಜಾತಿಯ ಜನರ ಮೇಲೆ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಹಿಂಸೆಗೆ ಪ್ರಚುರವನ್ನು ಪಡಿಸಲು ಕೈಗೊಂಡ ನಿಮಿತ್ಯ. ಪ್ರತಿವರ್ಷ ದ್ಯಾವಪ್ಪನ ವಂಶದವರು ತೇರಿಗೆ ತಲೆ ಜಜ್ಜಿಕೊಂಡು ರಕ್ತ ತಿಲಕದ ಸೇವೆ ಮಾಡಬೇಕೆಂದು ಆಜ್ಞಾಪಿಸುತ್ತಾರೆ. ಅದರಂತೆ ಮೌಢ್ಯತೆಯಲ್ಲಿ ಕರಗಿ ಹೋದ ಆ ಕುಟುಂಬ, ದೇವರ ಸೇವೆಯನ್ನು ಮಾಡುವುದರಲ್ಲಿ ತಪ್ಪಿಲ್ಲ ಹಾಗೂ ಇದು ಪುಣ್ಯದ ಕೆಲಸವೆಂದು ತಿಳಿದು, ತನಗೆತಾನೆ ಹಲವು ವಿಧಿ ವಿಧಾನ ಹಾಗೂ ಕಟ್ಟುಪಾಡುಗಳನ್ನು ಹಾಕಿಕೊಂಡು ಭಕ್ತ ಪೂರ್ವಕವಾಗಿ, ರಕ್ತತಿಲಕದ ಸೇವೆ ಮಾಡುತ್ತ, ಕೊನೆಗೊಂದು ದಿನ ಈ ದ್ಯಾವಪ್ಪ ಜನರ ಬಾಯಲ್ಲಿ ಪುರಾಣದ ವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತಾನೆ. ಅಷ್ಟೇ ಅಲ್ಲದೆ ಧರಮನಟ್ಟಿಯ ದೇಸಾಯಿಯವರಿಂದ ದ್ಯಾವಪ್ಪನಿಗೆ ಒಂದು ಶಾಸನವನ್ನು ಬರೆದು ಕೊಡುತ್ತಾರೆ. ಅದರಲ್ಲಿ ಆತನಿಗೆ ಎಂಟು ಏಕರೆ ಭೂಮಿ ಹಾಗೂ ಪ್ರತಿವರ್ಷ ದ್ಯಾವಪ್ಪನ ವಂಶಸ್ಥರು ಎಲ್ಲಿಯೇ ಇರಲಿ, ಧರಮನಟ್ಟಿಯ ತೇರಿಗೆ ಬಂದು ತಲೆ ಚಚ್ಚಿಕೊಂಡು ರಕ್ತ ತಿಲಕದ ಸೇವೆ ಮಾಡಬೇಕೆಂದು ಆ ಶಾಸನದಲ್ಲಿ ಬರೆಯುತ್ತಾರೆ. ಹೀಗೆ ಈ ಮೊದಲನೆಯ ಭಾಗ ರಕ್ತ ತಿಲಕದ ಸಂಗತಿಯು ವೃತ್ತಿಗಾಯಕರಾದ ಗೊಂದಲಿಗರ ಹಾಡಿನಿಂದ ನಿರೂಪಿಸಲಾಗಿದೆ. ಈ ಭಾಗ ಕಾದಂಬರಿಯಲ್ಲಿ ಅತ್ಯಂತ ಸೊಗಸಾಗಿ ಮತ್ತು ಸ್ವಾರಸ್ಯಕರವಾಗಿ ಮೂಡಿಬಂದಿದೆ.

'ತೇರು' ಕಾದಂಬರಿಯ ಎರಡನೆಯ ಭಾಗದಲ್ಲಿ ದ್ಯಾವಪ್ಪ ತನ್ನ ಸಂಸಾರವನ್ನು ಕಟ್ಟಿಕೊಂಡು, ದೇಸಾಯರು ಕೊಟ್ಟಸನವನ್ನು ಹಿಡಿದುಕೊಂಡು ಕಳ್ಳಿಗುದ್ದಿಯ ಊರಿಗೆ ಹೋಗಿ ನೆಲೆಸುತ್ತಾನೆ. ಆ ಕಳ್ಳಿಗುದ್ದಿಯಲ್ಲಿ ದ್ಯಾವಪ್ಪ ಗೌಡನಿಗೆ ತನ್ನ ಮಗನನ್ನು ತೇರಿಗೆ ಬಲಿಕೊಟ್ಟ ಸಂಗತಿಯನ್ನು ವರ್ಣಿಸುತ್ತಾರೆ. "ಸೂತರದ ಗೊಂಬೀ ಆಡಿಸಿ ಕಥೀ ಹೇಳುವ ಕಿಳ್ಳೇಕ್ಯಾತ ಅಂವ... ಕಾಣದ ಕಥಿಯನs... ಕಂಡಂಗ ಹೇಳುವವ ಅಂವ... ಇನ್ನು ತನ್ನ ತೊಲಗಿಗೇ ಅಂಟಿದ ಅನುಭವಕ್ಕೆ ಬಣ್ಣಾ ತುಂಬುವುದಕ್ಕೆ ಯಾರಾದರೂ ಹೇಳಿಕೊಡಬೇಕೇನು!... ತನ್ನ ಮಗನ ಎದಿಯ ಮ್ಯಾಲೆ ಸ್ವಾಮಿಯ ತೇರು ಹಾಯತಿದ್ದಂಗೇ ತೇರಿನ್ಯಾಗಿನ ಇಟ್ಟಲ ಸ್ವಾಮಿಯ ಮೀಸಿಗಳು ಕುಣದವ್ರೂ... ಸ್ವಾಮಿಯ ಕಣ್ಣಿನ್ಯಾಗಿಂದ ಬೆಂಕಿಯ ಕೆಂಡದಂಥಾ ಬೆಳಕು ಚಿಮ್ಮಿ... ಆ ಬೆಳಕಿಗೆ ತನ್ನ ಹೇಂತಿಯ ಕಣ್ಣುಕುಕ್ಕಿ - ಆಕಿ ಕಕ್ಕಾಮಿಕ್ಕಿಯಾಗಿ ಬೇಹೋಶ ಆಗಿ ಹೆಂಗೆ ಬಿದ್ದಳೆಂಬುವದನ್ನು - ಸ್ವತಾ ದೇಸಾಯರ ರಾಣೀ ಸಾಹೇಬರs ಮುಂದ ನಿಂತ ತನ್ನ ಹೇಂತಿನ್ನ ಹೆಂಗ ಮೇಣೇದಾಗ ಹಾಕಿಕೊಂಡು ಅವಸರದಿಂದ ವಾಡೇಕ್ಕs ಕರಕೊಂಡು ಹೋಗಿ-ಹೆಂಗ ಸ್ವತಾ ತಾನs

ಉಪಚಾರ ಮಾಡಿದಳು ಅಂಬುವುದನ್ನ... ಎಲ್ಲಾ ಕಥೀ ಮಾಡಿ ಹೇಳಿ...ದ"(ತೇರು, ಪು.೩೯) ನಂತರದಲ್ಲಿ ಒಂದು ಮನೆಯನ್ನು ಕಟ್ಟಿಕೊಂಡು ನೆನೆಸಿದ.

ಕಳ್ಳಿಗುದ್ದಿಯಲ್ಲಿ ದ್ಯಾವಪ್ಪನಿಗೆ ವಿಠ್ಠಲ ದೇವರ ಮೇಲಿನ ಎಲ್ಲಿಲ್ಲದ ಭಕ್ತಿ ಉಕ್ಕಿ ಹರಿಯಲಿಕ್ಕೆ ಪ್ರಾರಂಭಿಸಿತು.. ಇದಕ್ಕಾಗಿ ತನ್ನಷ್ಟಕ್ಕೆ ತಾನೇ ಹಲವಾರು ಕಟ್ಟುಪಾಡುಗಳನ್ನು ಹಾಕಿಕೊಳ್ಳಲು ಪ್ರಾರಂಭಿಸಿದ ಇದರ ಜೊತೆಗೆ ಲಂಗಟದ ಸ್ವಾಮಿಗಳು ಹೇಳಿದ ಮಾತನ್ನು ಚಾಚುತಪ್ಪದೇ ಪಾಲಿಸಲು ಪ್ರಾರಂಭಿಸಿದ. ತನ್ನ ದೇಹದಲ್ಲಿನ ರಕ್ತವನ್ನು ಶುದ್ಧೀಕರಣ ಮಾಡಿಕೊಳ್ಳಲು ಹಳಿಮನಿ ಶಂಕರಜ್ಜನ ಆರ್ಯುವೇದದ ಔಷಧ ಸೇವಿಸಲಿಕ್ಕೆ ಪ್ರಾರಂಭಿಸಿರುವುದು ಕಾದಂಬರಿಯಲ್ಲಿ ಹಾಸ್ಯ ಮತ್ತು ವ್ಯಂಗ್ಯವಾಗಿ, ಮೌಢ್ಯತೆಯ ಪ್ರತೀತವಾಗಿ, ಭಕ್ತಿ ತೀವ್ರತೆಯಲ್ಲಿ ಕಂಡು ಬಂದಿದೆ. ಮತ್ತು ಔಷಧ ಸ್ವೀಕರಿಸುವ ಹಾಗೂ ತಯಾರಿಸುವ ವಿಧಾನ ಮತ್ತು ಪಶುಚಿಕಿತ್ಸೆ ಮುಂತಾದ ಅಂಶಗಳನ್ನು ಈ ಭಾಗದಲ್ಲಿ ರಾಘವೇಂದ್ರ ಪಾಟೀಲರು ರಸವತ್ತಾಗಿ ನಿರೂಪಿಸಿದ್ದಾರೆ. ಪ್ರತಿವರ್ಷ ರಕ್ತಸುದ್ಧಿಯನ್ನು ಮಾಡಿಕೊಂಡು ಇನ್ನು ಧರಮನಟ್ಟಿಯ ಜಾತ್ರೆ ಇಪ್ಪತ್ತು ದಿನ ಇರುವಾಗಲೇ ಅಲ್ಲಿಯ ಪ್ರದೇಶದ ಸುಕ್ಷೇತ್ರಗಳ ದರ್ಶನ ಹಾಗೂ ದ್ಯಾನ, ಜಪ, ತಪ ಮತ್ತು ಪ್ರಕೃತಿಯಲ್ಲಿಯ ದೇವರ ಕಲ್ಪನೆ, ಗಂಗಾದೇವಿಯ ಮನ ತುಂಬಿ ವರ್ಣಿಸುವುದು, ದ್ಯಾವಪ್ಪನ ಭಕ್ತಿಯ ತೀವ್ರತೆಯು ಇಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ.

ದ್ಯಾವಪ್ಪನ ಭಕ್ತಿಯ ಉತ್ಕೃಷ್ಟತೆ ಎಷ್ಟರ ಮಟ್ಟಿಗೆ ಹೋಗುತ್ತದೆಂದರೆ ತನ್ನ ಹೆಂಡತಿಗೆ ಯಾತ್ರಾ ಸಂಚಾರವನ್ನು ಹಾಗೂ ಔಷಧ ಸೇವಿಸುವ ವಿಚಾರವನ್ನು ಹಾಗೂ ತನ್ನ ಮುಂದಿನ ಪೀಳಿಗೆಯು ಸಹ ಇದೇ ರೀತಿ ಸೇವಾ ಕಾರ್ಯ ನಿರ್ವಹಿಸಬೇಕೆಂಬ ಹಂಬಲ ದ್ಯಾವಪ್ಪನಲ್ಲಿ ತೀವ್ರವಾಗಿ ಕಂಡುಬರುತ್ತದೆ. ದ್ಯಾವಪ್ಪ ತೀರಿಕೊಂಡ ನಂತರ ಆತನ ಹಿರಿಯ ಮಗ ಕುಬೇರ ಇದೇ ರೀತಿ ನೀತಿಯಲ್ಲಿಯೇ ರಕ್ತ ತಿಲಕದ ಸೇವೆ ಮತ್ತು ಸಂಚಾರ, ರಕ್ತಶುದ್ಧೀಕರಣ ಮುಂತಾದವುಗಳನ್ನು ಮುಂದೆವರೆಸುತ್ತಾನೆ. ಭಕ್ತಿಯೆಂಬ ಹುಚ್ಚು ಹೊಳೆಯಲ್ಲಿ ಅದು ಮೌಢ್ಯತೆಯೆಂದು ತಿಳಿದುಕೊಳ್ಳದೆ, ತನ್ನಷ್ಟಕ್ಕೆ ತಾನೆ ಹಲವು ರೀತಿ ನೀತಿಯನ್ನು ಸೃಷ್ಟಿಸಿಕೊಂಡು ಪರಂಪರಾಗತವಾಗಿ ಈ ಆಚರಣೆಯನ್ನು ಮುಂದುವರಿಸಿಕೊಂಡು ಬರುವ ಪರಿ ಈ ಭಾಗದಲ್ಲಿ ಕಂಡುಬರುತ್ತದೆ.

'ತೇರು' ಕಾದಂಬರಿಯ ೧ ಮತ್ತು ೨ ಭಾಗ ಭೂತವನ್ನು ತುಂಬಿಕೊಂಡಿರುವ ಭಾಗವಾದರೆ, ಇನ್ನುಳಿದ ನಾಲ್ಕು ಭಾಗಗಳು ಆಧುನಿಕ ವಿಚಾರದ ಕಥನವನ್ನು ಒಳಗೊಂಡಿರುವ ಭಾಗಗಳಾಗಿವೆ. ಈ ಮೂರನೆಯ ಭಾಗದಲ್ಲಿ ನಿರೂಪಕ ಪಾಟೀಲ ಎಂಬ ಪತ್ರಕರ್ತ ಬೆಂಗಳೂರಿನ ತನ್ನ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ, "ಆಧುನಿಕ ದ್ಯಾವಪ್ಪ ಕಾದಂಬರಿಯಲ್ಲಿ ಪ್ರವೇಶ ಪಡೆಯುವುದೇ ಆತನ ಆಧುನಿಕತೆಯ ವಿಚಾರದಿಂದಾಗಿ, ನವ ನಿರ್ಮಾಣ ಚಳುವಳಿಯಲ್ಲಿ ಭಾಗವಹಿಸಿ ಅದರಿಂದ ಸೆರೆವಾಸ ಅನುಭವಿಸಿ ಬಿಡುಗಡೆ ಪಡೆದು ನಿರೂಪಕನನ್ನು ಭೇಟಿಯಾಗುವ ಸಂದರ್ಭದಲ್ಲಿ. ಅಂದರೆ ಆತ ಕೇವಲ ತನ್ನೊಬ್ಬನ

ವಿಮುಕ್ತಿಗಾಗಿ ಬಂಡಾಯ ಎದ್ದವನಾಗಿರದೆ ತನ್ನಂತೆ ಶೋಷಣೆಗೆ ಒಳಗಾದ ಜನ ಸಮುದಾಯದ ಪರವಾಗಿ, ಶೋಷಿಸುತ್ತಿರುವ ಇಡೀ ವ್ಯವಸ್ಥೆಯ ವಿರುದ್ಧವೇ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾನೆ. ತನ್ನ ಹಿಂದಿನ ಪರಂಪರೆಯ, ಭೂತದ ಒಣ ವೈಭವೀಕರಣವನ್ನೆಲ್ಲ ತನ್ನ ಧಾರ್ಮಿಕ ಆಚರಣೆಯನ್ನು ಉನ್ನತೀಕರಿಸುವುದನ್ನು ಆತ ವಿರೋಧಿಸುತ್ತಾನೆ; ವೈಚಾರಿಕವಾಗಿ ಚಿಂತಿಸುತ್ತಾನೆ.''[೫] ಹೀಗೆ ಆಧುನಿಕ ದ್ಯಾವಪ್ಪ ಪತ್ರಕರ್ತ ಪಾಟೀಲನ ಮುಂದೆ ತನ್ನ ಬಂಡಾಯದ ಮಾತುಗಳನ್ನು ಆಡಿಕೊಳ್ಳಲು ಪ್ರಾರಂಭಿಸುತ್ತಾನೆ.

ನವ ನಿರ್ಮಾಣದ ಚಳುವಳಿಯಲ್ಲಿ ಭಾಗವಹಿಸಿ, ಜೈಲು ಸೇರಿ ಬಿಡುಗಡೆಯಾಗಿ ಪಾಟೀಲನ ಮನೆಗೆ ಬಂದಾಗ, ಜೈಲಿನಲ್ಲಿ ಅಧಿಕಾರಿಗಳು ಯಾವ ರೀತಿ ನಡೆಸಿಕೊಂಡಿದ್ದರು ಹಾಗೂ ನವನಿರ್ಮಾಣದ ಚಳುವಳಿಯ ಸಂಘಟಕರು ಇತನನ್ನು ಕರೆದುಕೊಂಡು ಹೋಗಿ ತಮ್ಮದೆಯಾದ ರೀತಿಯಲ್ಲಿ ಭಾಷಣವನ್ನು ಹೇಳುತ್ತಿದ್ದಾಗ, "ಎಲ್ಲಾ ಹಳೇ ಮಾಲು! ನಮ್ಮದು ಪುಣ್ಯಭೂಮಿ... ನಮ್ಮ ಪೂರ್ವಜರೆಲ್ಲಾ ಅವತಾರೀ ಪುರುಷರೂ... ಹಂಗs... ಹಿಂಗs ಅಂತ... ತಲೀಚಿಟ್ಟ ಹಿಡದ ಹೋತರೀ... ಹಿಂದಿಂದ ತಗೊಂಡು ಹಿತ್ತಲದಾಗ ಅತ್ತರಂತ!... ಅಲ್ಲರೀ ನಮ್ಮ ವ್ಯವಸ್ಥಾದಾಗ ಬಡವರು ಮರ್ಯಾದಿಂದ ಬದಕೂ ಹಾದೀ ಹೇಳರಿ... ಹಳ್ಳಾಗಿನ ಗೌಡರೂ. ಕುಲಕರ್ಣ್ಯಾರು ಜಮೀನದಾರರು ಮತ್ತು ಜಾತ್ಯಸ್ಥರೂ ಮಾಡತಿರೊ ಹಂತಾ ದಂಡಾವರ್ತೀ ಬಗ್ಗೆ ವಿಚಾರ ಮಾಡಿರಿ... ನಮ್ಮಂಥಾ ಹುಡುಗೋರಿಗೆ ಕೆಲಸ ಇಲ್ಲದ್ದರ ಬಗ್ಗೆ ಹೇಳರೀ..."(ತೇರು, ಪು.೬೮) ಎಂದು ದ್ಯಾವಪ್ಪ ತನ್ನ ಪರಂಪರೆಗೆ ಅಟ್ಟಿಕೊಂಡು ಬಂದಿರುವ ಅನಿಷ್ಠ ಪದ್ಧತಿಗಳನ್ನು ಹಾಗೂ ಅವುಗಳನ್ನು ಹೊಸಬಗೆಯಲ್ಲಿ ನಿಂತು ವಿಚಾರಿಸುವ ಮತ್ತು ಪ್ರಶ್ನಿಸುವ ಮಾನಸಿಕ ಸ್ಥೈರ್ಯವನ್ನು ಪಡೆದು, ಸಮಾಜವನ್ನು ಆಧುನಿಕ ಪರಂಪರೆಯತ್ತ ಕೊಂಡ್ಯುಯಬೇಕೆಂಬ ಆಸೆ ಹೊಂದಿದ್ದಾನೆ. ಬೆಂಗಳೂರಿನ ಸಾಮಾಜಿಕ ಜೀವನದಲ್ಲಿ ಹಳ್ಳಿಯ ಒಬ್ಬ ವ್ಯಕ್ತಿ ಮನೆಯನ್ನು ಹುಡುಕಲು ಎಷ್ಟು ಕಷ್ಟ ಪಡೆಯಬೇಕಾಗುತ್ತದೆ ಎಂಬುದನ್ನು ಪತ್ರಕರ್ತ ಪಾಟೀಲನ ಮುಂದೆ ಆಧುನಿಕ ದ್ಯಾವಪ್ಪ ಹೇಳುವುದು ಸ್ವಾರಸ್ಯಕರವಾಗಿದೆ.

"ಇದ ವ್ಯವಸ್ಥಾ ಏನರೀ ಸಾಹೇಬರs... ಇದು ಹೆಂತಾ ವ್ಯವಸ್ಥಾರೀ? ಇಲ್ಲಿ ನೋಡರಿ... ಈ ಬೆಂಗಳೂರಿನ್ಯಾಗ ಎಲ್ಲಾ ಕಡೆ ಝುಗ-ಮಗ ಅಂತ ಬೆಳಕು ಚಲ್ಲಾಡಿ ಹಾದೀಗುಂಟ ಹರೀತೈತಿ... ಇಡೀ ಊರಿಗೆ ಊರs ಚಲಸಾಕತ್ತೈತಿ ಅನ್ನು ಹಂಗ ರಸ್ತಾದ ತುಂಬ ಬಸ್ಸೂ-ಕಾರಗಾಡೀ ಮತ್ತು ಮೋಟರ ಸೈಕಲ್ಲಗೋಳು ಭರಂಡೀ ಹೋಗತಾವು... ಅಲ್ಲಿ ನಮ್ಮ ಊರಗೋಳೂಳಗ ನಿಮಗs ಗೊತ್ತ ಐತೆಲ್ಲರೀ... ಅಲ್ಲಿ ಕತ್ತಲಿ ತುಂಬೈತಿ... ಚಿಮಣೀಬುಡ್ಡಿಗೆ ತಟಕ ಎಣ್ಣಿ ಸಿಗೋದಿಲ್ಲ... ಇಡೀ ಊರಿಗೆ ಊರs ಕುಂಟ ಬಿದ್ದಾವು..."(ತೇರು, ಪು.೭೩) ಎಂಬ ದ್ಯಾವಪ್ಪನ ಮಾತಿನಲ್ಲಿ ಬೆಂಗಳೂರ ನಗರ ಜೀವನ ಹಾಗೂ ನಮ್ಮ ಹಳ್ಳಿಯ ಜೀವನದಲ್ಲಿ ಎಷ್ಟು ವ್ಯತ್ಯಾಸಗಳಿವೆ ಹಾಗೂ ನಮ್ಮ ಹಳ್ಳಿಗಳಲ್ಲಿ ಯಾವುದೇ ಪ್ರಗತಿಯಾಗದೆ ಹಾಗೆಯೇ ಉಳಿದುಕೊಂಡಿದ್ದಾವೆ. ಅದಕ್ಕಾಗಿ ದ್ಯಾವಪ್ಪ ಈ ವ್ಯವಸ್ಥೆಯನ್ನು ಸಹಿಸಕ್ಕಾಗದೆ

ಈ ಮೇಲಿನ ಮಾತಿನಂತೆ ಹೇಳುತ್ತಾನೆ. ಅಷ್ಟೇ ಅಲ್ಲದೆ ಈ ರಾಜಕೀಯ ವ್ಯವಸ್ಥೆಯಲ್ಲಿ ಹಳ್ಳಿಯಲ್ಲಿ ಉಂಟಾಗಿರುವ ಕೆಲವೊಂದು ತಪ್ಪುಗಳನ್ನು ಆತ ಎತ್ತಿ ಹಿಡಿಯುವ ಪ್ರಗತಿಪರ ವಿಚಾರ ಅವನದಾಗಿದೆ.

"ಟೆನೆನ್ಸಿ ಬಂತು ಖರೇ ಬಡವರಿಗೇನು ದಕ್ಕಲಿಲ್ಲ... ನಮ್ಮ ಜಮೀನು ನಮ್ಮ ಊರ ಗೌಡಗs ಹೋತು... ಅಂವಗ ಐವತ್ತು-ಅರವತ್ತು ಎಕರೇ ಭೂಮಿ ಐತಿರೀ ಆದರ ಕಾಯ್ದೇಕ್ಕ ಹೆಂಗ ಟಾಂಗ ಕೊಡಬೇಕಂತ ಯಾವ ವಕೀಲನಕಿಂತಾ ಹೆಚ್ಚ ಜ್ಞಾನ ಐತಿ ಅವಂಗ... ನನಗಿಂತಾ ಕಮ್ಮಿ ವಯಸ್ಸಿನ ತನ್ನ ಮಗನ್ನ ನಮ್ಮ ಹೊಲಕ್ಕ ಟೆನೆಂಟ ಅಂತ ಮಾಡಿ ಡಿಕ್ಲರೇಶನ್ ಕೊಡಿಸ್ಯಾನರೀ... ಹದಿನೆಂಟ ವರ್ಷದ ಹುಡುಗ ಹದಿನೈದ ವರ್ಷದ ಹಿಂದಿಂದs ನಮ್ಮ ಹೊಲಾ ಹೊಡ್ಯಾಕತ್ಯಾನಂತ..!"(ತೇರು, ಪು.೭೩) ಹೀಗೆ ಟೆನೆನ್ಸೀ ಕಾಯ್ದೇಯಲ್ಲಾದ ತಪ್ಪುದಿಂದಾಗಿ ತನ್ನ ಜಮೀನನ್ನು ಕಳೆದುಕೊಂಡ ದ್ಯಾವಪ್ಪ ತನ್ನೂರಿನ ಗೌಡ ಮಾಡಿದ ಈ ಕೃತ್ಯವನ್ನು ಆತ ವಿರೋಧಿಸುತ್ತಾ, ಸರಕಾರಕ್ಕೆ ಕಣ್ಣಿಲ್ಲ ಎಂದು ಸರಕಾರವನ್ನು ಹಾಗೂ ಆಡಳಿತವರ್ಗವನ್ನು ತನ್ನ ವೈಚಾರಿಕ ಮಾತುಗಳಿಂದ ಹೊರೆಗೆಳಯುತ್ತಾನೆ.

"ಪರಂಪರೆಯೊಡನೆ ತೀವ್ರ ಸಂಘರ್ಷಕ್ಕಿಳಿದಿರುವ ಈ ದ್ಯಾವಪ್ಪನು ತನ್ನ ಹಿರಿಮುತ್ತಜ್ಜನ ಹೆಸರನ್ನೆ ಹೊತ್ತಿದ್ದರೂ ಹಿಡಿದಿರುವ ಹಾದಿ ಮಾತ್ರ ಹೊಸತು. 'ನವ ನಿರ್ಮಾಣ ಚಳುವಳಿ' 'ಜೈಲು' 'ಬದಲಾವಣೆ' ಮತ್ತಿತರ ಪದಗಳ ನಡುವೆ ಬದುಕುವ ಆತನಿಗೆ"[೬] ತನ್ನ ಹಿಂದಿನ ವಂಶಸ್ಥರ ಪದ್ಧತಿಯಲ್ಲಿ ಆಸಕ್ತಿಯಿಲ್ಲದಾಗಿದೆ. ಹಾಗೂ ತನ್ನ ಅಜ್ಜನ ಕಾಲಕ್ಕೆ ರಕ್ತ ತಿಲಕದ ಸೇವೆಯಿಂದ ಬರುತ್ತಿದ್ದ ಆಹಾರ ಕ್ರಮೇಣ ಕಡಿಮೆಯಾಗುತ್ತ ಹೋಗುವುದರಿಂದ ದ್ಯಾವಪ್ಪ "ಆಗ ಕೊಡವರು ಅದನ್ನ ಭಕ್ತೀ ಅಂತಕೊಡತಿದ್ದರು ಮತ್ತು ಇಸಗೋಳಾವರ ಅದನ್ನ ಭಿಕ್ಷಾ ಅಂತ ಅನಕೋತಿದ್ದಿಲ್ಲ... ಮುಂದ ಕೊಡವರಿಗೆ ಅದು ಭಿಕ್ಷಾ ಅಂತ ತಿಳೀತು... ಕೊಡುದನ್ನ ಬಂದ ಮಾಡಿದರು... ನಮ್ಮ ಅಪ್ಪನ ಕಾಲದಾಗs ಯಾವ ಭಕ್ತರೂ ಏನ ಒಂದ ನಯ್ಯಾ ಪೈಸಾ ಕೊಡತಿದ್ದಿಲ್ಲರಿ... ಜ್ವಾಳಾ ಕಾಳನೂ ಇಲ್ಲ... ಕಾಡಿಬೇಡಿ ತಿರಕೊಂಡು ಉಂಬವನಿಗೇ ಕೈಯತ್ತಿ ಒಂದು ತುತ್ತು ನೀಡುವುದಿಲ್ಲ... ಹಂತಾದ್ದರಾಗ ಇನ್ನ ಇಲ್ಲದ ದೇವರ ಮ್ಯಾಲಿನ ಭಕ್ತೀಗೆ ಕೊಡಾವ ಯಾವರೀ...? ಈ ಮಂದಿಗೆ ದೇವರ ಖರೇ ಹಕೀಕತ್ತು ತಿಳದೈತಿ. ಹಿಂಗಾಗಿ ಕೊಡೂದುಗಿಡೊದು ಬಂದ ಮಾಡ್ಯಾರು, ಅವರದೇನ ತಪ್ಪ ಅಲ್ಲರೀ... ದೇವರೂ ದಿಂಡರೂ ಎಲ್ಲಾ ಔಟ್ ಆಫ್ ಡೇಟ್ ಆಗ್ಯಾವರೀ...! ಔಷಧದ ಬಾಟಲೀ ಮ್ಯಾಗ ಹಾಕಿರತಾರ ನೋಡರಿ... ಏಕ್ಸಪೈರೀಡೇಟು... ಹಂಗ! ದೇವರೂ ದಿಂಡರದೂ ಏಕ್ಸ್‌ಪೈರೀ ಡೇಟು ಆಗಿ ಹೋಗೇತಿರಿ... ಹಿಂತಾದೇವರ ತೇರಿನ ಸೇವಾ ಮಾಡಿಕೋತ ನಿರುಪಯೋಗ ಆಗಿ ಹಾಳ ಆಗಲಿಕ್ಕೆ ಬಿಡದs ನಮ್ಮಂಥಾ ಹುಡುಗೋರಿಗೆ ದುಡೀಲಿಕ್ಕೆ ಕೆಲಸಾ ಕೊಡಬೇಕರಿ..."(ತೇರು, ಪು.೭೪) ಎನ್ನುವ ದ್ಯಾವಪ್ಪನ ಮಾತು ಪರಂಪರಾಗತ ವ್ಯವಸ್ಥೆಯಲ್ಲಿ ತುಂಬಿರುವ ಮೌಢ್ಯತೆಯನ್ನು ಹಾಗೂ ದೇವರು ಮತ್ತು ಧರ್ಮದ ನಡುವೆ ಈ ಹಿಂದೆ ಇದ್ದ ನಂಬಿಕೆ ಕಡಿಮೆಯಾಗಿರುವುದರಿಂದ, ಅವುಗಳಲ್ಲಿ ಬಿದ್ದು ಒದ್ದಾಡುವುದಕ್ಕಿಂತಾ

ನಮ್ಮಂತಹ ಯುವಕರಿಗೆ ಕೆಲಸವನ್ನು ನೀಡಿದರೆ ಒಳ್ಳೆಯದಾಗುತ್ತೆ ಎನ್ನುವುದು ದ್ಯಾವಪ್ಪನ ವಿಚಾರ. ಆದರೆ ಸಮಾಜ ಹಾಕಿಕೊಟ್ಟ ರೂಢಿ ಸಂಪ್ರದಾಯವನ್ನು ಅಷ್ಟು ಸುಲಭವಾಗಿ ಬಿಡಲಿಕ್ಕೆ ಸಾಧ್ಯವಿಲ್ಲ ಎನ್ನುವುದು ನಾವು ಮರೆಯುವಂತಿಲ್ಲ. ಕೊನೆಗೊಂದು ದಿನ ಸಮಾಜದಲ್ಲಿ ಪರಿವರ್ತನೆಯಾಗಿ ಮೌಢ್ಯತೆ ಕರಗಿ ಹೋಗುತ್ತದೆ. ಇದು ಸೃಷ್ಟಿಯ ನಿಯಮ. ಆದ್ದರಿಂದ ಸಮಾಜದಲ್ಲಿರುವ ಕೆಳಜಾತಿಯ ಜನರು ಸಹ, ಅಧಿಕಾರದ ಅಟ್ಟಹಾಸದಿಂದ ಮೆರೆಯುತ್ತಿರುವ ಅಧಿಕಾರಶಾಹಿಗಳಿಂದ, ಬಿಡುಗಡೆ ಹೊಂದಿ ನೆಮ್ಮದಿಯಿಂದ ಬದುಕಬಹುದೆಂಬುದು ದ್ಯಾವಪ್ಪನ ವಿಚಾರದಲ್ಲಿ ತಿಳಿಯುತ್ತೇವೆ. ಆದರೆ ದೇವರ ವಿರುದ್ಧ ದ್ಯಾವಪ್ಪ ಎತ್ತಿದ ಪ್ರಶ್ನೆ ಇಡೀ ಪರಂಪರೆಯನ್ನು ವಿಮರ್ಶಿಸುವ ಮಾತಾಗಿದೆ.

ಒತ್ತಾಯ ಪೂರ್ವಕವಾಗಿ ಮತ್ತು ಪರಂಪರೆಯನ್ನು ನಿಲ್ಲಿಸಲು ಆಗದೇ ತಮ್ಮ ರಕ್ತ ತಿಲಕದ ಸೇವೆಯನ್ನು ಕುರಿತು ದ್ಯಾವಪ್ಪ ಆಡುವ ಮಾತು, ನಂಬಿಕೆಯನ್ನು ಕಳೆದುಕೊಂಡಿವೆ ಎಂದು ತೋರಿಸುತ್ತವೆ. ರಕ್ತ ತಿಲಕದ ಸೇವೆಯನ್ನು "ಇನ್ನೂ ನಿಂದರಿಸಿಲ್ಲರೀ... ಆದರೆ ನಾವು ನಡಕೋದರೊಳಗ ನಮಗ ನಂಬಿಕಿ ನಿಷ್ಠಾ ಇರಬೇಕಲ್ಲರಿ... ಖರೇದಿಂದ ನಡಿಕೋಬೇಕು... ಹೌದಲ್ಲರಿ?... ನಮ್ಮ ಅಪ್ಪ ಧರಮನಟ್ಟಿಯ ತೇರ ಇನೂ ಹದನ ದಿನಾ ಐತಿ ಅಂತಿರಬೇಕಾದರ ಯಾತ್ರಾಕ್ಕ ಹೋಗೂದನ್ನ ತಪ್ಪಿಸಿ ಮನ್ಯಾಗ ಅಡಿಕ್ಕೊಂಡು ಬಿಡತಿದ್ದನರೀ..."(ತೇರು, ಪು.೭೪) ಇಲ್ಲಿ ದ್ಯಾವಪ್ಪನ ತಂದೆಗೆ ಇದು ಕುರುಡು ಭಕ್ತಿ ಎನ್ನುವುದು ಗೊತ್ತಾಗಿದೆ. ಅದಕ್ಕಾಗಿ ಆತ ಪರಂಪರೆಯಿಂದ ಬಂದ ಧರಮನಟ್ಟಿಯ ತೇರಿನ ಯಾತ್ರಾ ಕಾರ್ಯವನ್ನು ಬಿಡದೆ ಮತ್ತು ಸರಿಯಾಗಿ ನಡಸದೆ ಇರುವುದಕ್ಕೆ ಕಾರಣವಾಗಿದೆ. ಇದಕ್ಕೆ ಇನ್ನೊಂದು ಕಾರಣವು ಇದೆ. ಆಧುನಿಕ ಸಮಾಜದಲ್ಲಿ ದೇವರ ಮೇಲಿನ ಭಕ್ತಿ ಮತ್ತು ನಿಷ್ಠೆ ಹಾಗೂ ನಂಬಿಕೆ ಇವುಗಳ ಇಲ್ಲದೆ ಇರುವುದಾಗಿದೆ. ಇವುಗಳನ್ನು ತೀಕ್ಷ್ಣವಾಗಿ ಗುರುತಿಸಿದ ದ್ಯಾವಪ್ಪ ತನ್ಮೂಲಕವಾದರು ಈ ಸೇವೆಗೆ ಹೊಸ ರೂಪ ಬರಲಿ ಎಂದು ಪ್ರಯತ್ನಿಸಿ ಮೊದಲು ಎರಡು ವರ್ಷ ಅವರ ಮೂಲ ಮುತ್ತ್ಯಾ ಪುರಾಣ ದ್ಯಾವಪ್ಪ ಹಾಕಿಕೊಟ್ಟ ನಿಯಮದಂತೆಯೇ, ತಾನು ಸಹ ರಕ್ತ ತಿಲಕದ ಸೇವೆ, ಯಾತ್ರಾ ಕೈಗೊಳ್ಳುವುದು, ರಕ್ತ ಶುದ್ಧೀಕರಣ ಮಾಡಿಕೊಳ್ಳುವುದು, ಇವುಗಳ ಜೊತೆಗೆ ಭಕ್ತಿ, ನಿಷ್ಠೆ, ನಂಬಿಕೆಯಿಂದ ಸೇವೆ ಮಾಡಿದ. ಆದರೆ ಆ ಎರಡು ವರ್ಷದ ಸೇವೆಯಲ್ಲಿ ದ್ಯಾವಪ್ಪ ಬಹಳಷ್ಟು ಬದಲಾವಣೆಯನ್ನು ಪಡೆದುಕೊಂಡ. ಅದರರ್ಥ ಈಗಿನ ಸಮಾಜದಲ್ಲಿ ಸೇವೆಗೆ ಮತ್ತು ಭಕ್ತಿ, ನಿಷ್ಠೆ, ನಂಬಿಕೆಗೆ ಬೆಲೆಯಿಲ್ಲ ಎಂಬುದನ್ನು ಅರಿತುಕೊಂಡು ಈಗಿನ ಸಮಾಜದಲ್ಲಾದ ಸಾಮಾಜಿಕ ಮಾರ್ಪಾಡುಗಳನ್ನು ವಿವರವಾಗಿ ಹೇಳಲಿಕ್ಕೆ ಪ್ರಾರಂಭಿಸಿದ.

ಈ ಎರಡು ವರ್ಷ ಸೇವಾ ಮಾಡಿದ್ದು "ನನ್ನ ಮನಸಿಗೇ ಎಲ್ಲಾ ವ್ಯರ್ಥ ಅನಿಸಿತರಿ... ಗೂಗೀ ಕೊಳ್ಳದಾಗ ಈಗ ಯಾವ ಸಿದ್ದರೂ ಕಾಣೂದುಲ್ಲ... ಅಲ್ಲಿ ಈಗ ಕಳ್ಳರು ಅಡಗಿಕೊಂಡಿರತಾರರಿ... ನವಲ ತೀರ್ಥದಾಗ ಗಂಗವ್ವ ಈಗ ಸೆಳವ ಕಳಕೊಂಡಾಳರಿ...ಆಕೀ ಕಾಲಗೋಳನ ಮುರದ್ದಾರು!

ಮುನ್ನೋಳ್ಳೀ ಹಂತೇಕ ನೀವು ನೋಡಬೇಕರೀ... ನದೀ ಅಂಬುವ ಜಾಗಾದ ತುಂಬ ಆಪು ಬೆಳದು.. ದರಿಗಟ್ಟೈ... ನೀರು ಕೊಳತ ನಾರತೈತಿ ! ಪಂಚಲಿಂಗೇಶ್ವರನ ಗುಡಿಯ ಅಂಗಳಕ್ಕ ಹೋಗೂ ಹಾದೀ ಗುಂಟ ಏನ ಅದಾವು ಹೇಳ್ರೀ...ಬಾರಗೋಳು ಮತ್ತಶರೇದ ಅಂಗಡಿಗೋಳು...! ನಡ ನಡಕ ತೋರನಾ ಕಟ್ಟಿರತಾರು...! ಮಾವಿನ ಎಲಿಯ ತೋರಣ ಅಲ್ಲರೀ... ತಂಬಾಕಿನ ಪಾಕೀಟಗಳ ಸರಪಳೀ ತೂಗು ಹಾಕಿದ ತೋರಣಾ!"(ತೇರು, ಪು.೩೫) ಇಲ್ಲಿ ದ್ಯಾವಪ್ಪ ಆಡುವ ಈ ಮಾತುಗಳು ಬಹಳಷ್ಟು ತಾರ್ಕಿಕತೆಯಿಂದ ಕೂಡಿವೆ. ಇಲ್ಲಿ ಪವಿತ್ರತೆಯ ಹಾಗೂ ನಿಸರ್ಗದೇವತೆಯಲ್ಲಿ ಒಂದಾದ ನದಿ. ತನ್ನ ಅಸ್ತಿತ್ವವನ್ನು ಕಳೆದುಕೊಂಡು ಕಲ್ಮಶವಾದ ಕಸವನ್ನು ತುಂಬಿಕೊಂಡಿರುವುದು. ಸಾಧು-ಸಂತರನ್ನು ಪೂಜ್ಯತೆಯಿಂದ ನೋಡುತ್ತಿದ್ದ ನಮ್ಮ ಜನ ಇವತ್ತಿನ ಸಮಾಜದಲ್ಲಿ ಕಳ್ಳರನ್ನು ನೋಡುವಂತಾಗಿದೆ. ದೇವಸ್ಥಾನ ರಥ ಬೀದಿಗಳಲ್ಲಿ ದೇವರ ಭಾವಚಿತ್ರವನ್ನು ಇಡುವ ಬದಲು ಅಲ್ಲಿ ಬಾರು, ತಂಬಾಕು ಪಾಕೀಟಿನ ಸರಗಳು, ಇವುಗಳು ನಮ್ಮ ದೇವರ ಅಸ್ಥಿತ್ವವನ್ನು ಪ್ರಶ್ನಿಸುವಂತಿದೆ. ಹೀಗಾಗಿ ದ್ಯಾವಪ್ಪ ಆಡುವ ಈ ಮಾತುಗಳು ದೇವರು ಈಗ ತನ್ನ ಗುಡಿಯ ಒಳಗಡೆಯೇ ಬಂದೀ ಆಗಿ ಬಿಟ್ಟಿದ್ದಾನೆ ಎಂದು ತಿಳಿಸುತ್ತವೆ.

ಇನ್ನು ಈ ಸಮಾಜ ಯಾವ ರೀತಿಯಲ್ಲಿ ಬದಲಾವಣೆ ಬಯಸಿದೆ ಅನ್ನುವುದನ್ನು ದ್ಯಾವಪ್ಪನ ಮಾತುಗಳಲ್ಲಿಯೇ ಕೇಳಬೇಕು. "ತಲೀಮ್ಯಾಲ ಬದಾ ಬದಾ ಅಂತ ಬಿಸಲು ಸುರೀತಿದ್ದರ ನೆಳ್ಳಿಗಂತ ಯಾರದರೇ ಮನೀ ಕಟ್ಟಿಗೆ ಹೋದರs ಆ ಮನಿಯವರು ಸಟಕ್ಕನs ಬಾಗಲಾ ಹಾಕ್ಕೋತಾರರಿ... ಬಾಯಾರಿಸಿ ನೀರ ಕೇಳಿದರ ಒಂದ ಚರಗಿ ನೀರು ಸಿಗೂದುಲ್ಲರಿ... ಚಾದ ಅಂಗಡಿಗೆ ಹೋಗೂ ಅಂತ ಹೇಳತಾರ... ಅವರರ ಏನ ಮಾಡ್ಯಾರರೀ... ಎರಡ ಮೂರು ದಿನಕ್ಕ ಒಮ್ಮೆ ನಳಾ ಬಂದಾಗs ಅವರಿಗೆ ನೀರು... ಮತ್ತ ಎಂದ ನಳಾ ಬಿಡತಾರೋ ಅಂತನ್ನೂ ಅಂಜಕಿ ಎಲ್ಲಾರಿಗೂ... ನಾ ಎರಡವರ್ಷ ಆಗದೀ ನಿಷ್ಠಾದಿಂದ - ಅಗದೀ ಭಕ್ತೀಲಿಂದ ಯಾತ್ರಾ ಮಾಡಿದಿನರಿ... ಆದರ ಯಾವ ಒಂದು ದೇವಸ್ಥಾನದೊಳಗನೂ ಒಂದು ಕ್ಷೇತ್ರದಾಗಾದರೂ ದೇವರಿದ್ದಾನಂತ ಅನ್ನೂ ಭಾವನಾ ನನಗೆ ಬರಲಿಲ್ಲ ನೋಡ್ರಿ... ನನ್ನ ಹಂತೇಕ ಭಕ್ತಿ ಐತಿ - ರೊಕ್ಕ ಇಲ್ಲ ಅಂತ ದೇವಸ್ಥಾನಗೋಳಿಗೆ ಹೋದರ ಅಲ್ಲಿ ಪೂಜಾರಿಗೋಳು ಹೋಗೋ ಮಕಳೀ ಹೋಗು ಅಂತ ಚಂಡಮ್ಯಾಲ ಕೈಕೊಟ್ಟು ಹೊರಗನೂಗಸತ್ತಾರು... ಗುಡೀ ಅನ್ನುವುದರೊಳಗೆ ದೇವರುಗಳೆಲ್ಲಾ ಕಲ್ಲಮೂರುತಿ ಆಗಿ ಕುಂತಾವರೀ ಸಾಹೇಬರs..." (ತೇರು, ೭೫-೭೬) ಎಂದು ಹೇಳುವಾಗ ದ್ಯಾವಪ್ಪನ ಭಕ್ತಿ-ನಿಷ್ಠೆ-ಶ್ರದ್ಧೆ ಕಡಿಮೆಯಾಗಿರುವ ಲಕ್ಷಣಗಳು ಕಂಡುಬರುತ್ತವೆ. ಮಾನವೀಯತೆಯ ಮೌಲ್ಯವೇ ಇಲ್ಲದ ಇವತ್ತಿನ ಸಮಾಜ ಒಂದು ಕಡೆಯಿದ್ದರೆ, ಸರಿಯಾಗಿ ಕಾರ್ಯ ನಿರ್ವಹಿಸದ ಸರಕಾರ ಮತ್ತೊಂದು ಕಡೇಗಿದೆ. ಇವುಗಳಲ್ಲಿ ದೈವದ ಭಕ್ತಿಗಾಗಿ ಹಂಬಲಿಸಿ ಅದು ಕುರುಡಾದ ಭಕ್ತಿಯೆಂದು ತಿಳಿದು, ಸಮಾಜದ ವ್ಯವಸ್ಥೆಯ ವಿರೋದ್ಧ ಆಡುವ ದ್ಯಾವಪ್ಪನ ಮಾತುಗಳು ಅರ್ಥಪೂಣವಾಗಿದೆ. ರಕ್ತ ತಿಲಕದ ಆಚರಣೆಯ ಸೇವೆಯನ್ನು ಮಾಡುತ್ತಲೇ ಆತನು ಅದರಲ್ಲಿ

ಬಹುಬೇಗನೆ ಬದಲಾವಣೆಯಾಗಿ ಅದರ ವಿರುದ್ಧ ಬಂಡಾಯದ ಮಾತನ್ನು ವ್ಯಕ್ತಪಡಿಸುತ್ತಾ, ಸಮಾಜವನ್ನು ವಿಮರ್ಶಿಸುವ ದೃಷ್ಟಿ ದ್ಯಾವಪ್ಪನದಾಗಿದೆ. ಸಮಾಜದಲ್ಲಿ ದೇವರ ಅಸ್ತಿತ್ವ ಕ್ರಮೇಣ ಕಡಿಮೆಯಾಗಲು ಹಾಗೂ ದೇವಸ್ಥಾನದಲ್ಲಿ ಹಣದ ವ್ಯಾಮೋಹ ಮತ್ತು ಪವಿತ್ರ ಎಂದು ನಂಬಿರುವ ನದಿಗಳು ಪರಿಸರ ಮಾಲಿನ್ಯಕ್ಕೆ ತುತ್ತಾಗಿ ನಿಂತಿರುವುದು, ದೇವಸ್ತಾನದ ದಾರಿಯಲ್ಲಿ ಸರಾಯಿ ಅಂಗಡಿ, ಮುಂತಾದವುಗಳು ದೇವರನ್ನು ಕಲ್ಲು ಮೂರ್ತಿಯನ್ನು ಮಾಡಿದ್ದಾವೆ. ಈ ಇಲ್ಲದ ದೇವರನ್ನು ನಂಬಿ ಸೇವೆ ಮಾಡುವುದಕ್ಕಿಂತ ಬೇರೆ ಏನಾದರೂ ಸಮಾಜಕ್ಕೆ ಒಳ್ಳೆಯದಾಗುವ ಕಾಯಕವನ್ನು ಮಾಡಿದರೆ ಉಪಯೋಗವಾಗುತ್ತದೆ ಎಂಬ ನಂಬಿಕೆ ದ್ಯಾವಪ್ಪನದಾಗಿದೆ.

ನಾರಾಯಣರ ನವನಿರ್ಮಾಣ ಚಳುವಳಿಯಲ್ಲಿ ಸೇರಿ ಅದರಿಂದ ಸ್ಫೂರ್ತಿ ಪಡೆದ ದ್ಯಾವಪ್ಪ, ಹಳ್ಳಿಯಲ್ಲಿ ನಡೆಯುವ ಮೇಲುವರ್ಗದ ಜನರ ಅಧಿಕಾರದ ದರ್ಪ, ಹಾಗೂ ಶೋಷಣೆಯನ್ನು ನೆನೆಯುತ್ತ "...ನಮ್ಮ ಊರಗೌಡದಾನಲ್ಲರೀ... ಅಂವ ಆ ಗೌಡಂದರs ತಾನು ಬೀಜದ ಹೋರೀ ಅಂತ ತಿಳಕೊಂಡದಾನು... ಆ ಮುಂಬಯ್ಯವರ ಭಾಷಣಾ ಕೇಳತಿದ್ದಂಗs ಈ ಗೌಡನಂಥವರನ್ನು ನಾಶ ಮಾಡೊ ಹಂತಾ ಹಾದಿ ಕಂಡಾಂಗಾತು..."(ತೇರು, ಪು.೭೭) ಎನ್ನುವಲ್ಲಿ ದ್ಯಾವಪ್ಪನ ಬಂಡಾಯದ ಮಾತುಗಳು ಇಡೀ ಸಮಾಜದ ಪರಂಪರೆಯಲ್ಲಿ ಅಡಗಿರುವ ಶೋಷಣೆ, ಬಲತ್ಕಾರ, ಅಟ್ಟಹಾಸ ಇವುಗಳನ್ನು ಕಿತ್ತೆಸೆಯುವ ಹಾಗು ತುಳಿತಕ್ಕೊಳಗಾದ ಜನರಿಗೆ ಸ್ಫೂರ್ತಿಯನ್ನು ತುಂಬುವ ಮಾತಾಗಿದೆ. ಹೀಗೆ ಆಧುನಿಕ ದ್ಯಾವಪ್ಪ ಪತ್ರಕರ್ತ ಪಾಟೀಲನ ಮುಂದೆ ಬೆಂಗಳೂರಿನಲ್ಲಿ ಆಡಿದ ಮಾತುಗಳು ಕಾದಂಬರಿಯಲ್ಲಿ ಗುಡುಗು, ಸಿಡಿಲುಗಳಿಂದ ಕೂಡಿದ ಚಿತ್ರಣವನ್ನೊಳಗೊಂಡಿದೆ. ದ್ಯಾವಪ್ಪನ ಮಾತಿನ ತಿರುಳು ಇಡೀ ಸಮಾಜ ಇವತ್ತಿನ ದಿನಗಳಲ್ಲಿ ದೇವರ ಮೇಲಿನ ಭಕ್ತಿಯನ್ನು ಬಿಟ್ಟಿರುವಾಗ ನಾನೇಕೆ? ಈ ಇಲ್ಲದ ಕಲ್ಲು ಮೂರ್ತಿಗೆ ಸೇವೆ ಮಾಡುವುದು? ಇದರಿಂದ ಯಾವುದೇ ಪ್ರಯೋಜನೆಯಿಲ್ಲ. ಮೇಲಾಗಿ ಇವತ್ತಿನ ದಿನಮಾನಗಳಲ್ಲಿ ಜನರು ಗಳಿಕೆಗೆ ಹೆಚ್ಚು ಒತ್ತನ್ನು ನೀಡಿದ್ದಾರೆ ಹೊರತು, ದೇವರ ಭಕ್ತಿಯ ಮೇಲ್ಲಲ್ಲ. ಹೀಗಾಗಿರುವಾಗ ನಾವು ಮಾತ್ರ ದೇವರ ಸೇವೆಯಲ್ಲಿ, ಶೋಷಣೆಯನ್ನು ಅನುಭವಿಸುತ್ತಾ ಹೋಗುವುದು ಯಾವ ನ್ಯಾಯ? ಇವೆಲ್ಲವನ್ನು ಅರಿತುಕೊಂಡ ದ್ಯಾವಪ್ಪ ಈ ಪರಂಪರೆಯ ವಿರುದ್ಧವಾಗಿ ಗುಡುಗಿದ್ದಾನೆ.

ಕಾದಂಬರಿಯ ನಾಲ್ಕನೆಯ ಭಾಗದಲ್ಲಿ ಧರಮನಟ್ಟಿಯ ತೇರಿಗೆ ಒಂದ ನೂರಾ ಐವತ್ತರ ಸಂಭ್ರಮದ ನಿಮಿತ್ಯವಾಗಿ, ಬೆಂಗಳೂರಿನ ಪತ್ರಕರ್ತ ಪಾಟೀಲರಿಗೆ ಸ್ವಾಂವಜ್ಜ ಪತ್ರ ಬರೆದು ರಥೋತ್ಸವಕ್ಕೆ ಆಮಂತ್ರಿಸುವುದು. ಅದಕ್ಕೆ ಪತ್ರಕರ್ತ ಉತ್ತರ ಬರೆಯುವುದು. ಹೀಗೆ ಈ ಭಾಗದಲ್ಲಿ ಪತ್ರದ ಮುಖಾಂತರವೆ ಕಥೆ ಮುನ್ನಡಿಯುತ್ತದೆ. ಅಷ್ಟರಲ್ಲಿ ಮೂವತ್ತು ವರ್ಷದ ಹಿಂದೆ ಧರಮನಟ್ಟಿ ಬಿಟ್ಟು ಅಮೇರಿಕಾ ದೇಶಕ್ಕೆ ಹೋದ, ಮಾಣೀಕ ದೇಸಾಯಿ ಆತ್ಮಹತ್ಯೆ ಮಾಡಿಕೊಂಡ ಸುದ್ದಿ ಅಮೇರಿಕಾದಿಂದ ಪತ್ರಕರ್ತನಿಗೆ ಬಂದು ಮುಟ್ಟುತ್ತದೆ. ಆತನ ಜೊತೆಗೆ ಯಾರು ಇಲ್ಲದಿರುವುದು. ಆತನ ಆಸ್ತಿಗಳಿಗೆ

ಯಾರು ವಾರಸುದಾರ ಇಲ್ಲದಿರುವುದು. ಆತನ ವಿಚ್ಛೇದಿತ ಹೆಂಡತಿ ಕ್ಯಾಥರೀನಳನ್ನು ಕೇಳಿದರೆ ನನಗು, ಆ ವ್ಯಕ್ತಿಗೂ ಯಾವುದೇ ಸಂಬಂಧವಿಲ್ಲ. ಆತನು ನನ್ನ ಹಳೆಯ ಗಂಡನೆಂದು ಹೇಳಿದ್ದು ಹಾಗೂ ತನ್ನ ಬ್ಯಾಂಕಿನ ಖಾತೆಯಲ್ಲಿರುವ ಹಣವನ್ನು ಪ್ಯಾಲಿಸ್ತೀನಿಯನ್ ನಿರಾಶ್ರಿತರ ಶಿಬಿರಗಳಿಗೆ ಮತ್ತು ಭಾರತದಲ್ಲಿರು ಟಿಬಿಟಿಯನ್ ನಿರ್ವಸಿತರ ಶಿಬಿರಗಳಿಗೆ ಸಮಪ್ರಮಾಣದಲ್ಲಿ ಸಂದಾಯ ಮಾಡುವ ಕುರಿತು, ಹಾಗೂ ತನ್ನ ಅಂತ್ಯ ಸಂಸ್ಕಾರವನ್ನು ಪಾರ್ಶೀ ಪದ್ಧತಿಯಲ್ಲಿಯೇ ಮಾಡಬೇಕು. ಧರಮನಟ್ಟಿಯಲ್ಲಿನ ತನ್ನ ಗುಡ್ಡವನ್ನು ವಿಠ್ಠಲ ದೇವಸ್ಥಾನಕ್ಕೆ ನೀಡಬೇಕೆಂದು. ತನ್ನ ಮೃತು ಪತ್ರದಲ್ಲಿ ತಿಳಿಸಿದ್ದನ್ನು ಅಮೇರಿಕಾದಿಂದ ಬಂದ ಸೂಚನ ಪತ್ರದಲ್ಲಿ ತಿಳಿಸುತ್ತಾರೆ. ಇದನ್ನು ಓದಿದ ಪತ್ರಕರ್ತ ಪಾಟೀಲ ಈ ವಿಷಯವನ್ನು ಆತ ಧರಮನಟ್ಟಿಯ ಸ್ವಾಂವಜ್ಜನಿಗೆ ಪತ್ರದ ಮುಖಾಂತರ ತಿಳಿಸಿ, ರಥೋತ್ಸವ ನಡೆಯುತ್ತದೆಯೋ ಅಥವಾ ಇಲ್ಲವೋ ಎಂದು ಸ್ವಾಂವಜ್ಜನಿಗೆ ಬರೆದ ಪತ್ರದಲ್ಲಿ ತಿಳಿಸುತ್ತಾನೆ. ಸ್ವಾಂವಜ್ಜ ಈ ಪಾತ್ರಕ್ಕೆ ಜರೂರಾಗಿ ಉತ್ತರ ಬರೆದು ಪಾಟೀಲ ಪತ್ರಕರ್ತನಿಗೆ ತಿಳಿಸುತ್ತಾನೆ.

ಧರಮನಟ್ಟಿ ತೇರು ಆ ಸೂರ್ಯ ಮತ್ತು ಚಂದ್ರ ಇರುವವರಿಗೆ ನಡೆದೆ ನಡೆಯುತ್ತದೆ. ಮತ್ತು ಮಾಣಿಕ ದೇಸಾಯಿ ನಿಧನರಾದದ್ದು ನಮಗೇನು ಸೂತಕ ಆಗಿಲ್ಲ. ಏಕೆಂದರೆ "ಮೃತ್ಯು ಪತ್ರದಾಗ ತನ್ನ ಹೆಣವನ್ನು ನಮ್ಮ ನಾಡಿಗೆ ಕಳಸರೀ ಅಂತ ಬರದಿದ್ದರೆ ನಮ್ಮ ಪದ್ಧತೀ ಪ್ರಕಾರ ಮಣ್ಣ ಮಾಡರೀ ಅಂತ ಬರೆದಿದ್ದರ ಅಂವ ಧರಮನಟ್ಟಿಯ ದೇಸಾಯಿ ಆಗಿರತಿದ್ದಾ ! ಮತ್ತ ಅಂವ ದೇಸಾಯಿ ಆಗಿ ಉಳದಿದ್ದರ ದೇಸಗತಿಯಲ್ಲಿರುವ ನಾವು - ಪ್ರಜಾಮಂದಿಗೆ ಅಂವ ಸತ್ತದ್ದು ಆಗ ಸೂತಕ ಆಗತಿತ್ತು..."(ತೇರು, ಪು.೮೪-೮೫) ಎನ್ನುವಲ್ಲಿ ಸ್ವಾಂವಜ್ಜನ ಪ್ರತೀಕ್ರಿಯೆ ನಮ್ಮ ಸಂಸ್ಕೃತಿ, ನಮ್ಮ ನಾಡು, ಇವುಗಳಿಗೆ ವಿರುದ್ಧವಾಗಿ ಮಾಣಿಕ್ ದೇಸಾಯಿ, ಪಾಶ್ಚಾತ್ಯ ಸಂಸ್ಕೃತಿಗೆ ಒಗ್ಗಿಕೊಂಡು, ಕೊನೆಗೆ ಅಲ್ಲಿಯೇ ಆತ್ಮಹತ್ಯೆ ಮಾಡಿಕೊಂಡಿರುವುದು. ಮತ್ತು ನಮ್ಮ ಸಂಸ್ಕೃತಿ ಪ್ರತೀಕವಾಗಿ ಆತ ತನ್ನ ಶವಸಂಸ್ಕಾರಕ್ಕೆ ಒಪ್ಪಿಗೆ ನೀಡದೆ, ಪಾರ್ಶೀ ಪದ್ಧತಿಯಲ್ಲಿ ಶವಸಂಸ್ಕಾರ ಮಾಡಬೇಕೆಂಬ ಬಯಕೆ, ಇವುಗಳಿಂದ ಧರಮನಟ್ಟಿಯ ಜನರಿಗೆ ಈ ದೇಸಾಯಿ ಬಗ್ಗೆ ಗೌರವ ಹಾಗೂ ಪ್ರೀತಿಯ ಜೊತೆಗೆ ಸೂತಕ ಅಂತ ತಿಳಿದು ಕೊಳ್ಳಲಿಲ್ಲ, ಎನ್ನುವಲ್ಲಿ ಸಂಸ್ಕೃತಿಗೆ ವಿರೋಧ್ಧವಾದ ತೀರ್ಮಾಣಗಳನ್ನು ತೆಗೆದುಕೊಂಡ ದೇಸಾಯಿ ಮೇಲಿನ ಗೌರವ ಹಾಗೂ ಗಣತೆ ಕೊನೆಗೆ ಕಡಿಮೆಯಾಗಿರುವುದು. ಮತ್ತು ಈ ದೇಸಾಯಿ ನಿಧನರಾದರು ಸಹ ನಮ್ಮ ಊರಿನ ವಿಠ್ಠಲನ ತೇರಿನ ಉತ್ಸವ ನಿಲ್ಲುವುದಿಲ್ಲ ಎನ್ನುವಲ್ಲಿ ಸ್ವಾಂವಜ್ಜನ ನಿಲುವು ಈ ಸಂದರ್ಭದಲ್ಲಿ ಉತ್ತಮವಾಗಿ ಮೂಡಿಬಂದಿದೆ.

ಪತ್ರಕರ್ತ ಪಾಟೀಲ ತನ್ನ ಕುಟುಂಬ ಸಮೇತ ಧರಮನಟ್ಟಿಯ ತೇರಿನ ಉತ್ಸವಕ್ಕೆ ಬಂದು ಸ್ವಾಂವಜ್ಜನ ಅತಿಥ್ಯ ಸ್ವೀಕರಿಸುವುದು. ಅಲ್ಲಿ ಆಧುನಿಕ ದ್ಯಾವಪ್ಪನ ಬಗ್ಗೆ ಹೊಸ ಕಥೆಯು ತೆರೆದುಕೊಳ್ಳುತ್ತದೆ. ದ್ಯಾವಪ್ಪ ತನ್ನ ಹಳೆಯ ಪರಂಪರೆಗೆ ವಿರುದ್ಧವಾದ ತೀರ್ಮಾನಗಳನ್ನು ತೆಗೆದುಕೊಂಡಿರುವುದನ್ನು,

ಸ್ವಾಂವಜ್ಜ ಈ ರೀತಿಯಲ್ಲಿ ವ್ಯಕ್ತಪಡಿಸುತ್ತಾನೆ. "ಲಾಗಾಯ್ತಿನಿಂದ ನಡೆದು ಬಂದಿದ್ದು ಏನೆಂದರೆ ಸೂರ್ಯಾಸ್ತದ ವ್ಯಾಳ್ಯಾಕಂದರ ಸೇವಾಕರ್ತನು ಪಡುವನ ದಿಕ್ಕಿನ ಅಗಸಿಗೆ... ಕಲ್ಲೊಳ್ಳಿಂದ ನಡಿಕೊಂಡು ಬರುವುದು... ಅಂವ ಬಂದಕೂಡಲೇ ಅವನ ಪಾದಕ್ಕೆ ಎರಡ ಕೊಡಾ ನೀರು ಹಣಿಸಿ ಅವನನ್ನು ಊದಿಸಿಗೋತ ಬಾರಿಸಿಗೋತ ಮೆರವಣಿಗಿಯೊಳಗ ವಿಠ್ಠಲ ದೇವರ ಗುಡಿಗೆ ಕರಕೊಂಡು ಬರುವುದು. ಅಂವ ದೇವರ ದರ್ಶನಾ ಮಾಡಿಕೊಂಡು ತನ್ನ ಬಿಡದಿಗೆ ಹೋಗಿ ಹೆಂಡತಿ ಮಕ್ಕಳನ್ನು ಸೇರುವುದು... ಆದರೆ ಈ ದ್ಯಾವಪ್ಪ ಪಟ್ಟಕ್ಕೆ ಬಂದ ಮ್ಯಾಲೆ ಇತ್ತೀಚಿನ ನಾಕಾರು ವರ್ಷಗಳಿಂದ, ಇವನನ್ನು ತೆಂಕಣದಿಕ್ಕಿನ ಅಗಸಿಯಲ್ಲಿ ಎದುರುಗೊಳ್ಳಬೇಕಾಗೇದ... ಯಾಕಪಾ ಅಂತಂದಿರೆ - ಇಂವ ಉದಗಟ್ಟಾಗ ನಾಕದಿನಾ ಮುಕ್ಕಾಮು ಮಾಡಿ ಅಲ್ಲಿಂದ ಘಟಘಟೀ ಹತಿಗೊಂಡು - ತಿಗಡಿ - ಮಸಗುಪ್ಪಿಗಳ ಮ್ಯಾಲೆ ಹಾಯ್ದು - ಧರಮನಟ್ಟಿಯ ದಕ್ಷಿಣ ದಿಕ್ಕಿಗೆ ಮೂಡುತಾನೆ...!"(ತೇರು, ಪು.೯೩)

ಸ್ವಾಂವಜ್ಜನ ಈ ಮಾತುಗಳು ಆಧುನಿಕ ದ್ಯಾವಪ್ಪ ತನ್ನ ಹಳೆಯ ಪರಂಪರೆಗೆ ವಿರುದ್ಧವಾಗಿ, ಪಡುವಣ ದಿಕ್ಕಿಗೆ ಬರದೇ, ತೆಂಕಣದಿಕ್ಕಿನಲ್ಲಿ ಬರುವುದು. ಹಾಗೂ ತನ್ನ ಪೂರ್ವಜರು ನಡಕೊಂಡೆ ಯಾತ್ರಾ ಸೇವೆಗೆ ಬಂದರೆ, ಈತ ಘಟಘಟೀ ಮೇಲೆ ಬರುವುದು, ಕಲ್ಲೋಳ್ಳಿಯ ಊರಿನ ಮೇಲೆ ಬರದೆ, ಮಸಗುಪ್ಪಿ ಊರಿನ ಮೇಲೆ ಬರುವುದು, ಧವಸಧಾನ್ಯಗಳ ಬದಲು, ಹಣವನ್ನು ತೆಗೆದುಕೊಳ್ಳವುದು, ಇವೆಲ್ಲ ಆಧುನಿಕ ದ್ಯಾವಪ್ಪನ ಅಧುನಿಕ ವೈಶಿಷ್ಟ್ಯಗಳಾಗಿವೆ. ಇದರ ಜೊತೆಗೆ ತಮ್ಮ ಹಿರಿಯರು ಹದಿನೈದು ದಿನದ ಸೇವಾಯಾತ್ರೆಯನ್ನು ಮಾಡುತ್ತಿದ್ದರೆ, ಈತ ಯಾವುದೇ ಸೇವಾ ಯಾತ್ರೆಯನ್ನು ಮಾಡದೆ ನೇರವಾಗಿ ಧರಮನಟ್ಟಿಗೆ ಬರುತ್ತಿದ್ದ. ಈ ಸಂದರ್ಭವನ್ನು ಗಮನಿಸಿದರೆ ಆಧುನಿಕ ದ್ಯಾವಪ್ಪ ಸಂಪೂರ್ಣವಾಗಿ ಬದಲಾಗಿದ್ದಾನೆ. ಆತನಿಗೆ ಭಕ್ತಿಯ ಬದಲು ಪರಂಪರೆಯಿಂದ ಮುಕ್ತಿಯನ್ನು ಹೊಂದುವುದಾಗಿದೆ. ಅದಕ್ಕಾಗಿಯೇ ಆತ ಈ ರೀತಿಯಲ್ಲಿ ಪರಂಪರೆಯ ವಿರುದ್ಧ ಕಾರ್ಯವನ್ನು ಕೈಗೊಳ್ಳುತ್ತಿರುವುದು ಕಂಡುಬರುತ್ತದೆ.

ಷಷ್ಠೀ ದಿನ ಆಧುನಿಕ ದ್ಯಾವಪ್ಪ ಧರಮನಟ್ಟಿಗೆ ತೇರಿನ ಸೇವೆಗೆ ಬರಬೇಕಿತ್ತು. ಆದರೆ ರಾತ್ರಿ ಹತ್ತು ಘಂಟೆಯಾದರು ಆತ ಬರದೆಯಿರುವಾಗ, ಅಲ್ಲಿಯ ಹರೆಯದ ಹುಡುಗರು ಆಧುನಿಕ ದ್ಯಾವಪ್ಪನ ಕುರಿತು ಕಟ್ಟುಕಥೆ ಕಟ್ಟುವುದರಲ್ಲಿ ತಲ್ಲಿನರಾಗುವುದು, ಲಗಮವ್ವ ಎಂಬ ಹುಡುಗಿಯ ಜೊತೆ ದ್ಯಾವಪ್ಪನ ಸಂಬಂಧ ಕಲ್ಪಿಸುವುದು, ತುಂಬಾ ಸೊಗಸಾಗಿ ಮೂಡಿ ಬಂದಿದೆ. ಹಾಗೂ ಆಧುನಿಕ ದ್ಯಾವಪ್ಪನ ಪೂರ್ವಜರ ಸೇವೆಯನ್ನು ನೆನಪಿಸುವ ಕಥೆಯನ್ನು ಅಲ್ಲಿ ನೆರದಿದ್ದ ಹಿರಿಯರು ನೆನಪಿಸುವುದು. ಹೀಗೆ ಕಾದಂಬರಿಯಲ್ಲಿ ಕತೆಯೂ ಉಪಕತೆ, ಅಡ್ಡಕತೆಯಾಗಿ ರೂಪಾಂತರಗೊಳ್ಳುತ್ತದೆ. ಆ ದಿನ ಆಧುನಿಕ ದ್ಯಾವಪ್ಪ ಬರದೇ ಇರುವುದರಿಂದ, "ಊರಮಂದಿಗೆಲ್ಲ ದಿಗಿಲು ಆದಂಗಾತು... ದೀಡನೂರು ವರ್ಷಗಳಿಂದ ಒಂದು ವರ್ಷ ಸಹಿತ ತಪ್ಪಧಂಗ ನಡಕೊಂಡು ಬಂದ ರಿವಾಜು... ಇಡೀ ಊರು ಅಗದೀ ಹೆಮ್ಮೆಯಿಂದ

ನೆನಪು ಇಟಗೊಂಡು ಚಾಚೂ ತಪ್ಪದೆ ನಡೆಸಿಕೊಂಡು ಬಂದ ಪದ್ಧತಿ...ಹಿಂತಾದ್ದು ಬರೋಬ್ಬರೀ ದೀಡನೂರನೇ ವರ್ಷದ ಈ ತೇರಿಗೇ ಅಡ್ಡನಾದ ಹೊಡೆಯೂದಂದರ...! ಊರಾಗಿನ ಮಂದಿ ಎಲ್ಲಾ 'ಏ... ಹೆಂಗೋಪಾ ಇನ್ನ...? ಅಂತ ಒಬ್ಬರನ್ನು ಒಬ್ಬರು ಕೇಳಿಕೋತ ತಮ ತಮ್ಮ ಗಾರಿಯನ್ನು ಹಂಚಿಗೋಲಿಕ್ಕತ್ತಿದ್ದರೆ ಒಂದಷ್ಟು ಮಂದಿ 'ಏ-ಆತು ಬಿಡು ಧರಮನಟ್ಟೀ ಪುಣ್ಣೀ ಮುಗದಂಗಾತು...! ಯಾವಾಗ ಅಂವ ಷಟ್ಟಿಯ ದಿವಸ ಬರಲಿಲ್ಲಂತಂದರs ಇನs ಅಂವ ಬರತಾನನ್ನೂ ಖಾತ್ರಿ ಇಲ್ಲ..."(ತೇರು, ಪು.೯೭) ಎನ್ನುವುದು ಆಧುನಿಕ ದ್ಯಾವಪ್ಪ ಬರದಿರುವ ಸೂಚನೆಯನ್ನು ಕೊಡುತ್ತವೆ. ಅಷ್ಟೇ ಅಲ್ಲದೆ ಗೋಗಿಕೊಳ್ಳದ ಸ್ವಾಮಿಗಳ ಮಾತು ಸಂದರ್ಭಕ್ಕೆ ತಕ್ಕಂತೆ ಉಪಯೋಗಕ್ಕೆ ಬರುತ್ತದೆ. ಪುರಾಣ ದ್ಯಾವಪ್ಪನಿಗೆ ಆ ಸ್ವಾಮಿಗಳು ಒಂದುನೂರು ದೀಡನೂರು ವರ್ಷ ಆಗುವಷ್ಟರಲ್ಲಿ ವರ್ಷಾ ವರ್ಷಾ ಎಂಟಹತ್ತ ಹನಿರಕ್ತ ಅಂದರ ಪೂರ್ತಿ ಒಬ್ಬ ಮನುಷ್ಯನ ರಕ್ತದಷ್ಟೇ ಆಗುತ್ತದೆ. ಎನ್ನುವ ಭವಿಷ್ಯವಾಗಿ ಈ ಸಂದರ್ಭಕ್ಕೆ ನಿಜವಾದಂತಾಗುತ್ತದೆ.

ಆಧುನಿಕ ದ್ಯಾವಪ್ಪ ತೇರಿನ ಉತ್ಸವಕ್ಕೆ ಬರದಿರುವುದರಿಂದ ಆತನ ಹುಡುಕಾಟಕ್ಕಾಗಿ ನೆರೆಹೊರೆಯ ಊರುಗಳಿಗೆ ಹೋದರು, ದ್ಯಾವಪ್ಪನ ಸುಳಿವು ಸಿಗುವುದಿಲ್ಲ. ಉದಗಟ್ಟಿಗೆ ಹೋಗಿ ವಿಚಾರ ಮಾಡಿದರೆ ಅಲ್ಲಿಯ ಉದ್ದವ್ವನ ಪೂಜೇರಿ ಆಧುನಿಕ ದ್ಯಾವಪ್ಪ, ತನ್ನ ಉದ್ದವ್ವನನ್ನು ಕುರಿತು ಆಡಿದ ಮಾತುಗಳನ್ನು ಈ ಹುಡುಗರಿಗೆ ಹೇಳುತ್ತಾನೆ. "ಖರೇ ಹೇಳು... ವರ್ಷದ ಹನ್ನೆರಡೂ ತಿಂಗಳು ಒಟ್ಟs ತಪ್ಪಸದs ಹರ್‍ಯಾಗs ಮತ್ತು ಸಂಜೀ ಮುಂದ ಇಲ್ಲಿ ಈ ಉದ್ದವ್ವನ್ನ ಪೂಜೀ ಮಾಡತೀಲಾs ಇದೂ... ಬರೇಕಲ್ಲ ಹೌದಲ್ಲೋ?... ನಿನಗೆ ಎಂದರೇ ಈ ಕಲ್ಲು ಉದ್ದವ್ವ ಅಂತ ಅನಿಸೇತೇನು ಹೇಳು" (ತೇರು, ಪು.೯೯) ಎಂದು ಆಧುನಿಕ ದ್ಯಾವಪ್ಪ ಪೂಜಾರಿಯನ್ನು ಕೇಳಿದ. ಈ ಪ್ರಶ್ನೆಗೆ ಪೂಜಾರಿಗೆ ಸಿಟ್ಟು ಬಂದು ತಮ್ಮ ದೈವವನ್ನೇ ಪ್ರಶ್ನಿಸುತ್ತಾನಲ್ಲಾ ಎಂದು "ಹೋಗೋ ಮಕಳೀ ಹೋಗು... ಉದ್ದವ್ವ ಯಾಕ ಕಲ್ಲ ಆಗತಾಲು... ನಿನ್ನ ಕಣ್ಣ ಕುಡ್ಡ ಆಗಿರಬೇಕು!..."(ತೇರು, ಪು.೯೯) ಎಂದು ಪೂಜಾರಿ ಉತ್ತರಿಸುವಲ್ಲಿ, ಈ ಆಧುನಿಕ ದ್ಯಾವಪ್ಪ ಉದಗಟ್ಟಿಯಲ್ಲಿಯೂ ಸಹ ಆ ದೇವರ ಎಂಬುದು ಬರೀ ಒಂದು ಭ್ರಮೆ, ಅದು ನಿಜವಾದುದಲ್ಲ. ಅದು ಬರೀ ಕಲ್ಲು, ಈ ಕಲ್ಲಿಗೆ ನಡೆದು ಕೊಳ್ಳುವುದರಲ್ಲಿ ಏನೂ ಅರ್ಥವಿಲ್ಲ ಎನ್ನುವ ವಿಚಾರ ವ್ಯಕ್ತವಾಗುತ್ತದೆ. ಮತ್ತು ಧರಮನಟ್ಟಿಯ ವಿಠ್ಠಲ ದೇವರ ತೇರಿನ ಸೇವೆಗೆ ನಡೆದುಕೊಳ್ಳುವಲ್ಲಿ, ಯಾವುದೇ ಹುರುಳಿಲ್ಲ. ಅದರ ಬದಲಾಗಿ ಆ ಸೇವೆಯನ್ನು ಬಿಟ್ಟು. ಬೇರೆ ರೀತಿಯಾದ ಸಾಮಾಜಿಕ ಸೇವೆ ಮಾಡಿದರೆ ಉತ್ತಮ ಎನ್ನುವ ನಿಲುವು ಆಧುನಿಕ ದ್ಯಾವಪ್ಪನಲ್ಲಿ ಕಂಡುಬರುತ್ತದೆ.

ಆ ಹುಡುಗಳು ಉದ್ದವನ ಪೂಜಾರಿಯ ಮಾತುಕೇಳಿ, ಆಧುನಿಕ ದ್ಯಾವಪ್ಪ ಡೊಂಬರ ಬಾಳವ್ವನ ಮನೆಯಲ್ಲಿ ಇರಬಹುದೆಂದು ಅಲ್ಲಿ ಬಂದು ವಿಚಾರಿಸುತ್ತಾರೆ. ಆತ ನಿನ್ನೆ ಇಲ್ಲಿಂದ ಹೋಗಿದ್ದಾನೆ ಎಂದು

ಬಾಳವ್ವನ ಅತ್ತೆ ಹೇಳುತ್ತಾಳೆ. ಹಾಗೂ ಆಧುನಿಕ ದ್ಯಾವಪ್ಪನ ಕುರಿತು. ದ್ಯಾವಪ್ಪ ಒಳ್ಳೆಯ ಹುಡುಗ, ಬಹಳಷ್ಟು ನಮಗೆ ಸಹಾಯ ಮಾಡಿದ್ದಾನೆ. ನನ್ನ ಸೊಸೆಯನ್ನು ಓಕಳಿ ಆಡಲಿಕ್ಕೆ ಕಳುಹಿಸಬೇಡ, ಬೇಕಾದರೆ ನಾನೇ ಅವಳನ್ನ ಮದುವೆಯಾಗುತ್ತೇನೆ. ಹೀಗೆ ಆಧುನಿಕ ದ್ಯಾವಪ್ಪನ ಒಳ್ಳೆಯತನದ ಗುಣವನ್ನು ಡೊಂಬರ ಬಾಳವ್ವನ ಅತ್ತೆ ಹೇಳುವಲ್ಲಿ, ಮುಂದೆ ಮದುವೆಗೆ ಆ ಉದ್ದವ್ವ ಒಪ್ಪಿಗೆ ಕೊಡದೇ ಇರುವುದರಿಂದ ಅವರ ಮದುವೆ ಆಗದೇ ಇರುವುದು. ಆದರೆ ಯಾವತ್ತು ಸಹ ತನ್ನ ಸೊಸೆ ಮೇಲೆ ಆತನ ಕಾಮದ ಕಣ್ಣು ಬೀಳದಿರುವುದು. ಹೀಗೆ ಒಂದೊಂದಾಗಿ ಆತನ ಕುರಿತು ಹೇಳುವ ಮಾತುಗಳು. ಆಧುನಿಕ ದ್ಯಾವಪ್ಪ ಒಬ್ಬ ವಿಚಾರವಂತ ಹಾಗೂ ವೈಚಾರಿಕತೆಯ ಗುಣವನ್ನು ಹೊಂದಿದ ವ್ಯಕ್ತಿಯಾಗಿ ಈ ಸಂದರ್ಭದಲ್ಲಿ ಕಂಡುಬಂದಿದ್ದಾನೆ. ಅಷ್ಟೇ ಅಲ್ಲದೇ ಗಂಡಸತ್ತ ರಂಡೆ ಮುಂಡೆಯಾಗಿ ಊರೂರ ಓಕಳಿಗೆ ಹೋಗಿ ಅಲ್ಲಿಯ ಹಿರಿಯರ ಕಾಮುಕ ಕಣ್ಣಿಗೆ ಒಳಗಾಗುವ ಬಾಳವ್ವನಿಗೆ ಒಂದು ಹೊಸ ಜೀವನ ಕೊಡಲು ಬಂದ ಆಧುನಿಕ ದ್ಯಾವಪ್ಪ ಒಬ್ಬ ಸಮಾಜ ಸುಧಾರಕನಂತೆ ಕಂಡಿದ್ದಾನೆ. ಕೊನೆಗೂ ಸಹ ಧರಮನಟ್ಟಿಯ ಆ ಹುಡುಗರಿಗೆ ಆಧುನಿಕ ದ್ಯಾವಪ್ಪ ಸಿಗದಿರುವುದರಿಂದ ನಿರಾಶೆಯಾಗಿ ಮರಳಿ ಬರುತ್ತಾರೆ.

ಕಾದಂಬರಿಯ ಐದನೆಯ ಭಾಗದಲ್ಲಿ ಸಪ್ತಮಿ ದಿನ ಪ್ರತಿವರ್ಷ ತೇರಿನ ಉತ್ಸವಕ್ಕೆ ನಣದಿ ಗೊಂದಲಿಗರ ಮೇಳದವರು ಬರುತ್ತಿದ್ದರು. ಆದರೆ ಅವರು ಸಹ ಬರದಿರುವುದು. ಜೊತೆಗೆ ಧರಮನಟ್ಟಿಯ ವಿಠ್ಠಲ ದೇವರ ದೇವಸ್ಥಾನ ಇಡೀ ಸುತ್ತಮುತ್ತಲಿನ ಗ್ರಾಮಗಳಲ್ಲಿ ಪ್ರಸಿದ್ಧಿಯನ್ನು ಪಡೆದ ದೇವಸ್ಥಾನ. ಕಳವು ಆಗಿರುವ ಘಟನೆ ಸಂಭವಿಸುತ್ತದೆ. ಪೂಜಾರಿ ಛತ್ರೇರ ಮಾರೋತಿ ಓಡೋಡಿ ಬಂದು ಸ್ಟಾಂವಜ್ಜನಿಗೆ "ಸ್ವಾಮಿಯ ಕಿರೀಟ ಒಯ್ದಾರು... ರುಕುಮಾಯೀದೂ ಕಿರೀಟ ಇಲ್ಲ... ವಿಠ್ಠಲನ ಕಣಬಟ್ಟ ಕಿತಿಗೊಂಡಾರ ನೋಡೋ ಯಜ್ಜಾs... ಭುಜಕೀರ್ತಿ ಹೋಗ್ಯಾವು... ಸ್ವಾಮಿಯ ಎದಿಯ ಕವಚಾ ಉಡದಾರಾ ಹೋಗ್ಯಾವು... ಬಂಗಾರದ್ದೂ! ತಾಯೀದೂ ಬಂಗಾರದ ಕಣ್ಣಬಟ್ಟ ಕಿತಗೊಂಡಾರು, ಕಠೀಸರಾ ಇಲ್ಲಾ ಗುಳದಾಳಿ ಇಲ್ಲಾ!... ಬಂಗಾರದ ನಡಪಟ್ಟೆನೂ ಹೋಗೇತಿ... ಸ್ವಾಮೀದೂ ಮತ್ತು ತಾಯೀದೂ ಇಬ್ಬರದೂ ಬಂಗಾರದ ಪಾದಾ ಕಿತಿಗೊಂಡ ಹೋಗ್ಯಾರು... ಘಾತ ಆತೋಯಚ್ಚಾ..."(ತೇರು, ಪು.೧೧೧) ಎಂದು ವಿಠ್ಠಲನ ದೇವಸ್ಥಾನ ಕಳವು ಆದದ್ದನ್ನು ಹಾಗೂ ದೇವರ ಆಭರಣಗಳನ್ನು ಕಳ್ಳರು ಕದ್ದದ್ದನ್ನು ಸ್ಟಾಂವಜ್ಜನಿಗೆ ವಿವರಿಸುತ್ತಾರೆ. ಇದು ಧರಮನಟ್ಟಿಯ ಪ್ರತಿಷ್ಠಿತ ದೇವಸ್ಥಾನದ ಕಳವು ಇಡೀ ಪರಂಪರೆಯಿಂದ ಬೆಳೆದು ಬಂದು, ನೂರಾ ಐವತ್ತು ವರ್ಷಗಳಿಂದ ಭಕ್ತಿ, ಭಾವ ದ್ಯೂತಕವಾಗಿ ಕಂಡ ದೇವಸ್ಥಾನ ಕೊನೆಗೆ ತನ್ನ ಅಸ್ತಿತ್ವವನ್ನು ಕಳೆದುಕೊಂಡ ಪರಿ ಇಲ್ಲಿ ಕಳವು ಆಗುವ ಮೂಲಕ ಕಳೆದುಕೊಂಡಿದೆ.

ವಿಠ್ಠಲ ದೇವಸ್ಥಾನ ಕಳವು ಆದದ್ದನ್ನು ನೋಡಲು ಊರಿನ ಜನರು ಬರುತ್ತಿರುವಾಗ ಅಲ್ಲಿಯ ಹರೆಯದ ಹುಡುಗರು ಚಂದ್ರ್ಯಾ ಮತ್ತು ಈರ ಹೆಂಗಸರನ್ನು ಆ ದೇವಸ್ಥಾನದ ಮೆಟ್ಟಿಲುಗಳ ಕೆಳಗೆ

ನಿಲ್ಲಲೂ ಹೇಳಿ "ನೋಡ್ರೇವಾs... ಯಾರು ಪಾವಡರ್ ಹಂಚಿಗೊಂಡೀರ್‍ಯೋ ಅವರು ಯಾರು ಒಳಗ ಹೋಗಂಗಿಲ್ಲ... ಪೋಲೀಸ ನಾಯಿಗೋಳು ಬರೂವ ಅದಾವೂ... ಗುಡ್ಯಾಗ ಪಾವಡರ್ ವಾಸನಿ ಇಡಗಿತಂದರ... ಅವಕ್ಕ ತುಡುಗರನ ಹಿಡಿಯೂದು ಕಠಿಣ ಆಕ್ಕೊಂಡ ಕುಂಡರತ್ತೈತಿ... ಆಮ್ಯಾಲ ಪಂಚೇತಿ ಆಕ್ಕತಿ ನೋಡ್ರಿ... ಆ ನಾಯಿಗೋಳು ತುಡುಗರನ ಹಿಡಿಯೂದು ಬಿಟ್ಟು ನಿಮ್ಮನ್ನ ಹಿಡೀತಾವು...!"(ತೇರು, ಪು.೧೧೩) ಎಂದು ಅಲ್ಲಿ ನೆರೆದಿದ್ದ ಹೆಂಗಸರನ್ನು ಹೆದರಿಸಲು ಈ ಹುಡುಗರು ಹೂಡುವ ತಂತ್ರ ನವಿರಾದ ಹಾಸ್ಯವನ್ನು ಉಕ್ಕಿಸುತ್ತದೆ. ಇದರಿಂದ ಹುಡುಗಿಯರಿಗೆ ಒಳಗಡೆ ಪ್ರವೇಶ ಮಾಡಿಸಬಾರದೆಂಬ ಆಸೆ ಆ ಹುಡುಗರಿಗೆ ಇರುವುದರಿಂದ ಹುಡುಗಿಯರು ದೇವಸ್ಥಾನದ ಹೊರಗಡೆ ನಿಂತು ನೋಡುತ್ತಿರುವುದು. ಅದೇ ಸಮಯದಕ್ಕೆ ಲಗಮವ್ವ ದೇವಸ್ಥಾನದ ಒಳಗೆ ಹೋಗಲು ಪ್ರಯತ್ನಿಸಿದಾಗ ಆಕೆಯನ್ನು ತಡೆದು ನಿಲ್ಲಿಸಿ, ಮತ್ತೇ ಪವಡರದ ಮಾತನ್ನು ಹೇಳಿದಾಗ ಆಕೆ ನಿರಾಕರಿಸಿ ಒಳಗೆ ಹೋಗಲು ಪ್ರಯತ್ನಿಸಿದಾಗ ಲಗಮವ್ವನನ್ನು ಕುರಿತು, ರಕ್ತ ತಿಲಕದ ದ್ಯಾವಪ್ಪ ಈ ದೇವಸ್ಥಾನವನ್ನು ಕಳವು ಮಾಡಿದ್ದಾನೆ. ಅದಕ್ಕೆ ನೀನು ಒಳಗೆ ಹೋಗುವ ಹಾಗಿಲ್ಲ ಎನ್ನುವ ಮಾತನ್ನು ಕೇಳಿದ ಲಗಮವ್ವನಿಗೆ ಸಿಟ್ಟು ಬಂದು ಬೈದಿದ್ದರಿಂದ ಅಲ್ಲಿಯೇ ಜಗಳ ಪ್ರಾರಂಭವಾಗುತ್ತದೆ.

ಇಲ್ಲಿಯ ಜಗಳದ ಹಿಂದೆ ಆ ಊರಿನ ಹುಡುಗರ ಕಾರಭಾರಿತನ ಹಾಗೂ ಜನರಿಗೆ ಭಯ ಹುಟ್ಟಿಸುವುದಾಗಿದೆ. ಹೀಗೆ ಈ ಜಗಳ ಇಡೀ ಊರಿಗೆ ವ್ಯಾಪಿಸಿ ವಿಠ್ಠಲನ ದೇವಸ್ಥಾನದಲ್ಲಿ ಕಳವು ಆದದ್ದನ್ನು ಮರೆತು, ಇದನ್ನೇ ನೋಡುವಂತೆ ಕಂಡುಬಂದಿದೆ. ಸ್ವಾಂವಜ್ಜ ಊರಿನ ಹಿರಿಯರಲ್ಲಿ ಒಬ್ಬ. ಆದರೆ ಆತನಿಗೆ ಜೈನ ಜಾತಿಯ ಕಳಂಕವನ್ನು ಹೊರಿಸುವುದು ಕಂಡುಬರುವುದು. ಮೇಲವರ್ಗದ ಜಾತಿಯ ಜನ ಬೇರೆ ಜಾತಿಯ ಜನರನ್ನು ತಮ್ಮ ಧಾರ್ಮಿಕ ಕಾರ್ಯದಲ್ಲಿ ಹೇಗೆ ಪ್ರತ್ಯೇಕವಾಗಿ ಕಾಣುತ್ತಾರೆಂಬುದಕ್ಕೆ ನಿದರ್ಶನವಾಗಿದೆ. "ನಮ್ಮ ಊರಾಗ ನಮ್ಮದೊಂದs ಜಯ್ಯಾರ ಮನಿತನರೀ... ಜಯ್ಯಾರ ಆದರೂ ನಾವು ವಿಠ್ಠಲ ದೇವರಿಗೆ ನಡಕೋತೀವರಿ... ಯಾವ್ಯಾವ ನಾಡಿನ್ಯಾಗ ಯಾವ್ಯಾವ ದೇವರ ಇರತಾವೋ ಅದನ್ನs ನಾವು ನಂಬಲೇಬೇಕಲ್ಲರೀ...?(ತೇರು, ಪು.೦೪) ಬೇರೆ ಜಾತಿಗೆ ಸೇರಿದ ಒಬ್ಬ ವ್ಯಕ್ತಿ ತನ್ನ ಜಾತಿಯಲ್ಲಿಯೇ ಉಳಿದರೆ ಆತನನ್ನು ಸಮಾಜ ತುಚ್ಛವಾಗಿ ನೋಡತ್ತಿತ್ತು. ಆದರೆ ಅದನ್ನು ಅಲ್ಲಗಳೆದು ಜನರ ಹಿತಕ್ಕಾಗಿ, ಹಳ್ಳಿಯ ಜನರ ನಂಬಿಕೆಗಾಗಿ ತನ್ನನ್ನು ತೊಡಗಿಸಿಕೊಳ್ಳಲು, ತಾನು ಸಹ ಹಳ್ಳಿಯ ಪರಿಸರದ ಒಂದು ಭಾಗವಾಗಿ ವಿಠ್ಠಲ ದೇವರ ಭಕ್ತನಾಗಿ ಸ್ವಾಂವಜ್ಜ ಕಂಡುಬರುತ್ತಾನೆ. ಆದರೆ ಊರಿನ ಕೆಲವು ಮರಿ ರಾಜಕೀಯ ಪುಡಾರಿಗಳು ಸ್ವಾಂವಜ್ಜನನ್ನು ಕುರಿತು ಆಡುವ ಮಾತುಗಳು ಸ್ವಾಂವಜ್ಜನ ಮನಸ್ಸಿನ ಮೇಲೆ ಗಾಢ ಪ್ರಭಾವ ಬೀರುತ್ತವೆ. ಅಷ್ಟರಲ್ಲೇ ಪೋಲೀಸ್ ವಾಹನ ಬಂದು ಕಳ್ಳತನದ ವಿಚಾರಣೆಯನ್ನು ಕೈಗೆತ್ತಿಕೊಳ್ಳುತ್ತಾರೆ.

"ಮೂಲತಃ ಯಥಾಸ್ಥಿತಿವಾದಿಯೂ ಸಾಮರಸ್ಯವಾದಿಯೂ ಆದ ಸ್ವಾಂವಜ್ಜ ಅದೇ ಕಾರಣಕ್ಕೆ ದ್ಯಾವಪ್ಪನನ್ನು ಸರಾಸಗಟಾಗಿ ತಿರಸ್ಕರಿಸುತ್ತಾನೆ. ಸ್ಥಾಪಿತ ಹಿತಾಶಕ್ತಿಗಳು ದ್ಯಾವಪ್ಪನ ಕುರಿತಾಗಿ ಹರಡಿದ

ಕೆಟ್ಟ ಕಿಂವದಂತಿಗಳನ್ನೂ ಅವನು ಪ್ರಶ್ನಾತೀತವಾಗಿ ನಂಬುತ್ತಾನೆ. ಇಂಥ ಕನ್ಸರ್ವೇಟಿವ್ ಸ್ವಾಂವಜ್ಜನ ಎದುರಾಗಿ ನಮಗೆ ಧರಮನಟ್ಟಿಯಲ್ಲಿ ಕಾಣಿಸುವುದು ಪ್ರಜಾಪ್ರಭುತ್ವದ ಹೆಸರು ಹೇಳಿಕೊಂಡು ಜಗಳಕ್ಕೆ ಬರುವ ಕೆಲವು ಪುಂಡಪೋಕರಿ ಯುವಕರು, ಹೀಗೆ ಒಂದೆಡೆ ಕನ್ಸರ್ವೇಟಿಸಂ, ಇನ್ನೊಂದೆಡೆ ಪ್ರಜಾಪ್ರಭುತ್ವದ ಅಣಕ, ಮಗದೊಂದು ಕಡೆ ಪೋಲೀಸ್ ದೌರ್ಜನ್ಯ ಇಂಥ ಅನಾಯ್ಕೆಯಿಂದ ತುಂಬಿದ ಊರನ್ನು ಬಿಟ್ಟು ದ್ಯಾವಪ್ಪ ಹೋದುದರಲ್ಲಿ ಆಶ್ಚರ್ಯವೇನು ಎಂದು ಕೇಳಬಹುದು;"[೭] ಹೀಗೆ ಈ ಐದನೆಯ ಭಾಗದಲ್ಲಿ ಆಧುನಿಕ ದ್ಯಾವಪ್ಪ ತೇರಿನ ಸೇವೆಗೆ ಬರದಿರುವುದು. ಪ್ರತಿವರ್ಷದ ಪದ್ಧತಿಯಂತೆ ಗೊಂದಲಿಗರ ಮೇಳವು ಸಹ ಉತ್ಸವಕ್ಕೆ ಬರದಿರುವುದು, ವಿಠ್ಠಲ ದೇವರ ದೇವಸ್ಥಾನ ಕಳವು, ಇವುಗಳ ಜೊತೆಗೆ ಧರಮನಟ್ಟಿಯ ಧಾರ್ಮಿಕ ವಿಧಿವಿಧಾನಗಳು ನೆರವೇರದಿರುವುದು. ಜಗಳ, ಪೋಲೀಸರು ಕಳ್ಳರ ವಿಚಾರಣೆಯಲ್ಲಿ ತೊಡಗುವುದು. ಈ ಎಲ್ಲ ಅಂಶಗಳನ್ನು ಗಮನಿಸಿದರೆ, ಪರಂಪರೆಯಿಂದ ಬಂದ ಪದ್ಧತಿ, ಪತನಮುಖಿಯಾಗುತ್ತ ಸಾಗುವುದನ್ನು ಈ ಭಾಗ ಸ್ಪಷ್ಟವಾಗಿ ಚಿತ್ರಿಸುತ್ತದೆ.

ಕಾದಂಬರಿಯ ಆರನೆಯ ಭಾಗದಲ್ಲಿ ಧರಮನಟ್ಟಿಯ ಒಂದು ನೂರಾ ಐವತ್ತನೇ ವರ್ಷದ ರಥೋತ್ಸವ ಈ ರೀತಿಯಾಗಿ ನಿಂತಾಗ ಪಾಟೀಲ ಪತ್ರಕರ್ತ ಸ್ವಾಂವಜ್ಜನಿಗೆ ಸಮಾಧಾನದ ಮಾತುಗಳನ್ನು ಹೇಳಿ ಬೆಂಗಳೂರಿಗೆ ಹೋಗಲು ನಿರ್ಧರಿಸಿ ಸ್ವಾಂವಜ್ಜನ ಮನಿಗೆ ಹೋದರೆ ಅಲ್ಲಿ ದುಃಖದಿಂದ ಕೂಡಿದ್ದ ಅವನ ಮನೆ. ಅದನ್ನು ನೋಡಿ ಪಾಟೀಲ ಪತ್ರಕರ್ತ ಸ್ವಾಂವಜ್ಜನನ್ನು ಕುರಿತು ಏನು ಮಾತನಾಡದೆ ಸುಮ್ಮನಾದ. ಆದರೆ ಸ್ವಾಂವಜ್ಜ ತನ್ನ ದುಃಖದ ಭಾರದಿಂದ ನೀವು ಊರಿಗೆ ಹೋಗುವುದಿದ್ದರೆ ಹೊರಡಿ ಎಂದು ಹೇಳಿ ಸುಮ್ಮನಾಗಿಬಿಟ್ಟ. ನಂತರ ಪಾಟೀಲ ಪಾತ್ರಕರ್ತ ಅಲ್ಲಿಂದ ತನ್ನ ಭಾರತುಂಬಿದ ನಿರುತ್ಸಾಹದಲ್ಲಿ ಬೆಂಗಳೂರಿಗೆ ಮರಳಿದ.

ವಿಠ್ಠಲದೇವರ ದೇವಸ್ಥಾನದ ಕಳುವಿನ ಸುಳಿವುಗಳ ಬಗ್ಗೆ ಪೋಲೀಸರು ಮೊದಲು ಆಧುನಿಕ ದ್ಯಾವಪ್ಪ ಬಗ್ಗೆ ಸಂಶಯಪಟ್ಟಿದ್ದರು. ಆದರೆ ಕ್ರಮೇಣ ಆತ ಕಳ್ಳನಲ್ಲವೆಂಬುದನ್ನು ಅರಿತು ಆ ವಿಚಾರಣೆಯನ್ನು ಬಿಟ್ಟದ್ದು, ಹೀಗೆ ಈ ಘಟನೆ ನಡೆದ ಆರುವರ್ಷಕ್ಕೆ ಪಾಟೀಲ ಪತ್ರಕರ್ತ ತನ್ನ ವೃತ್ತಿಯಿಂದ ನಿವೃತ್ತಿ ಹೊಂದಿ ಆತ ತನ್ನ ಊರಿಗೆ ಬಂದು. ನಂತರ ಸ್ವಾಂವಜ್ಜನ ನೆನಪಾಗಿ ಧರಮನಟ್ಟಿಗೆ ಬಂದು, ಸ್ವಾಂವಜ್ಜನನ್ನು ಕಾಣಲು ಹಾತೊರೆದಾಗ ಸ್ವಾಂವಜ್ಜನ ಹೆಂಡತಿ ಪದ್ಮವ್ವ "ಇನ್ನೆಲ್ಲಿ ನಿಮ್ಮ ಸ್ವಾಂವಜ್ಜ ಸವಕಾರರೀ... ಅಂವ ಘಾತಾಮಾಡಿ ಹೋಗಿ ಬಿಟ್ಟರೀ"(ತೇರು, ಪು.೧೨೭) ಎಂದು ಹೇಳಿದ ಕೂಡಲೇ ಪತ್ರಕರ್ತನಿಗೆ ಆಘಾತವಾದಂತಾಯಿತು. ಪದ್ಮವ್ವ ವಿವರಿಸಲಿಕ್ಕೆ ಪ್ರಾರಂಭಿಸಿದಳು. "ವಿಠ್ಠಲ ದೇವರೂ ವಿಠ್ಠಲ ದೇವರೂ ಅಂತ ಬಾಳ ಮೋಹಾ ಇಟಗೊಂಡಿದ್ದ ನಮ್ಮ ಸಾವಕಾರಾಃ....ನಾನು ಹಗಲೆಲ್ಲಾ... ಇದೆಲ್ಲೀ ವಿಠ್ಠಲ ವಿಠ್ಠಲ ಅಂತ ಮಿಥ್ಯಾ ದೇವರನ ಕಟಿಗೊಂಡೀ... ಅಂತ ನಗಿಚಾಟಿಕೀ ಮಾಡಿದರ ನನ್ನ ಮ್ಯಾಗಃ ಸಿಟ್ಟಿಗೇಳಾಂವ... ಕಡೀಕ ಅದಃ ವಿಠ್ಠಲ ದೇವರ ದಸಿಂದನಃ ಎದೀ ಒಡಿಕೊಂಡು

ಜೀವಾ ಕಳಕೊಂಡಾ!..."(ತೇರು, ಪು.೧೨೭) ಕಳ್ಳತನದ ಪ್ರಕರಣಕ್ಕೆ ಪೋಲೀಸರು ಸ್ವಾಂವಜ್ಜನನ್ನು ಠಾಣೆಯಲ್ಲಿ ಎರಡು ದಿವಸ ವಿಚಾರಿಸಿ ಮನೆಗೆ ಕಳುಹಿಸಿದಾಗ ಸ್ವಾಂವಜ್ಜನ ಮನಸ್ಸಿನ ಮೇಲೆ ಬಹಳಷ್ಟು ಪರಿಣಾಮ ಬೀರಿತು. ಮುಂದೆ ಅರ್ಧಾಗವಾಯು ರೋಗಕ್ಕೆ ತುತ್ತಾಗಿ, ಸಲ್ಲೇಖನ ವೃತ್ತ ಹಿಡಿದು. ನೀರನ್ನು ತ್ಯೇಜಿಸಿದ ನಂತರ ಪದ್ಮವ್ವಾ ಸ್ವಾಂವಜ್ಜನನ್ನು ಕುರಿತು. "ವಿಥ್ಯಾತ್ವಕ್ಕs ಮತ್ತ ಸಲ್ಲೇಖನಕ್ಕs ಅಧೆಂಗ ಹೊಂದಾಣಿಕೆ ಆಗತೈತೀ...? ನಿಂದು ಎಡಬಿಡಂಗೀ ರೀತಿ ಇದಾ..."(ತೇರು, ಪು.೧೨೭) ಎಂದು ಪದ್ಮವ್ವಾ ಕೇಳುವ ಪ್ರಶ್ನೆಗಳಿಗೆ ಸ್ವಾಂವಜ್ಜನಿಂದ ಬರಿ ಮುಗಳು ನಗೀ ಮಾತ್ರ ಉತ್ತರವಾಗುತ್ತದೆ. ಕೊನೆಗೆ ನೀರು ಬಿಟ್ಟು ಎರಡನೇ ದಿನಕ್ಕೆ ತನ್ನ ಪ್ರಾಣಾವನ್ನು ಸ್ವಾಂವಜ್ಜ ಬಿಟ್ಟ.

ಸ್ವಾಂವಜ್ಜನಿಗೆ ತನ್ನ ಜಾತಿ, ಧರ್ಮ, ದೇವರು, ಇವೆಲ್ಲಕ್ಕಿಂತ ಹಳ್ಳಿಯ ಸಂಪ್ರದಾಯ ಮುಖ್ಯವಾಗಿದ್ದು, ಜೈನನಾದರು ಸಹ ವಿಠ್ಠಲ ದೇವರ ಭಕ್ತ. ಹೀಗಿರುವಾಗ ಆತನಿಗೆ ಗ್ರಾಮೀಣ ಜನತೆಯ ಜೊತೆಗೆ ಮಧುರವಾದ ಬಾಂಧವ್ಯವೇ ಬೇಕಾಗಿತ್ತು. ಅದು ಕೊನೆಗೆ ಇಡೇರದೆ ಹೋದಾಗ ತನ್ನ ಪ್ರಾಣವನ್ನು ಬಿಡುವ ತಿರ್ಮಾನವನ್ನು ತೆಗೆದುಕೊಳ್ಳುವಲ್ಲಿ ಸ್ವಾಂವಜ್ಜನ ವ್ಯಕ್ತಿತ್ವದ ಮೇರು ನೋಟ ಗೋಚರವಾಗಿದೆ. ಆದರೆ ಧರಮನಟ್ಟಿಯ ಜನ ಆತನನ್ನು ಯಾವತ್ತಿಗೂ ಸಹ ಸರಿಯಾಗಿ ಅರ್ಥಮಾಡಿಕೊಳ್ಳದೇ ಬರೀ ಸಂಶಯದ ನೋಟದಿಂದಲೇ ನೋಡುವುದರಿಂದ ಆತನ ವಿವೇಕ ಪ್ರಜ್ಞೆಗೆ ಬೆಲೆಯಿಲ್ಲದಂತಾಗಿ ಹೋಗಿದೆ.

ಪತ್ರಕರ್ತ ಪಾಟೀಲ ಧರಮನಟ್ಟಿಯಿಂದ ಬಂದ ಮೇಲೆ ಕಳ್ಳಿಗುದ್ದಿಗೆ ಹೋಗಿ ಅಲ್ಲಿ ದ್ಯಾನಪ್ಪನನ್ನು ಕುರಿತು ಆ ಊರ ಗೌಡನಲ್ಲಿ ವಿಚಾರಿಸಿದರೆ ಆ ಗೌಡ ದ್ಯಾವಪ್ಪನನ್ನು ಕುರಿತು ಕಟ್ಟುಕಥೆಯನ್ನು ಹೇಳಲು ಪ್ರಾರಂಭಿಸಿದ. "ಪರಶುರಾಮನ ಗತೆ ತನ್ನ ಅವ್ವನ್ನs ಖೂನೀ ಮಾಡಾಕ ಹೋದಂಥಾ ಮಗಾ ಇಂವಾ..."(ತೇರು, ಪು.೧೩೩) ಎಂದು ಇಲ್ಲಸಲ್ಲದ ಕಥೆಯನ್ನು ಹೇಳುತ್ತಿದ್ದರೆ, ಪತ್ರಕರ್ತ ಅಲ್ಲಿ ಹೆಚ್ಚು ಹೊತ್ತು ನಿಲ್ಲದೆ ಹೊರಟು ಬಿಟ್ಟ. ಒಂದು ವಾರದ ನಂತರ ಉದಗಟ್ಟಿಯ ಡೊಂಬರ ಬಾಳಪ್ಪನ ಮನೆಗೆ ಹೋಗಿ ದ್ಯಾವಪ್ಪನನ್ನು ಕುರಿತು ವಿಚಾರಿಸಲಿಕ್ಕೆ ಪ್ರಾರಂಭಿಸಿದರೆ. ದ್ಯಾವಪ್ಪ ಆರುವರ್ಷದ ಹಿಂದೆ ಊರು ಬಿಟ್ಟು ಹೋದವನು. ಮಹಾರಾಷ್ಟ್ರದಲ್ಲಿ ನೆಲೆಸಿರುವುದು. ಅಲ್ಲಿಂದ ಪತ್ರದ ಮುಖಾಂತರ ಸುಖ ದುಃಖವನ್ನು ವಿಚಾರಿಸುತ್ತಿರುವುದು. ಹಾಗೂ ಬಾಳವ್ವನ ಉಪಜೀವನಕ್ಕಾಗಿ ತಿಂಗಳು, ತಿಂಗಳು, ಅಂಚೆ ಮೂಲಕ ಹಣ ಕಳುಹಿಸುತ್ತಿರುವುದನ್ನು ಬಾಳವ್ವ ಹೇಳಿದಳು. ಆದರೆ ಆತನ ವಿಳಾಸವು ಸರಿಯಾಗಿ ಇವಳ ಹತ್ತಿರ ಇಲ್ಲದಿರುವುದು ಮತ್ತು ಆತ ಕಳುಹಿಸಿದ ಅಂಚೆ ಇಲಾಖೆಯ ವಿಳಾಸವನ್ನು ಪತ್ತೆಮಾಡಿ, ಆತನಿಗೊಂದು ಪತ್ರ ಬರೆಸಿದ್ದು, ಹೀಗೆ ಆತನ ಕುರಿತು ಬಾಳವ್ವ ಹೇಳಿ ಆರು ತಿಂಗಳ ಹಿಂದೆ ಆತನಿಂದ ಬಂದ ಒಂದು ಪತ್ರವನ್ನು ಪತ್ರಕರ್ತ ಪಾಟೀಲನಿಗೆ ಕೊಟ್ಟಳು.

ಆ ಪತ್ರದಲ್ಲಿ "ನಾನು ಇಲ್ಲಿನ ಒಂದು ಆಶ್ರಮದಲ್ಲಿದ್ದೇನೆ. ನನ್ನ ಬದುಕು ಸಮಾಜಕ್ಕೆ ಉಪಯೋಗವಾಗುವ ನಾಲ್ಕು ಕೆಲಸಗಳಿಗೆ ಬಳಕೆಯಾಗಲಿ ಎಂದು ನಿರ್ಧರಿಸಿಯೇ ಅಲ್ಲಿಗೆ ಬಂದಿದ್ದೇನೆ. ಇಲ್ಲಿ ಬಾಬಾ ಆಮ್ಟೆ ಅಂತನ್ನುವ ಒಬ್ಬ ಸೇವಾಕರ್ತರಿದ್ದಾರೆ. ಅವರ ಮಾರ್ಗದರ್ಶನದಲ್ಲಿ ನನ್ನಿಂದ ಆಗುವ ಕೆಲಸಗಳನ್ನು ಮಾಡುತ್ತಿದೇನೆ."(ತೇರು, ಪು.೧೩೮) ಈ ಮಾತು ಆಧುನಿಕ ದ್ಯಾವಪ್ಪನ ಸಾಮಾಜಿಕ ಕಳಕಳಿ ಹಾಗೂ ಬಡವರ ಏಳ್ಗೆಗಾಗಿ ಶ್ರಮಿಸುವ ನಿರ್ಧಾರವನ್ನು ವ್ಯಕ್ತಪಡಿಸಿವೆ ಇಲ್ಲದ ದೇವರಿಗಾಗಿ ವ್ಯರ್ಥವಾಗಿ ಜೀವನವನ್ನು ಸಾಗಿಸುವ ಬದಲು ನನ್ನ ಬದುಕು ಸಮಾಜಕ್ಕೆ ಉಪಯೋಗವಾಗಲಿ ಎನ್ನುವ ನಿಲುವು ಆಧುನಿಕ ದ್ಯಾವಪ್ಪನದು. ತನ್ನ ಮಾನಸಿಕ ಪತ್ನಿಗೆ, ಮಕ್ಕಳಿಗೆ ಹೇಳುವ ಮಾತುಗಳ ಬಹಳಷ್ಟು ಬೆಲೆಯುಳ್ಳ ಮಾತಾಗಿ ಕಂಡುಬಂದಿವೆ. ಈ ಪತ್ರದ ಮಾತುಗಳ ಮೂಲಕವೇ ಕಾದಂಬರಿಯ ಸಂದೇಶವು ಬಿಚ್ಚಿಕೊಳ್ಳಲಿಕ್ಕೆ ಪ್ರಾರಂಭಿಸಿದೆ.

ತನ್ನ ಪರಂಪರೆಯನ್ನು ಅಂಧಕಾರದಲ್ಲಿ ಮುಳುಗಿಸಿದ್ದ ರಕ್ತ ತಿಲಕದ ಸೇವೆ ಹಾಗೂ ದೇವರ ವಿರುದ್ಧ ಆಧುನಿಕ ದ್ಯಾವಪ್ಪ ಬಂಡಾಯದ ಮಾತನ್ನೆ ಮುಂದುವರೆಸುತ್ತಾನೆ. "ಇನ್ನು ದೇವರು ಅನ್ನುವುದು ಇದ್ದರೆ ಅದರ ವಿರುದ್ಧ ನನ್ನ ಬಂಡಾಯವಿದೆ. ಅದರ ವಿರುದ್ಧನನ್ನ ಧಿಕ್ಕಾರವಿದೆ. ಅದರ ವಿರುದ್ಧ ನನ್ನ ಸತ್ಯಾಗ್ರಹವಿದೆ"(ತೇರು, ಪು.೧೩೯) ಎಂದು ಆ ಪತ್ರದಲ್ಲಿ ತನ್ನ ಸ್ಪಷ್ಟವಾದ ಬಂಡಾಯದ ನಿರ್ಧಾರವನ್ನು ವ್ಯಕ್ತಪಡಿಸಿದ್ದಾನೆ. ಜೊತೆಗೆ ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡಿ ಅವರನ್ನು ಸದ್ಗುಣಿಗಳನ್ನಾಗಿ ಮಾಡು ಎನ್ನುವಲ್ಲಿ ಆತನ ಒಳ್ಳೆಯತನ ವ್ಯಕ್ತವಾಗಿದೆ. ಈ "ಬಂಡಾಯದ ವ್ರತದಲ್ಲಿ ಮನಸ್ಸು ಚಂಚಲವಾಗಿಸುವುದನ್ನು ದೂರ ಇಡೋಣ"(ತೇರು, ಪು.೧೩೦) ಎಂದು ಸಂಸಾರದ ಸುಖದಲ್ಲಿ ಸಿಕ್ಕಿ ತಾನು ಕಂಡ ಆದರ್ಶ ಸಮಾಜದ ಕನಸ್ಸು ಯಾವುದೇ ಕಾರಣಕ್ಕೂ ವಿಫಲವಾಗಬಾರದೆಂಬ ಆಶೆ ಆಧುನಿಕ ದ್ಯಾವಪ್ಪನದಾಗಿದೆ. ಈ ಪತ್ರವನ್ನು ಓದಿದ ಪತ್ರಕರ್ತ ಪಾಟೀಲ, ಬಾಳವ್ವನ ಕಣ್ಣಲ್ಲಿಯ ನೀರನ್ನು ನೋಡಿ ಸಮಾಧಾನದ ಮಾತನ್ನು ಹೇಳುತ್ತಾನೆ. ಹೀಗೆ ರಾಘುವೇಂದ್ರ ಪಾಟೀಲರ 'ತೇರ' ಕಾದಂಬರಿಯು "ಒಂದು ಐತಿಹ್ಯದ ನಿರಂಚನೆ"ಯಾಗಿ ತನ್ನ ಒಡಲಲ್ಲಿ ಹಲವಾರು ಅಂಶಗಳನ್ನು ಇಟ್ಟುಕೊಂಡಿದೆ.

ರಾಜಕೀಯ

ರಾಜಕೀಯ ಎಂಬುದು ಅನಾದಿಕಾಲದಿಂದಲೂ ಮಾನವನಲ್ಲಿ ಬೇರೂರಿದೆ. ಹಿಂದಿನ ಕಾಲದಲ್ಲಿ ರಾಜನು ತನ್ನ ಪ್ರದೇಶವನ್ನು ಆಳುವುದರೊಂದಿಗೆ ತನ್ನ ಅಧಿಕಾರವನ್ನು ಆ ಪ್ರದೇಶದ ಜನರ ಮೇಲೆ ಚಲಾಯಿಸುತ್ತಿದ್ದನು. ಹೀಗೆ ಅಧಿಕಾರ ನಡೆಸಲು ಅವರು ತಮ್ಮ ಕೈಕೆಳಗೆ ಸಾವಂತರು, ದೇಸಾಯಿಗಳು ಹಾಗೂ ನಾಡಗೌಡ, ಗೌಡ, ಕುಲಕರ್ಣಿ ಮುಂತಾದವರ ಮೂಲಕ ಆ ಪ್ರದೇಶವನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುತ್ತಿದ್ದರು. ಮತ್ತು ದೇವಸ್ಥಾನಗಳನ್ನು ನಿರ್ಮಿಸಿ ಜನರ ವಿಶ್ವಾಸವನ್ನು ಪಡೆಯುತ್ತಿದ್ದರು.

ಈ ಹಿನ್ನಲೆಯಲ್ಲಿ 'ತೇರು' ಕೃತಿಯಲ್ಲಿ ಧರಮನಟ್ಟಿಯಲ್ಲಿ ದೇಸಗತಿಯನ್ನು ಸ್ಥಾಪಿಸಿದ ರಂಗೋಪಟವರ್ಧನ ದೇಸಾಯಿ, ತನ್ನ ದೇಶಗತಿಯನ್ನು ಉಳಿಸಲು ಹಾಗೂ ಅದರ ಮೂಲಕ ಆಡಳಿತವನ್ನು ನಡೆಸಲು ಆತ ಮಾಡಿದ ಕಾರ್ಯ, ದೇವಾಲಯವನ್ನು ನಿರ್ಮಿಸಿದ್ದು ಹಾಗೂ ಅದಕ್ಕೊಂದು ಸುಂದರವಾದ ಕೆತ್ತನೆಯನ್ನು ಒಳಗೊಂಡ ತೇರನ್ನು ಕಟ್ಟಿಸಿದ್ದು. ಹೀಗೆ "ಧರ್ಮ ಮತ್ತು ರಾಜಕೀಯಗಳು ಅನಾದಿಕಾಲದಿಂದಲೂ ಪರಸ್ಪರ ಒಂದನ್ನೊಂದು ಪೋಷಿಸಿಕೊಂಡು ಬಂದಂತಹವು. ಹೊಸದಾಗಿ ಅಧಿಕಾರಕ್ಕೆ ಬಂದ ವ್ಯವಸ್ಥೆ ತನ್ನ ನಿರಂತರತೆಯನ್ನು ಕಾಯ್ದುಕೊಳ್ಳಲು ಆಶ್ರಯಿಸುವುದು ಧರ್ಮವನ್ನು ಆದ್ದರಿಂದ ಅವರು ಧರ್ಮದ ಮೂರ್ತರೂಪ ಸಂಕೇತಗಳಾದ ಗುಡಿ, ಗೋಪುರಗಳನ್ನು ನಿರ್ಮಿಸುವುದರ ಮೂಲಕ ಜನರನ್ನು ಕೇಂದ್ರೀಕರಿಸಿ ತಮ್ಮ ಅಧಿಕಾರವನ್ನು ಭದ್ರಪಡಿಸಿಕೊಳ್ಳುತ್ತಾರೆ"[೯] ಧರಮನಟ್ಟಿ ದೇಸಾಯಿ ಆ ವ್ಯವಸ್ಥೆಯ ಒಂದು ಅಂಗವಾಗಿ ವಿಠ್ಠಲದೇವಾಲಯ, ತೇರನ್ನು ಕಟ್ಟಿಸಿ, ಅದರ ಮೂಲಕ ತನ್ನ ಅಧಿಕಾರವನ್ನು ಚಲಾಯಿಸುತ್ತಾನೆ.

ದೇಸಾಯಿ ಕಟ್ಟಿಸಿದ ತೇರು ಮುನ್ನಡೆಯದೆ ನಿಂತಾಗ ದೇಸಾಯಿಗೆ ಹಿನ್ನಡೆಯಾಗುತ್ತದೆ. ಆತ ಕಾರಭಾರಿ ಜೊತೆ ಸೇರಿ ತನ್ನ ಅಧಿಕಾರಕ್ಕೆ ಚ್ಯುತಿಬರದ ಹಾಗೇ ಆ ತೇರಿಗೆ ಕಾಟುಕರ ಜಾತಿಯ ದ್ಯಾವಪ್ಪನ ಮಗ ಚಂದ್ರನನ್ನು ಬಲಿಕೊಡುವ ವ್ಯವಸ್ಥೆ ಮಾಡಿಸುವುದರ ಮೂಲಕ ತಮ್ಮ ಅಧಿಕಾರದ ದಬ್ಬಾಳಿಕೆಯ ದರ್ಬಾರವನ್ನು ಚಲಾಯಿಸುತ್ತಾರೆ. ಈ ಕಾರ್ಯಕ್ಕಾಗಿ ದ್ಯಾವಪ್ಪನಿಗೆ ಎಂಟೆಕರೆ ಭೂಮಿಯ ಆಸೆಯನ್ನು ತೋರಿಸಿ ತಮ್ಮ ಕಾರ್ಯವನ್ನು ಸ್ಥಾಪಿಸುತ್ತಾರೆ. ಈ ದಬ್ಬಾಳಿಕೆ ಹಾಗೂ ಈ ಶೋಷಣೆಯನ್ನು ಇಷ್ಟಕ್ಕೆ ನಿಲ್ಲಿಸದೆ, ದ್ಯಾವಪ್ಪನ ವಂಶಸ್ಥರಿಗೆ ಪ್ರತಿವರ್ಷ ತೇರಿಗೆ ತಲೆ ಜಜ್ಜಿಕೊಂಡು ಹೋಗಬೇಕೆಂದು ನಿಯಮ ಹಾಕುತ್ತಾರೆ. ಮುಂದೆ ಅದೇ ನಿಯಮದಂತೆ ಪ್ರತಿವರ್ಷವು ದ್ಯಾಮಪ್ಪನ ವಂಶಸ್ಥರು ಈ ಸೇವೆಯನ್ನು ಮುಂದುವರಿಸುತ್ತದೆ. ಹೀಗೆ ಅಧಿಕಾರ ಶಾಹಿವರ್ಗವು ತನ್ನ ರಾಜಕೀಯ ಹಿತಾಶಕ್ತಿಗಾಗಿ ಕಾರಭಾರಿ, ಡಂಣಾಯಕ, ಮೂಲಕ ಅನೇಕ ರೀತಿಯಿಂದ ಶೋಷಣೆ, ದಬ್ಬಾಳಿಕೆಯನ್ನು ನೀಡುವುದರಿಂದ ತಮ್ಮ ರಾಜಕೀಯವನ್ನು ಬಲಿಷ್ಮಗೊಳಿಸುವ ಅಂಶ ಕಾದಂಬರಿಯಲ್ಲಿ ಒಳಗೊಂಡಿದೆ.

ಧಾರ್ಮಿಕ ಜೀವನ

ಮಾನವನ ಜೀವನವು ಪ್ರತಿ ನಿತ್ಯ ಒಂದಿಲ್ಲೊಂದು ಧಾರ್ಮಿಕ ವಿಧಿ-ವಿಧಾನಗಳನ್ನು ತನ್ನ ಆತ್ಮ ವಿಕಾಸದ ಸಾಕ್ಷಾತ್ಕ್ಕಾರಕ್ಕಾಗಿ ಧಾರ್ಮಿಕ ನಂಬಿಕೆಗೆ ಜೋತು ಬಿದ್ದು ಅವುಗಳನ್ನು ಅಳವಡಿಸಿಕೊಂಡಿದ್ದಾನೆ. ತನ್ನ ಹಲವು ಕಾಯಕಗಳ ಮಧ್ಯ ಈ ಧಾರ್ಮಿಕ ಜೀವನದಲ್ಲಿ ಕೆಲವೊಂದಿಷ್ಟು ಸಮಯವನ್ನು ಮೀಸಲಿಟ್ಟಿದ್ದಾನೆ. "ಮಾನವನ ವಿಕಾಸದ ಚರಿತ್ರೆಯಲ್ಲಿ ಧರ್ಮದ ಸೇರ್ಪಡೆಯು ಆತನ ಲೌಕಿಕ, ಅಲೌಕಿಕ ಆಚರಣೆ, ಚಿಂತನೆ, ವರ್ತನೆಗಳನ್ನು ರೂಪಿಸಿ ನಿಯಂತ್ರಿಸಿ, ಸಂಸ್ಕಾರ ನೀಡಿದ್ದರಿಂದ ಅದೊಂದು ಬಹುಮುಖ್ಯ ಘಟ್ಟವೆನಿಸುತ್ತದೆ."[೧೦] 'ತೇರು' ಕೃತಿಯಲ್ಲಿ ಪ್ರಮುಖವಾಗಿ ಧಾರ್ಮಿಕ ನಂಬಿಕೆಯಲ್ಲಿ

ಧರಮನಟ್ಟಿಯ ವಿಠ್ಠಲ ದೇವರ ದೇವಸ್ಥಾನ ಮತ್ತು ತೇರು. ಇವುಗಳಿಗೆ ಅಲ್ಲಿಯ ಜನರು ನಡೆದುಕೊಳ್ಳುವ ರೀತಿ ತುಂಬಾ ಸ್ವಾರಸ್ಯಕರವಾಗಿದೆ. ಪುರಾಣ ದ್ಯಾನಪ್ಪನ ಧಾರ್ಮಿಕ ಜೀವನವು ಇಡೀ ಕಾದಂಬರಿಯಲ್ಲಿ ಬಹಳಷ್ಟು ಮಹತ್ವದಾಗಿದೆ. ದ್ಯಾವಪ್ಪ ತನ್ನ ಧಾರ್ಮಿಕ ಜೀವನದಲ್ಲಿ ಇಡೀ ತನ್ನ ಕುಟುಂಬವನ್ನು ಭಾಗಿಯನ್ನಾಗಿಸುವಲ್ಲಿ ಹಾಗೂ ವಂಶಪರಂಪರೆಯಾಗಿ ಮುಂದೆ ಸಾಗುವಲ್ಲಿ ಆತನ ನಂತರ ಪಟ್ಟಕ್ಕೆ ಬಂದವರು ಸಹ ಮೂಲ ದ್ಯಾವಪ್ಪ ಹಾಕಿಕೊಟ್ಟ ಮಾರ್ಗದಲ್ಲಿಯೇ ನಡೆಯುವುದು. ಕೊನೆಗೆ ಆಧುನಿಕ ದ್ಯಾವಪ್ಪನ ಕಾಲದಲ್ಲಿಯೂ ಸಹ ಧಾರ್ಮಿಕ ಜೀವನದ ವಿವಿಧ ಮುಖಗಳು ಗೋಚರಿಸುತ್ತವೆ. ದೇವಸ್ಥಾನದಲ್ಲಿ ನಡೆಯುವ ಪೂಜೆ, ದೇವರಿಗೆ ನಡೆದುಕೊಳ್ಳುವ ರೀತಿ ಇವುಗಳ ಜೊತೆಗೆ ಮೂಲ ದ್ಯಾವಪ್ಪನ ಜಪ, ತಪ, ರಕ್ತ ಶುದ್ಧೀಕರಣ, ನಿಷ್ಠೆ, ಪುಣ್ಯಕ್ಷೇತ್ರಗಳ ಯಾತ್ರೆ ಹಾಗೂ ಸ್ವಾಂವಜ್ಞನ ವಿಠ್ಠಲ ದೇವರ ಮೇಲಿನ ಭಕ್ತಿ ಮುಂತಾದವುಗಳು ಧಾರ್ಮಿಕ ಜೀವನದ ಅನೇಕ ಅಂಶಗಳಾಗಿವೆ.

ಧಾರ್ಮಿಕ ನಂಬಿಕೆ ಮತ್ತು ಸೇವಾವಿಧಾನಗಳು

ಧಾರ್ಮಿಕ ಜೀವನವು ಮಾನವನಲ್ಲಿ ಅನಾದಿಕಾಲದಿಂದಲೂ ನಡೆದುಕೊಂಡು ಬಂದಿದೆ. ಅವುಗಳಲ್ಲಿ ನಂಬಿಕೆಗಳು, ಸೇವಾ ವಿಧಾನಗಳನ್ನು ರೂಢಿಸಿಕೊಂಡಿದ್ದಾನೆ. ಈ ಮನೋಧರ್ಮವನ್ನು ಮಾನವನು ತನ್ನ ಕುಟುಂಬದ ಸಲುವಾಗಿ, ತನ್ನ ವಂಶೋದ್ಧಾರದ ಸಲುವಾಗಿ, ತನ್ನ ನಾಡಿನ ಹಿತದ ಸಲುವಾಗಿ, ಹೀಗೆ ಅನೇಕ ಕಾರ್ಯಕ್ಕೆ ಬಳಸುತ್ತಾ ಬಂದಿದ್ದಾನೆ. 'ತೇರು' ಕೃತಿಯಲ್ಲಿ ಪುರಾಣ ದ್ಯಾವಪ್ಪ ಈ ಧಾರ್ಮಿಕ ನಂಬಿಕೆ, ಸೇವಾವಿಧಾನಗಳು ನಡೆಸಿಕೊಂಡು ಬಂದ ಸಂದರ್ಭ ವಿಶಿಷ್ಟವಾಗಿದೆ.

ಪುರಾಣ ದ್ಯಾವಪ್ಪ ತನ್ನಷ್ಟಕ್ಕೆ ತಾನೇ ದೇವರ ಮೇಲಿನ ಧಾರ್ಮಿಕ ನಂಬಿಕೆಯಿಂದ ಹಾಗೂ ಭಕ್ತಿಗಾಗಿ ಹಲವು ಸೇವಾವಿಧಾನಗಳನ್ನು ಅಳವಡಿಸಿಕೊಂಡು, ರಕ್ತಶುದ್ಧಿಗಾಗಿ ಕಷ್ಟುಪಟ್ಟು ಹಲವು ತೀರ್ಥಕ್ಷೇತ್ರವನ್ನು ಸಂಚಾರ ಮಾಡಿ ತೆರಿಗೆ ರಕ್ತ ತಿಲಕ ಸೇವೆಯನ್ನು ಮಾಡುತ್ತಿದ್ದನು. ದೇವರನ್ನು ಕುರಿತು ದ್ಯಾವಪ್ಪ "ನೋಡುಸ್ವಾಮಿಯ ರಥದ ರಗತ ತಿಲಕದ ಸೇವಾ ಅಂದರ ಅಸನರೀ ಅಲ್ಲ.. ದೈವ ಹಿಂತಾ ಸೇವಾ ಮಾಡೂದನ್ನ ನಮ್ಮ ಮನಿತನಕ್ಕ ಕೊಟ್ಟೈತಿ..."(ತೇರು, ಪು.೫೩) ದೇವರ ಸೇವೆಯನ್ನು ದ್ಯಾವಪ್ಪನ ಮನಿತನದವರು ಎಷ್ಟು ನಿಷ್ಠೆಯಿಂದ ಮಾಡುತ್ತಾರೆಂಬುದಕ್ಕೆ ಈ ಮಾತು ನಿದರ್ಶನವಾಗಿದೆ. ಮುಂದೆ ಶಿರಸಂಗಿ ಕಾಳವ್ವನನ್ನು ನೋಡಿ ದ್ಯಾವಪ್ಪಾ "ಆಹಾ... ಥೇಟ್ ಎದ್ದು ಬರುವ ಹಂಗ ಕುಂತಂಗ ಕಾಣಿಸಿದಳು ತಾಯಿ...!"(ತೇರು, ಪು.೫೭) ಮುಂದೆ ಗೂಡಚಿ ವೀರಭದ್ರನ ದೇವಸ್ಥಾನದಲ್ಲಿ ಗುಗ್ಗಳ ಉತ್ಸವ ನಡೆಯುತ್ತಿರುವಾಗ ಅಲ್ಲಿಯ ಪರವಂತನ್ನು ನೋಡಿ ಅಲ್ಲಮಪ್ರಭುವಿಗೆ ಹೋಲಿಸುವುದು "ನಾ ಸುದ್ದ ಆಗಿ ದೇವರ ಸೇವಾ ಮಾಡಿದರ ಸ್ವಾಮಿ ನನಗs ನನ್ನ ಮಕ್ಕಳಿಗೇ ಎಲ್ಲಾ ಸುಕಾ ಸೌಭಾಗ್ಯ ಕೊಡತಾನು... ನಮ್ಮ ಮನಿತನಕ್ಕೆs ಪಾಡ ಆಗತೈತಿ...'(ತೇರು, ಪು.೫೩) ಎನ್ನುವಲ್ಲಿ ಪುರಾಣ ದ್ಯಾವಪ್ಪ

ತನ್ನ ಮಕ್ಕಳಿಗೆ, ಹಾಗೂ ಕುಟುಂಬಕ್ಕೆ ಒಳ್ಳೆಯದಾಗಲಿ ಎನ್ನುವ ದೃಷ್ಟಿಯಿಂದ ಇಂತಹ ಸೇವೆಯನ್ನು ಮಾಡುತ್ತಿದ್ದೇನೆ ಎಂದು ಹೇಳುವಲ್ಲಿ ಹಾಗೂ ಈ ಸೇವಾ ವಿಧಾನವನ್ನು ಆತ ತನ್ನ ಮುಂದಿನ ಪರಂಪರೆಯ ನಡೆಸಿಕೊಂಡು ಹೋಗಬೇಕೆನ್ನುವ ಮಾತು ತನ್ನ ಹೆಂಡತಿ ಲಸಮವ್ವನಿಗೆ ಹೇಳುವುದು ಬಹಳಷ್ಟು ಉತ್ಕೃಷ್ಟವಾಗಿ ಮೂಡಿಬಂದಿದೆ. "ಇದನ್ನ ನೀ ಒಟ್ಟs ಮರೀಬ್ಯಾಡ... ಮುಂದ ನಿನ್ನ ಮಕ್ಕಳೂ-ಮಮ್ಮಕ್ಕಳೂ ಸ್ವಾಮಿಯ ಸೇವಾದ ಪಟ್ಟಕ್ಕೆ ಬಂದಾಗ ಅವರು ಇದs ಪರಕಾರನs ನಡಕೊಂಡ ಹೋಗಬೇಕು..."(ತೇರು, ಪು.೬೧) ಎನ್ನುವಲ್ಲಿ ದ್ಯಾವಪ್ಪನ ಸೇವಾ ವಿಧಗಳು ಗೋಚರಿಸುತ್ತವೆ.

ಹೀಗೆ ಪುರಾಣ ದ್ಯಾವಪ್ಪ ಧಾರ್ಮಿಕ ನಂಬಿಕೆಗಾಗಿ, ಸೇವೆಗಾಗಿ ಹಲವಾರು ಕಟ್ಟು ಪಾಡುಗಳನ್ನು ವಿಧಿಸಿಕೊಂಡು ತೇರಿನ ರಕ್ತ ತಿಲಕದ ಸೇವೆ ಮಾಡುವ ಪ್ರಸಂಗ, ಇತನ ಮಗ ಕುಬೇರಪ್ಪ ಕಾವಿ ಬಟ್ಟೆ ಧರಿಸಿ ತನ್ನ ತಂದೆ ಹಾಕಿಕೊಟ್ಟ ಮಾರ್ಗದಲ್ಲಿ ನಡಿಯುವ ವ್ಯಕ್ತಿ. ಆಧುನಿಕ ದ್ಯಾವಪ್ಪನು ಸಹ ಮೊದಲೆರಡು ವರ್ಷ ಇದೇ ರೀತಿ ಮುಂದುವರಿಸಿದೆ. ಇವುಗಳ ಜೊತೆಗೆ ಸ್ವಾಂವಜ್ಜನ ಸಲ್ಲೇಖನ ವೃತ ಮುಂತಾದವುಗಳ ಧಾರ್ಮಿಕ ನಂಬಿಕೆ ಮತ್ತು ಸೇವಾವಿಧಾನಗಳು ಭಕ್ತಿಯ ಪರಕಾಷ್ಠತೆಯಲ್ಲಿ ಮೂಡಿಬಂದಿವೆ.

ಧಾರ್ಮಿಕ ಕಾರ್ಯದ ಮಹತ್ವದ ದಿನಗಳ ಉಲ್ಲೇಖ

ಜನಪದರು ತಮ್ಮ ಧಾರ್ಮಿಕ ಕಾರ್ಯವನ್ನು ಪಂಚಾಗದ ದಿನಗಳಿಗೆ ಅನುಸರಿಸಿಯೇ ಆಚರಿಸುತ್ತಾರೆ. ಇವು ಕಾದಂಬರಿಯಲ್ಲಿ ಹಾಸುಹೊಕ್ಕಾಗಿವೆ. ಕಾದಂಬರಿಯಲ್ಲಿ ಧಾರ್ಮಿಕ ಕಾರ್ಯದ ಹಲವಾರು ಮಹತ್ವದ ದಿನಗಳು ಉಲ್ಲೇಖಗೊಂಡಿವೆ. ಅವುಗಳನ್ನು ಗ್ರಾಮೀಣ ಭಾಗದ ಜನರು ತಮ್ಮ ನಿತ್ಯ ಜೀವನದಲ್ಲಿ ಆಧುನಿಕ ದಿನಾಂಕವನ್ನು ಅನುಸರಿಸಿದೆ, ಪಂಚಾಗದ ತಿಥಿ, ವಾರ, ನಕ್ಷತ್ರ ಹೀಗೆ ಹಬ್ಬ, ಜಾತ್ರೆ ಮುಂತಾದದವುಗಳನ್ನು ಹಾಗೂ ಉತ್ಸವಗಳನ್ನು ನಡೆಸುತ್ತಾರೆ. ಈ ಮಹತ್ವದ ದಿನಗಳು ಈ ಕೆಳಗಿನಂತೆ ಕಂಡುಬಂದಿವೆ.

ರಾಮನವಮಿ ದಿನ (ತೇರು, ಪು.೦೫)
ಚೈತ್ರ ಶುಕ್ಲದ ತ್ರಯೋದಶಿಯ ದಿನ (ತೇರು, ಪು.೧೧)
ತದಗೀ ಮೂರ್ತ(ತೇರು, ಪು.೧೧)
ಚೌತಿ(ತೇರು, ಪು.೨೩)
ಅಷ್ಟಮೀ (ತೇರು, ಪು.೫೦)
ಶಿವರಾತ್ರಿ (ತೇರು, ಪು.೫೩)
ಹೋಳಿ ಹುಣ್ಣಿಮೆ (ತೇರು, ಪು.೦೫೫೩)
ಚೈತ್ರದ ಷಷ್ಠಿಯ ದಿನ (ತೇರು, ಪು.೦೫೬೦)

ಇವು ಪುರಾಣ ದ್ಯಾವಪ್ಪನ ಕಾಲದಲ್ಲಿ ವ್ಯಕ್ತವಾದ ಪಂಚಾಂಗ ದಿನಗಳು. ಗ್ರಾಮೀಣ ಜನರು ಇವುಗಳನ್ನು ಇಟ್ಟುಕೊಂಡು ತಮ್ಮ ಊರಿನ ಜಾತ್ರೆ ಹಬ್ಬಗಳನ್ನು ನಡೆಸುತ್ತಿದ್ದರು. ಆದರೆ ಆಧುನಿಕ ದ್ಯಾವಪ್ಪನ ಕಾಲಕ್ಕೆ ಇವು ತನ್ನ ಸ್ವರೂಪವನ್ನು ಬದಲಿಸಿ ಇಂಗ್ಲೀಶ್ ಕ್ಯಾಲೆಂಡರ್ ಪ್ರಭಾವದಿಂದ ವಾರ, ದಿನಾಂಕವನ್ನು ಬದಲಿಸಿಕೊಂಡು ಬಂದಿರುವುದು ತಿಳಿಯುತ್ತದೆ. ಅವುಗಳು

ಗುರುವಾರ (ತೇರು, ಪು.೬೫)

ಶುಕ್ರವಾರ (ತೇರು, ಪು.೬೫)

ಜನವರಿ (ತೇರು, ಪು.೮೨)

ಫೆಬ್ರವರಿ ಇಪ್ಪತ್ತಮೂರನೇ ತಾರೀಖ (ತೇರು, ಪು.೮೨)

ಮಂಗಳವಾರ (ತೇರು, ಪು.೮೨)

ಏಪ್ರಿಲ್ ಹತ್ತನೇ ತಾರೀಖ(ತೇರು, ಪು.೮೫)

ಹನ್ನೊಂದನೇ ತಾರೀಖ (ತೇರು, ಪು.೮೭)

ಇವು ಆಧುನಿಕ ದ್ಯಾವಪ್ಪನ ಕಾಲಕ್ಕೆ ಬದಲಾವನೆಗೊಂಡ ದಿನಗಳು. ಆದರೆ ಧರಮನಟ್ಟಿಯ ಸ್ವಾಂವಜ್ಜ ಮಾತ್ರ ಈ ಹಳೆಯ ಪದ್ಧತಿಯ ಪಂಚಾಂಗದ ದಿನಗಳ ಮೂಲಕವೆ, ನಮ್ಮ ಹಬ್ಬಗಳು, ತಿಥಿ, ನಕ್ಷತ್ರ, ಮೂಹರ್ತ ಇವುಗಳನ್ನು ನೋಡಿಯೇ ಜರುಗುತ್ತವೆ. ಎನ್ನುವ ಮಾತು ಹಳೆ ಮತ್ತು ಹೊಸತುಗಳ ನಡುವೆ ನಡೆದ ಬದಲಾವಣೆಯನ್ನು ಸೂಚಿಸುತ್ತವೆ.

ದೇವಸ್ಥಾನ ಮತ್ತು ಮಠಗಳು

ಮಾನವನಿಗೆ ದೇವರ ಮೇಲೆ ಭಕ್ತಿ, ಭಯ, ನಂಬಿಕೆ, ನಿಷ್ಠೆ ಇವುಗಳು ಹೆಚ್ಚಾಗಲು ಅನಾದಿ ಕಾಲದಿಂದಲೂ ಪ್ರಕೃತಿಯಲ್ಲಿ ದೇವರ ಆರಾಧನೆ, ಸ್ವಲ್ಪ ಜನ ಅದಕ್ಕೊಂದು ಆಲಯವನ್ನು ನಿರ್ಮಿಸುವುದರ ಮೂಲಕ ದೇವಸ್ಥಾನಗಳು ಸೃಷ್ಟಿಯಾದವು. ಇವುಗಳು ಪೂರ್ಣವಾಗಿ ರಾಜರ ಆಡಳಿತದಲ್ಲಿ ತನ್ನ ಸ್ವರೂಪವನ್ನು ಬದಲಿಸಿಕೊಂಡವು. ರಾಜರುಗಳು ತಮ್ಮ ಅಧಿಕಾರವನ್ನು ದೇವರ ಗುಡೀ ಗೋಪುರಗಳನ್ನು ಕಟ್ಟಿಸುವುದರ ಮೂಲಕ ವಿಸ್ತರಿಸಿದುದ್ದನ್ನು ನಾವು ಇತಿಹಾಸದಲ್ಲಿ ನೋಡುತ್ತೇವೆ. ಅದರಂತೆ 'ತೇರು' ಕಾದಂಬರಿಯಲ್ಲಿಯೂ ಸಹ ಜನರು ದೇವರ ಮೇಲಿನ ಭಕ್ತಿಯಿಂದ ದೇವರಿಗೊಂದು ದೇವಸ್ಥಾನ ಅಥವಾ ಮಠಗಳನ್ನು ಕಟ್ಟಿಕೊಂಡಿರುವ ಉಲ್ಲೇಖವು ಕಂಡುಬರುತ್ತವೆ. ಇವುಗಳು ಬೆಳಗಾವಿ ಪ್ರಾಂತ್ಯದ ಪ್ರಸಿದ್ಧ ದೇವಸ್ಥಾನಗಳು ಮತ್ತು ಮಠಗಳು. ಇವುಗಳನ್ನು ಕಾದಂಬರಿಕಾರ ರಾಘವೇಂದ್ರ ಪಾಟೀಲರು ಪುರಾಣ ದ್ಯಾವಪ್ಪನ ಪಾತ್ರದ ಮುಖಾಂತರ ವಿವರಿಸಿದ್ದಾರೆ. ಪುರಾಣ ದ್ಯಾವಪ್ಪ ತನ್ನ ಸೇವಾ ಕಾರ್ಯಕ್ಕಾಗಿ ಧರಮನಟ್ಟಿಯ ಸಮೀಪವಿರುವ ದೇವಸ್ಥಾನಕ್ಕೆ, ಮಠಗಳಿಗೆ ಭೇಟಿ ನೀಡಿ ಆರ್ಶೀವಾದ ಪಡೆದು ಬರುವಲ್ಲಿ ಈ ದೇವಸ್ಥಾನಗಳು ಮತ್ತು ಮಠಗಳು ಉಲ್ಲೇಖಗೊಂಡಿವೆ.

ಗೂಗೀಕೊಳ್ಳದ ಮಲ್ಲಯ್ಯನ್ನ ಮಠ ಇದು ಗೋಕಾಕದ ಪಕ್ಕದಲ್ಲಿ ಗುಡ್ಡದ ಹತ್ತಿರದ ಪ್ರಸಿದ್ಧವಾದ ಮಠವಾಗಿದೆ. ತವಗದ ಬಾಳಪ್ಪಸ್ವಾಮಿಗಳ ಮಠ. ಇದು ತವಗ ಊರಿನ ಮಠವು ಇವತ್ತಿಗೂ ಸಹ ಜನರಲ್ಲಿ ಭಕ್ತಿಯನ್ನು, ನಿಷ್ಠೆಯನ್ನು ಇಟ್ಟುಕೊಂಡ ಮಠವಾಗಿದೆ. ಸೊಗಲದ ಸೋಮೇಶ್ವರ ದೇವಸ್ಥಾನ ಬಹಳಷ್ಟು ಪುರಾತನವಾದ ಐತಿಹ್ಯವುಳ್ಳ ದೇವಸ್ಥಾನವಾಗಿದೆ. ಸವದತ್ತಿಯ ಗುಡ್ಡದ ಎಲ್ಲಮ್ಮನ ದೇವಸ್ಥಾನವು ಸವದತ್ತಿಯ ರಟ್ಟರ ಕಾಲದ ಆಳ್ವಿಕೆಯಲ್ಲಿ ಸ್ಥಾಪಿತವಾದ ದೇವಸ್ಥಾನವಾಗಿದೆ. ರಾಮದುರ್ಗ ತಾಲೂಕಿನ ಪ್ರಸಿದ್ಧವಾದ ದೇವಸ್ಥಾನ ಗೊಡಚಿ ವೀರಭದ್ರನ ದೇವಸ್ಥಾನ. ಈ ದೇವಸ್ಥಾನ ಕುರಿತು ಪುರಾಣದಲ್ಲಿಯೂ ಮಹತ್ವವಿದೆ. ಇವುಗಳಲ್ಲದೆ ರಾಮಾಯಣದ ಜೊತೆಗೆ ನಂಟನ್ನು ಬೆಳೆಸಿಕೊಂಡು ಶಬರೆವ್ವನ ಕೊಳ್ಳ, ಶಿರಸಂಗೀಕಾಳವ್ವನ ದೇವಸ್ಥಾನ, ಉದಗಟ್ಟಿಯ ಉದ್ದವ್ವನ ದೇವಸ್ಥಾನ ಮುನ್ನೊಳ್ಳಿಯ ಪಂಚಲಿಂಗೇಶ್ವರ ದೇವಸ್ಥಾನ, ಬೇಟಗೇರಿಯ ಸತ್ಯದ ಲಕ್ಕವ್ವನ ದೇವಸ್ಥಾನ, ಮೂರಗೋಡದ ಮಠ, ಸಾವಳಗಿಯ ಶಿವಲಿಂಗೇಶ್ವರ ಮಠ ಮುಂತಾದವುಗಳು ಕಾದಂಬರಿಯಲ್ಲಿ ಉಲ್ಲೇಖಗೊಂಡಿವೆ.

ಒಂದು ಪ್ರಾದೇಶಿಕ ಕಾದಂಬರಿಯಲ್ಲಿ ಆ ಪ್ರದೇಶದ ಹಲವಾರು ಮಹತ್ವದ ದಾಖಲೆಗಳು ಉಲ್ಲೇಖಗೊಂಡಿರುತ್ತವೆ ಎಂಬುದಕ್ಕೆ 'ತೇರು' ಒಂದು ಉತ್ತಮ ಉದಾಹರಣೆಯಾಗಿದೆ. ಹೀಗೆ ಈ ಎಲ್ಲಾ ದೇವಸ್ಥಾನಗಳು, ಮಠಗಳು, ಬೆಳಗಾವಿ ಪ್ರಾಂತ್ಯದಲ್ಲಿ ಜನಪ್ರಿಯವಾದ ದೇವರು ಸಾಧುಸಂತರ, ಶಿವಯೋಗಿಗಳ ಕರ್ಮಭೂಮಿಯಾಗಿವೆ.

ಜಾತ್ರೆ ಮತ್ತು ಉತ್ಸವಗಳು

ಜಾತ್ರೆ ಮತ್ತು ಉತ್ಸವಗಳು ನಡೆಯುವುದಕ್ಕೆ ಒಂದು ಕಾರಣವಿದೆ. ಒಂದು ಊರಿನ ದೇವರ ಜಾತ್ರೆ ಅಥವಾ ಉತ್ಸವದ ನಿಮಿತ್ಯ ಬೇರೆ ಬೇರೆ ಊರುಗಳಲ್ಲಿರುವ ಸಂಬಂಧಿಕರು ಜಾತ್ರೆಯ ನಿಮಿತ್ಯ ಒಂದೇ ಕುಟುಂಬದಲ್ಲಿ ಒಟ್ಟಾಗಿ ಸೇರುವುದಾಗಿದೆ. ಒಂದು ಕುಟುಂಬದ ಹೆಣ್ಣು ಮಕ್ಕಳು ತವರಿಗೆ ಜಾತ್ರೆಯ ನಿಮಿತ್ಯ ಬರುವುದು ಮತ್ತು ಆ ಊರಿನ ದೇವರುಗಳಿಗೆ ಪೂಜೆ ಸಲ್ಲಿಸುವುದು. ಜೊತೆಗೆ ತಮ್ಮ ಕುಟುಂಬಗಳ ಕಷ್ಟ, ಸುಖ ವಿಚಾರ ಮಾಡುವುದು, ಅದಕ್ಕಾಗಿ ಜಾತ್ರೆ ಮತ್ತು ಉತ್ಸವಗಳು ಜರುಗಲಿಕ್ಕೆ ಪ್ರಾರಂಭವಾದವು.

ಗ್ರಾಮೀಣ ಪ್ರದೇಶದ ಜನರು ಸತತವಾಗಿ ದುಡಿದು ತಮ್ಮ ಮನಸ್ಸಿಗೆ ಬೇಜಾರಾದಾಗ, ಇಂತಹ ಜಾತ್ರೆ ಮತ್ತು ಉತ್ಸವಗಳು ಮನಸ್ಸಿಗೆ ಆನಂದವನ್ನು ನೀಡುತ್ತವೆ. ಇದರ ಜೊತೆಗೆ ಜಾತ್ರೆಯಲ್ಲಿ ನಾಟಕ ಪ್ರದರ್ಶನ, ರಥೋತ್ಸವ, ಓಕಳಿ, ಮುಂತಾದವುಗಳಲ್ಲಿ ಭಾಗವಹಿಸುವುದರಿಂದ ಮನಸ್ಸನ್ನು ಪ್ರಸನ್ನ ಗೊಳಿಸುವ ಉದ್ದೇಶದಿಂದ ಜಾತ್ರೆ ಮತ್ತು ಉತ್ಸವಗಳು ಅನಾದಿ ಕಾಲದಿಂದಲೂ ಇವತ್ತಿನವರೆಗೂ ನಡೆದುಕೊಂಡು ಬಂದಿವೆ. ಈ 'ತೇರು' ಕೃತಿಯಲ್ಲಿಯೂ ಸಹ ಈ ಅಂಶಗಳು ಗೋಚರಿಸುತ್ತವೆ.

ಧರಮನಟ್ಟಿಯ ವಿಠ್ಠಲದೇವರ ಜಾತ್ರೆಯಲ್ಲಿ ರಥೋತ್ಸವ ಜರುಗುವುದು. ರಥೋತ್ಸವಕ್ಕಾಗಿ, ಧರಮನಟ್ಟಿಯ ಜನರು ತಮ್ಮ ತಮ್ಮ ಸಂಬಂಧಿಗಳನ್ನು ಊರಿಗೆ ಕರೆಯಿಸಿಕೊಳ್ಳುವುದು. ಹಾಗೂ ಕಳೀಗುದ್ದಿ ಊರಿನಲ್ಲಿ ನಡೆಯುವ ಓಕಳಿ ಉತ್ಸವ, ಈ ಓಕಳಿ ಉತ್ಸವಕ್ಕಾಗಿ ಉದಗಟ್ಟಿಯ ಡೊಂಬರ ಬಾಳವ್ವಗ, ಓಕಳಿಗೆ ಅಡಕೆ ಕೊಡುವುದಕ್ಕೆ ಬರುವ ಪ್ರಸಂಗ, ಹಾಗೂ ಓಕಳಿಯಲ್ಲಿ ಭಾಗವಹಿಸಿದ ಮಹಿಳೆಯರಿಗೆ ಹಣ ಕೊಡುವ ಸಂಪ್ರದಾಯ, ಹಾಗೂ ಈ ಮಹಿಳೆಯರಿಗೆ ಮಾರೂತಿ ದೇವರ ಸೂಳೇ ಪಟ್ಟ ಕಟ್ಟುವುದು. ಇವೆಲ್ಲಾ ಕಾದಂಬರಿಯಲ್ಲಿ ವ್ಯಕ್ತವಾಗುವ ವಿಶಿಷ್ಟವಾದ ಉತ್ಸವದ ಭಾಗಗಳಾಗಿವೆ. ಒಂದು ವಿಶೇಷವೆಂದರೆ, ಓಕಳಿ ಉತ್ಸವ ಈಗಲೂ ಸಹ ಬೆಳಗಾವಿ ಭಾಗದಲ್ಲಿ ಪ್ರಚಲಿತವಿರುವ ಉತ್ಸವವಾಗಿದೆ. ಈ ಓಕಳಿ ಉತ್ಸವ ಸಾಮಾನ್ಯವಾಗಿ ಯುಗಾದಿ ನಂತರ ನಡೆಯುತ್ತದೆ. ಓಕಳಿಯಲ್ಲಿ ಹಾಲೋಕಳಿ, ನೀರೋಕಳಿ, ಕಡೆಯೋಕಳಿ ಎಂಬ ಪ್ರಭೇದಗಳಿವೆ. ಓಕಳಿ ಉತ್ಸವ ಊರ ಹಣವಂತ ದೇವರ ಗುಡಿಯ ಮುಂದೆ ನಡೆಯುವ ಉತ್ಸವವಾಗಿದೆ. ಕಾದಂಬರಿಯಲ್ಲಿ ಇವುಗಳ ಜೊತೆಗೆ ಹೋಳಿ ಹುಣ್ಣಿಮೆ ಹಾಗೂ ಗೊಡಚಿ ವೀರಭದ್ರದೇವಸ್ಥಾನದಲ್ಲಿ ನಡೆಯುವ ಗುಗ್ಗಳ ಉತ್ಸವ. ಇಲ್ಲಿ ಪರವಂತರ ವೇಷ-ಭೂಷಣ ಮುಂತಾದವುಗಳು ಉಲ್ಲೇಖಗೊಂಡಿವೆ.

ಜನಪದೀಯ ಕಲೆಗಳು

ಕನ್ನಡದ ಪ್ರಾದೇಶಿಕ ಕಾದಂಬರಿಗಳಲ್ಲಿ ಹಲವಾರು ಜನಪದಿಯ ಕಲೆಗಳು ನಸುಳಿರುತ್ತವೆ. ಅವುಗಳು ಆಯಾ ಪ್ರದೇಶದ ಹಿನ್ನಲೆಯಲ್ಲಿ ರೂಪುಗೊಂಡಿರುವುದನ್ನು ನಾವು ಕಂಡುಕೊಳ್ಳಬಹುದು. ರಾಘುವೇಂದ್ರ ಪಾಟೀಲರ 'ತೇರು' ಕಾದಂಬರಿಯು ಬೆಳಗಾವಿ ಭಾಗದ ಗ್ರಾಮೀಣ ಜನ ಜೀವನದ ಜೊತೆಗೆ ಜನಪದೀಯ ಕಲೆಗಳು ಕಾದಂಬರಿಯಲ್ಲಿ ಉಲ್ಲೇಖಗೊಂಡಿವೆ. ಅವುಗಳಲ್ಲಿ ಪ್ರಮುಖವಾಗಿ ಗೊಂದಲಿಗರ ಆಟ, ತೊಗಲು ಗೊಂಬೆಯಾಟವನ್ನು ಗುರುತಿಸಲಾಗಿದೆ. ಈ ಎರಡು ಆಟವನ್ನು ಗೊಂದಲಿಗರ ಜನಾಂಗ, ಕಿಳ್ಳಿಕ್ಯಾತ ಜನಾಂಗ ಪ್ರದರ್ಶಿಸುವುದರಿಂದ ಇವುಗಳನ್ನು ಜನಪದ ಜನಾಂಗೀಯವಾಗಿ ಅಧ್ಯಯನದಲ್ಲಿ ತೊಡಗಿಸಿಕೊಳ್ಳಲಾಗಿದೆ.

ಗೊಂದಲಿಗರ ಆಟ (ಮೇಳ)

ಗೊಂದಲಿಗರ ಮೇಳದವರ ಪ್ರಸ್ತಾಪವು ಕಾದಂಬರಿಯ ಮೊದಲ ಭಾಗದಲ್ಲಿ ಅಂದರೆ ರಕ್ತ ತಿಲಕದ ಸೇವೆಯ ಭಾಗದಲ್ಲಿ ಕಂಡುಬರುತ್ತದೆ. ಈ ಗೊಂದಲಿಗರು ಹೆಚ್ಚಾಗಿ ಉತ್ತರ ಕರ್ನಾಟಕದ ಬೆಳಗಾವಿ, ವಿಜಾಪೂರ ಮುಂತಾದ ಪ್ರದೇಶಗಳಲ್ಲಿ ಇವತ್ತಿಗೂ ಸಹ ಕಂಡುಬರುತ್ತಾರೆ. ಇವರು ಸವದತ್ತಿ ಎಲ್ಲಮ್ಮ, ತುಳಜಾಪೂರದ ಭವಾನಿಯ ಭಕ್ತರು. ಜಾತ್ರೆ ಹಾಗೂ ಹಬ್ಬಗಳಲ್ಲಿ ವಿಶೇಷವಾಗಿ ಇವರನ್ನು ಆಹ್ವಾನಿಸುತ್ತಾರೆ. ಇವರು ಆಹ್ವಾನಿಸಿದವರ ಊರುಗಳಲ್ಲಿ ದಿನಾಂಕವನ್ನು ಗೊತ್ತುಪಡಿಸಿ ಆವತ್ತು ಆ

ಊರಿನ ಪ್ರಮುಖ ಸ್ಥಳ ಚಾವಡಿ, ದೇವಸ್ಥಾನದ ಮುಂದಿನ ವಿಶಾಲವಾದ ಪ್ರದೇಶಗಳಲ್ಲಿ ರಾತ್ರಿಯ ನಂತರ ತಮ್ಮ ಆಟವನ್ನು ಪ್ರಾರಂಭಿಸುತ್ತಾರೆ. ಕಾದಂಬರಿಯಲ್ಲಿ ತೇರಿನ ಮಹಾತ್ಮೆಯನ್ನು ಕಥೆ ಮಾಡಿ ಹೇಳಲು ಪ್ರತಿವರ್ಷ ಧರಮನಟ್ಟಿಯ ರಥೋತ್ಸವಕ್ಕೆ ಆಗಮಿಸುವ ಸಂದರ್ಭದಲ್ಲಿ ಈ ಗೊಂದಲಿಗರ ಉಲ್ಲೇಖ ಕಂಡುಬಂದಿದೆ. ಹಾಗೂ 'ತೇರು'ಕಾದಂಬರಿಯ ಮೊದಲನೆಯ ಭಾಗ ಸಂಪೂರ್ಣವಾಗಿ ಈ ಗೊಂದಲಿಗರ ಮೇಳದವರ ಕಥನ ಕವನದ ಮೂಲಕವೇ ನಿರೂಪಿತವಾಗಿದೆ.

ಇವರು "ತಮ್ಮ ಪದ್ಧತಿಯಂತೆ ಕಲಶ ಸ್ಥಾಪನೆ ಮಾಡಿ ಅಂಭಾ ಭವಾನಿಯನ್ನು ಆಹ್ವಾನಿಸುತ್ತಾರೆ. ಆರಂಭದಲ್ಲಿ ತಮ್ಮ ವಾದ್ಯಮೇಳದೊಂದಿಗೆ ದೇವತೆಗಳ ಸ್ತುತಿ ಪದ್ಯಗಳನ್ನು ಹಾಡುತ್ತಾರೆ. ಒಬ್ಬನು ನಿಗಧಿಯಾದ ಎಣ್ಣೆಯ ಕಿವುಟು ಮುಳುಗಿದ ನಿಲುವಂಗಿ ತೊಟ್ಟು, ತಲೆಗೆ ಕವಡೆ ಹೆಣೆದ ಕುಲಾಮಿ ಹಾಕಿಕೊಂಡಿರುತ್ತಾನೆ. ಆತನ ಎರಡು ಕೈಗಳಲ್ಲಿ ಬಟ್ಟೆಗಳನ್ನು ಹುಡಿ ಮಾಡಿ ತಯಾರಿಸಿದ ಉರಿವ ಕಕ್ಕಾಡಗಳಿರುತ್ತವೆ. ಅದನ್ನು 'ಪೈಂತ್ ಮಾಮ' ಎಂದು ಕರೆಯುತ್ತಾರೆ. ಹಿಮ್ಮೇಳಗಳ ವಾದ್ಯದೊಂದಿಗೆ ರಾತ್ರಿಯಲ್ಲಿ ಆಗಾಗ ನರ್ತಿಸಿ ಭಾವಾವೇಶಗೊಳಿಸುತ್ತಾನೆ."[೧೧] ಹೀಗೆ ಈ ಗೊಂದಲಿಗರ ಕಥನ ಕವನದಿಂದ 'ತೇರು' ಕಾದಂಬರಿಯ ಮೊದಲ ಭಾಗ ಪ್ರಾರಂಭವಾಗುತ್ತದೆ. ತೇರು ಇನ್ನೂ ಎರಡು ದಿನ ಇರುವ ಮೊದಲೇ ಬಂದು ಬೀಡುಬಿಟ್ಟಿರುತ್ತಾರೆ. ತೇರಿನ ಮೊದಲನೆಯ ರಾತ್ರಿ - ಚೈತ್ರಶುದ್ಧ ಅಷ್ಟಮಿಯ ರಾತ್ರಿ ಧರಮನಟ್ಟಿಯ ತೇರಿನ ಮಹಾತ್ಮೆಯನ್ನು ನೆರದಿದ್ದ ಪ್ರೇಕ್ಷಕರಿಗೆ ಹೇಳಿ ಮನರಂಜನೆಯನ್ನು ನೀಡುತ್ತಾರೆ.

ಈ ಗೊಂದಲಿಗರ ಪರಿಕಲ್ಪನೆಯನ್ನು ಇಲ್ಲಿಯವರೆಗೆ ಯಾರೂ ಕಾದಂಬರಿಯಲ್ಲಿ ಸಮರ್ಥವಾಗಿ ಪ್ರಯೋಗಿಸಿಲ್ಲ. ಆದರೆ ರಾಘವೇಂದ್ರ ಪಾಟೀಲರು ತಮ್ಮ ಸೃಜನಶೀಲ ಬರಹದಿಂದ ಈ ಆಧುನಿಕ ಕಲ್ಪನೆಯನ್ನು ತಂದಿದ್ದಾರೆ. ಇದರಿಂದ ಅವರು ತಮ್ಮ ಪ್ರವೇಶ ಜನಪದ ಕಲೆಗಳ ಜೊತೆಗೆ ಇನ್ನೂ ಜೀವಂತವಾದ ಸಂಬಂಧವನ್ನು ಇಟ್ಟುಕೊಂಡಿದ್ದಾರೆ.

ತೊಗಲುಗೊಂಬೆಯಾಟ

ಬೆಳಗಾವಿ ಪ್ರದೇಶದ ಒಂದು ವೈಶಿಷ್ಟವೆಂದರೆ ಆ ಭಾಗದ ಜನತೆ ಜನಪದ ಆಚರಣೆಗಳನ್ನು ಜಾತ್ರೆ, ಉತ್ಸವದಲ್ಲಿ ನಡೆಸುತ್ತಾರೆ. ಓಕಳಿ, ತೇರು, ಪಾರಿಜಾತ ನಾಟಕ ಮುಂತಾದವುಗಳನ್ನು ನಡೆಸುವುದರ ಮೂಲಕ ಮನರಂಜನೆಯನ್ನು ಪಡೆಯುತ್ತಾರೆ. ಅವುಗಳಲ್ಲಿ ತೊಗಲುಗೊಂಬೆಯಾಟವು ಒಂದಾಗಿದೆ. ಈ ತೊಗಲುಗೊಂಬೆಯಾಟವನ್ನು ಆಡಿಸುವವರನ್ನು ಕಿಳ್ಳೆಕ್ಯಾತರು, ಗೊಂಬೆರಾಯರು ಹಾಗು ಚಿತ್ರಮರಾಠರು ಎಂಬ ಹೆಸರಿನಿಂದ ಕರೆಯುತ್ತಾರೆ. ಪ್ರಸ್ತುತ ಗೋಕಾಕದ ಪರಿಸರದಲ್ಲಿ ಇವರ ಆಟವನ್ನು 'ಕಟಬೂನಾಟ' ಎಂದು ಕರೆಯುತ್ತಾರೆ. "ಇವರು ರಾಮಾಯಣದಲ್ಲಿ ಗುಹನ ವಂಶಕ್ಕೆ ಸೇರಿದವರೆಂದೂ ಗೊಂಬೆಯಾಟ ಕುಲಕಸುಬಾಗಿ ಇವರಲ್ಲಿ ಉಳಿಯಲು ಶ್ರೀರಾಮನ ಶಾಪವೇ ಕಾರಣವೆಂದು ದಂತ

ಕಥೆಯನ್ನಾಧರಿಸಿ ಹೇಳುತ್ತಾರೆ.”[೧೨] ಕಾದಂಬರಿಯಲ್ಲಿ ಈ ಜನಾಂಗದವರನ್ನು ಗೊಂಬೀರಾಯರು ಮತ್ತು ಕಿಳ್ಳೆಕ್ಯಾತರು ಎಂದು ಕರೆದಿದ್ದಾರೆ. ಈ ಗೊಂಬಿರಾಮರ ಸನ್ನಿವೇಶ ಕಾದಂಬರಿಯ ಮೊದಲ ಭಾಗದಲ್ಲಿಯೇ ಮೂಡಿಬಂದಿದೆ.

ಧರಮನಟ್ಟಿಯ ತೇರಿನ ಜಾತ್ರೆಯ ಸಮಯದಲ್ಲಿ ಗೊಂಬೆಯಾಟವನ್ನು ಪ್ರದರ್ಶಿಸಿದರೆ ಸಾಕಷ್ಟು ಹಣ ಸಂಪಾದನೆ ಮಾಡಬಹುದೆಂದು ಗೊಂಬಿ ಆಡಿಸುವ ದ್ಯಾವಪ್ಪ ತನ್ನ ಹೆಂಡತಿ ಮಕ್ಕಳನ್ನು ಕಟ್ಟಿಕೊಂಡು ಧರಮನಟ್ಟಿಗೆ ಬಂದಾಗ, ಅಲ್ಲಿ ತೇರಿಗೆ ಬಲಿಯಾಗುವ ಸುದ್ದಿ ಕೇಳಿ ಊರ ಕಾಟುಕರ ಜಾತಿಯವರು ಊರ ಬಿಟ್ಟು ಓಡಿದರಿಂದ ಇತನ ಆಟವನ್ನು ನೋಡುವವರು ಯಾರೂ ಇರುವುದಿಲ್ಲ. ಈ ಸಂದರ್ಭದಲ್ಲಿ ಈ ತೊಗಲುಗೊಂಬೆಯಾಟದ ಪರಿಕಲ್ಪನೆಯನ್ನು ‘ತೇರು’ ಕಾದಂಬರಿಯಲ್ಲಿ ಕಂಡುಬಂದಿದೆ.

ಈ ಮೇಲಿನ ಎರಡು ಅಂಶಗಳ ಜೊತೆಗೆ ಗುಗ್ಗಳೋತ್ಸಮದ ಸಂದರ್ಭದಲ್ಲಿ ಪರವಂತರು ಸಹ ಶಸ್ತ್ರ ಹಿಡಿದು ವೀರಭದ್ರನ ದೇವರ ಭಕ್ತಿಯನ್ನು ಮೆರೆಯುವ ಜನಪದ ಕಲೆಯು ಈ ‘ತೇರು’ ಕೃತಿಯಲ್ಲಿ ಉಲ್ಲೇಖಿತಗೊಂಡಿವೆ. ಹೀಗೆ ಜನಪದ ಕಲೆಯನ್ನು ಒಳಗೊಂಡು ಪ್ರಾದೇಶಿಕ ಕಾದಂಬರಿಯಾಗಿ ‘ತೇರು’ ಕೃತಿಯು ಮಹತ್ವವನ್ನು ಪಡೆದುಕೊಂಡಿದೆ. ಈ ಕಾದಂಬರಿ ರಂಗಭೂಮಿ ಸಂದರ್ಭದಲ್ಲಿ ಹೊಸದೃಷ್ಟಿಕೋನಗಳನ್ನು, ವಿಚಾರಗಳನ್ನು, ಕಲ್ಪನೆಗಳನ್ನು ಹಾಗೂ ವಿನ್ಯಾಸ ನಿರ್ಮಿಸಿದೆ. ಅಲ್ಲದೆ ವಸ್ತು, ಪಾತ್ರ, ಸನ್ನಿವೇಶ, ತಂತ್ರ ನಿರ್ವಹಣೆಯಲ್ಲಿ ಹೊಸ ಅನ್ವೇಷಣೆಗಳತ್ತ ಚಲಿಸುತ್ತಿರುವುದು ಮುಖ್ಯವಾದ ಸಂಗತಿಯಾಗಿದೆ.

ನಾಟೀ ವೈದ್ಯಪದ್ಧತಿ

ನಮ್ಮ ಗ್ರಾಮೀಣರು ತಮ್ಮ ನಿತ್ಯಜೀವನದಲ್ಲಿ ನಾಟೀ ವೈದ್ಯ ಪದ್ಧತಿಯಲ್ಲಿ ಬಲವಾದ ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ. “ಜನಪದ ವೈದ್ಯನನ್ನು ಹಳ್ಳಿಗಲಲ್ಲಿ ಪಂಡಿತನೆಂದು ಕರೆಯುವ ರೂಢಿಯಿದೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಆಧುನಿಕತೆ ಕಾಲಿಡುವ ಪೂರ್ವದಲ್ಲಿ ನಾಟೀ ವೈದ್ಯ ತುಂಬಾ ಜನಪ್ರಿಯವಾಗಿತ್ತು. ಗಿಡಮೂಲಿಕೆಗಳನ್ನು ಔಷಧಿಗಳನ್ನಾಗಿ ಬಳಸುತ್ತಿದ್ದರು.”[೧೩] ಈ ತೇರು ಕಾದಂಬರಿಯಲ್ಲಿ ಅಲೋಪತಿ ವೈದ್ಯಕೀಯ ಔಷಧಿಗಳನ್ನು ವಿಡಂಬನಾತ್ಮಕ ದೃಷ್ಟಿಯಿಂದ ನೋಡಲಾಗಿದೆ. ಶಂಕರಜ್ಜ ಮತ್ತು ಆತನ ಅಜ್ಜನ ಔಷಧಿ ಕೊಡುವ ರೀತಿ ಹಾಗೂ ರೋಗದ ಗುಣಲಕ್ಷಣಗಳನ್ನು ಕಂಡು ಹಿಡಿದು ಅದಕ್ಕೆ ಅನುಸರಿಸಿ ಉಪಚರಿಸುತ್ತಿರುವುದು ಕಾದಂಬರಿಯಲ್ಲಿ ಉತ್ತಮವಾಗಿ ಚಿತ್ರಿತವಾಗಿದೆ. ಲಂಗಟದ ಸ್ವಾಮೀಗಳು ರಗತದಾಗಿನ ಕಸರ ತೊಳಕೋಬೇಕ ಅಂತ ದ್ಯಾವಪ್ಪನಿಗೆ ಹೇಳಿದ್ದರಿಂದ ದ್ಯಾವಪ್ಪ ಗೌಡರಿಗೆ ಹೇಳಿದಾಗ ಗೌಡರು ಇದು ನನಗ ತಿಳಿಯುವದಿಲ್ಲ ಶಂಕರಜ್ಜನ ಹತ್ತಿರ ಹೋದರ ನಿನಗೆ ಔಷದ

ಸಿಗಬಹುದು. ಅಂತ ಹೇಳಿದಾಗ ದ್ಯಾವಪ್ಪ ಶಂಕರಜ್ಜನ ಹತ್ತಿರ ಬಂದಾಗ, ಈ ನಾಟೀ ವೈದ್ಯ ಪದ್ಧತೀಯ ಅಂಶವನ್ನು ರಾಘುವೇಂದ್ರ ಪಾಟೀಲರು ಕೃತಿಯಲ್ಲಿ ಚಿತ್ರಿಸಿದ್ದಾರೆ.

"ನೀ... ಶಿವರಾತ್ರಿ ಇನs ಐದಿವಸ ಇರತೈತೆಂದರ... ಅಂದರ ನೋಡಪಾ ಹಾಂ. ಅಷ್ಟಮೀ ದಿವಸದಿಂದ ಈ ಅಗಸುದ್ದೇ ಮತ್ತ ಪತ್ತೇ ಸುರೂಮಾಡು... ಶಿವರಾತ್ರಿ ಇನ್ನ ಐದ ದಿನಾ ಐತಿ ಅನ್ನುವಾಗ ಹರ್‍ಯಾಗ ಎದ್ದಿಗಳಸೇ ಬರೀ ಹೊಟ್ಟೀಲೆ ಒಂದು ವಾಟೇ ಆಕಳ ತುಪ್ಪಾ ಕುಡೀಬೇಕು... ಅಂದ ಸುರು ಮಾಡಿದಾಂವ ಮೂರು ದಿವಸ ಬಿಡಧಂಗ ದಿನಾ ಹರ್‍ಯಾಗ ಎದ್ದಗಳಸೇ ಒಂದೊಂದ ವಾಟೇ ಆಕಳ ತುಪ್ಪಾ ಕುಡ್ಯೂದು. ಮೂರು ದಿವಸ ಹಿಂಗ ತುಪ್ಪಾ ಕುಡಿದ ಮ್ಯಾಗ ನಾಕನೇ ದಿವಸ ಮೈಗೆಲ್ಲಾ ಎಣ್ಣೀ ಹಚಿಗೊಂಡು ಸುಡೂ ಸುಡೂ ನೀರು ಹಣಿಸಿಕೊಂಡು ಜಳಕಾ ಮಾಡಬೇಕು...ಅದರ ಮರದಿವಸ ಹರ್‍ಯಾಗ ಎದ್ದಗಳಸೇ... ನಾನು ಅಗಸುದ್ದೇದ ಎರಡ ಪುಡೀ ಕೊಟ್ಟಿರುತನು...'(ತೇರು, ಪು.೫೦)

ಶಂಕರಜ್ಜ ಈ ಮೇಲಿನಂತೆ ಹೇಳಿದಾಗ ಈ ಮಾತಿಗೆ ದ್ಯಾವಪ್ಪ ನಾನು ವರ್ಷಾ ವರ್ಷಾ ತಪ್ಪದಂಗ ನಡಸೂ ವಿಚಾರ ಐತಿ. ಅದಕ್ಕೆ ಔಷಧ ಪುಡಿ ಹೆಂಗ ತಯಾರ ಮಾಡತಿ ಅಂತ ಹೇಳಿದರ ಒಳ್ಳೆಯದ ಆಗತೈತಿ ಅಂತ ಹೇಳಿದಾಗ. ಕಾದಂಬರಿಕಾರ ನಾಟೀ ಔಷಧದ ತಯಾರಿ ಮಾಡುವ ಅಂಶವನ್ನು ಬಿತ್ತರಿಸಿದ್ದಾರೆ. ದ್ಯಾವಪ್ಪನ ಈ ಮಾತಿಗೆ "ಶಂಕರಜ್ಜ 'ಯಾ... ಅದಕೇನೋ ಮಾರಾಯಾ. ಅಲಬತ್ತ ಹೇಳತನ ತಗೋ...' ಅಂತದು ಈ ಪುಡಿಗೋಳು ಮತ್ತೇನೂ ಅಲ್ಲ... ಒಂದು ಮುಂಗಾರಿಕಾಯಿಯ ಬೀಜದ ಪುಡೀ... ಹಣ್ಣ ಆದ ಮುಂಗಾರೀ ಕಾಯಿತಗೊಂಡು ಅದರ ಬೀಜಾ ಎಲ್ಲಾ ಒಂದ ದಿನಾ ಮಜ್ಜಿಗ್ಯಾಗ ನೆನೀ ಇಡಬೇಕು... ಮಜ್ಜಿಗ್ಯಾಗ ನೆನಸಿ ಅದನ್ನ ನೆಳ್ಳಿನ್ಯಾಗ ಒಣಗಿಸಿ ಪುಡೀ ಮಾಡಿ ಇಟಗೊಳ್ಳೊದು... ಇನೊಂದ ಪುಡೀ ಐತೆಲಾ... ಅದು ಬಜೀ ಬೇರ ಇರತೈತಿ ನೋಡು... ಅದನ್ನ ಚಲೂತಂಗ ಒಣಗಿಸಿ ಪುಡೀ ಮಾಡಿ ಇಟಗೊಂದು.. ಹಾಂ... ಎಣ್ಣೀ ಹಚ್ಚಿ ಎರಕೋತೀಲಾ ಅದ ಮರುದಿವಸ ಹರ್‍ಯಾಗ ಎದ್ದಗಳಸೇ ಹೊಟ್ಟಿ ತುಂಬ ಹಾಲು ಕುಡೀಬೇಕು..."

"ಹಾಲಕುಡದ ಮ್ಯಾಗ ಈ ಎರಡೂ ಪುಡಿಗೋಳನ ಒಂದೊಂದ ಚಿಮಟಿ ಚಿಮಟಿ ತಗೊಂಡು... ಅವದರ ಜೋಡೀ ಒಂದು ಚಿಮಟಿ ಹೊಂಸುಪ್ಪು ಸೇರಸಬೇಕು... ಇವನ್ನೆಲ್ಲಾ ಕೂಡಿಸಿ ಜೇನತುಪ್ಪ ಇರತೈತಲಾs... ಜೇನುತುಪ್ಪದಾಗ ಕಲಿಸಿಗೊಂಡು ಒಂದ ಗೋಲೀ ಗುಂಡಿನಷ್ಟು ಆಗತೈತಿ.. ಅದನ್ನ ತಿನ್ನಬೇಕು... ಆಮ್ಯಾಗ ಮುಂದ ಮದ್ದಿನದ ತನಕಾ ಜೇಷ್ಠ ಮಧೂದ ಕಾಡೇ ಕುಡೀಬೇಕು."

"ನಾಕ ಖಂಡಿಕಿಯಷ್ಟು ಜೇಷ್ಟಮಧೂ ತಗೊಂಡು ಅದನ್ನ ನಾಕವಾಟೇ ನೀರ ಇಟ್ಟು ಎರಡ ವಾಟೇ ಆಗೂ ಹಂಗ ಕುದಿಸಿ ಇಟಗೋದು.. ಈ ಕಾಡೇ ಕುಡಧಂಗ ಕುಡಧಂಗ ಉಲ್ಟೀ ಆಕ್ಕೋತ ಹೋಗತೈತಿ... ಆ ಉಲೀ ಜೋಡೀ ರಗತದಾಗಿನ ಕಸರ ಎಲ್ಲಾ ಕಿತ್ತ ಬರತೈತಿ.. ಮದ್ದಿನ ತನಕಾ

ಹಿಂಗ ಉಳ್ಳೀ ಮಾಡಿಕೊಂಡು... ಮಧ್ಯಿನದ ಮ್ಯಾಲಕಾದು ಆರಿದ ನೀರು ಮತ್ತು ಒಂದ ವಾಟೇದಷ್ಟು ಗಂಜೀ ತಗೋಬೇಕು. ಅಂದರs ಅಂದಿಗೆ ಐದದಿನಾ ಆದಂಗಾತು... ಇದ ಆದ ಮ್ಯಾಲೆ? ಹಾಂ... ಇದ ಆದಮ್ಯಾಲೆ ಯೋಳದಿವಸ ಏನು ಅಗಸುದ್ದೇ ಮತ್ತ ಪತ್ತೇ ಇಲ್ಲ... ಎಂಟನೇ ದಿವಸಕ್ಕ ಮತ್ತ ಸುರೂ ಆಕ್ಕೈತಿ... ಎಂಟನೇ ದಿವಸದಿಂದ ಹರ‍್ಯಾಗ ಎದ್ದಗಳಸೇ ಖಾಲೀ ಹೊಟ್ಟಿಂದ ಮತ್ತ ಆಕಳ ತುಪ್ಪಾ... ಒಂದೊಂದ ವಾಟೇ ಕುಡಿಯೂದು... ಮೂರು ದಿನಾ ಹಿಂಗ ಕುಡಿದ ಮ್ಯಾಲ ಮುಂದ ಮೂರು ದಿನಾ ಏನೂ ಪತ್ತೇ ಇಲ್ಲ... ಹಿಂಗ ಮೂರು ದಿನಾ ಆದ ಮ್ಯಾಗ ನಾಕನೇ ದಿನಾ ಮೈಗೆಲ್ಲಾ ಎಣ್ಣೆ ಹಚಿಗೊಂಡು ಸುಡು ಸುಡೂ ನೀರ ಹಣಿಸಿಕೊಂಡು ಜಳಕಾ ಮಾಡೊದು... ಅದರ ಮರುದಿವಸ... ಹಾಂ... ತಿಗಡೀ ಬೇರಂತ ಸಿಗತೈತಿ ಅದನ್ನ ತಂದಕ್ಯಾಸ ಪುಡೀ ಮಾಡಿಕೊಂಡ ಇಟಗೋ.. ಮರದಿವಸ ಹರ‍್ಯಾಗ ಎದ್ದಗಳಸೇ ಬೀಸಿನೀರಿನ್ಯಾಗ ತಿಗಡೀ ಬೇರಿನ ಪುಡೀ ಹಾಕೊಂಡು ಹೊಟ್ಯಾಗ ತಗೋ... ಮುಂದ ಮಧ್ಯಿನ ಮಟಾ ಬಿಸಿನೀರ ಕುಡೀಬೇಕು... ಬಿಸಿ ನೀರು ಕುಡಧಂಗ ಕುಡಧಂಗ ಹೊಟ್ಟಿ ಎಲ್ಲಾ ಜಾಡಸಾಕ ಸುರೂ ಆಗಿ ಪೂರಾ ಸ್ವಚ್ಛ ಆಗತೈತಿ.. ಮತ್ತ ಮಧ್ಯಿನಮ್ಯಾಗ ಯಥಾ ಪರಕಾರ ಕಾದ ಆರಿದ ನೀರಾ ಮತ್ತ ಒಂದು ವಾಟೇದಷ್ಟು ಗಂಜೀತಗೋದು... ಇಲ್ಲಿಗೆ ಅಗಸುದ್ದೇ ಮತ್ತ ಪತ್ತೇದ್ದು ಎಲ್ಲಾ ಮುಗದಂಗ ಆಗತೈತಿ.'' (ತೇರು, ಪು.೫೧) ಹೀಗೆ ನಾಟೀ ಔಷಧವನ್ನು ತಯಾರಿ ಮಾಡುವುದು ಹೇಳುತ್ತಾನೆ.

"ಸಾಮಾನ್ಯವಾಗಿ ನಾಟೀ ವೈದ್ಯರು ಔಷಧಿಗಳನ್ನು ಕೊಡುವಾಗ ಅವುಗಳ ಹೆಸರನ್ನು ಬಹಿರಂಗ ಪಡಿಸುವುದಿಲ್ಲ. ಹಾಗೆ ಮಾಡಿದರೆ ಅವುಗಳ ಮಹತ್ವ ಕಡಿಮೆಯಾಗುವುದರ ಜೊತೆಗೆ ಔಷಧಿ ನಾಟುವುದಿಲ್ಲ ಎಂಬ ಬಲವಾದ ನಂಬಿಕೆಯನ್ನು ಹೊಂದಿರುತ್ತಾರೆ."[೧೪] 'ಹಿತ್ತಲ ಗಿಡಾ ಮದ್ದಲ್ಲ' ಎಂಬ ಗಾದೆಯಂತೆ, ಗಿಡಗಳ ಹೆಸರನ್ನು ಹೇಳುವುದಿಲ್ಲ. ಆದರೆ ಈ ಕಾದಂಬರಿಯಲ್ಲಿ ದ್ಯಾವಪ್ಪನ ಧಾರ್ಮಿಕ ನಂಬಿಕೆಗೆ ಶಂಕರಜ್ಜ ಗಿಡಮೂಲಿಕೆಗಳ ಹೆಸರನ್ನು ಹೇಳಿದ್ದಲ್ಲದೆ ಅವುಗಳನ್ನು ತಯಾರಿಸುವ ಹಾಗೂ ಉಪಚರಿಸುವ ವಿಧಾನವನ್ನು ಹೇಳಿರುವುದು ಕಂಡುಬರುತ್ತದೆ.

ಮನುಷ್ಯರಿಗೆ ಅಷ್ಟೇ ಅಲ್ಲದೆ ದನಕರುಗಳಿಗೂ ಸಹ ನಾಟೀ ಔಷಧೋಪಚಾರವನ್ನು ಮಾಡುವ ಪದ್ಧತಿ ಈ ಕಾದಂಬರಿಯಲ್ಲಿ ಕಂಡುಬರುತ್ತದೆ. ಕಳಸಪ್ಪಗೋಳ ರಾಮಣ್ಣನ ಎಮ್ಮಿಗೆ ಅರಾಮ ಇರುವುದಿಲ್ಲ. ಆವಾಗ ಶಂಕರಪ್ಪ ಆ ಎಮ್ಮಿಗೆ ಸ್ವಾಟ್ಯಾಗ ಬಳ್ಳ ಹಾಕಿ ಬಾಯಿ ತಗಿಸಿ ಗೊಟ್ಟಾ ಹೆಟ್ಟಿ ಆಗಸುದ್ದೇ ಕುಡಿಸಿ, ಅಗಸುದ್ದೆ ಹಾಕಿದ ಕೂಡಲೇ ಅದರ ಬಾಯಿ ಒತ್ತಿ ಹಿಡಿದು ಉಗಳಧಂಗ ಮಾಡಿ. ನಂತರ ಈ ಔಷಧಕ್ಕೆ ಕಡಿಮೆ ಆಗದೇ ಇದ್ದರ ಒಂದ ತೂಪ್ಪಲಾ ಕೊಡತನು ಅದನ್ನ ಬೆಲ್ಲಾ-ರೊಟ್ಟಿ ಜೋಡಿ ತಿನಸು ಎಲ್ಲಾ ಕಡಿಮೆ ಆಗತೈತಿ ಎಂಬುವಲ್ಲಿ ಪಶುನಾಟೀ ವೈದ್ಯದ ಅಂಶಗಳು ಈ ಕಾದಂಬರಿಯಲ್ಲಿ ಕಂಡುಬರುತ್ತವೆ.

ಕಳಸಪ್ಪಗೋಳ ರಾಮಣ್ಣನ ಅಜ್ಜನ ಹೆಸರು ರಾಮಣ್ಣನನ ಅವನಿಗೆ ಅರಾಮ ಇಲ್ಲದಿದ್ದಾಗ ಶಂಕರಜ್ಜನ ಅಜ್ಜ ಆತನ ನಾಡೀ ಹಿಡದು ಆತನ ರೋಗದ ಲಕ್ಷಣ ಕಂಡುಹಿಡಿದು ಔಷಧವನ್ನು ನೀಡಿರುವುದು. ಈ ಎಲ್ಲ ಮೇಲಿನ ಅಂಶಗಳು ರಾಘವೇಂದ್ರ ಪಾಟೀಲರು 'ತೇರು' ಕಾದಂಬರಿಯಲ್ಲಿ ಉಲ್ಲೇಖಿಸಿರುವುದು ಅವರ ಒಂದು ಬರವಣಿಗೆಗೆ ಹೆಚ್ಚಿನ ಮಹತ್ವ ನೀಡಿದೆ. ಎಂದರೆ ತಪ್ಪಾಗಲಾರದು.

ಹಾಸ್ಯ

ರಾಘವೇಂದ್ರ ಪಾಟೀಲರು 'ತೇರು' ಕಾದಂಬರಿಯಲ್ಲಿ ಹಾಸ್ಯದ ವಿವಿಧ ಛಾಯೆಗಳು ಕಾಣುತ್ತವೆ. ಹಾಸ್ಯವನ್ನು ತರಬೇಕೆಂದೆ ಪ್ರಯತ್ನಿಸಿ ಕಾದಂಬರಿಯಲ್ಲಿ ತಂದವರಲ್ಲ. ಅದು ಸಹಜಯುತವಾಗಿ ಸಾಮಾಜಿಕವಾದ ಅಸಮತೆ ಕಂಡಾಗ ಅಸಹನೆ ರೋಷಗಳು ವ್ಯಂಗ್ಯದಲ್ಲಿ ಧ್ವನಿತವಾಗುತ್ತವೆ. ಈ ಕಾದಂಬರಿಯಲ್ಲಿ ಪೂರ್ಣಪ್ರಮಾಣದ ಹಾಸ್ಯವು ಕಂಡುಬರದೆ ಅದು ಕೋಲ್‌ಮಿಂಚಿನ ಹಾಗೆ ಆಯಾ ಸನ್ನಿವೇಶ ಹಾಗೂ ಸಂದರ್ಭಕ್ಕೆ ತಕ್ಕಂತೆ ಸಹಜವಾಗಿ ಮೃದು ಹಾಸ್ಯವು ಕಂಡುಬರುತ್ತದೆ.

ದ್ಯಾವಪ್ಪ ಲಂಗಟದ ಸ್ವಾಮೀಗಳು ಹೇಳಿದ ಮಾತನ್ನು ಕೇಳಿ ರಗತದಲ್ಲಿರುವ ಕಸರನ್ನು ಕಳೆದುಕೊಳ್ಳಲಿಕ್ಕೆ ಅತನು ಗೌಡರ ಹತ್ತಿರ ಬಂದಾಗ ಹಾಸ್ಯವು ಸಹಜವಾಗಿ ಉಕ್ಕಬರುತ್ತದೆ.

"ಈ ರಗತದಾಗ ಕೂಡಿದ ಕಸರ ಹೆಂಗ ಕಳಕೊಳ್ಳೂದೋಪಾ...? ಅಂತ ಅವರಿವರನ್ನ ಕೇಳಿದ... ಯಾರನ ಕೇಳಿದರೂ 'ಏ ನಮಗೇನ ಇದ ಗೊಂತ ಇಲ್ಲ ಬಿಡಪಾ...' ಅಂತ ದನೀ ಎಳದರು. ಕಡಿಕ ಗೌಡರನs ಒಂದು ಮಾತ ಕೇಳಿ ಬಿಡೂದು ಅಂತ ದ್ಯಾವಪ್ಪ ಧೈರ್ಯಾ ಮಾಡಿ ಅವರನs ಕೇಳಿದ. ದ್ಯಾವಪ್ಪನ ಮಾತು ಕೇಳಿ ಗೌಡರಿಗೆ ನಗೀ ಬಂತು. ಅವರು ನಿನ್ನ ರಗತಾ ಎಲ್ಲಾ ಬಸದು ತಗದ. ಸೋಸೂ ಅರಬೀ ಇರತೈತೆಲಾ. ಅದರಲೇ ಸೋಸು. ಹಂಗ ಸೋಸಿಕ್ಯಾರಿಂದ ಕಸಿರ ಎಲ್ಲಾ ತಗದು. ಹೊಳ್ಳಿ ಕುಡದ ಬಿಡು. ಅಂತ ಹೇಳಿ ಖೊಕ್ಕ ಖೊಕ್ಕಂತ ನಕ್ಕಬಿಟ್ಟರು. ದ್ಯಾವಪ್ಪ 'ಹಂಗಂತೀರಿ. ಹಂಗರ ಕೈಯಾ ಇಲ್ಲಾ ಕಾಲಾ ಕುಡಗೋಲಲೇ ಹೆಂಚಿಗೊಂಡು ರಗತಾ ಎಲ್ಲಾ ಬಸದ ತಗ್ಯಾಕ ಬಂದೀತಲ್ಲರಿ?" (ತೇರು, ಪು.೫೪) ಇಲ್ಲಿ ದ್ಯಾವಪ್ಪ ಮತ್ತು ಗೌಡರ ಮಾತಿನಲ್ಲಿ ಸಹಜ ಹಾಸ್ಯ ಉಕ್ಕುತ್ತದೆ.

ಆಧುನಿಕ ದ್ಯಾವಪ್ಪನನ್ನು ಸ್ವಾಗತಕೋರಲು ಊರ ಹೊರಗಿನ ಅಗಸಿ ಬಾಗಿಲಿಗೆ ಊರಿನ ಎಲ್ಲ ಜನರು ಕೂಡಿದಾಗ ದ್ಯಾವಪ್ಪ ಬಹಳಷ್ಟು ವೇಳೆ ಮಾಡಿದರಿಂದ ಅಲ್ಲಿ ನೆರದಿದ್ದ ಗುಂಪುಗಳಲ್ಲಿ ಹರೇಯದ ಹುಡುಗರು ದ್ಯಾವಪ್ಪನ ಮೇಲಿನ ಕಥೆ ಕಟ್ಟುವುದರಲ್ಲಿ ಹಾಸ್ಯ ತುಂಬಾ ಉತ್ತಮವಾಗಿ ಮೂಡಿಬಂದಿದೆ.

ದ್ಯಾವಪ್ಪ ಬರುತ್ತಾನಂದರೆ "ಇವತ್ತ ಲಗಮವ್ವ ಸಾಬಣಾ ಹಚಿಗೊಂಡು ಜಳಕಾ ಮಾಡಿ ರೆಡಿ ಆಗಿರತಾಳು...."

'ನಾರು ಎಣ್ಣೀ ಗಿಣ್ಣೀ ತಂದ ಕೊಟ್ಟಿರತಾನ ತಗೋ...'

'ಹಾಂ... ತಲೀಗೆ ನಾರು ಯಣ್ಣೀ ಹಚಿಗೊಂಡು... ಮಕಕ್ಕ ಪಾವಡರ್ ಬಳಕೊಂಡು ಇವನ ಹಾದೀ ನೋಡಿಕೊಂತ ಬಾಗಲದಾಗs ನಿಂತಿರತಾಳು...' 'ಅಲ್ಲೋಪಾ ಊರಾಗ ಇಷ್ಟ ಹರೇದ ಹುಡುಗೋರ ಆದಾವು.. ಇವನೆಲ್ಲಾ ಬಿಟ್ಟು ಆ ಬುಬ್ಬಣಿ ಈ ದ್ಯಾವಗ ಹೆಂಗ ಒಲದಿದ್ದಾಳೂ ಅಂತ....!'

'ಏ.... ಈ ಲಗಮಿ ಎರಡ ಸರತೇ ಹೊಟ್ಟೀ ಇಳಿಸಿಕೊಂಡಾಳಂತ: ತಿಗಡಿಗೆ ಹೋಗಿ.... ಅಲ್ಲೇ ನರಸಬಾಯಿಯ ಮನ್ಯಾಗs ಎಲ್ಲಾ ಮುಗಿಸಿಗೊಂಡ ಬಂದಾಳಂತ....'

'ಹೌದ. ಹೌದು. ಏ.... ಎಡ್ಡನೇ ಕೂಸಿಗಂತೀ ಕಣ್ಣಾs...ಮೂಗಾs...ಎಲ್ಲಾ ಮೂಡಿದ್ದೂ ಅಂತ...!

'ಏ...ಕೂಸ ಬಾಳ ಚಂದ ಇತ್ತಂತ'

'ಥೂ ಸೂಳೀ ಮಕ್ಕಳರ‍್ಯಾ..... ಥೇಟ್ ಕಣ್ಣೀಲೆ ಕಂಡವರಂಗs ಮಾತಾಡತೀರಿ... ಏನ ಕಂಡದೀರಿ ಅಂತ ಹಿಂತಾ ಮಾತ ಆಡತೀರಲೇ...? ಆಚೀ ವರ್ಷ ಕತ್ತಲಾದ ಮ್ಯಾಗ ಲಗಮವ್ವ ದ್ಯಾವಪ್ಪನ್ನ ಮಾತಾಡಿಸದಳು ಅಂತ ತಲೀಮಾಸದ ಒಂದ ಹುಡುಗ ಹೇಳಿತಂತ!... ಆ ಹುಡುಗ ಏನ ನೋಡೇತ್ಯೋ ಯಾಂವ ಬಲ್ಲ? ಇಷ್ಟರ ಮ್ಯಾಲs ಆಕಿಗೆ ಮಕ್ಕಳನ ಹುಟಸೂಮಟಾ ಮಾತಾಡತೀರಿ... ಅಂತ ಛತ್ರೇರ ಶಾಂತವೀರ ಎಲ್ಲರನೂ ಬೈದ.

'ಯಾ....ನಮ್ಮ ಸಾತವೀರಣ್ಣ ಲಗಮವ್ವನ ಮ್ಯಾಗ ಕಣ್ಣ ಹಾಕಿದಂಗ ಕಾಣತೈತಿ...'

ಯಾಕೋ ಯಣ್ಣಾ... ಅಂತ ಕಂಬ್ಯಾರ ಚಂದ್ರ್ಯಾ ನಗಿ ಚಾಟಿಕಿ ಮಾಡಿದ.

'ಏ ಚಂದ್ರ್ಯಾs....ಇದು ನಗಿಚಾಟಕೀ ಮಾಡೊ ವಿಷಯ ಅಲ್ಲ ತಮ್ಮಾs...'

ಅಂತ ಅಂವ ವಜನದಿಂದ ಹೇಳಿದಾಗ ಗುಂಪಿನ್ಯಾಗ ಇದ್ದ ಹುಡುಗೋರೆಲ್ಲಾ ಏ... ತೂಸಿಗಿ... ತುಸಿಗಿ! ಏ... ಇನ್ನ ಆ ವಿಚಾರನs ಬ್ಯಾಡ ಬಿಡ್ರೆಪಾs..."(ತೇರು, ಪು.೯೩-೯೪)

ವಿಠ್ಠಲನ ಗುಡಿ ಕಳುವ ಆದಾಗ ನೋಡಲು ಬಂದ ಗಂಡಸರನ್ನು ಮತ್ತು ವಯಸ್ಸಾದ ಹೆಂಗಸನ್ನು ಮಾತ್ರ ಒಳಗಡೆ ಬಿಟ್ಟು ಹುಡುಗಿಯರನ್ನು ಒಳಗಡೆ ಬಿಡದೆ ಅವರನ್ನು ಹೆದರಿಸುವಲ್ಲಿ ಉಡಾಳ ಚಂದ್ರ್ಯಾ ಮತ್ತು ಪೆದಣ್ಣಾರ ಈರ ಮಾಡಿರುವ ಕಿತಾಪತಿ ಹಾಸ್ಯದ ಹೊನಲನ್ನು ತರಿಸುತ್ತದೆ.

"ಉಡಾಳ ಚಂದ್ರ್ಯಾ ಮತ್ತು ಪೆದಣ್ಣಾರ ಈರ ಆ ಹೆಂಗಸರನ್ನು ಮೆಟ್ಟಿಲುಗಳ ಕೆಳಗಡೆ ನಿಂದರಿಸಿ.

‘ನೋಡ್ರೆವಾs.....ಯಾರು ಪಾವಡರ್ ಹಚಿಗೊಂಡೀರೋ ಅವರು ಯಾರು ಒಳಗೆ ಹೋಗಂಗಿಲ್ಲ.... ಪೋಲೀಸ್ ನಾಯಿಗೊಳು ಬರೂವ ಆದಾವು.... ಗುಡ್ಯಾಗ ಪಾವಡರ್ ವಾಸನಿ ಇಡಗಿತಂದರ.... ಅವಕ್ಕ ತುಡುಗರನ ಹಿಡಿಯೂದು ಕಠಿಣ ಆಕ್ಕೊಂಡ ಕುಂಡಿರತೈತಿ.... ಆಮ್ಯಾಲ ಪಂಚೀತಿ ಆಕ್ಕತಿ ನೋಡ್ರಿ... ಆ ನಾಯಿಗೋಳು ತುಡುಗರನ ಹಿಡಿಯೂದು ಬಿಟ್ಟು ನಿಮ್ಮನ್ನ ಹಿಡೀತಾವು..! ಆ ಮ್ಯಾಗ ಜೇಲಿನ ರೊಟ್ಟೀ ಕಡೀಬೇಕಾಗತೈತಿ..... ಪಾವಡರ್ ಹಂಚಿಗೊಂಡವರು ಒಟ್ಟs ಯಾರೂ ಗುಡ್ಯಾಗ ಬರತಕ್ಕದ್ದಲ್ಲ...’ ಅಂತ ತಾಕೀತು ಮಾಡಿ ಅಂಜಿಸಿದ್ದಕ್ಕ.... ಅಲ್ಲಿಗೆ ಬಂದ ಹರೇದ ಹುಡಿಗ್ಯಾರು ಯಾರು ಗುಡಿಯೊಳಗ ಹೋಗದಂಗಾಗಿ ಅವರು ಅಲ್ಲೇ ಹೊರಗs ನಿಂದರಬೇಕಾಯಿತು.”(ತೇರು,ಪು.೧೧೩)

ಎನ್ನುವಲ್ಲಿ ಹಾಗೂ ರಸ್ತೆಯ ಮಧ್ಯದಲ್ಲಿ ಒಂದು ಅಗಲವಾದ ಡೊಗಾರಿಯನ್ನು ನೋಡಿ ಅದಕ್ಕೆ ‘ಶಕ್ತಿಸ್ಥಾನ’ ಅಂತ ಹೆಸರು ಕೊಟ್ಟ ಸನ್ನಿವೇಶ ತುಂಬ ನಗೆಯನ್ನು ತರುವಂತದ್ದು.

ಅಯ್ ನನ್ನ ಶಿವನ ಅಂತ ಎಲ್ಲರ ಹಾಗೆ ಲಗಮವ್ವನು ಗುಡಿಗೆ ಬಂದಾಗ ಆಕೆಯನ್ನು ತಡೆದು ಚಂದ್ರ್ಯಾ ಆಡುವ ಮಾತು ನಗೆಯನ್ನು ತರಿಸುವಂತದು. ಹೀಗೆ ಕಾದಂಬರಿಯಲ್ಲಿ ಅಲ್ಲಲ್ಲಿ ಪ್ರಸಂಗಕ್ಕೆ ತಕ್ಕಂತೆ ರಾಘವೇಂದ್ರ ಪಾಟೀಲರು ಹಾಸ್ಯದ ಝುಳಕನ್ನು ಹಾಯಿಸುತ್ತಾರೆ. ಇವರದು ಒರಟು ಹಾಸ್ಯವಲ್ಲ. ಅದು ಹಿತಮಿತವಾದ ಮೃದು ಹಾಸ್ಯವಾಗಿದೆ.

ಈ ಕಾದಂಬರಿಯ ನಿರೂಪಣಾ ತಂತ್ರದ ವಿಶ್ಲೇಷಣೆಯ ಮೂಲಕ ಕೆಲವು ಸಂಗತಿಗಳನ್ನು ವಿವರಿಸಲು ಇಲ್ಲಿ ಯತ್ನಿಸುತ್ತೇನೆ.

- ‘ತೇರು’ ಹಳೆದು-ಹೊಸದರ ಘರ್ಷಣೆಯನ್ನು, ಪೇಟೆ-ಗ್ರಾಮೀಣ ಬದುಕಿನ ವ್ಯತ್ಯಾಸವನ್ನು ನಂಬಿಕೆ-ವಾಸ್ತವತೆಯ ನೆಲೆಯನ್ನು ಚರ್ಚಿಸುವಂತಹ ಒಂದು ವಿಶಿಷ್ಟ ಕಾದಂಬರಿ.

- ಜಾನಪದ ಬದುಕನ್ನು ತಮ್ಮ ಆಶಯಕ್ಕಾಗಿ ದುಡಿಸಿಕೊಳ್ಳುವುದರಲ್ಲಿ ಪಾಟೀಲರು ಸಿದ್ಧಹಸ್ತರು. ಈ ಕತೆಯನ್ನು ಹೇಳುತ್ತಾ ಅವರು ಓದುಗರನ್ನು ಮೈನವಿರೇಳುಸುವ, ಬೆಚ್ಚಿ ಬೀಳಿಸುವ ಭ್ರಮಾಧೀನ ಗೊಳಿಸುವ, ಬೇರೊಂದು ಲೋಕಕ್ಕೆ ಕರೆದೊಯ್ಯುತ್ತಾರೆ. ಸಂಘರ್ಷಗಳನ್ನು ಪರಿಚಯ ಮಾಡಿಕೊಡುತ್ತಾರೆ. ಈ ಬಗ್ಗೆ ಓದುಗರು ಯೋಚಿಸುವಂತೆ ಮಾಡುತ್ತಾರೆ. ‘ತೇರು’ ಈ ದಿಕ್ಕಿನಲ್ಲಿ ಓದುಗರನ್ನು ಕರೆದೊಯ್ಯುವ ವಿನೂತನ ಕಾದಂಬರಿ.

- ಬೆಳಗಾವಿ ಪ್ರದೇಶದ ಆಡು ಭಾಷೆಯನ್ನು ಚೆನ್ನಾಗಿಯೇ ದುಡುಸಿಕೊಂಡಿದ್ದಾರೆ. ಉದ್ದಕ್ಕೂ ಜಾನಪದ ಗೀತೆಯೊಂದರ ಸೊಲ್ಲುಗಳನ್ನು ಹೇಳುತ್ತ ಮತ್ತೆ ಮತ್ತೆ ಅದೇ ಧಾಟಿಯನ್ನು, ಭಾವವನ್ನು, ನೆನಪು ಮಾಡಿಕೊಡುತ್ತ ಕತೆಗೆ ಪೂರಕವಾದ ಗಾದೆಗಳನ್ನು ಬಳಸುತ್ತ ಅವರು ಹೇಳುವ ರೀತಿ ರಮ್ಯವಾಗಿದೆ.

- ಈ ಎಲ್ಲ ಸಂಗತಿಗಳಿಂದಾಗಿ ಹಾಗೂ ಗೊಂದಲಿಗರ ಕಥನದ ಪರಿಕಲ್ಪನೆಯಿಂದ ಕತೆಯೂ ಕೇವಲ ಒಂದು ಕಿಳ್ಳೇಕೇತ ಜನಾಂಗದ ಜೀವನದ ಕತೆಯಾಗದೆ, ಜೀವನದ ಒಳಗಿರುವ ಮಾದರಿಯನ್ನು ಅನ್ವೇಷಿಸುವ ಯತ್ನವಾಗಿದೆ.

ಒಟ್ಟಿನಲ್ಲಿ, 'ತೇರು' ಕೃತಿಯಲ್ಲಿ ಪ್ರಮುಖವಾಗಿ ಎರಡು ಅಂಶವನ್ನು ಬಿತ್ತರಿಸುತ್ತದೆ. ಒಂದು ಪುರಾಣ ದ್ಯಾವಪ್ಪ. ಎರಡು ಆಧುನಿಕ ದ್ಯಾವಪ್ಪ. ಈ ಪುರಾಣ ದ್ಯಾವಪ್ಪ ತನ್ನ ಕಾಯಾ, ವಾಚಾ, ಮನಸ್ಸನ್ನು ಸಂಪೂರ್ಣವಾಗಿ ಧಾರ್ಮಿಕ ಸೇವೆಯಾದ ರಕ್ತ ತಿಲಕದ ಸೇವೆಗೆ ತನ್ನ ಜೀವಿತವಿರುವವರೆಗೂ ನಡೆಸಿಕೊಂಡು ಬಂದು, ತನ್ನ ಮಗನನ್ನು ತೇರಿನ ಗಾಲಿಗಳಿಗೆ ಬಲಿಕೊಟ್ಟು ಶ್ರೇಷ್ಠ ದೈವ ಭಕ್ತನಾಗಿ ಜನರ ಬಾಯಲ್ಲಿ ಪುರಾಣ ದ್ಯಾವಪ್ಪನಾಗಿ ಕಾಣಿಸಿಕೊಂಡಿದ್ದಾನೆ. ಇದಕ್ಕೆ ವಿರುದ್ಧವಾಗಿ ಆಧುನಿಕ ದ್ಯಾವಪ್ಪ ತನ್ನ ಹಿರಿಯಜ್ಜನ ಹೆಸರನ್ನೇ ಇಟ್ಟುಕೊಂಡರು ಸಹ ಇತ ವಾಸ್ತವ ಬದುಕಿನ ಘಟನೆಯಿಂದ ಪ್ರೇರಣೆಗೊಂಡು ತನ್ನ ಹಳೆಯ ಸಂಪ್ರದಾಯ ನಿಷ್ಠೆ, ಆಚರಣೆಗೆ ವಿರುದ್ಧವಾಗಿ ಬಂಡಾಯದ ಮನೋಧರ್ಮವನ್ನು ಮೈಗೂಡಿಸಿಕೊಂಡು, ಸಮಾಜಕ್ಕೆ, ಬಡವರಿಗೆ, ರೋಗಿಗಳಿಗೆ, ಕೈಲಾದಷ್ಟು ಸಹಾಯ ಸಹಕಾರವನ್ನು ಮಾಡಲು ನಿರ್ಧರಿಸುವುದರಿಂದ ಹಾಗೂ ಆಧುನಿಕ ವಿಚಾರಗಳನ್ನು ತನ್ನ ಜೀವನದಲ್ಲಿ ರೂಪಿಸಿಕೊಂಡು ತೇರಿನ ರಕ್ತ ತಿಲಕದ ಸೇವೆಯನ್ನು ತ್ಯಜಿಸಿ ಜನರ ಬಾಯಲ್ಲಿ ಕಟ್ಟುಕಥೆಗೆ ಒಳಗಾಗಿ ಆಧುನಿಕ ದ್ಯಾವಪ್ಪನಾಗಿ ಕಂಡುಬಂದಿದ್ದಾನೆ.

ಹೀಗೆ ಪುರಾಣ ದ್ಯಾವಪ್ಪ ತನ್ನ ಪರಂಪರೆಯನ್ನು ಬಿಟ್ಟು ಹೊರಬರದೆ, ಅಲ್ಲಿಯ ಮೌಢ್ಯತೆಯಲ್ಲಿಯೇ ಸಿಕ್ಕಾಕಿಕೊಂಡಿದ್ದಾನೆ. ಆಧುನಿಕ ದ್ಯಾವಪ್ಪ ಮೌಢ್ಯತೆಯಿಂದ ಬಲು ಬೇಗನೆ ಬಿಡುಗಡೆಗೊಂಡವನಾಗಿದ್ದಾನೆ. ರಾಘವೇಂದ್ರ ಪಾಟೀಲರು ಬಹಳ ಸೂಕ್ತವಾಗಿ ಈ ಅಂಶವನ್ನು ಕೃತಿಯಲ್ಲಿ ನಿರೂಪಿಸಿದ್ದಾರೆ. ಕಾದಂಬರಿಗೆ ಪುರಾಣದ ಛಾಯೆ ಮೂಡಲು ಗೊಂದಲಿಗರ ಹಾಡಿನ ಪರಿಕಲ್ಪನೆ ಬೇಕಾಗಿತ್ತು. ಅದಕ್ಕಾಗಿ ಕಥನ ಕವನದ ರೂಪ ಕೊಟ್ಟಿದ್ದಾರೆ. ಆದರೆ ಆಧುನಿಕ ವಿಚಾರಗಳಿಂದ ಮುನ್ನಡೆಯುವಾಗ ಈ ಕಥನಕವನದ ರೂಪ ಬೇಕಾಗಿರದೆ ಇರುವುದರಿಂದ, ಗದ್ಯರೂಪವನ್ನು ತಂದಿದ್ದಾರೆ. ಇದು ಆಧುನಿಕ ಪುರಾಣವಾಗಿ ರೂಪುಗೊಳ್ಳಲು ಕಾರಣವಾಗಿದೆ. ಇಲ್ಲಿಯ ಕಥೆಯು "ಸಾಂಪ್ರದಾಯಿಕ ಪ್ರಜ್ಞೆಯ ಆಕೃತಿಗಳು ಸಾಮಾಜಿಕ ಪ್ರಜ್ಞೆಯ ಆಕೃತಿಗಳು ಮತ್ತು ವೈಚಾರಿಕ ಪ್ರಜ್ಞೆಯ ಆಕೃತಿಗಳು ಒಂದಾಗಿ ಬೆಸೆದುಕೊಂಡು ತ್ರಿವಳಿ ಕೂಟದಂತೆ ಏಕೀಭವಿಸಿ ಸಂಭವಿಸಿದೆ. ಕಥೆ-ಕಥನ-ಭಾಷೆ-ವ್ಯಕ್ತಿ-ಕುಟುಂಬ-ಆಚರಣೆ ಸಂಪ್ರದಾಯ ಸಮಾಜ ಇವೆಲ್ಲವೂ ಇಲ್ಲಿ ಒಂದೇ ಎಡೆಯಲ್ಲಿ ನಿಂತು ತಮ್ಮ ತಮ್ಮ ಮೈಯನ್ನು ಪಡೆದುಕೊಳ್ಳುತ್ತವೆ. ಅವು ಪಾರಸ್ಪರಿಕ ಸಹಯೋಗಗಳ ಸಮೂಲ ಸಂಬಂಧಗಳನ್ನು ಕಲೆಯ ಮೂಲಕವೇ ತಿಳಿಯಲು ಯತ್ನಿಸುತ್ತವೆ."[೧೫]

"ತೇರು" ಕಾದಂಬರಿಯ ವಿನ್ಯಾಸವನ್ನು ಗಮನಿಸಿದರೆ ಇದು ಗದ್ಯ ಪ್ರಕಾರದ ಭಾವಗೀತೆಯಾಗಿದೆ.

ರಾಘವೇಂದ್ರ ಪಾಟೀಲರು ಗದ್ಯವನ್ನೆ ತಮ್ಮ ಕಾದಂಬರಿಯಲ್ಲಿ ತಂದಿದ್ದರು ಸಹ ಜನಪದ ಹಾಡುಗಾರಿಕೆಯ (ಗೊಂದಲಿಗರ ಹಾಡಿನ ಕಥನದ ಮೂಲಕ) ಸಂಪ್ರದಾಯವನ್ನು ಅಳವಡಿಸಿಕೊಂಡಿರುವುದು ಕಾದಂಬರಿಯ ಮೊದಲನೆಯ ಭಾಗದಲ್ಲಿ ತುಂಬಾ ಸೊಗಸಾಗಿ ಮೂಡಿಬಂದಿದೆ. ನಂತರದ ಭಾಗದಲ್ಲಿ ಗದ್ಯ ಪ್ರಧಾನವಾಗಿ ಗೋಚರಿಸುತ್ತದೆ.

ಕಥನ ಕವನ ಮತ್ತು ಗದ್ಯರೂಪದ ಮಿಶ್ರಣದಿಂದ ಕೂಡಿದ ಕೃತಿಯು ಎರಡು ಭಿನ್ನರೂಪದ ಆಲೋಚನೆಯನ್ನು ನಮ್ಮ ಮುಂದೆ ಇಡುತ್ತದೆ. "ಶೋಷಣೆಗೆ ಒಳಪಟ್ಟು, ಆ ಶೋಷಣೆಯ ಸಂಕೇತವಾಗೇ ತನ್ನ ಗುರುತಿಸುವಿಕೆಯನ್ನು ಕಂಡುಕೊಂಡ ಹಿಂದಿನ ದ್ಯಾವಪ್ಪ ಜಾನಪದೀಯ ಆಶಯಗಳ ನೆಲೆಯಲ್ಲಿ ಜನಪದ ಸಂಸ್ಕೃತಿಯ ಅಂಗವಾಗಿ ಉಳಿದರೆ, ಆಧುನಿಕ ವಿಚಾರಗಳಿಂದ ಪ್ರಭಾವಿತನಾದ, ವೈಚಾರಿಕ ಪ್ರಜ್ಞೆಯ ಆಧುನಿಕ ದ್ಯಾವಪ್ಪ ಆ ಶೋಷಣೆಯನ್ನು ವಿರೋಧಿಸುತ್ತಲೇ ಶಿಷ್ಟ ಸಂಸ್ಕೃತಿಯ ಪ್ರತೀತವಾಗುತ್ತಾನೆ. ಇವನು ತನ್ನ ಹಿಂದಿನದಕ್ಕೆ ಮುಖಾಮುಖಿಯಾಗುವುದು. ತನ್ನ ಹಿಂದಿನ ದ್ಯಾವಪ್ಪನ ಎಲ್ಲಾ ಆಚರಣೆಗೆ ಪ್ರತಿರೋಧಿಯಾಗುವುದು, ಆ ಜಾನಪದ ಸಂಸ್ಕೃತಿಗೆ ಮುಖಾಮುಖಿಯಾಗುವ ಕ್ರಿಯೆಯಾಗಿ ಕಾದಂಬರಿಯಲ್ಲಿ ಬೆಳೆದು ಬಂದಿದೆ. ಆದ್ದರಿಂದ ಇದು ಶಿಷ್ಟ ಮತ್ತು ಜಾನಪದ ಸಂಸ್ಕೃತಿಯ ಸಂಘರ್ಷವನ್ನು ದಾಖಲಿಸುವ ಕೃತಿಯಾಗಿ ಕಾಣಿಸಿಕೊಳ್ಳುತ್ತದೆ. ಜಾನಪದ ಸಂಸ್ಕೃತಿಯಲ್ಲಿ ರೂಪ ಪಡೆದ ದ್ಯಾವಪ್ಪನ ಚರಿತ್ರೆ ಆಧುನಿಕ ಪುರಾಣವಾಗುವ ಎಲ್ಲ ಅನುಕೂಲಗಳು 'ತೇರು' ಕೃತಿಯಲ್ಲಿವೆ."[೧೬]

'ತೇರು' ಕೃತಿ ಜನಪದ ಸಂಸ್ಕೃತಿಯಲ್ಲಿ ತನ್ನ ಆರಂಭವನ್ನು ವೈಭವದಿಂದ ಆಚರಿಸುತ್ತಾ ಮುನ್ನಡೆದು, ಕೊನೆಗೆ ಅದೇ ಜನಪದ ಸಂಸ್ಕೃತಿಯ ರೂಪವನ್ನು ವಿಮರ್ಶಿಸುವ, ವಿಶ್ಲೇಷಿಸುವ ಕಾರ್ಯದಲ್ಲಿ ವಿಷಾದದ ಎಳೆಗಳನ್ನು ಬಿತ್ತರಿಸುತ್ತಾ ಹೋಗುವಲ್ಲಿ ಒಂದು ನಿರ್ಧಿಷ್ಟವಾದ ಆಶಯವನ್ನು ಹೊತ್ತು ನವಯುಗದ ಪ್ರತೀಕವಾಗಿ ಕಾಣಿಸಿಕೊಳ್ಳುತ್ತದೆ. ಪುರಾಣ ದ್ಯಾವಪ್ಪ ಅನಕ್ಷರತೆಯಿಂದ ಕೂಡಿದ ವ್ಯಕ್ತಿಯಾದರೆ, ಆಧುನಿಕ ದ್ಯಾವಪ್ಪ ಅಕ್ಷರಸ್ಥನಾಗಿ ಕಾಣಿಸಿಕೊಳ್ಳುವುದು, ಯಾವುದು ಮೂಲದಲ್ಲಿ ಕಳೆದು ಹೋಗಿದೆಯೋ ಅದನ್ನು ಆಧುನಿಕದಲ್ಲಿ ಪಡೆದುಕೊಳ್ಳುವ ಹಂಬಲವನ್ನು ಕೃತಿಯು ಹೊಂದಿದೆ. ಹೀಗೆ "ಕಾಲಕಾಲಕ್ಕೆ ಸಂಭವಿಸುವ ಸಾಮಾಜಿಕ-ಸಾಂಸ್ಕೃತಿಕ ರಾಜಕೀಯ ಪಲ್ಲಟಗಳು ಮನುಷ್ಯ ಜೀವಿತದ ಗುಣಾತ್ಮಕತೆಯ ಮೇಲೆ ಬೀರುವ ಅಪರಿಹಾರ್ಯವೆನಿಸುವ ಪ್ರಭಾವಗಳನ್ನು ರೂಪಕಾತ್ಮಕ ನೆಲೆಯಲ್ಲಿ ಕಟ್ಟಿಕೊಡುವುದು ತೇರು ಕಾದಂಬರಿಯ ವೈಶಿಷ್ಟ್ಯ. ಮಾನವ ಜೀವಿತವೇ ಈ ಪಲ್ಲಟಗಳನ್ನು ಗ್ರಹಿಸುವ ಗ್ರಾಹಕ ಸಾಮಗ್ರಿಯಾಗುತ್ತದೆ. ಮೂರು ತಲೆಮಾರಿನ ಅಳತೆಗೋಲಲ್ಲಿ ಪುರಾಣ - ಇತಿಹಾಸ - ವರ್ತಮಾನಗಳನ್ನು ಅನುಸಂಧಾನ ಮಾಡುತ್ತಾ 'ತೇರು' ತನ್ನನ್ನು ತಾನೇ ಕಟ್ಟಿಕೊಳ್ಳುತ್ತದೆ. ಹಾಗೆ ಕಟ್ಟಿಕೊಳ್ಳುವಾಗ ಕಾದಂಬರಿ ಪುರಾಣದ ಕೀರ್ತನೆಗೋ ವರ್ತಮಾನದ ಭರ್ತ್ಸನೆಗೋ ತೊಡಗದೆ ಬದುಕಿನ ಸೂಕ್ಷ್ಮಗಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತದೆ. ಬದುಕಿನ ಪ್ರವಹನಕ್ಕೆ ಆಯಾ ಕಾಲದಲ್ಲಿ ಕಾರಣವಾಗುವ

ಜೀವಶಕ್ತಿಯನ್ನೂ, ಘಾತುಕವೃತ್ತಿಯನ್ನೂ ಪಕ್ಷಪಾತ ರಹಿತವಾಗಿ ಗುರುತಿಸುವುದು ಸಾಧ್ಯವಾಗಿದೆ ಎನ್ನುವುದೇ ಕಾದಂಬರಿಯ ಗುಣಾತ್ಮಕ ಶಕ್ತಿ."[೧೭]

ಒಟ್ಟಾರೆ, ರಾಘವೇಂದ್ರ ಪಾಟೀಲರ 'ತೇರು' ಕಾದಂಬರಿ ಬೆಳಗಾವಿ ಜಿಲ್ಲೆಯ ಪ್ರಾದೇಶಿಕ ಭಾಷೆಯನ್ನೊಳಗೊಂಡು, ಸಾಂಸ್ಕೃತಿಕ ಅಂಶಗಳನ್ನು ಉಲ್ಲೇಖಿಸುತ್ತ, ಆಧುನಿಕ ಪ್ರಗತಿಪರವಾದ ನಿಲುವನ್ನು ತಾಳುವಲ್ಲಿ, ಪರಂಪರೆಯನ್ನು ವಿಮರ್ಶಿಸುವ ವೈಚಾರಿಕ ಪ್ರಜ್ಞೆಯನ್ನು ಬಿತ್ತರಿಸುತ್ತಾ, ಸಾಂಸ್ಕೃತಿಕ ಬೇರುಗಳನ್ನು ಒಳಗೊಂಡ ಜಾನಪದೀಯ ಕೃತಿಯಾಗಿ, ಜನಾಂಗೀಯ ಅಧ್ಯಯನವಾಗಿ, ಶೋಷಣೆಯನ್ನು ತನ್ನ ಗರ್ಭದಲ್ಲಿಟ್ಟುಕೊಂಡು, ಸೃಜನಶೀಲ ವ್ಯಕ್ತಿಯಿಂದ ರೂಪವನ್ನು ತಾಳಿ ಕನ್ನಡ ಸಾಹಿತ್ಯದಲ್ಲಿ ಪ್ರಯೋಗಶೀಲತೆಯ ಹೊಸ ಮಾದರಿಯಾದ ಕಾದಂಬರಿಯಾಗಿದೆ. ಪುರಾಣ ಕತೆ ಮತ್ತು ಜಾನಪದ ಕತೆ ಇವುಗಳ ನಡುವೆ ವ್ಯತ್ಯಾಸ ಕಣ್ಣಿಗೆ ಕಾಣುವಷ್ಟು ಸ್ಪಷ್ಟವಾಗಿದ್ದರೂ ಅದು ತಾತ್ವಿಕ ವ್ಯತ್ಯಾಸವಲ್ಲ. ಪುರಾಣದಲ್ಲಿ ನಡೆಯುವುದೆಲ್ಲ ಜಾನಪದ ಕತೆಯಲ್ಲಿ ಪ್ರಾದೇಶಿಕ ಪರಿಸರದಲ್ಲಿ ನಡೆಯುತ್ತದೆ. ಅದಕ್ಕೆ ಪ್ರಸ್ತುತ ಕಾದಂಬರಿಯ ವಿನ್ಯಾಸವೂ ಹೊರತಲ್ಲ. ಒಂದು ಸಮುದಾಯದ ಬದುಕಿನ ವಸ್ತುವನ್ನು ರೂಪಕವನ್ನಾಗಿ ಮಾಡಿಕೊಂಡು ಮನುಷ್ಯನ ಅಸ್ತಿತ್ವದ ಸತ್ಯಾಸತ್ಯತೆಯನ್ನು ಹುಡುಕುವ ಕಾದಂಬರಿ ಇದು. ಕನ್ನಡ ಕಾದಂಬರಿ ಇಲ್ಲಿಯವರೆಗೆ ಸಾಧಿಸಿಕೊಂಡು ಬಂದಿರುವ ಹಲವಾರು ಸಿದ್ಧಿಗಳ ಪಂಕ್ತಿಗೆ ಈ ಕಾದಂಬರಿ ಸಿದ್ಧಿಯನ್ನು ಹೊಸದಾಗಿ ಸೇರಿಸಬೇಕು. ಹಾಗೂ ಭಾಷಾ ಅಧ್ಯಯನದ ದೃಷ್ಟಿಯಿಂದ ಹೆಚ್ಚಿನ ಆದ್ಯತೆಯನ್ನು ನೀಡಿ ಕಾದಂಬರಿಯನ್ನು ಗುರುತಿಸಿದರೆ ಅದು ತನ್ನ ಆಶಯ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಬಿಚ್ಚಿಡುತ್ತಾ ಹೋಗುತ್ತದೆ ಎಂಬುದು ಸ್ವಾರಸ್ಯಕರವಾದ ಸಂಗತಿಯಾಗಿದೆ. ಹೀಗೆ ಈ ಎಲ್ಲಾ ಸಂಗತಿಯನ್ನು ಚರ್ಚಿಸಿ 'ತೇರು' ಕಾದಂಬರಿಯ ಆಶೆಯ ಮತ್ತು ಸಾಂಸ್ಕೃತಿಕ ಮಹತ್ವವನ್ನು ಗುರುತಿಸಲಾಗಿದೆ.

ಅಡಿಟಿಪ್ಪಣಿಗಳು

೧. ಚರಿತ್ರೆ ವರ್ತಮಾನದ ಕಥನ, ಡಾ.ಕೆ.ಮೋಹನ್ ಕೃಷ್ಣರೈ, ಹೊಸತು ಮಾಸ ಪತ್ರಿಕೆ, ಸಂಪಾದಕರು : ಜಿ. ರಾಮಕೃಷ್ಣ, ೨೦೦೮ ಜೂನ್, ಪು.೫೯

೨. ವರ್ತಮಾನದಲ್ಲಿ ಭೂತ, ಕುಮಾರ ಕೆ., ಸಾಹಿತ್ಯ ಸಂವಾದ ೬೦-೬೧ (ಜನವರಿ ಮಾರ್ಚ್ ೨೦೦೫), ಸಂಪಾದಕರು : ರಾಘವೇಂದ್ರಪಾಟೀಲ, ಸಂವಾದ ಪ್ರಕಾಶನ ಮಲ್ಲಾಡಿಹಳ್ಳಿ, ಪು.೧೨೪

೩. ತೇರು ಕಾದಂಬರಿಯ ಮುನ್ನುಡಿ, ಡಾ.ಸಿ.ಎನ್.ರಾಮಚಂದ್ರನ್, ಪು.೧೨

೪. ವರ್ತಮಾನದಲ್ಲಿ ಭೂತ, ಕುಮಾರ ಕೆ., ಸಾಹಿತ್ಯ ಸಂವಾದ ೬೦-೬೧ (ಜನವರಿ ಮಾರ್ಚ್ ೨೦೦೫), ಸಂಪಾದಕರು : ರಾಘವೇಂದ್ರಪಾಟೀಲ, ಸಂವಾದ ಪ್ರಕಾಶನ ಮಲ್ಲಾಡಿಹಳ್ಳಿ, ಪು.೧೨೬

೫. ಅದೇ, ಪು.೧೨೮ ಮತ್ತು ೧೨೯

೬. ತೇರು ಬೆನ್ನಿಗೆ ನಿಂತು... ಪುರುಷೋತ್ತಮ ಬಿಳಿಮಲೆ, ಹಸಿರುಕ್ರಾಂತಿ ಸಾಪ್ತಾಹಿಕ ಸಂಪದ ೧೦-೦೮-೨೦೦೬, ಪು.೫

೭. ತೇರು : ಒಂದು ಐತಿಹ್ಯದ ನಿರಚನೆ, ಕೆ.ವಿ.ತಿರುಮಲೇಶ್, ವಿಜಯ ಕರ್ನಾಟಕ, ೨೯-೮-೨೦೦೮, ಪು.೬

೮. ಅದೇ, ಪು.೬

೯. ವರ್ತಮಾನದಲ್ಲಿ ಭೂತ, ಕುಮಾರ ಕೆ., ಸಾಹಿತ್ಯ ಸಂವಾದ ೬೦-೬೧ (ಜನವರಿ ಮಾರ್ಚ್ ೨೦೦೫), ಸಂಪಾದಕರು : ರಾಘವೇಂದ್ರಪಾಟೀಲ, ಸಂವಾದ ಪ್ರಕಾಶನ ಮಲ್ಲಾಡಿಹಳ್ಳಿ, ಪು.೧೨೫

೧೦. ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ, ಡಾ. ಗುರುಪಾದ ಮರಿಗುದ್ದಿ, ಸಹ್ಯಾದ್ರಿ ಪ್ರಕಾಶನ ಜಯಲಕ್ಷ್ಮಿ ಪುರಂ ಮೈಸೂರು, ೫೭೦೦೦೧೨, ೧೯೮೯, ಪು.೯೭

೧೧. ಕರ್ನಾಟಕ ಜನಪದ ಕಲೆಗಳ ಕೋಶ, ಸಂಪಾದಕರು : ಹಿ.ಚಿ.ಬೋರಲಿಂಗಯ್ಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩೨೨೧, ೧೯೯೬, ಪು.೮೩

೧೨. ಅದೇ, ಪು.೨೭೬

೧೩. ಕನ್ನಡ ಪ್ರಾದೇಶಿಕ ಕಾದಂಬರಿಗಳ ಜಾನಪದೀಯತೆ, ಡಾ.ಪಿ.ಕೆ.ಖಂಡೋಬಾ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯, ಪು.೪೯

೧೪. ಅದೇ, ಪು.೪೯

೧೫. ತೇರು ಕನ್ನಡಕ್ಕೊಂದು ವಿಶಿಷ್ಟ ಕಾದಂಬರಿ, ಮಲ್ಲೇಪುರಂ ಜಿ. ವೆಂಕಟೇಶ್, ಹಸಿರುಕ್ರಾಂತಿ ಸಾಪ್ತಾಹಿಕ ಸಂಪದ, ೧೦-೦೮-೨೦೦೬, ಪು.೫

೧೬. ವರ್ತಮಾನದಲ್ಲಿ ಭೂತ, ಕುಮಾರ ಕೆ., ಸಾಹಿತ್ಯ ಸಂವಾದ ೬೦-೬೧ (ಜನವರಿ ಮಾರ್ಚ್ ೨೦೦೫), ಸಂಪಾದಕರು : ರಾಘವೇಂದ್ರಪಾಟೀಲ, ಸಂವಾದ ಪ್ರಕಾಶನ ಮಲ್ಲಾಡಿಹಳ್ಳಿ, ಪು.೧೩೦

೧೭. ತೇರು ಕಾದಂಬರಿ ಬೆನ್ನುಡಿ, ಎಚ್.ಎಸ್.ವೆಂಕಟೇಶಮೂರ್ತಿ.

ಅಧ್ಯಾಯ ೪

ಪಾತ್ರಗಳ ಮನೋವಿಶ್ಲೇಷಣೆ

೪

ಪಾತ್ರಗಳ ಮನೋವಿಶ್ಲೇಷಣೆ

ರಾಘವೇಂದ್ರ ಪಾಟೀಲರ 'ತೇರು' ಕಾದಂಬರಿಯಲ್ಲಿ ಬರುವ ಪಾತ್ರಗಳು ಅರ್ಥಪೂರ್ಣವಾಗಿವೆ. ಒಂದು ಸಮುದಾಯದ ಸಂಸ್ಕೃತಿಯನ್ನು ಸಮರ್ಥವಾಗಿ ಅಭಿವ್ಯಕ್ತಿಸುತ್ತವೆ. ಅವರ ಕಾದಂಬರಿಯಲ್ಲಿಯ ಪಾತ್ರಗಳನ್ನು ಗ್ರಾಮೀಣ ಪ್ರದೇಶದ ನೆಲೆಗಟ್ಟಿನ ಮೇಲೆ ರಚಿತವಾದುದರಿಂದ ಸನ್ನಿವೇಶಕ್ಕೆ ತಕ್ಕಂತೆ ಪಾತ್ರವನ್ನು ರಚನೆ ಮಾಡಿದ ರೀತಿ ಅದ್ಭುತವಾಗಿದೆ. "ಕೃತಿಯಲ್ಲಿ ಅನೇಕ ನಿರೂಪಕರಿದ್ದಾರೆ. ಅನೇಕ ಶೈಲಿಯ/ಧಾಟಿಯ ನಿರೂಪಣೆಗಳಿವೆ. ಕೃತಿಯ ಒಟ್ಟಾರೆ ನಿರೂಪಕ ಬೆಂಗಳೂರಿನಲ್ಲಿರುವ ಪಾಟೀಲನೆಂಬ ಪತ್ರಕರ್ತ. ತನ್ನ ತಿರುಗಾಟದಲ್ಲಿ ಅವನು ಭೇಟಿ ಮಾಡುವ ಅನೇಕ ವಿಕ್ಷಿಪ್ತ ವ್ಯಕ್ತಿಗಳಲ್ಲಿ ಸ್ವಾಂವಜ್ಜನೆಂಬ ಧರಮನಟ್ಟಿಯ ಪೂರ್ವೇತಿಹಾಸ ಮತ್ತು ಸದ್ಯ ಸ್ಥಿತಿ ಇವುಗಳನ್ನು ಅರಿಯುತ್ತೇವೆ. ಆದರೆ, ಕಥೆಯ ಒಂದು ಮುಖ್ಯಭಾಗವಾದ ತೇರಿನ ಮತ್ತು ರಕ್ತತಿಲಕದ ಸಂಗತಿ ವೃತಿಗಾಯಕರಾದ ಗೊಂದಲಿಗರಿಂದ, ಅವರ 'ಗಾಯನ'ದ ಮೂಲಕವೇ ನಿರೂಪಿಸಲ್ಪಟ್ಟಿದೆ. (ಈ ಗೊಂದಲಗರ ಕಥನ ಕಾಲ್ಪನಿಕವಾಗಿದ್ದರೂ ವಾಸ್ತವಿಕ ಮೌಖಿಕ ಕಥನ/ಸ್ಥಳ ಪುರಾಣಗಳಷ್ಟೇ ಪರಿಣಾಮಕಾರಿಯಾಗಿದ್ದು, ಕಥೆಗಾರನ ಬಹುಮುಖೀ ಸೃಜನಶೀಲ ಪ್ರತಿಭೆಗೆ ನಿದರ್ಶವಾಗಿದೆ.) ಪರಿಣಾಮತಃ ಮುಖ್ಯ ನಿರೂಪಕನ ವಸ್ತುನಿಷ್ಠ ಧ್ವನಿ, ಸ್ವಾಂವಜ್ಜನ ಹಳಹಳಿಕೆಯ ಹಾಗೂ ಕಳಕಳಿಯ ಧ್ವನಿ, ಗೊಂದಲಿಗರ ಶೈಲೀಕೃತ ಹಾಗೂ ಕಥನೋತ್ಸಹದ ಧ್ವನಿ, ಕೊನೆಯ ತಲೆಮಾರಿನ ದ್ಯಾವಪ್ಪನ ಹತಾಶ ಧ್ವನಿ, ಇವೆಲ್ಲವೂ ಒಂದೆಡೆ ಬಂದು, ನಿರೂಪಣೆಯ ನೆಲೆಯಲ್ಲಿ ಮೌಖಿಕ ಬಹುಧ್ವನಿತ್ವ 'ತೇರು' ಕೃತಿಗೆ ಲಭಿಸಿದೆ" ಎಂದು ಕಾದಂಬರಿಯ ಮುನ್ನುಡಿಯಲ್ಲಿ ಸಿ.ಎನ್ .ರಾಮಚಂದ್ರನ್ ಅವರು ಅಭಿಪ್ರಾಯಪಟ್ಟಿದ್ದಾರೆ.

ಲೇಖಕರು ತಮ್ಮ ಪ್ರದೇಶದ ಜನರು ಹೆಸರುಗಳನ್ನು ಕಾದಂಬರಿಯ ಪಾತ್ರಗಳ ಮುಖಾಂತರ ದುಡಿಸಿಕೊಂಡು ತರುವುದರಿಂದ ಪ್ರದೇಶಿಕತೆಗೆ ಹೆಚ್ಚಿನ ಒತ್ತನ್ನು ಕೊಟ್ಟಿದ್ದಾರೆ. ಅಷ್ಟೆ ಅಲ್ಲದೆ ಇಲ್ಲಿಯ ಕೆಲವು ಪಾತ್ರಗಳು ಅವರ 'ದೇಶಗತಿ'ಯ ಸಂಕಲನದಿಂದ ಎದ್ದು ಬಂದಿರುವುದನ್ನು ಉಲ್ಲೇಖಿಸಲಾಗಿದೆ.

ಪತ್ರಕರ್ತ ಪಾಟೀಲ

ಕಾದಂಬರಿಯನ್ನು ಮುನ್ನಡಿಸುವ ಸಾರಥಿ ಹಾಗೂ ಮುಖ್ಯ ನಿರೂಪಕ ಬೆಂಗಳೂರಿನಲ್ಲಿರುವ ವರ್ತಮಾನ ಪತ್ರಿಕೆಯ ಪತ್ರಕರ್ತ ಪಾಟೀಲ. ಇತನ ಮೂಲ ಊರು ಬೆಟಗೇರಿ. ತನ್ನ ತಿರುಗಾಟದ

ಸಂದರ್ಭದಲ್ಲಿ ಅವನು ಭೇಟಿ ಮಾಡುವ ಅನೇಕ ವ್ಯಕ್ತಿಗಳಲ್ಲಿ ಸ್ವಾಂವಜ್ಜನೆಂಬ ವಯಸ್ಸಾದ ವ್ಯಕ್ತಿಯಿಂದ ಧರಮನಟ್ಟಿಯ ಪೂರ್ವೇತಿಹಾಸ ಮತ್ತು ಸದ್ಯಸ್ಥಿತಿಯನ್ನು ಕಾದಂಬರಿಯ ಉದ್ದಕ್ಕೂ ವಿವರಿಸುತ್ತಾ ಮುನ್ನಡಿಸುವ ಪಾತ್ರ ಇದಾಗಿದೆ. ಮೊದಲನೆಯ ಸಾರಿ ಭೇಟಿಯಾದ ಸ್ವಾಂವಜ್ಜನ ಮುಖಾಂತರ 'ದೇಶಗತಿ'ಯ ಕಥೆಯನ್ನು ಕೇಳಿ ಪತ್ರಿಕೆಯಲ್ಲಿ ಪ್ರಕಟಿಸಿರುತ್ತಾನೆ. ನಂತರ ಗೋಕಾವಿ ಬಸ್ ಸ್ಟ್ಯಾಂಡಿನಲ್ಲಿ ಸ್ವಾಂವಜ್ಜನ ಭೇಟಿಯಾದಾಗ ಮತ್ತೊಂದು ಧರಮನಟ್ಟಿಯ ತೇರಿನ ಕಥೆಯನ್ನು ಕೇಳಿ ಧರಮನಟ್ಟಿಗೆ ಹೋಗಿ, ಅಲ್ಲಿಯ ವಿಠ್ಠಲ ದೇವರ ರಥೋತ್ಸವದಲ್ಲಿ ಭಾಗವಹಿಸಿ, ಅಲ್ಲಿಯ ಗೊಂದಲಿಗರ ಹಾಡುವ ಕಥನವನ್ನು ಆಲಿಸಿ, ಮರುದಿವಸ ಗೊಂಬೀರಾಮರ ಮನೆತನದವರು ವಾಸಿಸಿರುವ ಕಳ್ಳಿಗುದ್ದಿ ಊರಿಗೆ ಹೋಗಿ, ಅಲ್ಲಿಯ ಸನದನ್ನು ನೋಡಿ ಬೆಂಗಳೂರಿಗೆ ಮರಳುತ್ತಾನೆ. ಬೆಂಗಳೂರಿನಲ್ಲಿ ಒಂದು ದಿನ ವಿಶ್ರಾಂತಿ ಪಡೆಯುವಾಗ ಆಧುನಿಕ ದ್ಯಾವಪ್ಪ ಆಗಮಿಸುತ್ತಾನೆ. ದ್ಯಾವಪ್ಪನ ಮುಖಾಂತರ ಆತನ ಕಥೆಯನ್ನು ತಿಳಿದುಕೊಳ್ಳುತ್ತಾನೆ. ಮುಂದೆ ಧರಮನಟ್ಟಿಯ ತೇರಿಗೆ ದಿಡನೂರುವರ್ಷ ಆಗತೈತಿ ಅದಕ್ಕೆ ನೀವು ಮತ್ತು ನಿಮ್ಮ ಕುಟುಂಬ ಸಮೇತ ಧರಮನಟ್ಟಿಗೆ ಬರಬೇಕೆಂದು ಸ್ವಾಂವಜ್ಜ ಇನ್ನೂ ತೇರು ಆರು ತಿಂಗಳು ಇರುವಾಗ ಪತ್ರವನ್ನು ಬರೆಯುತ್ತಾನೆ. ತನ್ನ ಹೆಂಡತಿಯ ಒತ್ತಾಸೆಯ ಮೇರೆಗೆ ಧರಮನಟ್ಟಿಗೆ ಬರುತ್ತೇವೆಂದು ಸ್ವಾಂವಜ್ಜನಿಗೆ ಪತ್ರವನ್ನು ಬರೆಯುತ್ತಾನೆ. ಇದಾದ ನಂತರ ತನ್ನ ಪತ್ರಿಕೆಯ ಕಾರ್ಯಾಲಯದಲ್ಲಿ ಕುಳಿತಿರುವಾಗ ಮಾಣಿಕ ದೇಸಾಯಿ ಸುಯಿಸೈಡ್ ಆದ ಟೆಲಿಪ್ರಿಂಟರಿನ ಸುದ್ದಿ ತಿಳಿದು ಆತನ ಮರಣದ ಸುದ್ದಿಯನ್ನು ಪತ್ರದ ಮುಖಾಂತರ ಧರಮನಟ್ಟಿಯ ಸ್ವಾಂವಜ್ಜನಿಗೆ ತಿಳಿಸಿ ಈ ವರ್ಷ ಆತ ಮರಣ ಹೊಂದಿದ್ದರಿಂದ ರಥೋತ್ಸವ ಕಾರ್ಯಕ್ರಮ ನಡೆಯುತ್ತದೆಯೋ ಅಥವಾ ಇಲ್ಲವೋ ಎಂಬುದನ್ನು ತಿಳಿಸಬೇಕೆಂದು ಪತ್ರ ಬರೆಯುತ್ತಾನೆ. ಇದಕ್ಕೆ ಪ್ರತಿಯಾಗಿ ಧರಮನಟ್ಟಿಯಿಂದ ಸ್ವಾಂವಜ್ಜ ಮಾಣಿಕ್ ದೇಸಾಯಿಯವರು ಸತ್ತರೆ ಏನಾಯ್ತು, ಧರಮನಟ್ಟಿಯ ತೇರು ಈ ಸೂರ್ಯ-ಚಂದ್ರ ಇರುವವರೆಗೆ ನಡೆಯುತ್ತದೆಂದು, ನಿಮ್ಮ ಕುಟುಂಬದ ಸದಸ್ಯರ ಜೊತೆಗೆ ನೀವು ತಪ್ಪದೆ ಬರಬೇಕೆಂದು ಪತ್ರದ ಮುಖಾಂತರ ತಿಳಿಸುತ್ತಾನೆ. ಇದಾದ ನಂತರ ಧರಮನಟ್ಟಿಯ ರಥೋತ್ಸವಕ್ಕೆ ತನ್ನ ಕುಟುಂಬ ಸಮೇತ ಹೋಗುತ್ತಾರೆ. ಆ ವರ್ಷದ ರಥೋತ್ಸವಕ್ಕೆ ರಗತ ತಿಲಕದ ಸೇವೆ ಮಾಡುವ ದ್ಯಾವಪ್ಪ ಬರುವುದಿಲ್ಲ. ಮತ್ತು ವಿಠ್ಠಲ ದೇವರ ಗುಡಿ ಕಳವು ಆಗಿ ರಥೋತ್ಸವ ನಡೆಯುವುದಿಲ್ಲ. ಸ್ವಾಂವಜ್ಜನಿಗೆ ಎರಡು ಸಾತ್ವನ ಮಾತು ಹೇಳಿ ಬೆಂಗಳೂರಿಗೆ ಬರುತ್ತಾನೆ. ಆರು ವರ್ಷದ ನಂತರ ವೃತ್ತಿಯಿಂದ ರಿಟೈರ್ ಆಗಿ ಬೆಂಗಳೂರಿನ ಜೀವನ ಬೇಸರಾಗಿ ಅಲ್ಲಿಯ ಪ್ಲಾಟನ್ನು ಮಾರಿ ತನ್ನೂರಾದ ಬೆಟಗೇರಿಗೆ ಬರುತ್ತಾನೆ. ನಾಕೈದು ತಿಂಗಳ ನಂತರ ಧರಮನಟ್ಟಿ, ಕಳ್ಳಿಗುದ್ದಿ-ಉದಗಟ್ಟಿಗಳು ನೆನೆಪಿಗೆ ಬಂದು ಧರಮನಟ್ಟಿ ಸ್ವಾಂವಜ್ಜನನ್ನು ನೋಡಲು ಹೋದಾಗ, ಆತ ತೀರಿಕೊಂಡ ಸಂಗತಿಯನ್ನು ತಿಳಿದು ಕಳ್ಳಿಗುದ್ದಿಗೆ ದ್ಯಾವಪ್ಪನನ್ನು ನೋಡಲು ಹೋಗುತ್ತಾನೆ. ಅಲ್ಲಿ ದ್ಯಾವಪ್ಪ ಇರುವುದಿಲ್ಲ. ಗೌಡನನ್ನು ಭೇಟಿ ಮಾಡಿದಾಗ ದ್ಯಾವಪ್ಪನನ್ನು ಕುರಿತು ಗೌಡ ಕಟ್ಟು ಕಥೆಯನ್ನು ಹೇಳುತ್ತಾನೆ. ಅಲ್ಲಿಂದ ಉದಗಟ್ಟಿಗೆ

ಬಂದು ದ್ಯಾವಪ್ಪನ ಭಾವಿ ಪತ್ನಿಯ ಜೊತೆ ದ್ಯಾವಪ್ಪನ ಸಂಗತಿಯನ್ನು ತಿಳಿದು, ದ್ಯಾವಪ್ಪ ಬರೆದ ಪತ್ರವನ್ನು ಓದಿ ದ್ಯಾವಪ್ಪನ ಬಗ್ಗೆ ಅನುಕಂಪದ ಭಾವನೆಯನ್ನು ವ್ಯಕ್ತಪಡಿಸುತ್ತಾನೆ. ಹೀಗೆ ಕಾದಂಬರಿಯ ಆರಂಭದಿಂದ ಮುಕ್ತಾಯದವರೆಗೆ ಪಾಟೀಲ ಪತ್ರಕರ್ತನ ಪಾತ್ರ ತುಂಬಾ ಮಹತ್ವವನ್ನು ಪಡೆದುಕೊಂಡಿದೆ. ರಾಘವೇಂದ್ರ ಪಾಟೀಲರು ಈ ಪಾತ್ರದ ಮುಖಾಂತರ ಇಡೀ ಕಾದಂಬರಿಯನ್ನು ಮುಂದುವರಿಸಿದ್ದಾರೆ. ಈ ಪಾತ್ರವು ಎಲ್ಲಿಯು ತನ್ನ ಸತ್ವವನ್ನು ಕಳೆದುಕೊಂಡಿಲ್ಲ. ಲೇಖಕರ ಸೃಜನಶೀಲ ಬರಹಕ್ಕೆ ಈ ಪಾತ್ರವು ಕನ್ನಡಿ ಹಿಡಿದಂತಿದೆ.

ಪುರಾಣ ಪುರುಷ ದ್ಯಾವಪ್ಪ

> ‘ಪೌಳೀಯ ತೆಂಕಣದ ಮೂಲ್ಯಾಗೆ
> ಪೌಳೀಯ ದಕ್ಷಿಣ ಮೂಲ್ಯಾಗೆ
> ....
> ಗೊಂಬೀರಾಮರಾ ದ್ಯಾವಯ್ಯಾ
> ತೊಗಲ ಗೊಂಬೀಯ ಆಡಸವನೊ
> ....
> ಹೆಂಡತಿ ಮಕ್ಕಳ ಕಟಗೊಂಡು
> ಗೊಂಬೀಯ ಆಡಸಾಕೆ ಬಂದವನು”(ತೇರು, ಪು.೨೮)

ಹೊಟ್ಟೆಯ ಪಾಡಿಗೆ ಊರೂರು ಅಲೆದು ಸೂತ್ರದ ಗೊಂಬಿ ಆಟದಿಂದ ಹೊಟ್ಟೆ ಹೊರೆಯುವ ಮೂಲಕ ತನ್ನ ಕುಟುಂಬವನ್ನು ಸಾಕುತ್ತಿದ್ದ ದ್ಯಾವಪ್ಪ ಕಡು ಬಡತನದಲ್ಲಿ ಒಂಬತ್ತು ಮಕ್ಕಳು ಹಾಗೂ ಬಸುರಿಯಾದ ಹೆಂಡತಿಯನ್ನು ಸಾಕುವುದು ಕಷ್ಟಕರವಾಗಿತ್ತು.

> “ಅಯ್ಯೋ ಮಕ್ಕಳ ಕೊಡಬ್ಯಾಡೋ ಮುಕ್ಕಣ್ಣಾS.....
> ಅವುಗಳ ತುತ್ತಿನ ಚೀಲ ಅಂಬುವುದನ್ನು ತುಂಬುವದು ಹೆಂಗೋ”(ತೇರು, ಪು.೨೮)

ಎನ್ನುತ ಕುಳಿತಾಗ, ಮುಂದೆ ಹೋಗದ ತೇರಿಗೆ ಬಲಿಯನ್ನು ಕೊಡಲಿಕ್ಕೆ ದ್ಯಾವಪ್ಪ ಒಳ್ಳೆಯ ಅಸಾಮಿಯಾಗಿರುವುದರಿಂದ ದ್ಯಾವಪ್ಪನಿಗೆ ಆಸೆ ತೋರಿಸಿ ಬಲಿಯ ಕೊಡುವ ವಿಚಾರ ಧಣಾಯಕನ ಹೆಂಡತಿಯದ್ದಾಗಿರುತ್ತದೆ. ಹಸಿವೆಯಿಂದ ಬಳಲುತ್ತಿರುವ ಕುಟುಂಬಕ್ಕೆ ಜೋಳ, ಅಕ್ಕಿ, ಬೆಲ್ಲ, ಬೇಳೆಯ ಆಸೆ ತೋರಿಸಿ ಅವನ ಸಂಪರ್ಕ ಸಾಧಿಸುತ್ತಾಳೆ.

> “ಹಿರಿಯ ಮಗನನ್ನು ತೇರಿಗೆ ನೀಡೋ
> ಮೂಡಾಲ ಸೀಮೇಲಿ ಮೂರೆಕರೆ ಭೂಮಿ
> ....
> ಕಡೀಯ ಮಗನನ್ನ ಸ್ವಾಮೀಗೆ ಕೊಡು ಬಾರೊ

ಪಡುವಣ ದಿಕ್ಕಿನ್ಯಾಗೇ ಆರೆಕರೆ ಭೂಮಿ

....

ನಡಕೀನ ಮಗನನ್ನ ಸ್ವಾಮೀಗೆ ಕೊಡುಬಾರೊ

ತೆಂಕಣ ದಿಕ್ಕಿನ್ಯಾಗೆ ಎಂಟೆಕರೆ ಭೂಮಿ"(ತೇರು, ಪು.೩೦)

ಶಾಶ್ವತವಾದ ಹಸಿವನ್ನು ನೀಗಿಸುವ ಭೂಮಿಯ ಆಸೆಗೆ ಮತ್ತು ಬೆಳಗಾಗುವುದರೊಳಗೆ ಹೇಗಾದರೂ ತಪ್ಪಿಸಿಕೊಂಡು ಹೋದರಾಯಿತು, ಎನ್ನುವ ನಂಬಿಕೆಯಿಂದ ದ್ಯಾವಪ್ಪ ತನ್ನ ನಡುವಿನ ಮಗನಾದ ಚಂದ್ರನನ್ನು ಬಲಿಕೊಡಲು ಒಪ್ಪುತ್ತಾನೆ. ನಮಗೇನು ಮಕ್ಕಳ ಕೊರತೆಯಿಲ್ಲ, ಸ್ವಾಮಿಯೇ ಕೊಟ್ಟ ಮಕ್ಕಳು, ಒಬ್ಬನನ್ನು ಈ ಸ್ವಾಮಿಗೆ ಕೊಟ್ಟರೆ ಉಳಿದ ಮಕ್ಕಳೆಲ್ಲ ಸುಖದಿಂದ ಇರುತಾವೆ ಎಂದು ತನ್ನ ಹೆಂಡತಿ ಲಸವವ್ವನಿಗೆ ತಿಳಿಸಿ ಹೇಳುತ್ತಾನೆ. ಹೀಗೆ ಎಂಟೆಕರೆ ಭೂಮಿಗೆ ತನ್ನ ಮಗುವನ್ನು ಬಲಿಕೊಡುವ ಹೇಯ ಸ್ಥಿತಿಗೆ ಇಳಿಯುತ್ತಾನೆ.

"ಮಗನ್ನ ಸ್ವಾಮಿಯ ರಥಕ್ಕೆ ಬಲೀ ಕೊಟ್ಟ ಆ ದ್ಯಾವಪ್ಪ ಅಗದೀ ಥೇಟ್ ವಿಠಲ ಸ್ವಾಮಿ ಇದ್ದಂಗs ಇದ್ದನಂತ!... ನಮ್ಮ ಹಿರ್‍ಯಾರು ಹೇಳತಿದ್ದರು. ತೇರಿಗೆ ಬಲೀ ಕೊಡಾಕಂತ ಅಂವ ತನ್ನ ಮಗನ್ನ ತೆಕ್ಯಾಗ ಅವಚಿ ಹಿಡಿಕೊಂಡು...ತೇರಿನ ಗಾಲಿಯ ತೆಳಗ ಇಡಾಕ ಹೀಂಗ ತೆಳಗ ಬಗ್ಗತಿದ್ದಂಗs ತೇರಿನ್ಯಾಗಿನ ವಿಠ್ಠಲ ಸ್ವಾಮಿ ತೆಳಗ ಇಳದ ಬಂದು ದ್ಯಾವಪ್ಪನ ತೆಕ್ಯಾಗಿನ ಚಂದ್ರಾಮ ಅನ್ನುವ ಆ ಹುಡುಗನ್ನ ತನ್ನ ತೆಕ್ಕಿಗೆ ತಗೊಂಡನಂತ... ತನ್ನ ರಥಕ್ಕೆ ಬಲೀ ಆಗಲಿಕ್ಕೆ ಬಂದ ಆ ಕಂದನ್ನ ತನ್ನ ತೆಕ್ಯಾಗ ಇಟಗೊಂಡು ವಿಠ್ಠಲಸ್ವಾಮಿ ಗರುಡು ಪಕ್ಷೀ ಮ್ಯಾಲ ಕುಂತಗೊಂಡು ಅಂತರಿಕ್ಷಕ್ಕ ಹಾರಿದನಂತ..."(ತೇರು, ಪು.೬೫) ಎಂದು ಜನರ ಬಾಯಲ್ಲಿ ಪುರಾಣ ಪುರುಷನಾಗಿ ಹೋದ.

ಕಳ್ಳಿಗುದ್ದಿಯಲ್ಲಿ ನೆಲೆನಿಂತ ದ್ಯಾವಪ್ಪ ಪ್ರತಿ ವರ್ಷ ರಗತ ತಿಲಕ ಸೇವೆ ಮಾಡಲು ತನ್ನ ರಕ್ತದಲ್ಲಿರುವ ಕಸರನ್ನು ತೆಗೆಯಲು ನಾಟೀ ಔಷಧವನ್ನು ಸೇವಿಸಿ, ಪುಣ್ಯಕ್ಷೇತ್ರಗಳಿಗೆ ಹೋಗಿ ದೇವರ ದರ್ಶನವನ್ನು ಪಡೆದು ನಂತರ ಧರಮನಟ್ಟಿಯ ತೇರಿಗೆ ಬರುತ್ತಿದ್ದ. ತನ್ನ ಹೆಂಡತಿಗೆ ತಾನು ಸತ್ತ ಮೇಲೆ ಇದೇ ರೀತಿ ದೇವರ ಸೇವೆ ಮಾಡಬೇಕೆಂದು ತಿಳಿಸಿ ಹೇಳುತ್ತಿದ್ದ. ಇತನ ಭಕ್ತಿ ಹಾಗೂ ಧಾರ್ಮಿಕ ಆಚರಣೆಯನ್ನು ಕಂಡು ಜನರ ಬಾಯಲ್ಲಿ ಇತ ಪುರಾಣ ಪುರುಷನಾಗಿ ಹೋಗುತ್ತಾನೆ. ಈ ರೀತಿಯಲ್ಲಿ ಕಾದಂಬರಿಯಲ್ಲಿ ಈ ಪಾತ್ರ ಬಡತನ, ಮೌಢ್ಯತೆ ಹಾಗು ಧಾರ್ಮಿಕ ಆಚರಣೆಯಿಂದ ದ್ಯಾವಪ್ಪನ ಪಾತ್ರ ಉತ್ತಮವಾಗಿ ಚಿತ್ರಿತವಾಗಿದೆ.

ಲಗಮವ್ವ

ಕರುಳಿನ ಕುಡಿಯನ್ನು ಬಲಿಗೆ ಕೊಟ್ಟ ಜೀವ. ಪುರಾಣ ದ್ಯಾವಪ್ಪನ ಹೆಂಡತಿ. ಕುಬೇರನ ತಾಯಿ. ಪುರುಷ ಪ್ರಧಾನ ಸಮಾಜದಲ್ಲಿ ಸಿಕ್ಕು ತನ್ನ ನಡುವಿನ ಮಗ ಚಂದ್ರಾಮನನ್ನು ಕಳೆದುಕೊಂಡ ಮಹಿಳೆ.

ತನ್ನ ಅಳಲನ್ನು ಉಸಿರಿನಲ್ಲಿ ಇಟ್ಟುಕೊಂಡು ಜೀವನ ಕಳೆಯುತ್ತಿರುವ ಸಾತ್ವಿಕ ಮಹಿಳೆ. ಗಂಡ ದ್ಯಾವಪ್ಪ ಮಗನನ್ನು ಬಲಿಕೊಡುವುದಾಗಿ ಹೇಳಿದಾಗ, ಲಗಮವ್ವ ಒಪ್ಪಿಗೆಯನ್ನು ಕೊಡದೆ ಬೋರ್ಯಾಡಿ ಅತ್ತಳು. ಮುಂದೆ ಚಂದ್ರಾಮನನ್ನು ಬಲಿಕೊಡಲು ಕರೆದುಕೊಂಡು ಬರುವಾಗ ಲಗಮವ್ವ "ಮಗನೇ ಚಂದ್ರ್ಯಾ ಅಂತ ಚೀರಿ... ಅವರ ಕೈಯ್ಯ ಕೊಸರಿಕೊಂಡು ಓಡಿ ಬಾ ಮಗನೇ ಅನ್ನುತ್ತಾಳೆ."(ತೇರು, ಪು.೩೩) ಅಲ್ಲಿ ಕೂಡಿದ ಜನ ಲಗಮವ್ವನನ್ನು ಮುಂದೆ ಬಿಡುವುದಿಲ್ಲ. ಬಲಿಯ ದೃಶ್ಯ ನೋಡಿ ಲಗಮವ್ವ ಮೂರ್ಛೆ ಹೋಗಿ ಬೀಳುತ್ತಾಳೆ. ಮುಂದೆ ತನ್ನ ಗಂಡನ ಜೊತೆ ಕಳ್ಳೀಗುದ್ದಿಗೆ ಬಂದು ವಾಸಮಾಡಲಿಕ್ಕೆ ಪ್ರಾರಂಭಿಸುತ್ತಾಳೆ. ದೇಸಾಯರು ಇವರಿಗೆ ಕೊಟ್ಟ ಸನದನ್ನು ನೋಡಿ ಲಗಮವ್ವನಿಗೆ ಹೊಟ್ಟ್ಯಾಗ ಬೆಂಕಿ ಬಿದ್ದಂಗ ಆಗತಿತ್ತು. "ಆಕಿ' ನನ್ನ ಮಗನ ರಗತಾ ಕುಡದ ಕಾಗಜ ಅದು... ಅದ ರಾಗಸಸ ಐತಿ... ಮದಲ ಅದನ್ನು ದೇವರ ಜಗಲೀ ಮ್ಯಾಲಿಂದ ತಗೀ... ನೀ ತಗೀದಿದ್ದರ ನಾನಃ ಅದನ್ನ ತಗದ ಹೊರಗೆ ಒಗೀತನ ನೋಡು..."(ತೇರು, ಪು.೪೨) ಅಂತ ದ್ಯಾವಪ್ಪನಿಗೆ ಹೇಳುತ್ತಿದ್ದಳು. ಮುಂದೆ ಲಗಮವ್ವನಿಗೆ ಗಂಡು ಮಗು ಹುಟ್ಟಿ ಅದು ಎರಡು ದಿನಕ್ಕೆ ಸತ್ತಾಗ, ಮತ್ತಷ್ಟು ದೇವರ ಮೇಲೆ ಬೈಯುತ್ತಿದ್ದಳು. ಆ ಸನದು ಮನೆಯಲ್ಲಿ ಇರುವುದರಿಂದ ಈ ರೀತಿ ಕಷ್ಟಗಳು ಬರುತ್ತವೆಂದು ತಿಳಿದು ಸನದನ್ನು ಹೊರಗೆ ಎಸೆಯಲು ಪ್ರಯತ್ನಿಸುವಾಗ ದ್ಯಾವಪ್ಪ ಬಂದು ಸನದನ್ನು ಕಿತ್ತುಕೊಂಡು, ಲಗಮವ್ವನನ್ನು ಗೋಡೆಗೆ ನುಗಿಸಿದ್ದರಿಂದ ತಲೆಗೆ ಪೆಟ್ಟು ಬಿದ್ದು ಹುಚ್ಚಿಯ ಹಾಗೆ ಆದಳು. ಸ್ವಲ್ಪ ದಿನಗಳು ಕಳೆದ ಮೇಲೆ ಸುಧಾರಿಸಿಕೊಂಡಳು. ಹೀಗೆ ತನ್ನ ಜೀವನದಲ್ಲಿ ದುಃಖ ಬರಲು ಆ ಸನದ ಕಾರಣವೆಂದು ತಿಳಿದು, ತನ್ನ ಗಂಡನಿಂದ ಕರುಳಿನ ಕುಡಿಯನ್ನು ಕಳೆದುಕೊಂಡು ದೇವರ ವಿರುದ್ಧ ಮೌನ ಹೋರಾಟವನ್ನು ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಸಿದುಕೊಂಡ ಪುರುಷ ಪ್ರಧಾನ ಸಮಾಜದ ವಿರುದ್ಧ ಉಸಿರಿನಲ್ಲಿ ಪ್ರತಿಭಟಿಸುವ ಪಾತ್ರ ಲಗಮವ್ವನದಾಗಿದೆ.

ರಂಗೋ ಪಟವರ್ಧನ ದೇಸಾಯಿ

'ತೇರು' ಕಾದಂಬರಿಯಲ್ಲಿ ಬರುವ ರಂಗೋ ಪಟವರ್ಧನ ದೇಸಾಯಿ ಎಂಬ ಪಾತ್ರವನ್ನು ರಾಘವೇಂದ್ರ ಪಾಟೀಲರು ತಮ್ಮ 'ದೇಸಗತಿ' ಸಂಕಲನದಿಂದ ಎತ್ತಿಕೊಂಡಿದ್ದಾರೆ. "ದೇಸಗತಿ ಕಥಾ ಸಂಕಲದಲ್ಲಿರುವ 'ದೇಸಗತಿ' ಎಂಬ ಕಥೆ ಮಧ್ಯಕಾಲೀನ ಭಾರತದಲ್ಲಿ ವ್ಯಕ್ತಿಯೊಬ್ಬನ ಸಾಹಸ, ಆಕಸ್ಮಿಕಗಳು ಇವುಗಳ ಕಾರಣದಿಂದಾಗಿ ಹೇಗೆ ಅನೇಕಾನೇಕ ದೇಸಗತಿಗಳು, ಪಾಳೆಯ ಪಟ್ಟುಗಳು ಮತ್ತು ಚಿಕ್ಕಪುಟ್ಟ ರಾಜ್ಯಗಳು ಅಸ್ತಿತ್ವಕ್ಕೆ ಬಂದವು ಎಂಬುದನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಈ ಕಥೆಯಲ್ಲಿ ಧರಮನಟ್ಟಿಯ ದೇಸಗತಿಯನ್ನು ಸ್ಥಾಪಿಸುವ ವೆಂಕೋಬರಾವ್ ನಿಜವಾಗಿ ಒಬ್ಬ ಪಿಂಡಾರೆ ನಾಯಕ, ಒಂದು ಸಂದರ್ಭದಲ್ಲಿ ಪೇಶ್ವೆ ಸೈನಿಕರಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಓಡುತ್ತಿರುವಾಗ ಅಕಸ್ಮಾತ್ತಾಗಿ ಧರಮನಟ್ಟಿ ಎಂಬ ಗ್ರಾಮಕ್ಕೆ ಬರುತ್ತಾನೆ. ಅಲ್ಲಿಯವರೆಗೂ ಸಮರ್ಥ ಸ್ಥಳೀಯ

ನಾಯಕರಿಲ್ಲದೆ ಪದೇ ಪದೇ ದರೋಡೆಕಾರರ ಧಾಳಿಗೆ ತುತ್ತಾಗುತಿದ್ದ ಧರಮನಟ್ಟಿಯಲ್ಲಿ ವೆಂಕೊಬರಾವ್ 'ರಂಗೋ ಪಟವರ್ಧನ' ಎಂಬ ಹೊಸ ಹೆಸರಿನಲ್ಲಿ ಅಲ್ಲಿಯೇ ನೆಲೆಯೂರಿ ಒಂದು ಪ್ರಬಲ ದೇಸಗತಿಯನ್ನು ಸ್ಥಾಪಿಸುತ್ತಾನೆ."[೧] ಮುಂದೆ ರಂಗೋಪಟವರ್ಧನ ದೇಸಾಯಿ ತನ್ನ ಪ್ರತಿಷ್ಠೆಯ ಸಂಕೇತವಾಗಿ ತನ್ನ ಮನಿದೇವರಾದ ವಿಠ್ಠಲ-ರುಕುಮಾಯಿ ಗುಡಿಯನ್ನು ಕಟ್ಟಿಸುತ್ತಾನೆ. ಆ ಗುಡಿಗೊಂದು ಹೊನ್ನ ಕಳಸ ಹೊತ್ತ ಆರು ಮಜಲಿನ ಸುಂದರವಾದ ಚಿತ್ರ ಚಿತ್ತಾರಗಳಿಂದ ಕೂಡಿದ ಬೃಹತ್ತಾದ ಕಲ್ಲಿನ ಗಾಲಿಯುಳ್ಳ ತೇರನ್ನು ಕಟ್ಟಿಸುತ್ತಾನೆ. ಇಲ್ಲಿಂದಲೇ 'ತೇರು' ಕಾದಂಬರಿಯ ಕಥನವು ಪ್ರಾರಂಭವಾಗುತ್ತದೆ.

"ಧರ್ಮ ಮತ್ತು ರಾಜಕೀಯಗಳು ಅನಾದಿಕಾಲದಿಂದಲೂ ಪರಸ್ಪರ ಒಂದನ್ನೊಂದು ಪೋಷಿಸಿಕೊಂಡು ಬಂದಂತಹವು, ಹೊಸದಾಗಿ ಅಧಿಕಾರಕ್ಕೆ ಬಂದ ಒಂದು ವ್ಯವಸ್ಥೆ ತನ್ನ ನಿರಂತರತೆಯನ್ನು ಕಾಯ್ದುಕೊಳ್ಳಲು ಆಶ್ರಯಿಸುವುದು ಧರ್ಮವನ್ನು, ಆದ್ದರಿಂದ ಅವರು ಧರ್ಮದ ಮೂರ್ತರೂಪ ಸಂಕೇತಗಳಾದ ಗುಡಿ, ಗೋಪುರಗಳನ್ನು ನಿರ್ಮಿಸುವುದರ ಮೂಲಕ ಜನರನ್ನು ಕೇಂದ್ರೀಕರಿಸಿ ತಮ್ಮ ಅಧಿಕಾರವನ್ನು ಭದ್ರಪಡಿಸಿಕೊಳ್ಳುತ್ತಾರೆ. ರಂಗೋಪಟವರ್ಧನ್ ಆ ವ್ಯವಸ್ಥೆಯ ಒಂದು ಅಂಗ, ತಾನು ಹೊಸ ದೇಸಾಯಿಯಾಗಿ ಧರಮನಟ್ಟಿಯಲ್ಲಿ ಅಧಿಕಾರ ಹಿಡಿದಾಗ ಅವನು ಮೊದಲು ಮಾಡಿದ ಕಾರ್ಯ ವಿಠ್ಠಲನ ದೇವಾಲಯ ಮತ್ತು ತೇರುಗಳನ್ನು ನಿರ್ಮಿಸಿ ಅವುಗಳನ್ನು ತನ್ನ ಅಧಿಕಾರದ ಪ್ರತಿಷ್ಠೆಯ ಸಂಕೇತಗಳಾಗಿ ಮಾಡಿದ್ದು."[೨]

ತಾನು ಕಟ್ಟಿಸಿದ ತೇರು ಮುಂದಕ್ಕೆ ಸಾಗದೇ ನರಬಲಿಯನ್ನು ಕೇಳಿದಾಗ ದೇಸಾಯಿ ಬಲವೇ ಕುಗ್ಗಿತಂತಾಗುತ್ತದೆ. ಆ ತೇರು ಮುಂದಕ್ಕೆ ಹೋಗಲು ಕಾಟುಕರ ಜಾತಿಯ ಮನುಷ್ಯ ಬೇಕು. ಹೆಣ್ಣು ಮತ್ತು ಗಂಡು ಎಂಬ ಬೇದವಿಲ್ಲ. ಸಣ್ಣವರು ಮತ್ತು ದೊಡ್ಡವರು ಅನ್ನುವ ವಯಸ್ಸಿನ ನಿರ್ಬಧನೆಯಿಲ್ಲ. ಉತ್ತಮ ಕುಲದವರು ಮಾತ್ರ ಬೇಡ ಇವರನ್ನು ಬಿಟ್ಟು ಯಾವುದಾದರೂ ಕಾಟುಕದ ಕುಲದ ಒಂದು ಮನುಷ್ಯನನ್ನು ತರಬೇಕು ಎಂದು ತಿಳಿಸಿದಾಗ, ಊರೂರ ತಿರುಗಾಡಿ ಕೊನೆಗೆ ಸೂತ್ರದ ಗೊಂಬೆಯ ಆಡಿಸುವ ದ್ಯಾವಪ್ಪ ದೊರೆತಾಗ ಆತನ ಮಗ 'ಚಂದ್ರ'ನನ್ನು ಬಲಿಕೊಡುವ ವ್ಯವಸ್ಥೆ ಮಾಡಿಸುತ್ತಾರೆ. ಹೀಗೆ ಈ ಪಾತ್ರವು ತನ್ನ ಅಧಿಕಾರದಲ್ಲಿ ಸ್ವಾರ್ಥ ಮತ್ತು ಮುಗ್ಧ ಜನರ ಮೇಲಿನ ದೌರ್ಜನ್ಯ ಹಾಗೂ ತನ್ನ ಪ್ರತಿಷ್ಠೆಗಾಗಿ ದಬ್ಬಾಳಿಕೆಯನ್ನು ಮಾಡುವ 'ರಂಗೋ ಪಟವರ್ಧ' ದೇಸಾಯಿ ಪಾತ್ರ ಕಾದಂಬರಿಯಲ್ಲಿ ಮೂಡಿಬಂದಿದೆ.

ಮಾಣೀಕ ದೇಸಾಯಿ

ಧರಮನಟ್ಟಿ ದೇಸಗತಿಯ ಕೊನೆಯ ದೇಸಾಯಿಯಾದ ಮಾಣೀಕ ದೇಸಾಯಿ ಎಂಬ ಪಾತ್ರವನ್ನು ರಾಘುವೇಂದ್ರ ಪಾಟೀಲರ 'ದೇಸಗತಿ' ಎಂಬ ಕಥೆಯಿಂದ ಎದ್ದು ಬಂದ ಪಾತ್ರವಾಗಿದೆ. "ಬ್ರಿಟೀಷರ

ಆಗಮನದ ನಂತರ ಮತ್ತು ಸ್ವಾತಂತ್ರ್ಯಾನಂತರ ಭಾರತದ ಇತರ ರಾಜ್ಯ ಪಾಳೆಪಟ್ಟುಗಳಂತೆ ಧರಮನಟ್ಟಿಯ ದೇಸಗತಿಯು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ.''[೩] ಮಾಣೀಕ ದೇಸಾಯಿ ಅಮೇರಿಕಾದ ಕ್ಯಾಥರೀನ್ ಎಂಬ ಮಹಿಳೆಯ ಜೊತೆಗೆ ವಿವಾಹವಾಗಿ ತನ್ನ ಕರುಳಿನ ಕುಡಿ ಎಳೆಯಮಗು ಅಮೃತ ಹಾಗು ಅಜ್ಜ ಕಲ್ಪನಾಥ ದೇಸಾಯಿ ಇಬ್ಬರನ್ನು ಧರಮನಟ್ಟಿಯಲ್ಲಿಯೇ ಬಿಟ್ಟು ಇವರನ್ನು ನೋಡಿಕೊಳ್ಳಲು ಇಬ್ಬರು ಆಯಾಗಳನ್ನು ನೇಮಿಸಿ ಅವರಿಗೆ ಸಾಕಷ್ಟು ಹಣಕೊಟ್ಟು ಮಾಣೀಕ ದೇಸಾಯಿ ವಿಮಾನ ಮೂಲಕ ಅಮೇರಿಕಾಕ್ಕೆ ಹಾರಿದ. ತನ್ನ ಮಗ ಹಾಗೂ ಅಜ್ಜನನ್ನು ನೋಡಿಕೊಳ್ಳಲಿಕ್ಕೆ ಇಟ್ಟ ಇಬ್ಬರು ಆಯಾಗಳು ಸರಿಯಾಗಿ ಉಪಚರಿಸದೆ ಆ ಎಳೆಕಂದನ ಮೈಗೆ ಕಟ್ಟಿರಿವಿ ಮುಕರಿ ಕಡದು ಚಿಟ್ಟಂತ ಚೀರಿ ಪ್ರಾಣ ಬಿಟ್ಟಿತ್ತು. ಇದನ್ನು ನೋಡಿದ ಕಲ್ಪನಾಥ ದೇಸಾಯಿಯ ಪಾತ್ರವು ಹೋಯಿತು.

ಮೂವತ್ತು ವರ್ಷಗಳ ಕಾಲ ಭಾರತದಿಂದ ಅಮೇರಿಕಾಕ್ಕೆ ವಲಸೆ ಹೋಗಿದ್ದ ಮಾಣೀಕ್ ದೇಸಾಯಿ ಕೊನೆಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಅವನ ಜೊತೆ ಯಾರೂ ಇರುವುದಿಲ್ಲ. ಅವನ ಅಮೇರಿಕಾದಲ್ಲಿನ ಆಸ್ತಿಗಳು ಬೇವಾರಸಾ ಆಗುತ್ತವೆ. ಅವನ ಅಮೇರಿಕಾದ ಹೆಂಡತಿ ಕ್ಯಾಥರೀನ್‌ಳನ್ನು ವಿಚಾರಿಸಿದರೆ ಅವಳು ಅವನಿಂದ ವಿಚ್ಛೇದನೆಯನ್ನು ಪಡೆದಿರುತ್ತಾಳೆ. ಆಕೆ ಮಣೀಕ್ ದೇಸಾಯಿಯನ್ನು ಕುರಿತು "ತನಗೂ ತೀರಿಹೋದ ವ್ಯಕ್ತಿಗೂ ಯಾವ ಸಂಬಂಧವೂ ಇಲ್ಲವೆಂದೂ... ಅವನು ಭೂತಕಾಲದಲ್ಲಿ ತನ್ನ ಗಂಡುನಾಗಿದ್ದವನು. ಈಗ ಅವನು ತನಗೆ ಏನೂ ಅಲ್ಲ... ಮತ್ತು ಅವನ ಯಾವ ಆಸ್ತಿ ಮತ್ತು ಜವಾಬ್ದಾರಿಗಳೂ ತನಗೆ ಸಂಬಂಧವಿಲ್ಲದವು ಎಂದು ತಿಳಿಸಿದ್ದಾಳೆ...''(ತೇರು, ಪು.೮೩) ಅವನು ಮರಣ ಹೊಂದುವುಕ್ಕಿಂತ ಪೂರ್ವದಲ್ಲಿ ಮೃತ್ಯುಪತ್ರದಲ್ಲಿ ತನ್ನ ಬ್ಯಾಂಕ್ ಖಾತೆಯಲ್ಲಿರುವ ಎಲ್ಲ ಹಣವನ್ನು ಪ್ಯಾಲಿಸ್ತೀನಿಯನ್ ನಿರಾಶ್ರೀತರ ಶಿಬಿರಗಳಿಗೆ ಹಾಗೂ ಭಾರತದಲ್ಲಿರುವ ಟಿಬೆಟಿಯನ್ ನಿರ್ವಸಿತರ ಶಿಬಿರಗಳಿಗೆ ಸಮಪ್ರಮಾಣದಲ್ಲಿ ಹಣವನ್ನು ಕೂಡಬೇಕು ಮತ್ತು ತನ್ನ ಅಂತ್ಯ ಸಂಸ್ಕಾರವನ್ನು ಪಾರ್ಸೀ ಪದ್ಧತಿಯಲ್ಲಿ ನಡೆಸಬೇಕು. ಧರಮನಟ್ಟಿಯಲ್ಲಿರುವ ಗುಡ್ಡವನ್ನು ವಿಠ್ಠಲ ದೇವರ ದೇವಸ್ಥಾನಕ್ಕೆ ಕೊಡಬೇಕೆಂದು ಮೃತ್ಯಪತ್ರದಲ್ಲಿ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ರೀತಿಯಲ್ಲಿ ತನ್ನ ಊರು, ಮತ, ಧರ್ಮ ಇವೆಲ್ಲವುಗಳನ್ನು ತೊರೆದು, ಅಮೇರಿಕಾಕ್ಕೆ ಹೋಗಿ ಪಾರ್ಸೀಧರ್ಮವನ್ನು ಸ್ವೀಕರಿಸಿ ಕೊನೆಗೆ ಪಾರ್ಸೀ ಧರ್ಮದ ಪ್ರಕಾರ ತನ್ನ ಶವಸಂಸ್ಕಾರವನ್ನು ಮಾಡಿಸಿಕೊಂಡ ಧರಮನಟ್ಟಿಯ ದೇಸಾಯಿ ಕೊನೆಗೆ ದೇಸಾಯಿಯಾಗಿ ಉಳಿಯಲಿಲ್ಲ, ದೇಸಗತಿಯನ್ನು ಬೆಳಸಲಿಲ್ಲ. ಕೊನೆಗೆ ಪರದೇಶಿ ಹೆಣಾ ಆಗಿ ಹೋದ. ಹೀಗೆ ಕಾದಂಬರಿಯಲ್ಲಿ ಮಾಣೀಕ ದೇಸಾಯಿ ಪಾತ್ರ ವಿಶಿಷ್ಟತೆಯಿಂದ ಕೂಡಿದೆ.

ಸ್ವಾಂವಜ್ಜ(ಸ್ವಾಂವಪ್ಪ)

ಕಾದಂಬರಿಯ ಪ್ರಮುಖ ನಿರೂಪಕರಲ್ಲಿ ಸ್ವಾಂವಜ್ಜನು ಒಬ್ಬ. ಪತ್ರಕರ್ತ ಪಾಟೀಲರ ಜೊತೆ ತನ್ನೂರಿನ 'ದೇಸಗತಿ' ಹಾಗೂ 'ತೇರು' ಕಥೆಯನ್ನು ಹೇಳಿ 'ತೇರು' ಕಥೆಯ ಬಗ್ಗೆ ಪತ್ರಕರ್ತನಲ್ಲಿ

ಕುತುಹಲವನ್ನುಂಟು ಮಾಡಿದ ವ್ಯಕ್ತಿ. ಸ್ಯಾಂವಜ್ಜ ಜೈನ ಸಮುದಾಯಕ್ಕೆ ಸೇರಿದ ವ್ಯಕ್ತಿಯಾಗಿದ್ದರು ಸಹ ಊರು ಜನರು ಆಚರಿಸುವ ಹಬ್ಬ, ಜಾತ್ರೆಗಳಲ್ಲಿ ಭಾಗಿಯಾಗಿರುತ್ತಿದ್ದ. ತನ್ನ ಜಾತಿಯ ಬಗ್ಗೆ ಇಲ್ಲಸಲ್ಲದ ಅವಹೇಳನ ಮಾತುಗಳನ್ನು ಕೇಳಿನೊಂದ ಜೀವ. ಊರಿನ ಎಲ್ಲ ಜನರೊಂದಿಗೆ ಬೆರೆತು ತನ್ನ ಸಮುದಾಯವನ್ನು ಬಿಟ್ಟು ವಿಠ್ಠಲ ದೇವರ ಭಕ್ತನಾಗಿ ಕಾದಂಬರಿಯಲ್ಲಿ ಕಂಡುಬಂದಿದ್ದಾನೆ. ಸ್ಯಾಂವಜ್ಜನ ಮೂಲಕವೇ ಇಡೀ ಧರಮನಟ್ಟಿಯ ಪೂರ್ವೇತಿಹಾಸ ಮತ್ತು ಸದ್ಯ ಸ್ಥಿತಿಯನ್ನು ನಾವು ತಿಳಿದುಕೊಳ್ಳುತ್ತೇವೆ.

ಗೋಕಾಕ ಬಸ್ ಸ್ಟ್ಯಾಂಡಿನಲ್ಲಿ ಬೇಟಿಯಾದ ಪತ್ರಕರ್ತನಿಗೆ ತನ್ನೂರಿನ ತೇರಿನ ಪುರಾಣ ಹೇಳಿ ಪತ್ರಕರ್ತನನ್ನು ಧರಮನಟ್ಟಿ ರಥೋತ್ಸವಕ್ಕೆ ಕರೆದುಕೊಂಡು ಹೋಗಿ ಅಲ್ಲಿಯ ಸ್ಥಳದ ಚಾರಿತ್ರಿಕ ಘಟನೆಯನ್ನು ಗೊಂದಲಿಗರ ಹಾಡಿನ ಮೂಲಕ ಪತ್ರಕರ್ತನಿಗೆ ಪರಿಚಯಿಸಿದ ವ್ಯಕ್ತಿ. ಮುಂದೆ ಕೆಲವು ವರ್ಷದ ನಂತರ ಧರಮನಟ್ಟಿಯ ತೇರಿಗೆ ದೀಡನೂರು ವರ್ಷ ಅಗತ್ಯೆತಿ ಅಂತ ಪತ್ರಕರ್ತ ಪಾಟೀಲನಿಗೆ ಸ್ಯಾಂವಜ್ಜ ಕುಟುಂಬ ಸಮೇತ ಬರಬೇಕೆಂದು ಪತ್ರಬರೆದ. ಸ್ಯಾಂವಜ್ಜ ಪತ್ರಕ್ಕೆ ಬೆಲೆಕೊಟ್ಟು ಪತ್ರಕರ್ತಪಾಟೀಲ ತನ್ನ ಕುಟುಂಬ ಸಮೇತ ಧರಮನಟ್ಟಿಗೆ ಬಂದ. ಆದರೆ ಆ ವರ್ಷ ರಕ್ತ ತಿಲಕದ ಸೇವೆ ಮಾಡುವ ಆಧುನಿಕ ದ್ಯಾವಪ್ಪ ಬರದೆ ಇರುವುದರಿಂದ, ಮತ್ತು ವಿಠ್ಠಲ ದೇವರ ಗುಡಿ ಕಳವು ಆಗಿರುವುದರಿಂದ ರಥೋತ್ಸವ ನಡೆಯುವುದಿಲ್ಲ. ಇದರಿಂದ ಸ್ಯಾಂವಜ್ಜ ಕುಗ್ಗಿ ಹೋದ, ಅಲ್ಲಿಯ ಜನರ ಜಾತಿಯ ನಿಂದನೆಗೆ ಗುರಿಯಾಗಿ, ಹಾಗೂ ದೇವರ ಗುಡಿಯು ಕಳವು ಆಗಿದ್ದರಿಂದ ಪೊಲೀಸರು ವಿಚಾರಣೆಯನ್ನು ಮಾಡಲಿಕ್ಕೆ ಸ್ಯಾಂವಜ್ಜನನ್ನು ಎರಡು ದಿನ ಪೋಲೀಸ್ ಠಾಣೆಯಲ್ಲಿ ಇಟ್ಟುಕೊಂಡು ಮನೆಗೆ ಕಳುಹಿಸಿದರು. ಮನೆಗೆ ಬಂದ ಮರು ದಿವಸ ಆರ್ಧಾಗವಾಯುವಿಗೆ ಬಲಿಯಾಗಿ ತನ್ನ ಬಲಭಾಗವನ್ನು ಕಳೆದುಕೊಂಡು ಮುಂದೆ ಎರಡು ದಿನದ ನಂತರ ತನ್ನ ಹೆಂಡತಿ ಪದ್ಮವ್ವನಿಗೆ ವಿಠ್ಠಲ ದೇವರ ದರ್ಶನ ಮಾಡಿಸಿಕೊಂಡ ಬರಲು ಹೇಳಿದ. ಮಡೀ ಬಟ್ಟೆಯನ್ನು ಹೊತ್ತುಕೊಂಡು ಚಕ್ಕಡಿಯಲ್ಲಿ ದೇವರ ದರ್ಶನ ಮಾಡಿಸಿಕೊಂಡು ಬಂದರು. "ಗುಡಿಗೆ ಹೋಗಿ ಬಂದವನs ಅಂವ ಸಲ್ಲೇಖನ ಹಿಡಿದ ಬಿಟ್ಟ ! ಒಂದು ತುತ್ತ ಕೂಳ ತಿನಲಿಲ್ಲ. ಎರಡ ದಿನಾ, ನೀರ ಹಾಕಕ ಹೋದರ ಯಾವಗರೇ ಒಮ್ಮೊಮ್ಮೆ ನೀರ ತಗೋಳಾಂವ... ಮುಂದ ಮೂರದಿನದ ಮ್ಯಾಗ ನೀರ ತಗೋದನ್ನ ಬಿಟ್ಟ" (ತೇರು, ಪು.೧೨೮) ನೀರ ಬಿಟ್ಟ ಎರಡನೇ ದಿನಕ್ಕೆ ತನ್ನ ಪ್ರಾಣಬಿಟ್ಟ. ಹೀಗೆ ಸ್ಯಾಂವಜ್ಜ "ಧರಮನಟ್ಟಿಯ ಜನರ ವಿವೇಕ ಪ್ರಜ್ಞೆಯಂತಿದ್ದ... ಆದರೆ ಧರಮನಟ್ಟಿಯ ಜನ ಯಾವತ್ತಿಗೂ ಅವನನ್ನು ಸರಿಯಾಗಿ ಅರ್ಥಮಾಡಿಕೊಳ್ಳಲೇ ಇಲ್ಲ.. ನಿತ್ಯ ಸಂಶಯಕ್ಕೆ ಈಡಾದರೂ ಅಂವ ಮಾತ್ರ ಕಡಿತನಕ ಊರಿನ ಸಮುದಾಯದ ನಡೆಗೆ ತನ್ನ ವಿವೇಕದ ನೋಟವನ್ನು ನೀಡುತ್ತಲೇ ಬಂದಿದ್ದ. ಈ ಸ್ಯಾಂವಜ್ಜ ಜೈನನೋ... ವೈದಿಕನೋ... ಅವೈದಿಕನೋ... ಇಂಥದ್ದು ಒಂದು ಎಂದು ಪ್ರತ್ಯೇಕಿಸಿ ಹೇಳಲಿಕ್ಕೆ ಸಾಧ್ಯವಾಗುವುದೇ ಇಲ್ಲ... ಸಾಯುವ ನಿರ್ಧಾರ ಮಾಡಿದ ಕೂಡಲೇ ವಿಠಲನ ದರ್ಶನಾ ಮಾಡಿಕೊಂಡು ಬಂದ ಮೇಲೆ ಸಲ್ಲೇಖನ ಹಿಡಿದ!... ಪದಮವ್ವ

ಮುದಿಕಿ ಸ್ವಾಂವಜ್ಜನ್ನ ಸರಿಯಾಗಿಯೇ ಕೇಳಿದ್ದಳು... ಮಿಥ್ಯಾತ್ವ ಮತ್ತು ಸಲ್ಲೇಖನ ಅರ್ಥಂಗ ಹೊಂದಾಣಿಕೆ ಆಗತಾವ ಅಂತ... ಅಕಿಯ ಈ ಮಾತಿಗೆ ಸ್ವಾಂವಜ್ಜ ಬರೇ ಒಂದ ಮುಗುಳ ನಗೀ ನಕ್ಕು ಸುಮ್ಮನಾದನಂತ...!?"(ತೇರು, ಪು.೧೨೯)

ಈ ರೀತಿಯಲ್ಲಿ ಸ್ವಾಂವಜ್ಜ ವಿವೇಕ ಪ್ರಜ್ಞೆಯುಳ್ಳವರಿದ್ದರು ಸಹ ಸಂಪ್ರದಾಯದ ಪರಂಪರೆಯ ಕೊಂಡಿಯಿಂದ ಬಿಡಿಸಿಕೊಳ್ಳಲಾರದೆ ಅಲ್ಲಿಯೇ ಬಂದಿಯಾಗಿರುವ, ಸರಳ ಹಾಗೂ ಸಜ್ಜನಿಕೆಯ ವ್ಯಕ್ತಿಯಾಗಿ ಈ ಪಾತ್ರವು ಕಾರಂಬರಿಯಲ್ಲಿ ಕಂಡುಬಂದಿದೆ.

ಕಾರಭಾರಿ ತ್ರಿಂಬಕಭಟ್ಟ

ಈ ಪಾತ್ರವು ಸಹ ರಾಘವೇಂದ್ರ ಪಾಟೀಲರ 'ದೇಸಗತಿ' ಎಂಬ ಕಥೆಯಿಂದ ಮುಂದುವರೆದ ಪಾತ್ರವಾಗಿದೆ. ಧರಮನಟ್ಟಿಯ ದೇಸಗತಿ ಸ್ಥಾಪನೆಯ ಹಿಂದೆ ತ್ರಿಂಬಕಭಟ್ಟನ ಅಧಿಕಾರ ಲಾಲಸೆ, ಸುಳ್ಳು, ಧರಮನಟ್ಟಿಯ ಜನರ ಮುಗ್ಧ ಸ್ವಭಾವ ಹಾಗೂ ಆ ಕಾಲದ ಅರಾಜಕತೆಯಲ್ಲಿ ಈ ಪಾತ್ರವು ಕಾದಂಬರಿಯಲ್ಲಿ ಚೆನ್ನಾಗಿ ಮೂಡಿಬಂದಿದೆ. ತ್ರಿಂಬಕ ಭಟ್ಟನೆಂಬ ಒಬ್ಬ ಬ್ರಾಹ್ಮಣ ವೆಂಕೋಬರಾವ್‌ನ ಶೌರ್ಯವನ್ನು ಗುರುತಿಸಿ ರಂಗೋ ಪಟವರ್ಧನ ಎಂಬ ಹೊಸ ಅಂಕಿತವನ್ನು ಕೊಟ್ಟು ಅವನಿಗೆ ದೇಸಗತಿ ಕಟ್ಟಿಸುತ್ತಾನೆ. ಪೇಶ್ವೆಯವರಿಂದ ಸನದನ್ನು ಸಂಪಾದಿಸುತ್ತಾನೆ. ಇದರಿಂದ ಅವನಿಗೆ ಸ್ವಂತದ ಲಾಭವೂ ಇದೆ. ಅವನಿಗೆ ಕಾರಭಾರಿಯ ಅಧಿಕಾರ ದೊರೆಯುತ್ತದೆ ಹಾಗೂ ಅವನ ಮಗಳು ಲೀಲಾ ದೇಸಾಯತಿ ಆಗುತ್ತಾಳೆ. ಹೀಗೆ ಹೊಸ ದೇಸಾಯಿ ಧರಮನಟ್ಟಿಯಲ್ಲಿ ತನ್ನ ಅಧಿಕಾರವನ್ನು ಚಲಾಯಿಸಲಿಕ್ಕೆ ಪ್ರಾರಂಭಿಸಿದಾಗ ಅಲ್ಲಿ ವಿಠ್ಠಲ ದೇವರ ಗುಡಿ ಅದಕ್ಕೊಂದು ಹೊಸ ತೇರನ್ನು ಮಾಡುತ್ತಾನೆ. ಆದರೆ ಆ ತೇರು ಮುಂದೆ ಹೋಗದೆ ನಿಂತಾಗ ಶಾಸ್ತ್ರದ ಅಯ್ಯನವರು ತೇರಿಗೆ ಬಲಿ ಬೇಕೆಂದು ಹೇಳಿದಾಗ, ಅಧಿಕಾರದಲ್ಲಿರುವ ಕಾರಬಾರಿ ತಾನು ಬಲಿಯಾಗುವುದನ್ನು ತಪ್ಪಿಸಿ ಕಾಟುಕರ ಜಾತಿಯ ಜನರನ್ನು ಬಲಿಗೆ ಸೂಚಿಸುತ್ತಾನೆ. ಬಲಿಯ ವ್ಯವಸ್ಥೆಯಾಗದೆ ಮರಳಿ ಡಂಣಾಯಕ ಬಂದಾಗ ಡಂಣಾಯಕನಿಗೆ "ದೇಸಾಯರು ಆಡಿದ ಮಾತನ ನಿಮಗೆ ಹೇಳಾಕತ್ತನು ನೋಡಿರಿ... ಅವರು ಹೇಳ್ಯಾರ... ನಾ ಬರೂಮುಂದ ತಂದ ಕತ್ತಿಗೆ ಹತ್ತಿದ ರಗತ ಒಣಗಿ ಉದರಾಕತ್ತೇತಿ... ಅದಕ್ಕ ಹಸೀ ರಗತದ ಲೇಪ ಬೇಕು... ಮದಲು ಡಂಣಾಯಕಂದು ಆಗಲೀ ಆಮ್ಯಾಲ ನಿಮ್ಮ ರಗತದ ರುಚೀ ನನ್ನ ಕತ್ತಿಗೆ ತೋರಸತನೂ ಅಂತ"...(ತೇರು, ಪು.೨೪) ಹೇಳಿದಾಗ ಡಂಣಾಯಕ ತನ್ನ ಹೆಂಡತಿಯ ಮುಖಾಂತರ ಬಲಿಯ ವ್ಯವಸ್ಥೆಯನ್ನು ಮಾಡಿಸುತ್ತಾನೆ. ಹೀಗೆ ಸುಳ್ಳು, ಅಧಿಕಾರದ ದರ್ಪ, ಜನರ ಮುಗ್ಧ ಮನಸ್ಸನ್ನು ಕಂಡು ತನ್ನ ಕಾರಭಾರಿ ಅಧಿಕಾರವನ್ನು ತ್ರಿಂಬಕಭಟ್ಟ ಚೆನ್ನಾಗಿ ಚಲಾಯಿಸುತ್ತಾನೆ.

ಕಲ್ಪನಾಥ ದೇಸಾಯಿ

ಧರಮನಟ್ಟಿಯ ದೇಸಗತಿಯ ಹಿರಿಯ ಜೀವ. ಮಾಣೇಕ್ ದೇಸಾಯಿ ಅಜ್ಜ ಹಾಗೂ ಅಮೃತನ ಮುತ್ತಜ್ಜ ಕಲ್ಪನಾಥ ದೇಸಾಯಿ. ತನ್ನ ದೇಸಗತಿ ಉಳಿಸಿಕೊಳ್ಳದೇ ತನ್ನ ಅಳಲನ್ನು ತೋಡಿಕೊಂಡ ವ್ಯಕ್ತಿ. "ಕಲ್ಪನಾಥ ದೇಸಾಯರಿಗೆ ಈಗಾಗಲೇ ತೊಂಬತ್ತು ವರ್ಷ. ಈಗ ಅವರ ಕಣ್ಣಿಗೆ ಕಾಣುವುದೆಲ್ಲ ಮಂಜು ಮಂಜು. ಅಂತಃಕರಣಕ್ಕೆ ಕಿಚ್ಚು ಹಚ್ಚುವ ಅನೇಕ ಸಂಗತಿಗಳು ವರ್ತಮಾನದ ಅವರ ತಮ್ಮ 'ದೇಸಗತಿ'ಯ ಇತಿಹಾಸವನ್ನು ವರ್ತಮಾನದಲ್ಲಿ ಪುನರ್ ನಿರ್ಮಿಸಿಕೊಳ್ಳುವುದರ ಮೂಲಕ ಬದುಕುತ್ತಿದ್ದಾರೆ."[೪] ತನ್ನ ಮೊಮ್ಮಗ ಮಾಣೇಕ್ ದೇಸಾಯಿ ಅಮೇರಿಕಾಕ್ಕೆ ಹೋದ ಮೇಲೆ ಮರಿಮಗ "ಅಮೃತನಃ ಮುಂದು ನಮ್ಮ ದೇಸಗತೀನ್ನ ಕಟ್ಟಿನಿಂದರಸಾಂವ - ಪುನರುಜ್ಜೀವನ ಮಾಡಾಂವ... ಅಂತ ಹಲಬತಿದ್ದ"(ತೇರು, ಪು.೨) ಕಲ್ಪನಾಥ ದೇಸಾಯಿಯನ್ನು ಹಾಗೂ ಅಮೃತನ್ನು ನೋಡಿಕೊಳ್ಳಲಿಕ್ಕೆ ಆಯಾಗಳನ್ನು ನೇಮಿಸಿ ಅಮೇರಿಕಾಕ್ಕೆ ಜಿಗಿದ ಮಾಣೆಕ್ ದೇಸಾಯಿ ಮುಂದೆ ಆ ಆಯಾಗಳು ಈ ಇಬ್ಬರನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ. ತನ್ನ ಮರಿಮಗ ಅಮೃತ ತೊಟ್ಟಿಲಲ್ಲಿ ಹೆಣ ಆಗಿ ಮಲಗಿರುವಾಗ ಮುತ್ತಜ್ಜ ಕಲ್ಪನಾಥ ದೇಸಾಯಿಯು ಸಹ ಪ್ರಾಣವನ್ನು ಕಳೆದುಕೊಂಡ. ಹೀಗೆ ಕಲ್ಪನಾಥ ದೇಸಾಯಿ ತನ್ನ ದೇಸಗತಿಯ ಅಧಿಕಾರವನ್ನು ಮುಂದುವರಿಸಬೇಕೆಂದು ಅಂದುಕೊಂಡಿದ್ದ ವ್ಯಕ್ತಿ ಕೊನೆಗೆ 'ದೇಸಗತಿ'ಯನ್ನು ಉಳಿಸಿಕೊಳ್ಳಲಾರದೆ ಹತಾಶೆಯಿಂದ ಪ್ರಾಣಬಿಟ್ಟ. ಈ ಪಾತ್ರವು ಸಹ ರಾಘವೇಂದ್ರ ಪಾಟೀಲರ 'ದೇಸಗತಿ' ಎಂಬ ಕಥೆಯಿಂದ ಮುಂದುವರೆದ ಪಾತ್ರವಾಗಿದೆ.

ಅಮೃತ

ಧರಮನಟ್ಟಿ ದೇಸಗತಿಯ ಕೊನೆಯಕುಡಿ, ಮಾಣೇಕ ದೇಸಾಯಿಯ ಮಗ, ಕಲ್ಪನಾಥ ದೇಸಾಯಿಯ ಮರಿಮಗ ಅಮೃತ. ಮಾಣೇಕ ದೇಸಾಯಿ ಅಮೇರಿಕಾದ ಹೆಣ್ಣನ್ನು ಮದುವೆಯಾಗಿ ಅಮೇರಿಕಾಕ್ಕೆ ಹೋಗಿದ್ದರಿಂದ, ಅಮೃತನ್ನು ಹಾಗೂ ಕಲ್ಪನಾಥ ದೇಸಾಯಿಯನ್ನು ಧರಮನಟ್ಟಿಯಲ್ಲಿಯೇ ಬಿಟ್ಟು ಇವರನ್ನು ಸಾಕಲು ಇಬ್ಬರು ಆಯಾಗಳನ್ನು ನೇಮಿಸಿ ಅವರಿಗೆ ಸಾಕಷ್ಟು ಹಣ ಕೊಟ್ಟು ಹೋದ. ಇತ್ತ ಆ ಆಯಾಗಳು ಸರಿಯಾಗಿ ಉಪಚರಿಸದೇ ಆ ಎಳೆಯ ಕೂಸು ಇಡೀ ಮೈಯಂತ ಮೈಗೆ ಕಟ್ಟಿರಿವಿ ಕಡಿದು ಚಿಟ್ಟಂತ ಚೀರಿ ಪ್ರಾಣ ಬಿಟ್ಟಿತು. ಇದರಿಂದ ದೇಸಗತಿ ಮುಂದುವರೆಸುವ ಆಸೆಯನ್ನು ಹೊತ್ತುಕೊಂಡಿದ್ದ ಕಲ್ಪನಾಥ ದೇಸಾಯಿ ಆಶೆ ನಿರಾಶೆಯಾಗಿ ಹೋಗಿರುವುದು ಈ ಅಮೃತನ ಪಾತ್ರದ ಮೂಲಕ ಕಂಡುಬರುತ್ತದೆ.

ಅನಸೂಯಾ

ದೇಸಾಯರ ಮನೆಯ ಕೆಲಸ ಆಳು. ಇವಳನ್ನು ಮಾಣೇಕ ದೇಸಾಯಿ ತನ್ನ ಮಗ ಅಮೃತ ಹಾಗೂ ಅಜ್ಜ ಕಲ್ಪನಾಥ ದೇಸಾಯಿಯನ್ನು ಉಪಚರಿಸಲು ಈ ಆಯಾನನ್ನು ನೇಮಕ ಮಾಡಿದ. ಇವಳಿಗೆ ಊಡಿ

ತುಂಬ ಹಣಕೊಟ್ಟು ಅಮೇರಿಕಾಕ್ಕೆ ಹೋದ. ನಂತರ ಅನಸೂಯಾ ಅಮೃತನ್ನು ಸರಿಯಾಗಿ ನೋಡಿಕೊಳ್ಳದೆ, ಎಳೆಯ ಕಂದ ಅಮೃತನಿಗೆ ಎದೆ ಹಾಲು ಉಣಿಸದೆ ಇರುವುದರಿಂದ ಆ ಮಗು ಸ್ವರಗಿ ಬಡಕಲಾಗಿ ಕಟ್ಟೆರಿವಿ ಕಡಿದು ಸತ್ತು ಹೋಗುತ್ತದೆ. ಇದನ್ನು ಕಂಡ ಕಲ್ಪನಾಥ ದೇಸಾಯಿ ಪ್ರಾಣವು ಹಾರಿ ಹೋಗುತ್ತದೆ. ಈ ಇಬ್ಬರು ಜೀವಿಗಳ ಪ್ರಾಣಕ್ಕೆ ಕುತ್ತು ತಂದ ಅನಸೂಯಾ ಎಂಬ ಪಾತ್ರ ಸಂದರ್ಭಕ್ಕೆ ತಕ್ಕಂತೆ ಸಹಜಯುತವಾಗಿ ಚಿತ್ರಿತವಾಗಿದೆ.

ತಳವಾರಮಾದ

ಧರಮನಟ್ಟಿಯ ಊರನ್ನು ಕಾವಲು ಮಾಡುವ ವ್ಯಕ್ತಿ ತಳವಾರ ಮಾದ. ದೇಸಾಯಿ ತೇರಿಗೆ ಬಲಿಯ ವ್ಯವಸ್ಥೆಗಾಗಿ ಆತನನ್ನು ಕರೆಯಿಸುತ್ತಾರೆ.

> "ಓಡೋಡಿ ಬರುತ್ತಾನೆ ತಳವಾರ ಮಾದ
> ಬಾಗಲ ಹೊರಗೇ ನಿಂತು ಶರಣನ್ನುತ್ತಾನೆ
> ಏನಯ್ಯ ದೊರಿಯ ಹೇಳಿ ಕಳುಹಿದ್ದು"(ತೇರು, ಪು.೨೦)

ಎಂದು ಕೇಳಿದಾಗ ಕಾರಭಾರಿ ತ್ರಿಂಬಕ ಭಟ್ಟ ಸ್ವಾಮಿಯ ತೇರಿಗೆ ಕಾಟುಕರ ಜಾತಿಯ ಬಲಿ ಕೊಡಬೇಕಂತ ಶಾಸ್ತ್ರ ಹೇಳುತೈತಿ ಅದಕ್ಕೆ ನೀನಾದರೂ ಹೊಲಿ ಹದಿನೆಂಟು ಜಾತಿಗಳಿಗೆ ಸೇರಿದ ಯಾವನಾದರೂ ಬಲಿಗೆ ತರಬೇಕು ಎಂದು ನುಡಿದ. ಆವಾಗ ತಳವಾರ ಮಾದ ಸ್ವಾಮಿಯ ತೇರು ಮುಖ್ಯ ಇದು ಪುಣ್ಯದ ಕೆಲಸ ಅಂತ ಹೇಳಿ ಬಲಿಯ ವ್ಯವಸ್ಥೆ ಮಾಡಲು ಹೋಗುತ್ತಾನೆ. ಆದರೆ ಊರಲ್ಲಿರುವ ಎಲ್ಲ ಕಾಟುಕರ ಜಾತಿಯವರು ತಮ್ಮವರನ್ನು ಬಲಿಯಾಗುತ್ತಾರೆಂದು ತಿಳಿದು ಊರ ಬಿಟ್ಟು ಹೋಗಿದ್ದರಿಂದ ತಳವಾರ ಮಾದನು ಸಹ ಹೆದರಿ ಊರು ಬಿಟ್ಟು ಹೋಗುತ್ತಾನೆ. ಮುಂದೆ ಬಲಿಯ ವ್ಯವಸ್ಥೆಯಾದ ಸುದ್ದಿ ಕೇಳಿ ಮತ್ತೆ ಧರಮನಟ್ಟಿಗೆ ಬರುತ್ತಾನೆ. ಹೀಗೆ ತನಗೆ ವಹಿಸಿಕೊಟ್ಟ ಕೆಲಸವನ್ನು ಮಾಡಲು ಸಾಧ್ಯವಾಗದೆ ಹೆದರಿ ಊರ ಬಿಟ್ಟು ಹೋದ ತಳವಾರ ಮಾದನ ಪಾತ್ರ ಈ ರೀತಿಯಲ್ಲಿ ಚಿತ್ರವಾಗಿದೆ.

ಮಡಿವಾಳ ಗೌಡ

ಬಟ್ಟೆಯನ್ನು ತೊಳೆಯುವ ಕಾಯಕ ಮಾಡುವ ವ್ಯಕ್ತಿ. ತೇರಿಗೆ ಬಲಿಯಾಗುವ ಹುಡುಗ ಪ್ರದಕ್ಷಿಣೆ ಹಾಕತಿರಬೇಕಾದರೆ, ಈ ಮಡಿವಾಳ ಗೌಡ ಹುಡುಗನ ಪಾದಗಳು ನೆಲದ ಮಣ್ಣಿಗೆ ತಾಗಿ ಮೈಲಿಗಿ ಆಗದ ಹಾಗೆ, ಆ ಹುಡುಗನ ಪಾದಗಳು ಬಿಸಿಲಿನ ತಾಪಕ್ಕೆ ಕಾದ ನೆಲದ ಬಿಸಿ ತಾಗಬಾರದೆಂದು, ಮಡಿವಾಳ ಗೌಡನು ಮಡಿಮಡಿ ಮಾಡಿದ ಧೋತರಗಳನ್ನು ಮೀಸಲ ನೀರಿನಲ್ಲಿ ತೋಯಿಸಿ ಪ್ರದಕ್ಷಿಣ ಹಾಕುತ್ತಿದ್ದ ಹುಡುಗನ ಮುಂದೆ ಹಾಸುತ್ತಿದ್ದನು. ಈ ರೀತಿ ಸಂದರ್ಭಕ್ಕೆ ತಕ್ಕಂತೆ ಈ ಪಾತ್ರವು ತನ್ನ ಸ್ವರೂಪವನ್ನು ಪಡೆದುಕೊಂಡಿದೆ.

ಡಂಣಾಯಕ

ಅಧಿಕಾರಶಾಹಿ ದಬ್ಬಾಳಿಕೆಯಲ್ಲಿ ಇದ್ದು, ತಾನು ಬಲಿಯಾಗುವುದನ್ನು ತಪ್ಪಿಸಿಕೊಳ್ಳಲು ಕಾಟುಕರ ಜಾತಿಯ ವ್ಯಕ್ತಿಯನ್ನು ಬಲಿಕೊಡಲು ಮುಂದಾದ ವ್ಯಕ್ತಿ. ಧರಮನಟ್ಟಿಯ ದೇಸಗತಿಯ ಮುಖ್ಯ ಸಿಪಾಯಿಯಾಗಿ ತನ್ನ ಕಾರ್ಯನಿರ್ವಹಿಸುವ ಡಂಣಾಯಕ. ಮುಂದೆ ಹೋಗದ ತೇರಿಗೆ ತನ್ನ ಬಳಿಯಿರುವ ಆರನೂರು ಕುದುರೆ ಹಾಗೂ ಆರನೂರು ಎತ್ತುಗಳನ್ನು ಕಟ್ಟಿ ತೇರನ್ನು ಎಳೆಯಲು ಪ್ರಯತ್ನಿಸಿದ. ಅದು ಸ್ವಲ್ಪವು ಮುಂದೆ ಹೋಗದೆ ನಿಂತಾಗ ತೇರಿಗೆ ಬಲಿಯ ವ್ಯವಸ್ಥೆಯನ್ನು ಮಾಡಲು ಕಾರಭಾರಿ ಡಂಣಾಯಕನಿಗೆ ತಿಳಿಸುತ್ತಾನೆ. ಒಂದು ವೇಳೆ ಬಲಿಯ ವ್ಯವಸ್ಥೆ ಆಗದಿದ್ದರೆ ದೇಸಾಯರ ಖಡ್ಗಕ್ಕೆ ಬಲಿಯಾಗುತ್ತಿ ಎಂದು ಹೇಳಿದಾಗ, ಡಂಣಾಯಕ ಕಾಟುಕರ ಜಾತಿಯ ಜನರನ್ನು ಹುಡುಕಿದರೆ ಯಾರು ಸಿಗಲಿಲ್ಲ. ಕೊನೆಗೆ ತನ್ನ ಪ್ರಾಣ ಹೋಗುವುದೆಂದು ತನ್ನ ಹೆಂಡತಿ ಮುಂದೆ ಹೇಳಿದಾಗ, ಇತನ ಹೆಂಡತಿ ಪಾರವ್ವ ಡಂಣಾಯತನನ್ನು ಬೈದು ಬಲಿಯ ವ್ಯವಸ್ಥೆಗೆ ವಿಠ್ಠಲ ದೇವರ ಗುಡಿಗೆ ಹೋಗುತ್ತಾಳೆ. ಅಲ್ಲಿ ಗೊಂಬೀ ಆಡಿಸುವ ದ್ಯಾವನ ಮಗನನ್ನು ಬಲಿಗೆ ಒಪ್ಪಿಸಿ ಬಂದು, ಗಂಡನಿಗೆ ತಿಳಿಸುತ್ತಾಳೆ. ಬಲಿಗೆ ಎಂಟು ಎಕರೆ ಭೂಮಿಯ ಆಸೆಯನ್ನು ಹುಟ್ಟಿಸಿದ್ದು ಹೇಳಿ ತನ್ನ ಗಂಡನನ್ನು ಪ್ರಾಣಾಪಾಯದಿಂದ ರಕ್ಷಿಸುತ್ತಾಳೆ. ಮುಂದೆ ಡಂಣಾಯಕ ವಾಡೇಕ್ಕ ಬಂದು ಕಾರಭಾರಿ ಹಾಗೂ ದೇಸಾಯರಿಗೆ ಬಲಿಯ ವ್ಯವಸ್ಥೆಯ ವಿಷಯ ಹೇಳಿ, ಎಂಟು ಎಕರೆ ಭೂಮಿಯ ವಿಷಯ ತಿಳಿಸುತ್ತಾನೆ. ಹೀಗೆ ತನ್ನ ರಕ್ಷಣೆಯನ್ನು ಮಾಡಿಕೊಳ್ಳಲಿಕ್ಕೆ ಬೇರೆಯ ವ್ಯಕ್ತಿಯನ್ನು ಬಲಿಕೊಡುವ ಪಾತ್ರ ಇದಾಗಿದೆ.

ಪಾರವ್ವ

ಪಾರವ್ವ ಡಂಣಾಯಕನ ಹೆಂಡತಿ. ತನ್ನ ಗಂಡನಿಗೆ ಬಂದ ಆಪತ್ತನ್ನು ದೂರು ಮಾಡಲು ತೇರಿಗೆ ಬಲಿಯ ಕೊಡಲು ಕಾಟುಕರ ಜಾತಿಯ ಗೊಂಬೆ ಆಡಿಸುವ ದ್ಯಾವಪ್ಪನ ಮಗ ಚಂದ್ರಾಮನನ್ನು ಒಪ್ಪಿಸುತ್ತಾಳೆ. ಗಂಡನಿಂದ ಆಗದ ಕೆಲಸವನ್ನು ಹೆಂಡತಿಯಾದ ಪಾರವ್ವ ತನ್ನ ಚತುರತೆಯಿಂದ ಮಾಡಿ ತೋರಿಸುತ್ತಾಳೆ. ಬಲಿಯ ವ್ಯವಸ್ಥೆಗೆ ದ್ಯಾವಪ್ಪನ ಹತ್ತಿರ ಹೋದಾಗ ಮೊದಲು ಆ ಕುಟುಂಬಕ್ಕೆ ಬೇಕಾದ ಅಕ್ಕಿ, ಜೋಳ, ಬೆಲ್ಲ ಮುಂತಾದವುಗಳನ್ನು ಕೊಟ್ಟು ನಿಧಾನವಾಗಿ ತನ್ನ ಬಲೆಯನ್ನು ಹೆಣೆಯುತ್ತಾಳೆ.

ದ್ಯಾವಪ್ಪನ ಕುಟುಂಬಕ್ಕೆ ಎಂಟೆಕರೆ ಭೂಮಿಯ ಆಶೆಯನ್ನು ತೋರಿಸಿ ದ್ಯಾವಪ್ಪನ ಮಗನನ್ನು ತೇರಿನ ಬಲಿಗೆ ಒಪ್ಪಿಸುತ್ತಾರೆ. ಹೀಗೆ ಭೂಮಿಯ ಆಸೆಯನ್ನು ಹುಟ್ಟಿಸಿ ತನ್ನ ಕಾರ್ಯವನ್ನು ಸಾಧಿಸುತ್ತಾಳೆ. ಮುಂದೆ ತನ್ನ ಗಂಡನಿಗೆ ದ್ಯಾವಪ್ಪನ ಕುಟುಂಬ ರಾತ್ರಿ ಊರ ಬಿಟ್ಟು ಹೋಗದ ಹಾಗೇ ಕಾವಲನ್ನು ಹಾಕು ಎಂದು ಸೂಚಿಸುತ್ತಾಳೆ. ಒಟ್ಟಾರೆಯಾಗಿ ತನ್ನ ಗಂಡನ ಪ್ರಾಣವನ್ನು ಉಳಿಸುವುದರ ಜೊತೆಗೆ ಬಲಿಯ ವ್ಯವಸ್ಥೆಯನ್ನು ಮಾಡಿದ ಚಾಣಾಕ್ಷ ಮಹಿಳೆಯಾಗಿ ಕಾದಂಬರಿಯಲ್ಲಿ ಪಾರವ್ವನ ಪಾತ್ರ ಕಂಡುಬರುತ್ತದೆ.

ಕಳ್ಳೀಗುದ್ದಿಗೌಡ

ಧರಮನಟ್ಟಿಯ ದೇಸಗತಿಯ ಒಡೆತನಕ್ಕೆ ಸೇರಿದ ಊರು ಕಳ್ಳೀಗುದ್ದಿ. ಈ ಕಳ್ಳೀಗುದ್ದಿಯ ಊರಿನ ಮುಖ್ಯಸ್ಥ ಗೌಡ. ಗೊಂಬೀರಾಮರ ಜಾತಿಯ ದ್ಯಾವಪ್ಪನ ತೇರಿನ ಪುರಾಣ ಕೇಳಿ ಹಾಗೂ ದುಸ್ಯಪ್ಪಗೋಳ ಸಂತರಾಮಜೀ ಮಾತನ್ನು ಕೇಳಿ. ದ್ಯಾವಪ್ಪನಲ್ಲಿ ಅನುಕಂಪ ಹಾಗೂ ಭಕ್ತಿ ಮೂಡಿ ತನ್ನ ಊರಲ್ಲಿರುವ ಒಳ್ಳೆಯ ಮಾಸಾರೀ ಭೂಮಿಯನ್ನು ಕೊಟ್ಟ. ನಂತರ ಒಕ್ಕಲುತನಕ್ಕೆ ತನ್ನ ಒಂದು ಜೋಡಿ ಹಳೇಕ್ಯಾಣ ಗಳನ್ನು ಹಾಗೂ ಊರು ಮತ್ತು ಹೊಲಗೇರಿಯ ನಡುವೆ ಒಂದು ಜಾಗವನ್ನು ತೋರಿಸಿ ಗುಡಿಸಲನ್ನು ಹಾಕಿಕೊಳ್ಳಲಿಕ್ಕೆ ಹೇಳಿದ. ಹೀಗೆ ದ್ಯಾವಪ್ಪನಿಗೆ ಸಹಾಯ ಮಾಡಿದ ಪಾತ್ರ ಇದಾಗಿದೆ.

ಕಳಸಪ್ಪಗೋಳ ರಾಮಣ್ಣನ ಅಜ್ಜ

ಕಳಸಪ್ಪಗೋಳ ರಾಮಣ್ಣನ ಅಜ್ಜನ ಹೆಸರು ರಾಮಣ್ಣನ ಈ ರಾಮಣ್ಣ ಹರೇಯದ ಪ್ರಾಯದಲ್ಲಿ ಇದ್ದಾಗ ಓಣಿಯಲ್ಲಿನ ಮದವಿ ಆದ ಬಂದ ಅಡ್ನನಾಡ ಹೆಂಗಸ್ಸು ಇವನ ಮೇಲೆ ಮನಸ್ಸನ್ನು ಮಾಡಿತು. ಆವಾಗ ರಾಮಣ್ಣನ ಮದವಿ ಇನ್ನು ಆಗಿದ್ದಿಲ್ಲ. ಹೀಗಾಗಿ ಇಬ್ಬರದೂ ಹೊಂದಾಣಿಕೆಯಾಗಿ ಎರಡು ವರ್ಷ ಕಳೆಯಿತು. ನಂತರ ರಾಮಣ್ಣನ ಮದುವೆಯಾಯಿತು. ಮದುವೆಯಾದ ಮೇಲೆ ರಾಮಣ್ಣ ಆಕೆಯನ್ನು ನೋಡುವುದಾಗಲಿ, ಮಾತನಾಡಿಸುವುದಾಗಲಿ ಮಾಡಲಿಲ್ಲ. ಇದರಿಂದ ಅವಳಿಗೆ ಬಹಳಷ್ಟು ಕೋಪ ಬಂದು ಇವನನ್ನು ಹೇಗಾದರೂ ಮಾಡಿ ತನ್ನ ಬುಟ್ಟಿಗೆ ಹಾಕಿಕೊಳ್ಳಬೇಕೆಂದರೆ ಸಿಗುತ್ತಿರಲಿಲ್ಲ. ಕೊನೆಗೆ ಒಂದು ದಿನ ಕರಚೀಕಾಯಿ ಮಾಡಿಕೊಂಡು ಹೊಲದಲ್ಲಿ ಮಟ್ಟಿ ಹೊಡಿಯುತ್ತಿದ್ದ ರಾಮಣ್ಣನಿಗೆ ತಿನಿಸೇ ಬಿಟ್ಟಳು. ಮುಂದೆ ರಾಮಣ್ಣನ ಮೈಯಲ್ಲಿನ ರಕ್ತ ಎಲ್ಲಾ ಕೆಟ್ಟು ವಿಷಾ ಆಗಿ ಮೈತುಂಬ ಹುಣ್ಣು-ಕುರಾ ಆಗಿ ಕೀಂವು ತುಂಬಿ ಸೋರಾಕ ಹತ್ತಿತ್ತು. ಈ ಸಂಕಟದಿಂದ ರಾಮಣ್ಣ ಒದರಲಿಕ್ಕೆ ಹತ್ತಿದ. ನೋಡಿದ ಮಂದಿ ಎಲ್ಲಾ ರಾಮಣ್ಣ ಕತೀ ಮುಗದಂಗ ಅಂತ ಅನ್ನುಕೊಳ್ಳುತ್ತಿದ್ದರು. ಆ ಮೇಲೆ ರಾಮಣ್ಣನ ಅವ್ವ ಯಮನವ್ವ ಹಳಿಮನಿ ಶಂಕರಜ್ಜನ ಅಜ್ಜನ ಹತ್ತಿರ ಬಂದು ನನ್ನ ಮಗನನ್ನು ಹೇಗಾದರು ಮಾಡಿ ಕಾಪಾಡು ಎಂದು ಕೇಳಿಕೊಂಡಳು. ಶಂಕರಜ್ಜನ ಅಜ್ಜ ರಾಮಣ್ಣನ ನಾಡೀ ಹಿಡಿದು ಈಗ ಮೂರು ತಿಂಗಳ ಮ್ಯಾಗ ಮೂರ ದಿವಸ ಆಗೇತಿ. ನೆನಪ ಮಾಡಿಕೊ ಏನಾರ ಸಿಹಿ ಪಾದಾರ್ಥವನ್ನು ಸೇವಿಸಿದೀ. ಅಂದಾಗ ರಾಮಣ್ಣ ಸುಮ್ಮನಾದ ನಂತರ ಶಂಕರಜ್ಜನ ಅಜ್ಜ ನೀನು ಹೇಳದಿದ್ದರೆ ನಾ ಹೆಂಗ ಔಷದ ಕೊಡಾಕ ಬರತೈತ್ತಿ ಎಂದಾಗ ಹೊಲದಲ್ಲಿ ನಡೆದ ಘಟನೆಯನ್ನು ಹೇಳಿದ ಅನಂತರ ಶಂಕರಜ್ಜನ ಅಜ್ಜ ಔಷಧವನ್ನು ಕೊಟ್ಟು ಆತನನ್ನು ಗುಣಪಡಿಸಿದ. ಹೀಗೆ ತನ್ನ ಅನೈತಿಕ ಸಂಬಂಧದ ರಹಸ್ಯ ವಿಷಯ ಈ ರೋಗದಿಂದ ಬಯಲಾಯಿತು. ಈ ರೀತಿಯಲ್ಲಿ ಕಾಮ-ಪ್ರೇಮದಲ್ಲಿ ಬಿದ್ದು ಅದರಿಂದ ತನ್ನ ಆರೋಗ್ಯವನ್ನು ಹಾಳುಮಾಡಿಕೊಂಡ ಪಾತ್ರವಾಗಿದೆ.

ದುಸ್ಯಪ್ಪಗೋಳ ಸಂತ ರಾಮಜೀ

ಪಂಢರಾಪುರದ ವಿಠ್ಠಲನ ಭಕ್ತ ದುಸ್ಯಸಪ್ಪಗೋಳ ಸಂತ ರಾಮಜೀ. ಸತ್ತೀಗೇರಿಯ ದಿಂಡೀ ಜೋಡಿ ಪ್ರತಿ ವರ್ಷ ಪಂಢಾರಾಪುರದ ವಿಠ್ಠಲನ ದರ್ಶನವನ್ನು ಪಡೆದುಕೊಂಡು ಬರುವ ವ್ಯಕ್ತಿ. ಧರಮನಟ್ಟಿಯ ವಿಠ್ಠಲನ ತೇರಿನ ಕಥೆಯನ್ನು ಕೇಳಿ ದ್ಯಾವಪ್ಪನಿಗೆ ಉದ್ದಕs ಬಿದ್ದು ನಮಸ್ಕಾರ ಮಾಡಿದ. ನಂತರ ದ್ಯಾವಪ್ಪನನ್ನು ಕುರಿತು "ನೀನs ಪುಣೇವಂತ ಬಿಡಪಾ... ಸ್ವಾಮಿಯ ರಥಕ್ಕೆ ಮಗನ್ನ ಕೊಟ್ಟು ನೂರು ಜಲಮಕ್ಕ ಸಾಕಾಗುವಷ್ಟು ಪುಣ್ಣೇ ಪಡಕೊಂಡಿ... ದೇಸಾಯರು ನಿನಗ ನಮ್ಮ ಊರಾಗ ಹೊಲಾ ಕೊಟ್ಟು ನಮ್ಮ ಊರಿಗೇ ದೊಡ್ಡ ಉಪಕಾರ ಮಾಡಿದಂಗಾತು... ದಿನಾ ಹರ್‍ಯಾಗ ನಿನ್ನ ಮಕಾ ನೋಡಿ ನಮ್ಮ ಪಾಪಾ ಕಳಕೊಳ್ಳೋದಕ್ಕೆ ಅನೂ ಆದುಗಾತು..." (ತೇರು, ಪು.೪೦) ಹೀಗೆ ಸಂತ ರಾಮಜೀ ತನ್ನ ಆರಾಧ್ಯ ದೈವ ವಿಠ್ಠಲನ ಮೇಲಿನ ಭಕ್ತಿಯನ್ನು ದ್ಯಾವಪ್ಪನ ಮೇಲಿನ ಪ್ರೀತಿಯನ್ನು ಈ ಪಾತ್ರದ ಮೂಲಕ ಅರಿಯಬಹುದು.

ಕುಬೇರ

ದ್ಯಾವಪ್ಪನ ಹಿರಿಯ ಮಗ ಕುಬೇರ. ತಂದೆ ಆಕಿಕೊಟ್ಟ ಮಾರ್ಗದಲ್ಲಿಯೇ ಇತನು ಸಹ ರಕ್ತ ತಿಲಕ ಸೇವೆಯನ್ನು ಹಾಗೂ ತೀರ್ಥಕ್ಷೇತ್ರಗಳ ದರ್ಶನ ಮತ್ತು ತನ್ನ ರಕ್ತದಲ್ಲಿರುವ ಕಸರನ್ನು ಕಳೆದುಕೊಳ್ಳಲಿಕ್ಕೆ ಔಷಧವನ್ನು ಸೇವಿಸುತ್ತಿದ್ದನು. ದ್ಯಾವಪ್ಪ ಈ ಕುಬೇರನನ್ನು ಕೊನೆಯ ನಾಲ್ಕು ವರ್ಷದ ಜಾತ್ರೆಗೆ ಕರಕೊಂಡು ಹೋಗಿ ಎಲ್ಲಾ ಪದ್ಧತಿಯನ್ನು ತೋರಿಸಿಕೊಟ್ಟಿದ್ದರಿಂದ, ಕುಬೇರ ಐದನೇ ವರ್ಷ ದೀಕ್ಷೆಯನ್ನು ಪಡೆದು ಒಬ್ಬನೆ ಯಾತ್ರೆಗೆ ಹೋದ. "ಸ್ವಾಮಿಯ ಸೇವಾದ ಪಟ್ಟಕ್ಕ ಬಂದ ಕುಬೇರ ತನ್ನ ಮೈಮ್ಯಾಗ ಕಾವೀ ಬಣ್ಣದ ಶಲ್ಲೇ ಹೊತಗೋಲಿಕ್ಕೆ ಶುರುಮಾಡಿದನಂತೆ. ಅಂವ ತನ್ನ ಮದಲನೇ ಸೇವಾ ಮುಗಿಸಿಕೊಂಡು ಭಕ್ತರು ಕೊಟ್ಟ ಕಾಯೀ - ಧೋತರಾ - ಅಕ್ಕೀ - ಬ್ಯಾಳೀ - ಬೆಲ್ಲಾ ಮತ್ತು ಧವಸ ಧಾನ್ಯಗಳ ಗಂಟುಗಳನ್ನ ಒಂದು ಚಕಡ್ಯಾಗ ಹಾಕಿಸಿಕೊಂಡು ಕಳೀಗುದ್ದಿಗೆ ಬಂದನಂತೆ"...(ತೇರು, ಪು.೬೧) ಹೀಗೆ ತಂದೆ ದ್ಯಾವಪ್ಪ ಧರಮನಟ್ಟಿಯ ತೇರಿನ ಸೇವಾ ಯಾವ ರೀತಿಯಲ್ಲಿ ಮಾಡುತ್ತಿದ್ದನು ಅದೇ ರೀತಿಯಲ್ಲಿ ಮುಂದುವರಿಸಿದ. ತಂದೆ ಹಾಕಿದ ನಿಯಮದಲ್ಲಿಯೇ ಬಂಧಿಯಾಗಿ ಅದರಿಂದ ಬಿಡಿಸಿಕೊಳ್ಳದೆ ತಾನು ಸಹ ರಕ್ತ ತಿಲಕ ಸೇವೆಯನ್ನು ಮಾಡುವ ಪಾತ್ರ ಇದಾಗಿದೆ.

ಆಧುನಿಕ ದ್ಯಾವಪ್ಪ

ಆಧುನಿಕ ವಿಚಾರ, ವೈಚಾರಿಕತೆಯಿಂದಲೇ ಆಧುನಿಕ ದ್ಯಾವಪ್ಪ ಕಾದಂಬರಿಯಲ್ಲಿ ಪ್ರವೇಶ ಪಡೆಯುತ್ತಾನೆ. ದೇವರು, ಧರ್ಮದ ವಿರುದ್ಧ ಬಂಡಾಯ ಹೂಡುವುದು ಕಾಟುಕರ ಜೀವಿಗಳ ಮೇಲಾಗುವ ಕ್ರೌರ್ಯವನ್ನು ಈ ದೇವರು, ಧರ್ಮ ಸಮರ್ಥಿಸುತ್ತವೆ. ಪೋಷಿಸುತ್ತವೆ ಎಂಬ

ಕಾರಣಕ್ಕಾಗಿ, ನವನಿರ್ಮಾಣ ಚಳುವಳಿಯಲ್ಲಿ ಭಾಗವಹಿಸಿ ಜೈಲಿನ ಸವಿಯನ್ನು ಅನುಭವಿಸಿ ಬಿಡುಗಡೆ ಪಡೆದ ನಂತರ ಪತ್ರಕರ್ತ ಪಾಟೀಲ(ನಿರೂಪಕ)ನ ಭೇಟಿಯಾದ ಸಂದರ್ಭದಲ್ಲಿ ತನ್ನ ಆಧುನಿಕ ವಿಚಾರವನ್ನು ಹಾಗೂ ಬಂಡಾಯವನ್ನು ವ್ಯಕ್ತಪಡಿಸುತ್ತಾನೆ.

"ಆತ ಕೇವಲ ತನ್ನೊಬ್ಬನ ವಿಮುಕ್ತಿಗಾಗಿ ಬಂಡಾಯ ಎದ್ದವನಾಗಿರದೆ ಇಡೀ ವ್ಯವಸ್ಥೆಯ ವಿರುದ್ಧವೇ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾನೆ. ತನ್ನ ಹಿಂದಿನ ಪರಂಪರೆಯ, ಭೂತದ ಒಣ ವೈಭವೀಕರಣವನ್ನೆಲ್ಲ ತನ್ನ ಧಾರ್ಮಿಕ ಆಚರಣೆಗಳನ್ನು ಉನ್ನತೀಕರಿಸುವುದನ್ನು ಆತ ವಿರೋಧಿಸುತ್ತಾನೆ; ವೈಚಾರಿಕವಾಗಿ ಚಿಂತಿಸುತ್ತಾನೆ."[೫] ಆತನ ಮಾತಿನ ಒಳಗೆ ಮೌನ ಹೋರಾಟ ಅಡಗಿದೆ. ಅದನ್ನು ತನ್ನ ಮನೆತನದ ತುಮುಲತೆಯಿಂದ ವ್ಯಕ್ತಪಡಿಸುತ್ತಾನೆ.

"ಎಲ್ಲಾ ಹಳೇ ಮಾಲು! ನಮ್ಮದು ಪುಣ್ಯ ಭೂಮಿ... ನಮ್ಮ ಪೂರ್ವಜರೆಲ್ಲ ಅವತಾರೀ ಪುರುಷರೂ... ಹಂಗ...ಹಿಂಗ ಅಂತ ತೆಲೀ ಬಿಟ್ಟ ಹಿಡದ ಹೋತರೀ...! ಹಿಂದಿಂದ ತಗದ ಹಿತ್ತಲದಾಗ ಅತ್ತರಂತ!.. ಅಲ್ಲರೀ ನಮ್ಮ ವ್ಯವಸ್ಥಾದಾಗ ಬಡವರು ಮರ್ಯಾದಿಂದ ಬದುಕೂ ಹಾದೀ ಹೇಳರೀ... ಹಳ್ಯಾಗಿನ ಗೌಡರೂ-ಕುಲಕರ್ಣ್ಯಾರೂ-ಜಮೀನದಾರರು ಮತ್ತ ಜಾತ್ಯಸ್ಥರೂ ಮಾಡಿತಿರೂ ಹಂತಾ ದಂಡಾವರ್ತೀ ಬಗ್ಗೆ ವಿಚಾರ ಮಾಡರೀ... ನಮ್ಮಂಥಾ ಹುಡುಗೋರಿಗೆ ಕೆಲಸ ಇಲ್ಲದ್ದರ ಬಗ್ಗೆ ಹೇಳರಿ..." (ತೇರು, ಪು.೬೮) ಈ ಕ್ರಾಂತಿಕಾರಿ ನಿಲುವಿನ ಆಳದಲ್ಲಿ ವ್ಯಕ್ತಿಯ ಬಂಡಾಯ, ಅಸಹಾಯಕತೆ ಮತ್ತು ದೈನ್ಯತೆಭಾವ ಇದೆ. ದ್ಯಾವಪ್ಪ ಕೇಳುತ್ತಿರುವುದು ಕೇವಲ ಕೆಲಸ ಅದು ತನ್ನ. ಮೂರೊತ್ತಿನ ತುತ್ತಿನ ಚೀಲವನ್ನು ಇಂಗಿಸಲು ಮಾತ್ರ, ದ್ಯಾವಪ್ಪನ ಈ ಕಳಕಳಿ ಮಾತುಗಳು ಮತ್ತು ಪ್ರಶ್ನೆಗಳು ಧಾರ್ಮಿಕ ಪರಂಪರೆಗಳಿಗೆ ಆದರ್ಶೀಕರಿಸುವವರಿಗೂ ಸವಾಲಾಗಿ ಅನ್ವಯಿಸುತ್ತವೆ. ದ್ಯಾವಪ್ಪ ಸಮಾಜದ ವ್ಯವಸ್ಥೆಯ ವಿರುದ್ಧ ಕತೆಯ ನಿರೂಪಕ(ಪತ್ರಕರ್ತ)ನ ಮುಂದೆ ಈ ರೀತಿಯಲ್ಲಿ ವ್ಯಕ್ತಪಡಿಸುತ್ತಾನೆ.

"ನಮ್ಮ ಅಜ್ಜಗೋಳು ವಿಠಲನ ಭಕ್ತರು ಕೊಟ್ಟದ್ದನ್ನು ಚಕಡ್ಯಾಗ ಹೇರಿಕೊಂಡು ಬರತಿದ್ದರೂ ಅಂತ ನಮ್ಮ ಅಪ್ಪ ಹೇಳತಿದ್ದ ಆಗ ಕೊಡುವರು ಅದನ್ನ ಭಕ್ತೀ ಅಂತ ಕೊಡತಿದ್ದರು ಮತ್ತು ಇಸಗೋಳಾವರ ಅದನ್ನ ಭಿಕ್ಷಾ ಅಂತ ಅನಕೊತಿದ್ದಿಲ್ಲ... ಮುಂದೆ ಕೊಡವರಿಗೆ ಅದು ಭಿಕ್ಷಾ ಅಂತ ತಿಳೀತು... ಕೊಡುದನ್ನ ಬಂದ ಮಾಡಿದರು... ನಮ್ಮ ಅಪ್ಪನ ಕಾಲದಾಗs ಯಾವ ಭಕ್ತರೂ ಏನ ಒಂದ ನಯ್ಯಾ ಪೈಸಾ ಕೊಡತಿದ್ದಿಲ್ಲರಿ... ಜ್ವಾಳಾ ಕಾಳನೂ ಇಲ್ಲ... ಕಾಡಿ ಬೇಡಿ ತಿರಕೊಂಡು ಉಂಬುವನಿಗೇ ಕೈಯತ್ತಿ ಒಂದು ತುತ್ತು ನೀಡುವುದಿಲ್ಲ. ಹಂತಾದ್ದರಾಗ ಇನ್ನ ಇಲ್ಲದ ದೇವರ ಮ್ಯಾಲಿನ ಭಕ್ತೀಗೆ ಕೊಡಾಂವಯಾಂವರೀ...? ಈಗ ಮಂದಿಗೆ ದೇವರ ಖರೇ ಹಕೀಕತ್ತು ತಿಳದೈತಿ. ಹಿಂಗಾಗಿ ಕೊಡೂದು ಗಿಡೂದು ಬಂದ ಮಾಡ್ಯಾರು ಅವರದೇನ ತಪ್ಪ ಅಲ್ಲರೀ... ದೇವರೂ ದಿಂಡರೂ ಎಲ್ಲಾ ಔಟ್ ಆಫ್ ಡೇಟ್ ಆಗ್ಯಾವರೀ..! ಔಷದದ ಬಾಟಲೀ ಮ್ಯಾಗ ಹಾಕಿರತಾರ ನೋಡರಿ... ಎಕ್ಸಪೈರೀ ಡೇಟು... ಹಂಗ!

ದೇವರದೂ ದಿಂಡಿರದೂ ಏಕ್ಸಪೈರೀ ಡೇಟು ಆಗಿ ಹೋಗೇತರೀ... ಹಿಂತಾ ದೇವರ ತೇರಿನ ಸೇವಾ ಮಾಡಿಕೋತ ನಿರುಪಯೋಗ ಆಗಿ ಹಾಳ ಆಗಲಿಕ್ಕೆ ಬಿಡದ ನಮ್ಮಂಥಾ ಹುಡುಗೋರಿಗೆ ದುಡೀಲಿಕ್ಕೆ ಕೆಲಸಾ ಕೊಡಬೇಕರಿ..."(ತೇರು, ಪು.೭೪)ಎಂದು ಆಧುನಿಕ ದ್ಯಾವಪ್ಪ ವೈಚಾರಿಕವಾಗಿ ಹೇಳುತ್ತಾನೆ.

ಪುರಾಣ ಪುರುಷ ದ್ಯಾವಪ್ಪನಿಂದ ಹಿಡಿದು ಆಧುನಿಕ ದ್ಯಾವಪ್ಪನವರೆಗೂ ಧರ್ಮನಿಷ್ಠೆಯಿಂದ ಆಚರಣೆಯನ್ನು ಸಡಿಲಿಸಿಕೊಂಡು ದೇವರ ಅಸ್ತಿತ್ವನ್ನೇ ಪ್ರಶ್ನಿಸುತ್ತಾನೆ. "ಗೂಗೀಕೊಳ್ಳದಾಗ ಈಗ ಯಾವ ಸಿದ್ಧರೂ ಕಾಣೂದಿಲ್ಲ. ಅಲ್ಲಿ ಈಗ ಕಳ್ಳರು ಅಡಗಿಕೊಂಡಿರತಾರರಿ... ನವಲತೀರ್ಥವಾಗ ಗಂಗವ್ವ ಈಗ ಸೆಳವ ಕಳಕೊಂಡಾಳರಿ"(ತೇರು, ಪು.೭೫) ಎಂದು ದೇವರು, ಧರ್ಮ ಹಾಗೂ ಸಮಾಜದ ಸಂಸ್ಕೃತಿಗೆ ಪ್ರತಿ ಸಂಸ್ಕೃತಿಯಾಗಿ ನಿಲ್ಲುತ್ತಾನೆ. ಅಷ್ಟೇ ಅಲ್ಲದೆ ಧರಮನಟ್ಟಿಯ ತೇರಿನ ರಕ್ತ ತಿಲಕದ ಸೇವೆಯ ಆಚರಣೆಯನ್ನು ಧಿಕ್ಕರಿಸಿ ಪ್ರತಿಭಟಿಸುವುದರೊಂದಿಗೆ ಪ್ರಶ್ನಿಸುತ್ತಾನೆ. ಈ ಆಚರಣೆಯನ್ನು ಮಾಡುವ ಬದಲು ಸಮಾಜದಲ್ಲಿರುವ ನೊಂದ ಜೀವಿಗಳಿಗೆ ಆಶ್ರಯವನ್ನು ನೀಡಿ ಅವರಿಗೆ ಸೇವೆಯನ್ನು ಮಾಡಲು ತನ್ನ ಜೀವನವನ್ನು ಮೀಸಲಿಡುತ್ತಾನೆ. ಕೆಲಕಾಲ ಜೆ.ಪಿ. ಆಂದೋಲನದಲ್ಲಿ ಭಾಗವಹಿಸಿ ಅನಂತರ ದೀನ ದಲಿತರ ಸೇವೆಗಾಗಿ ಹಾಗೂ ಕುಷ್ಟ ರೋಗಿಗಳ ಸೇವೆಗಾಗಿ ತನ್ನನ್ನು ಸಂಪೂರ್ಣವಾಗಿ ಮುಡುಪಾಗಿಟ್ಟಿರುವ ಬಾಬಾ ಅಮ್ಟೆಯವರ ಆಶ್ರಮವನ್ನು ಸೇರುತ್ತಾನೆ. ತನ್ನ ಭಾವಿ ಪತ್ನಿಗೆ ಬರೆದ ಪತ್ರದಲ್ಲಿ ತನ್ನ ಮನೋಧೋರಣೆಯನ್ನು ಸ್ಪಷ್ಟವಾಗಿ ತಿಳಿಸುತ್ತಾನೆ.

"ದೇವರು ಅನ್ನುವುದು ಇದ್ದರೆ ಅದರ ವಿರುದ್ಧ ನನ್ನ ಸತ್ಯಾಗ್ರಹವಿದೆ. ಆ ದೇವರ ವಿರುದ್ಧದ ಸತ್ಯಾಗ್ರಹದ ಸಲುವಾಗಿಯೇ ನನ್ನ ನಿನ್ನ ಮದುವೆಯ ದೈಹಿಕ ಮುಖ ಈ ಜನ್ಮದಲ್ಲಿ ಸಾಧ್ಯ ಆಗುವುದಿಲ್ಲ. ದೇವರ ವಿರುದ್ಧ ನನ್ನ ಬಂಡಾಯ ಇದು. ದೇವರು ಇದೆ ಎನ್ನುವುದಾದರೆ ನನ್ನ - ನಿನ್ನಂಥವರ ಬದುಕಿನಲ್ಲಿ ನಡೆಯುವ ಘಟನೆಗಳಿಗೆ ಯಾವ ಅರ್ಥವಿದೆ? ಇದು ಅವನಿಗೆ ತಿಳಿಯಬೇಕಲ್ಲವೆ? ಇದನ್ನು ಬಿಟ್ಟರೆ ಬೇರೆ ಯಾವ ಹಾದಿಯಿಂದ ಆ ದೇವರಿಗೆ ತಿಳಿಸಲಿಕ್ಕೆ ಸಾಧ್ಯ.?"(ತೇರು, ಪು.೧೩೫)ಎಂದು ತನ್ನ ಜೀವನದಲ್ಲಿ ನಡೆದ ಘಟನೆಯನ್ನು ವಿಸ್ತರಿಸುತ್ತಾನೆ.

ಈ ರೀತಿಯಲ್ಲಿ ದೇವರನ್ನೇ ನಂಬಿ ದೈವತ್ವವಾದ ಮೂಲ ದ್ಯಾವಪ್ಪ ಜನರ ಬಾಯಲ್ಲಿ ಪುರಾಣ ಪುರುಷನಾದರೆ, ಈ ಆಧುನಿಕ ದ್ಯಾವಪ್ಪ ದೇವರ ವಿರುದ್ಧ ಪ್ರತಿಭಟಿಸಿ ಆಧುನಿಕ ಕತೆಯಾಗಿ ಉಳಿಯುತ್ತಾನೆ. ಅಷ್ಟೇ ಅಲ್ಲದೆ ಜನರಲ್ಲಿ ಕಟ್ಟುಕಥೆಯಾಗಿ ಬಿಂಬಿತವಾಗಿದ್ದಾನೆ. ಹೀಗೆ ಈ ಪಾತ್ರವು ತನ್ನ ಪೂರ್ವಜರು ಹಾಕಿಕೊಟ್ಟ ಮಾರ್ಗವನ್ನು ಉಲ್ಲಂಘಿಸಿ, ಆಧುನಿಕ ವಿಚಾರಗಳಿಂದ, ವೈಚಾರಿಕ ಪ್ರಜ್ಞೆಯನ್ನು ಮೈಗೂಡಿಸಿಕೊಂಡು, ಶೋಷಣೆಯನ್ನು ವಿರೋಧಿಸುತ್ತಾ ಆಧುನಿಕ ದ್ಯಾವಪ್ಪನಾಗಿ ಕಾದಂಬರಿಯಲ್ಲಿ ಕಂಡುಬಂದಿದ್ದಾನೆ. ಈ ಪಾತ್ರವು ಕಾದಂಬರಿಯಲ್ಲಿ ಎಲ್ಲಿಯೂ ತನ್ನ ಸತ್ವವನ್ನು ಕಳೆದುಕೊಂಡಿಲ್ಲ. ರಾಘವೇಂದ್ರ ಪಾಟೀಲರು ನವಯುಗದ ಸಂಕೇತವಾಗಿ ಆಧುನಿಕ ದ್ಯಾವಪ್ಪನ ಪಾತ್ರವನ್ನು ಕಾದಂಬರಿಯಲ್ಲಿ ತಂದಿದ್ದಾರೆ.

ಸುಶಿಲವ್ವ

ಆಧುನಿಕ ದ್ಯಾವಪ್ಪನ ಅವ್ವ. ಗೌಡನ ಅನೈತಿಕತೆಗೆ ತುತ್ತಾದ ಹೆಣ್ಣು. ಮಗನಿಂದ ಸಂಶಯದ ಸುಳಿಯಲ್ಲಿ ಸಿಕ್ಕಾಕಿಕೊಂಡು ತನ್ನ ಜೀವನವನ್ನು ಗೌಡನ ತೋಟದ ಮನೆಯಲ್ಲಿ ಕಳೆಯುತ್ತಿದ್ದಳು. ದ್ಯಾವಪ್ಪ ತನ್ನ ಅವ್ವನ ಮೇಲೆ ಸಂಶೇ ತಾಳಿ ಸುಶಿಲವ್ವನನ್ನು ಕೊಲೆ ಮಾಡಲಿಕ್ಕೆ ಹೋದಾಗ ಸುಶಿಲವ್ವ ಕಳ್ಳಿಗುದ್ದಿಯ ಗೌಡನ ಪಾದಾ ಹಿಡಿದು ನನ್ನ ಜೀವಾ ಉಳಸಿರೀ ಅಂತ ಅವನ ತೋಟದ ಮನೆಗೆ ಹೋದಳು. ಮುಂದೆ ಕೆಲವೊಂದು ದಿನಗಳ ನಂತರ ಒಂದೇ ಸವನೇ ಬಳೀ ಸೆರಗ ರೋಗಕ್ಕೆ ತುತ್ತಾಗಿ, ಗಾಂವಟೀ ಔಷಧ, ಸರಕಾರಿ ಔಷಧ ಎಲ್ಲಾ ತೆಗೆದುಕೊಂಡರೂ ಉಪಯೋಗವಾಗದೇ ತೊಡಿ ಸೆಳೆತು ಹುಣ್ಣಾ ಆಗಿ ಹುಳಾ ಬಿದ್ದು ಗೌಡನ ತೋಟದ ಮನೆಯಲ್ಲಿ ಸತ್ತು ಹೋದಳು. ಹೀಗೆ ತನ್ನ ಮಗನಿಂದ ದೂರಾಗಿ ಗೌಡನ ಕಾಮದ ಕೈಗೊಂಬೆಯಾಗಿ ಅನೈತಿಕತೆಯಲ್ಲಿ ತೊಡಗಿ ಕೊನೆಗೆ ಕೆಟ್ಟ ರೋಗಕ್ಕೆ ಬಲಿಯಾಗಿ ಹೋದ ಸುಶಿಲವ್ವನ ಪಾತ್ರವಾಗಿದೆ.

ಲಗಮವ್ವ

ಕಾಮಕರ ಕಣ್ಣಿಗೆ ಬಲಿಯಾಗಿ ತನ್ನ ಮೇಲೆ ಹಲವು ಕಟ್ಟು ಕಥೆಯನ್ನು ಕಟ್ಟಿಕೊಂಡ ಹೆಣ್ಣು. ಹರೇದ ಹುಡುಗರು ಆಧುನಿಕ ದ್ಯಾವಪ್ಪನಿಗೂ ಮತ್ತು ಲಗಮವ್ವನಿಗೂ ಸಂಬಂಧ ಕುರಿತು ಆಡುವ ಮಾತುಗಳು ಲಗುಮವ್ವನನ್ನು ಲೈಂಗಿಕ ಶೋಷಣೆಗೆ ಗುರಿ ಮಾಡಿದೆ. ದ್ಯಾವಪ್ಪ ಧರಮನಟ್ಟಿಗೆ ಇವತ್ತು ಬರುತ್ತಾನೆಂದರೆ ಅಲ್ಲಿಯ ಹರೇದ ಹುಡುಗರು ಲಗಮವ್ವನನ್ನು ಕುರಿತು "ಇವತ್ತು ಲಗಮವ್ವ ಸಾಬಣಾ ಹಚಿಗೊಂಡು ಜಳಕಾ ಮಾಡಿ ರೆಡಿ ಆಗಿರತಾಳು... 'ನಾರೊ ಎಣ್ಣೀ-ಗಿಣ್ಣೀ ತಂದ ಕೊಟ್ಟಿರತಾನ ತಗೋ..' 'ಹಾಂ... ತಲೀಗೆ ನಾರೂ ಯಣ್ಣೀ ಹಚ್ಚಿಗೊಂಡು ಮಕಕ್ಕ ಪಾವಡರ್ ಬಳಕೊಂಡು ಇವನ ಹಾದೀ ನೋಡಿಕೊಂತ ಬಾಗಲದಾಗs ನಿಂತಿರತಾಳು..' 'ಅಲ್ಲೋಪಾ... ಊರಾಗ ಇಷ್ಟ ಹರೇದ ಹುಡುಗೋರ ಅದವು... ಇವನೆಲ್ಲಾ ಬಿಟ್ಟು ಆ ಬುಬ್ಬಣೆ ಈ ದ್ಯಾವಗ ಹೆಂಗ ಒಲದಿದ್ದಾಳೂ ಅಂತ...!' 'ಏ... ಈ ಲಗಮಿ ಎರಡ ಸರತೇ ಹೊಟ್ಟೀ ಇಳಿಸಿಕೊಂಡಾಳಂತೆ..' ತಿಗಡಿಗೆ ಹೋಗಿ ಅಲ್ಲೇ ನರಸಬಾಯಿಯ ಮನ್ಯಾಗs ಎಲ್ಲಾ ಮುಗಿಸಿಕೊಂಡ ಬಂದಾಳಂತ..."(ತೇರು, ಪು.೯೩-೯೪) ಹೀಗೆ ಲಗಮವ್ವನನ್ನು ಕುರಿತು ಹರೇದ ಹುಡುಗರ ಕಟ್ಟು ಕಥೆಯನ್ನು ಆಡುತ್ತಿದ್ದರು. ಇದರಿಂದ ಲಗಮವ್ವ ಬೇಸತ್ತಿದ್ದಳು. ಗುಡಿ ಕಳವು ಆದಾಗ ಎಲ್ಲರ ಹಂಗ ನೋಡಲಿಕ್ಕೆ ಬಂದಾಗ, ಈರ ಅಡ್ಡ ನಿಂತು ಲಗಮವ್ವಾ ರಗತ ತಿಲಕದ ಸೇವಾ ಮಾಡುವ ದ್ಯಾವಪ್ಪ ಸ್ವಾಮಿ ಗುಡಿ ಕಳವು ಮಾಡಿದಾನು ಅದಕ್ಕೆ ನೀನು ಒಳಗ ಹೋಗಬ್ಯಾಡ ಎಂದು ಹೇಳಿದಾಗ ಲಗಮವ್ವನಿಗೆ ದ್ಯಾವಪ್ಪನ ಹೆಸರು ಕೇಳಿ ಸಾಕಾಗಿತ್ತು. ಅವಳು ಸಿಟ್ಟಿಗೆದ್ದು "ಯಾಕೋ ನನ ಹಾಟ್ಯಾನ ಮಗನs ಯಾಂವನೋ ಬಾಡ್ಯಾ ತುಡುಗ ಮಾಡಿದ್ದರ ನಾಯಾಕ ಗುಡೀ ಒಳಗ ಹೋಗಬಾರದು? ಗುಡೀ ಒಳಗೆ ಹೋಗಬ್ಯಾಡ ಅಂತ ಹೇಳಾಂವ ನೀ ಯಾವ ಬಾಡ್ಯಾನ ಮಗಾ... ನಿನ್ನ... ನಿನ್ನ ಹೇಲ

ಹಚ್ಚಿ ತಟ್ಟಲೀಲೇ ಹೊಡೀತನು... ಅಂತ ಗದ್ದಲಾ ಎಬ್ಬಿಸಿ ಈರನ ಮೈ ಮ್ಯಾಲs ಹೋದಳು..."(ತೇರು, ಪು.೧೦೪) ಈ ರೀತಿಯಲ್ಲಿ ಲಗಮವ್ವನಿಗೆ ಇಲ್ಲಸಲ್ಲದ ಮಾತುಗಳನ್ನು ಆಡುತ್ತಿದ್ದ ಹುಡುಗರಿಗೆ ತನ್ನ ಚಪ್ಪಲಿನಿಂದ ಉತ್ತರವನ್ನು ಕೊಡಲು ಸಮಾಜದಲ್ಲಿರುವ ಯುವಕರು ತಮ್ಮ ಕಾಮ ತೃಪ್ತಿಗಾಗಿ, ಲೈಂಗಿಕವಾಗಿ ಬಳಸಿಕೊಳ್ಳಲು ಯತ್ನಿಸುವವರಿಗೆ ಈ ಪಾತ್ರ ಕೊನೆಗೆ ತನ್ನ ಬೈಗುಳದಿಂದ ಉತ್ತರಿಸಿದ್ದು ತುಂಬಾ ಸೊಗಸಾಗಿ ಕಂಡುಬಂದಿದೆ.

ಗೌಡ

ಆಧುನಿಕ ದ್ಯಾವಪ್ಪನ ಕಾಲದ ಕಳ್ಳೀಗುದ್ದಿಯ ಮುಖ್ಯಸ್ಥ ಗೌಡ. ತನ್ನ ಕಾಮುಕತನದಿಂದ ಅನೈತಿಕ ಸಂಬಂಧ ಹೊಂದಿದ ವ್ಯಕ್ತಿ ದ್ಯಾವಪ್ಪನ ಭೂಮಿಯನ್ನು ತನ್ನ ಚಾಣಾಕ್ಷ ರಾಜಕೀಯದಿಂದ ಪಡೆದವನು. ದ್ಯಾವಪ್ಪನ ಅವ್ವ ಸುಶೀಲವ್ವನ ಜೊತೆ ಅನೈತಿಕ ಸಂಬಂಧ ಬೆಳೆಸಿ ತಾಯಿ ಹಾಗೂ ಮಗನ ಬೇರೆ ಮಾಡಿದ ವ್ಯಕ್ತಿ. ಬಡವರ ಜಮೀನನ್ನು ತನ್ನ ಕುತಂತ್ರದಿಂದ ಪಡೆದು ಅವರನ್ನು ಹೆದರಿಸಿ ಊರು ಬಿಡಿಸಿ ಕಳುಹಿಸುವ ಕೆಲಸ ಮಾಡುವವ. ದ್ಯಾವಪ್ಪನ ಭೂಮಿಯನ್ನು ಕಸಿದುಕೊಂಡಾಗ ದ್ಯಾವಪ್ಪ ಪತ್ರಕರ್ತ ಪಾಟೀಲನ ಎದುರು ಗೌಡನನ್ನು ಕುರಿತು "ಟೆನೆನ್ಸೀ ಬಂತು ಖರೇ ಬಡವರಿಗೇನು ದಕ್ಕಲಿಲ್ಲ... ನಮ್ಮ ಜಮೀನ ನಮ್ಮ ಊರ ಗೌಡಗs ಹೊತು... ಅಂವಗ ಐವತ್ತ - ಅರವತ್ತ ಎಕರೇ ಭೂಮಿ ಐತಿರೀ. ಆದರ ಕಾಯ್ದೇಕ್ಕ ಹೆಂಗ ಟಾಂಗ ಕೊಡಬೇಕಂತ ಯಾವ ವಕೀಲನಕಿಂತಾ ಹೆಚ್ಚು ಜ್ಞಾನ ಐತಿ ಅಂವಗ... ನನಗಿಂತಾ ಕಮ್ಮಿ ವಯಸ್ಸಿನ ತನ್ನ ಮಗನ್ನ ನಮ್ಮ ಹೊಲಕ್ಕ ಟೆನೆಂಟ ಅಂತ ಡಿಕ್ಲರೇಶನ್ ಕೊಡಿಸ್ಯಾನರಿ... ಹದಿನೆಂಟ ವರ್ಷ ಹುಡುಗ ಹದಿನೈದ ವರ್ಷ ಹಿಂದಿಂದs ನಮ್ಮ ಹೊಲಾ ಹೊಡ್ಯಾಕತ್ಯಾನಂತ..."(ತೇರು, ಪು.೭೩) ಹೀಗೆ ಹೇಳುವುದರ ಮೂಲಕ ದ್ಯಾವಪ್ಪ ತನ್ನ ಜಮೀನು, ಹಾಗೂ ತನ್ನ ತಾಯಿಯ ಜೊತೆ ಹೊಂದಿದ ಅನೈತಿಕ ಸಂಬಂಧ ಕುರಿತು ಗೌಡನ ವಿರುದ್ಧ ಪ್ರತಿಭಟಿಸಲು ಪ್ರಾರಂಭಿಸಿದ. "ನಮ್ಮ ಊರ ಗೌಡದಾನಲ್ಲರೀ... ಅಂವ ಆ ಗೌಡಂದರs ತಾನು ಬೀಜದ ಹೋರೀ ಅಂತ ತಿಳಿಕೊಂಡದಾನು... ಆ ಮುಂಬಯ್ಯವರ ಭಾಷಾನಾ ಕೇಳತಿದ್ದಂಗs ಈ ಗೌಡನಂಥವರನ್ನು ನಾಶ ಮಾಡೂ ಹಂತಾ ಹಾದಿ ಕಂಡಂಗಾತು...'(ತೇರು, ಪು.೭೭) ಎಂದು ಗೌಡನ ವಿರುದ್ಧ ಬಂಡಾಯ ಎದ್ದಿರುವುದನ್ನು ಕಾಣುತ್ತೇವೆ. ಮುಂದೆ ಪತ್ರಕರ್ತ ಪಾಟೀಲ ಕಳ್ಳೀಗುದ್ದಿಗೆ ಹೋದಾಗ ದ್ಯಾವಪ್ಪನ ಕುರಿತು ಕಟ್ಟುಕಥೆಯನ್ನು ಹೆಣೆದ ಗೌಡ. ದ್ಯಾವಪ್ಪನ ಕುರಿತು ನಕ್ಸಲ ಗುಂಪು ಕಟ್ಟಿಗೊಂಡ ಪೋಲೀಸ್‌ರಿಂದ ಗುಂಡು ತಗುಲಿ ಅವನ ಕಾಲ ಕತ್ತಿರಿಸ್ಯಾರ. ದೇವಸ್ಥಾನ ಕಳ್ಳತನ ಮಾಡಿ ಓಡಿ ಹೋದ ಮಗಾ. ಈ ರೀತಿಯಲ್ಲಿ ದ್ಯಾವಪ್ಪನನ್ನು ವಿರುದ್ಧ ಹಾಕಿಕೊಂಡ ಗೌಡ ತನ್ನ ಕೆಟ್ಟಬುದ್ಧಿಯಿಂದ ಅವನ ತಾಯಿಯ ಜೊತೆ ಅನೈತಿಕ ಸಂಬಂಧ ಹಾಗೂ ಬಡವರ ಜಮೀನು ಮತ್ತು ತನ್ನ ದರ್ಪದಿಂದ ಕಳ್ಳೀಗುದ್ದಿ ಜನರಿಗೆ ಬೇಸರಾದ ವ್ಯಕ್ತಿಯಾಗಿ ಈ ಗೌಡನ ಪಾತ್ರವು ಕಂಡುಬಂದಿದೆ.

ಡೊಂಬರ ಬಾಳವ್ವ

ಡೊಂಬರ ಬಾಳವ್ವನ ಊರ ಉದಗಟ್ಟಿ ಸುತ್ತ ಹತ್ತು ಊರುಗಳಿಗೆ ಹೋಗಿ ಹಣಮಂತ ದೇವರ ಜಾತ್ರೆಯಲ್ಲಿ ಓಕಳಿ ನೀರು ಗೊಜ್ಜಿಸಿಕೊಳ್ಳುವ ಕಾಯಕ ಮಾಡುವಳು ಓಕಳಿ ಆಡಲಿಕ್ಕೆ ಹೋದಲ್ಲಿ ಊರ ಹಿರಿಯರು ಮತ್ತು ಹರೆಯದ ಹುಡುಗರಿಂದ ಲೈಂಗಿಕ ಶೋಷಣೆಗೆ ಗುರಿಯಾಗುತ್ತಿದ್ದಳು. ಇವಳನ್ನು ಜನರು ಹಣಮಂತ ದೇವರ ಸೂಳೇ ಎಂದು ಕರೆಯುತ್ತಿದ್ದರು. ಬಾಳವ್ವನ ಗಂಡ ಮದವಿಯಾಗಿ ಕೆಲವೇ ವರ್ಷದಲ್ಲಿ ಸತ್ತು ಹೋಗಿದ್ದರಿಂದ, ಅತ್ತೆಯ ಜೊತೆಯಲ್ಲಿಯೇ ತನ್ನ ಎರಡು ಮಕ್ಕಳೊಂದಿಗೆ ಬದುಕುತ್ತಿದ್ದಳು. ಓಕಳಿಗೆ ಹೋದಾಗ ಅಲ್ಲಿಯ ಜನರು ಕೊಡುತ್ತಿದ್ದ ಲೈಂಗಿಕ ಕಿರುಕುಳವನ್ನು ತನ್ನ ಅತ್ತೆಯ ಮುಂದೆ ಹೇಳಿ ಅಳುತ್ತಿದ್ದಳು. ಮುಂದೆ ನನಗೆ ಈ ಕೆಲಸಕ್ಕೆ ಹಚ್ಚಬೇಡ ಎಂದು ಕೇಳಿಕೊಳ್ಳುತ್ತಿದ್ದಳು. ಆದರೆ ಕಡುಬಡತನ ಇರುವುದರಿಂದ ಹೋಗಲೇ ಬೇಕಾಗುತ್ತಿತ್ತು. ಕಳ್ಳೀಗುದ್ದಿಗೆ ಓಕಳಿಗೆ ಹೋದಾಗ ಅಧುನಿಕ ದ್ಯಾವಪ್ಪ ಇವಳನ್ನು ನೋಡಿ ಇವಳಿಗೆ ಬಾಳನ್ನು ಕೊಡಲು ನಿರ್ಧರಿಸಿ, ಉದಗಟ್ಟಿಗೆ ಬಂದು ಇವಳ ಅತ್ತೆಯನ್ನು ಒಪ್ಪಿಸಿದ. ಆದರೆ ಅತ್ತೆ ಉದ್ದವ್ವನನ್ನು ಒಂದು ಮಾತು ಕೇಳಿ ಹೇಳುತ್ತೇನೆಂದಳು. ಕೊನೆಗೆ ಉದ್ದವ್ವ ಇವರ ಮದುವೆ ಕುರಿತು "ತಣ್ಣೀರ ಆದರೂ ತಣಿಸಿ ಕುಡೀಬೇಕು ಮಗಳs... ಅಂವಸರಾ ಮಾಡಿ ಬಾಯಿ ಸುಟಗೋಬ್ಯಾಡ... ಮುಂದಕ ನೋಡೋಣ್ಣ..." (ತೇರು, ಪು.೧೦೨)ಎಂದು ಏಂಟ ವರ್ಷ ಕಳೆದರೂ ಒಪ್ಪಗೆ ಕೊಡಲಿಲ್ಲ. ದ್ಯಾವಪ್ಪ ಇವರ ಮನೆತನಕ್ಕೆ ಬೇಕಾದ ಹಣ ಕಾಳುಕಡಿ ಮುಂತಾದವುಗಳನ್ನು ಕೊಟ್ಟು ಸಾಕುತ್ತಿದ್ದನು. ಒಂದು ದಿನಾ ಸಹ ಬಾಳವ್ವನ ಮೇಲೆ ಆಸೆ ಮಾಡಿ ಹಾಸಿಗೆಗೆ ಹೋಗಲಿಲ್ಲ. ಮುಂದೆ ದ್ಯಾವಪ್ಪ ಮುಂಬಯಿಗೆ ಪ್ರಯಾಣ ಬೆಳೆಸಿದ. ಅಲ್ಲಿಂದ ಬಾಳವ್ವನ ಕುಟುಂಬಕ್ಕೆ ತಿಂಗಳು ಹಣವನ್ನು ಕಳುಹಿಸುತ್ತಿದ್ದ. ಕೆಲವು ದಿನಗಳ ನಂತರ ತನ್ನ ಅತ್ತೆಯು ತೀರಕೊಂಡಳು. ದ್ಯಾವಪ್ಪನು ಹತ್ತಿರ ಇಲ್ಲದೆ ತನ್ನ ಜೀವನವನ್ನು ಕಳೆಯಬೇಕಾಯಿತು. ಹೀಗೆ ದ್ಯಾವಪ್ಪನ ಕನಸಿನ ಹೆಂಡತಿಯಾಗಿ, ಊರ ಜನರ ಲೈಂಗಿಕ ಕಿರುಕುಳವನ್ನು ಸಹಿಸಿಕೊಂಡು ಜೀವನ ಸಾಗಿಸುವ ಪಾತ್ರವಾಗಿದೆ.

ಸಹಾಯಕ ಪಾತ್ರಗಳು

ರಾಘವೇಂದ್ರ ಪಾಟೀಲರು ಕಾದಂಬರಿಯ ಬೆಳವಣಿಗೆಗೆ ಹಲವು ಸಹಾಯಕ ಪಾತ್ರಗಳನ್ನು ಸಂದರ್ಭ ಹಾಗೂ ಸನ್ನಿವೇಶದಲ್ಲಿ ತಂದಿರುವುದರಿಂದ ಕಥೆಯು ಮೆರಗನ್ನುಂಟು ಮಾಡಿದೆ. ಈ ಪಾತ್ರಗಳು ಕಾದಂಬರಿಯ ಬೆಳವಣಿಗೆಗೆ ಸಹಾಯಕ ಪಾತ್ರಗಳಾಗಿ ಕಾಣಿಸಿಕೊಂಡಿವೆ.

ಪೂಜಾರಿ, ಹಳಬ, ಚಂದ್ರಾಮ, ಲಂಗಟದ ಸ್ವಾಮಿಗಳು, ಶಾರವ್ವ, ರಾಮಣ್ಣಾ, ಬಾಳಯ್ಯಾ ಸ್ವಾಮಿಗಳು, ಚಿದಂಬರ ದೀಕ್ಷಿತರು, ಹೆಬ್ಬಳ್ಳಿಪತ್ತಾರ, ಚೀಫ್ ನ್ಯೂಜ್ ಎಡಿಟರ್ ರಾಮದಾಸ್, ಕ್ಯಾಥರೀನ್, ಪಾರೀಸ್, ಛತ್ರೇರ ಶಾಂತವೀರಣ್ಣ, ಕಂಬಾರ ಚಂದ್ರ್ಯಾ, ಮುಕುಂದಪ್ಪಾ, ಕುಂಬಾರ

ಮೇಲಗಿರಿಯಪ್ಪ, ಮಾಡಲಿಗ್ಯಾರ ಗೊಳಪ್ಪಜ್ಜ, ಚಂದರಿಗ್ಯಾರ ಮುತ್ತಪ್ಪ, ಡೊಂಬರ ಲಸಮವ್ವ, ಕಿಲ್ಲೇದಾರ ಚಿಂತಪ್ಪ, ದುಂಡವ್ವಾ, ಹುರಕಡ್ಲ್ಯಾರ ಬಾಳ್ಯಾ, ಬಸವ್ವ, ಸತ್ತೆವ್ವಾ, ಛತ್ರೇರ ಮಾರೋತಿ, ಸಿಂಪಿಗ್ಯಾರ ನಾರಾಯಣ, ಪೆದಣ್ಣಾರ ಈರ, ಭರಮಪ್ಪಾ, ಕುಂಬಾರ ಮಾಯಾ, ಹಣಮಿಕ್ಯಾರ ಮಲ್ಲ, ಭೂತಗೊಳ ಲಸಮ್ಯಾ, ಸೊಲಗೀ ರಾಮ, ಕೊಂಯ್ಯಗೋಳ ಈರಭದ್ರ, ಜಂಗೀರಾಮಣ್ಣ, ಕಂಬಾರ ಬಸು, ಕಾಶಪ್ಪಗೋಳ ಮುದಕ, ಚಾದಂಗಡಿ ಬಸಪ್ಪ, ಡೊಂಬರ ಮುದಕಿ ಮುಂತಾದವುಗಳು.

ಹೀಗೆ 'ತೇರು' ಕಾದಂಬರಿಯಲ್ಲಿ ಬರುವ ಪಾತ್ರಗಳು ಗಟ್ಟಿತನದಿಂದ ಕೂಡಿವೆ. ರಾಘವೇಂದ್ರ ಪಾಟೀಲರು ತಮ್ಮ ಪ್ರದೇಶದಲ್ಲಿ ಬರುವ ವ್ಯಕ್ತಿ ಹೆಸರುಗಳನ್ನು ಹಾಗೂ ಅಜ್ಜನ ಹೆಸರು ಮಮ್ಮೊಗನಿಗೆ ಬರುವುದರಿಂದ ಕಾದಂಬರಿಯಲ್ಲಿಯ ಪಾತ್ರಗಳು ಎರಡು ಸಲ ತನ್ನ ಹೆಸರನ್ನು ಪ್ರಸ್ತಾಪಿಸಿಕೊಂಡಿವೆ. ವ್ಯಕ್ತಿಯ ವೃತ್ತಿಯ ಹೆಸರುಗಳು ಅವರ ಹಿಂದೆ ಕಾಣಿಸಿಕೊಂಡಿರುವುದರಿಂದ ಮತ್ತಷ್ಟು ಸೊಗಸಿನಿಂದ ಪಾತ್ರಗಳು ರಚನೆಯಾಗಿವೆ. ಇಲ್ಲಿಯ ಪಾತ್ರಗಳು ಗ್ರಾಮೀಣ ಪ್ರದೇಶದ ಸತ್ವವನ್ನು ಸಹಜವಾಗಿ ಪ್ರತಿಬಿಂಬಿಸುತ್ತವೆ. ಈ ಹಿನ್ನಲೆಯಲ್ಲಿ 'ತೇರು' ಕಾದಂಬರಿಯಲ್ಲಿ ವೃತ್ತಿವಾಚಿ ಹೆಸರಿನ ಪಾತ್ರಗಳು, ಸ್ಥಳವಾಚಿ ಹೆಸರಿನ ಪಾತ್ರಗಳು, ಜಾತಿವಾಚಿ ಹೆಸರಿನ ಪಾತ್ರಗಳು ಸಹಜವಾಗಿ ಗ್ರಾಮೀಣ ಪ್ರದೇಶದ ಪರಿಸರವನ್ನು ನೆನಪಿಸುತ್ತವೆ.

ಅಡಿಟಿಪ್ಪಣಿ

೧. **ತೇರು ಕಾದಂಬರಿ ಮುನ್ನುಡಿ, ಸಿ.ಎನ್.ರಾಮಚಂದ್ರನ್, ಪು.೧೨**

೨. **ವರ್ತಮಾನದಲ್ಲಿ ಭೂತ, ಕುಮಾರ ಕೆ., ಸಾಹಿತ್ಯ ಸಂವಾದ ೬೦-೬೧ (ಜನವರಿ-ಮಾರ್ಚ್ ೨೦೦೫) ಸಂಪಾದಕರು : ರಾಘವೇಂದ್ರ ಪಾಟೀಲ, ಸಂವಾದ ಪ್ರಕಾಶನ ಮಲ್ಲಾಡಿಹಳ್ಳಿ, ಪು.೧೨೫**

೩. **ತೇರು ಕಾದಂಬರಿ ಮುನ್ನುಡಿ, ಸಿ.ಎನ್.ರಾಮಚಂದ್ರನ್, ಪು.೧೨**

೪. **ಸಾಹಿತ್ಯ ಸಂಸ್ಕೃತಿ, ನರಹಳ್ಳಿ ಬಾಲಸುಬ್ರಹ್ಮಣ್ಯ, ಅಂಕಿತ ಪ್ರಕಾಶನ, ಬಸವನಗುಡಿ ಬೆಂಗಳೂರು, ೧೯೯೮, ಪು.೧೦೩**

೫. **ವರ್ತಮಾನದಲ್ಲಿ ಭೂತ, ಕುಮಾರ ಕೆ., ಸಾಹಿತ್ಯ ಸಂವಾದ ೬೦-೬೧ (ಜನವರಿ-ಮಾರ್ಚ್ ೨೦೦೫) ಸಂಪಾದಕರು : ರಾಘವೇಂದ್ರ ಪಾಟೀಲ, ಸಂವಾದ ಪ್ರಕಾಶನ ಮಲ್ಲಾಡಿಹಳ್ಳಿ, ಪು.೧೨೫**

ಅಧ್ಯಾಯ ೫

ಭಾಷೆ ಮತ್ತು ಶೈಲಿ

೫

ಭಾಷೆ ಮತ್ತು ಶೈಲಿ

ಒಂದು ಸಮುದಾಯದ ಸಂಸ್ಕೃತಿಯನ್ನು ಅಥವಾ ಒಬ್ಬ ಬರೆಹಗಾರನ ಆಶಯವನ್ನು ಅರಿಯಲು ಭಾಷೆ ಪ್ರಮುಖ ಪಾತ್ರವಹಿಸುತ್ತದೆ. ಅದರಂತೆ ಸಮುದಾಯ ಮತ್ತು ಪರಂಪರೆಯ ಪ್ರಭಾವವು ಭಾಷೆಯ ಮೇಲೆ ಆಗಿರುತ್ತದೆ. ಈ ರೀತಿಯಲ್ಲಿ ಸಮುದಾಯ ಮತ್ತು ಭಾಷೆ ಪರಸ್ಪರ ನೆರವು ಪಡೆದು, ನೆರವು ನೀಡುತ್ತದೆ. ಒಂದು ಕೃತಿಯ ಆಶಯ ವಿನ್ಯಾಸವನ್ನು ಭಾಷೆಯ ರಚನೆಯ ಮೂಲಕ ತಿಳಿಯಬಹುದು. ಇದಕ್ಕೆ 'ತೇರು' ಕಾದಂಬರಿಯು ಹೊರತಲ್ಲ. ಈ ಕೃತಿಯು ಬೆಳಗಾವಿ ಜಿಲ್ಲೆಯ ಗೋಕಾಕ ಪರಿಸರದ ಉಪಭಾಷೆಯ ರಚನೆಯಾಗಿರುವುದರಿಂದ ಆ ಭಾಗದ ಭಾಷೆ ರಚನೆಯಲ್ಲಿ ಕಂಡುಬರುವ ಧ್ವನಿ ರಚನೆಯ ಪ್ರಕ್ರಿಯೆಗಳು, ಅನುನಾಸೀಕರಣ, ಜಾರುಧ್ವನಿಗಳ ಬಳಕೆ ಹಾಗೂ ಕೆಲವು ಆಕೃತಿಮಾ ಪ್ರಕ್ರಿಯೆಗಳು ಕಂಡುಬರುತ್ತವೆ. ಇದು ಕಾದಂಬರಿಗೆ ಪ್ರಾದೇಶಿಕ ಸೊಗಸನ್ನು ತಂದಿವೆ. ಅವುಗಳ ವರ್ಣನಾತ್ಮಕ ವಿಶ್ಲೇಷಣೆ ನನಗೆ ಮುಖ್ಯವಲ್ಲ ಆ ಕಾದಂಬರಿಯ ಭಾಷೆಯ ಸ್ವಾರಸ್ಯವನ್ನು ತಿಳಿಸುವುದೇ ಮುಖ್ಯವಾಗಿದೆ.

ಬೆಳಗಾವಿ ಪ್ರದೇಶದ ಆಡುನುಡಿಯ ಸಮರ್ಥಬಳಕೆಯಿಂದ ಈ ಕಾದಂಬರಿ ಓದುಗರ ಗಮನ ಸೆಳೆಯುತ್ತದೆ. "ರಾಘವೇಂದ್ರ ಪಾಟೀಲರಿಗೆ ಕತೆ ಹೇಳಲು ಬೇಕಾದ ತಮ್ಮದೇ ಆದ 'ನುಡಿಗಟ್ಟು' ಸಿದ್ಧಿಸಿದೆ. ಹೇಳಲು ಕತೆಯೂ ಇದೆ. ಆದರೆ ಕತೆ 'ತಲೆಯ ಉರಿಯನ್ನು ಮಾತ್ರವಲ್ಲ ಎದೆಯ ಬೆಳದಿಂಗಳನ್ನೂ' ಬೇಡುತ್ತದೆ. ಕಲೆಯ ಈ ಬೇಡಿಕೆಯನ್ನು ಮನ್ನಿಸುವ ವಿನಯ ಹೊಸ ಸೃಷ್ಟಿಗೆ ಕಾರಣವಾಗಬಲ್ಲದು."[೧] ಕಾದಂಬರಿಗೆ ಅರ್ಥಪೂರ್ಣತೆಯನ್ನು ತಂದುಕೊಡಬಲ್ಲದು. ಪಾಟೀಲರು ಕಾದಂಬರಿಯ ಉದ್ದಕ್ಕೂ ಭಾಷೆಯ ಪ್ರಯೋಗಶೀಲತೆಯನ್ನು ನಿರಂತರವಾಗಿ ತಂದಿದ್ದಾರೆ. "ಇಲ್ಲಿ ಬೆಳಗಾವಿ ಭಾಗದ ಕನ್ನಡವು ಪಾತ್ರದ ಮಾತಾಗಿ ಮಾತ್ರವಲ್ಲ, ನಿರೂಪಣ ಭಾಷೆಯಾಗಿಯೂ ಬರುತ್ತಿದೆ. ಎರಡೂ ಭಾಷಿಕ ರೂಪಕಗಳು ಬರೆಯಲು ಶುರುಮಾಡಿವೆ."[೨] ಪಾಟೀಲರ ಸಂಭಾಷಣೆಯ ಭಾಷೆ ಮತ್ತು ನಿರೂಪಣೆಯ ಭಾಷೆ ಒಂದೇಯಾಗಿವೆ. ಅವುಗಳ ನಡುವಿನ ಅಂತರವೇ ಕಾಣಿಸುವುದಿಲ್ಲ. ಜನಪದ ಕತೆಯ ಸೊಗಡಿನಿಂದ ಕೂಡಿರುವಂತೆ, ನಿರೂಪಣೆಯ ಹಾಗೂ ಪಾತ್ರಗಳ ಭಾಷೆ ಒಂದನ್ನೊಂದು ಬಿಟ್ಟು ಕೊಡುವುದಿಲ್ಲ. 'ತೇರು' ಕಾದಂಬರಿಯು ಶಿಷ್ಟ ಭಾಷೆಯನ್ನು ಏಕೆ ಉಲ್ಲಂಘಿಸುತ್ತಿದೆ ಎನ್ನುವುದನ್ನು ನೋಡಿದರೆ, ಪಾಟೀಲರ ಬಾಲ್ಯ, ಪರಿಸರ ಹಾಗೂ ಗೋಕಾಕ ನಾಡಿನ ಜಾನಪದದ ಸತ್ವ ಇವರನ್ನು

ಬಿಟ್ಟಿಲ್ಲ. ಹಾಗೂ ಓದುಗರಿಗೆ ಹೊಸದಾದ ಒಂದು ಪ್ರಯೋಗವನ್ನು ನೀಡುವ ದೃಷ್ಟಿಯಿಂದ ಬಹುಶಃ ಇದು ಶಿಷ್ಟ ಭಾಷೆಯನ್ನು ಮೀರಿರಬಹುದು. "ಓದುಗರ ಅಪೇಕ್ಷೆಗೆ ಅನುಗುಣವಾಗಿ ಯಾಕೆ ಬರೆಯಬೇಕು. ಓದುಗರ ರೂಢಿಯನ್ನೇ ಬದಲಾಯಿಸಬೇಕು ಎಂಬ ಸ್ವಾಯತ್ತತೆ ಪಡೆಯುವ ಲೇಖಕರ ಉದ್ದೇಶವೂ ಇದ್ದಂತಿದೆ."[೩]

ಕಾದಂಬರಿಯಲ್ಲಿ ಪ್ರಾಟೀಲರು ತಮ್ಮ ಸೃಜನಶೀಲ ಬರಹದಿಂದ ಓದುಗರ ಅಪೇಕ್ಷೆಯ ರೀತಿಯನ್ನೇ ತಮ್ಮ ಗ್ರಾಮೀಣ ಸೊಗಡಿನ ಭಾಷಾ ಪ್ರಯೋಗದ ಮೂಲಕ ಬದಲಿಸಿದ್ದಾರೆ. ಓದುಗರು ಮೊದಲು ಅರ್ಥವಾಗುವುದಿಲ್ಲವೆಂದು ದೂರಸರಿದರೂ, ಕಾದಂಬರಿಯ ಭಾಷೆ ಅವರನ್ನು ಆಕರ್ಷಿಸಿ, ಅವರ ಓದುವ ಕ್ರಮವನ್ನು ನಯನದಿಂದ ಬದಲಿಸಿದ್ದು ಸ್ವಾರಸ್ಯಕರವಾಗಿದೆ. ಈ ಹಿನ್ನೆಲೆಯಲ್ಲಿ ಕಾದಂಬರಿಯು ಅಪಾರ ಓದುವ ಬಳಗವನ್ನು ಹೊಂದಿದೆ. ಪಾಟೀಲರು ಕಾದಂಬರಿಯಲ್ಲಿ ಪ್ರಾದೇಶಿಕ ವಿಶಿಷ್ಟ ಪದಗಳ ಪದಕೋಶವನ್ನು ಕೊಡದೇ ಉಪಾಯದಿಂದ, ಕಥನದ ಪಾತ್ರ ಹಾಗೂ ನಿರೂಪಣೆಯ ಒಡಲಲ್ಲಿ ವಿವರಣೆಯನ್ನು ಒದಗಿಸುವುದರಿಂದ, ಸಹಜವಾಗಿ ಅವರು ತಮ್ಮ ಪ್ರದೇಶದ ಆಡುನುಡಿಯನ್ನು ತರುವುದರಿಂದ, ಎಲ್ಲ ಪ್ರದೇಶದ ಓದುಗರಿಗೆ ಅರ್ಥವಾಗುವ ಹಾಗೆ ಮಾಡಿದ್ದಾರೆ. ಅಷ್ಟೇ ಅಲ್ಲದೆ ಅವರ ವಿಶಿಷ್ಟ ಭಾಷಾ ಲಯದಿಂದ ಓದುಗರನ್ನು ಮುಗ್ಧಮಂತ್ರವನ್ನಾಗಿ ಮಾಡಿದ್ದಾರೆ. ಆದರೂ ಸಹ 'ತೇರು' ಕಾದಂಬರಿ ಪ್ರಕಟವಾದ ಮೊದಲ ಹಂತದಲ್ಲಿ ಸಂವಹನದ ಸಮಸ್ಯೆಯನ್ನು ಎದುರಿಸಿತು. ತದನಂತರ ಹೆಚ್ಚಿನ ಓದುಗರ ಬಳಗವನ್ನು ಗಳಿಸಿಕೊಂಡಿತು. ಇದಕ್ಕೆ ಪ್ರಮುಖ ಕಾರಣ ಅದು ತನ್ನ ಪ್ರಾದೇಶಿಕ ಭಾಷೆಯ ನಿರೂಪಣೆಯಲ್ಲಿ ಗೊಂದಲಿಗರ ಹಾಡಿನ ಸರಳತೆ ಹಾಗೂ ಆಧುನಿಕ ದ್ಯಾವಪ್ಪನ ನವಯುಗದ ವಿಚಾರವು ಹದವಾಗಿ ಬೆರೆತಿರುವುದರಿಂದ ಅಪಾರ ಓದುಗರ ಮೆಚ್ಚುಗೆಗಳಿಸಿತು.

ಶೈಲಿ

ರಾಘವೇಂದ್ರ ಪಾಟೀಲರ ಕಾದಂಬರಿಯ ಭಾಷೆಯನ್ನು ಅವಲೋಕನ ಮಾಡಿದ ಮೇಲೆ 'ತೇರು' ಕಾದಂಬರಿಯಲ್ಲಿಯ ಅವರ ತಂತ್ರಗಾರಿಕೆ ಹಾಗೂ ಅವುಗಳ ಶೈಲಿಯ ಕೆಲವು ಮುಖ್ಯ ಅಂಶಗಳನ್ನು ಕುರಿತು ವಿಶ್ಲೇಷಣೆ ಮಾಡಲಾಗಿದೆ. ಶೈಲಿ ಎಂದರೆ ಲೇಖಕರು ತಮ್ಮ ಬರವಣಿಗೆಯಲ್ಲಿ ಭಾಷೆಯನ್ನು ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಹಾಗೂ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸುವ ಕಲೆಯ ತಂತ್ರವನ್ನು ಶೈಲಿ ಎನ್ನುವರು. ಹೀಗೆ "ಶೈಲಿ ಎನ್ನುವುದು ಯಾವುದನ್ನಾದರೂ ಮಾಡುವ ವಿಶೇಷ ವ್ಯಕ್ತಿತ್ವ ಅಥವಾ ವಿಧಾನ, ಲೇಖಕ ಅಥವಾ ಕಲಾವಿದ ತನ್ನ ಆಲೋಚನೆ ಅಥವಾ ಅಭಿಪ್ರಾಯಗಳನ್ನು ಸಾಹಿತ್ಯ ಅಥವಾ ಕಲೆಗಳಲ್ಲಿ ಅಭಿವ್ಯಕ್ತಪಡಿಸುವ ಒಂದು ವಿಧಾನವೇ ಶೈಲಿ."[೪] ಶೈಲಿ ಎನ್ನುವುದು ಲೇಖಕನ ಬರಹದ ಭಾಷೆಯಲ್ಲಿ ಭಾವಾಭಿವ್ಯಕ್ತಿಗೆ ಬಳಸುವುದರ ಜೊತೆಗೆ ಉತ್ತಮ ಪದಗಳನ್ನು ಹಾಗೂ ಆ ಪದಗಳನ್ನು ಒಂದು ಕ್ರಮದಲ್ಲಿ ಜೋಡಿಸುವುದಾಗಿದೆ. "ಶೈಲಿ ಪ್ರಧಾನವಾಗಿ ವ್ಯಕ್ತಿ ನಿಷ್ಠ ನಿಜ. ಆದರೆ

ಅದು ಸಮಷ್ಠಿಯ ಮೇಲೆ ಪ್ರಭಾವ ಬೀರುವುದಲ್ಲದೆ, ಅದರಿಂದ ಪ್ರಭಾವಿತವಾಗುವುದೂ ಉಂಟು. ಆದ್ದರಿಂದ ಅದು ಸಾಹಿತಿಯ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವ ಸಾಧನವೂ ಅಹುದು. ಒಂದು ಸಮಾಜದ ಸಂಸ್ಕೃತಿಯನ್ನು ಬಿಂಬಿಸುವ ದರ್ಶನವೂ ಅಹುದು."[೫]

ಸಾಹಿತಿಗಳು ತಮ್ಮ ಅಭಿಪ್ರಾಯಗಳನ್ನು ಭಾಷೆಯ ಮೂಲಕ ಭಾಷಾಭಿವ್ಯಕ್ತಿ ಪಡಿಸಲು ತಮ್ಮದೇ ಆದ ವಿಶಿಷ್ಟ ಶೈಲಿಯನ್ನು ಪಡೆದುಕೊಂಡಿರುತ್ತಾರೆ. ಅವುಗಳನ್ನು ಗುರುತಿಸಬೇಕಾದರೆ ಅವರ ಬರವಣಿಗೆಯ ರೂಪವನ್ನು ನೋಡಬೇಕು. "ಬರವಣಿಗೆಯಲ್ಲಿ ಈ ವಿಶಿಷ್ಟ ಚಹರೆ ಎರಡು ರೀತಿಯಲ್ಲಿ ಮೈದಳೆಯುತ್ತವೆ. ಕೈಬರಹದ ವಿಶೇಷ ಲಕ್ಷಣಗಳಾಗಿ ಕಾಣಬಹುದು. ಇಲ್ಲವೇ ಬರಹ ರೂಪದ ಭಾಷಾರಚನೆಯಲ್ಲಿ ಮೈಗೂಡಿಸಿಕೊಳ್ಳುವುದೂ ಸಾಧ್ಯ. ನಮಗೆ ಪರಿಚಿತರಾದವರ ಬರವಣಿಗೆಯನ್ನು ಕೇವಲ "ನೋಡಿ" ಇದು ಯಾರದೆಂದು ಗೊತ್ತು ಮಾಡುವುದು ಸಾಧ್ಯ. ಏಕೆಂದರೆ ಪ್ರತಿಯೊಬ್ಬರ ಕೈ ಬರಹದಲ್ಲೂ ಅವರದ್ದೇ ಆದ ವಿಶಿಷ್ಟ ಲಕ್ಷಣಗಳಿರುತ್ತವೆ."[೬] ಹಾಗೆಯೇ ರಾಘವೇಂದ್ರ ಪಾಟೀಲರ 'ತೇರು' ಕಾದಂಬರಿಯನ್ನು ನೋಡಿದಾಕ್ಷಣ ಇದು ಗೋಕಾಕ ಪರಿಸರದ ಲೇಖಕರ ಕಾದಂಬರಿಯೆಂದು ಸುಲಭವಾಗಿ ಹೇಳಬಹುದು.

ಪಾಟೀಲರು ಸಾಹಿತ್ಯ ರಚನೆಯಲ್ಲಿ ಭಾಷೆಯ ಧ್ವನಿ, ರೂಪ, ಅರ್ಥ, ಶಬ್ದ, ಪದ ಹಾಗೂ ವಾಕ್ಯಗಳು ಪ್ರಮುಖವಾಗಿ ತನ್ನ ಲಯವನ್ನು ಬದಲಿಸಿ ಬರುವುದರಿಂದ, ಇವರ ಸಾಮಾಜಿಕ ಪರಿಸರ ಹಾಗೂ ಪ್ರದೇಶವನ್ನು ಅವಲಂಬಿಸಿ ಶೈಲಿ ಕಂಡುಬಂದಿದೆ. ಇಷ್ಟು ಹಿನ್ನಲೆಯಲ್ಲಿ ಇವರ ಕಾದಂಬರಿಯ ಸ್ವರೂಪವನ್ನು ಗುರುತಿಸಬೇಕಾಗುತ್ತದೆ. ಮುಖ್ಯವಾಗಿ ಹೇಳಬೇಕೆಂದರೆ ಇವರು ತಮ್ಮ ಪ್ರದೇಶದ ಜನಪದ ಆಚರಣೆಗಳೊಂದಿಗೆ ಇನ್ನು ಜೀವಂತವಾದ ಸಂಬಂಧವನ್ನು ಇಟ್ಟುಕೊಂಡಿದ್ದಾರೆ. ಓಕಳಿ, ತೇರು, ಜಾತ್ರೆಗಳು, ಸುಗ್ಗಿಯ ಕಾಲದಲ್ಲಿ ಹಳ್ಳಿಗಳಲ್ಲಿ ಗೊಂದಲಿಗರು ಬೀಡು ಬಿಟ್ಟು ಓಣಿ ಓಣಿಗಳಲ್ಲಿ ತಿರುಗಾಡಿ ಕಥೆಗಳನ್ನು ಹೇಳುತ್ತಾರೆ. ಈ ಎಲ್ಲಾ ಜನಪದ ಜೀವಂತಿಕೆಯ ನಡುವೆ ಜನಪದವು ಪ್ರಧಾನವಾಗಿ ರಾಘವೇಂದ್ರ ಪಾಟೀಲರ 'ತೇರು' ಕಾದಂಬರಿಯಲ್ಲಿ ಸಂಪನ್ಮೂಲವಾಗಿ ಒದಗಿಬಂದಿವೆ.

ಈ ಹಿನ್ನೆಲೆಯಲ್ಲಿ 'ತೇರು' ಕಾದಂಬರಿಯು ಗೋಕಾಕ ಭಾಗದ ಜನಪದದ ಇಂಥ ರೀತಿಯನ್ನು ಒಳಗೊಳ್ಳಬೇಕಾದ ತಾಂತ್ರಿಕ ಅನಿವಾರ್ಯತೆ ಇದ್ದಿತು. "ಇದು ಕಾದಂಬರಿಯ ಒಟ್ಟು ಗ್ರಹಿಕೆಯ ಒಂದು ಅನಿವಾರ್ಯ ಅಭಿವ್ಯಕ್ತಿಯೇ ಹೊರತು ಕೇವಲ ಪ್ರಯೋಗದ ಹೊಸತನಕ್ಕಾಗಿ ಬರೆದದ್ದಲ್ಲ"[೭] ಎಂಬುದನ್ನು ನಾವು ರಾಘವೇಂದ್ರ ಪಾಟೀಲರ ಅಭಿಪ್ರಾಯವನ್ನು ಶೈಲಿಯಲ್ಲಿ ಕಾಣುತ್ತೇವೆ.

ಉಪಮೆ - ರೂಪಕಗಳು

ರಾಘವೇಂದ್ರ ಪಾಟೀಲರು ವಿಶಿಷ್ಟ ಪದಪುಂಜಗಳಿಂದ, ಉಪಮೆಗಳಿಂದ ಕಾದಂಬರಿಗೆ ಒಂದು ಮೆರುಗನ್ನು ತಂದುಕೊಟ್ಟಿದ್ದಾರೆ. ಅವರು ಪ್ರಸಂಗಕ್ಕೆ ಅನುಗುಣವಾಗಿ ಹಾಗೂ ಪ್ರಯತ್ನ ಪೂರ್ವಕವಾಗಿ

ಉಪಮೆ ಮತ್ತು ರೂಪಕಗಳನ್ನು ಬಳಸಿಕೊಂಡು ಅಲ್ಲಲ್ಲಿ ಸೌಂದರ್ಯವುಂಟು ಮಾಡಿರುವುದು ಮಹತ್ವವನ್ನು ಪಡೆದುಕೊಂಡಿದೆ. ಈ ಅಲಂಕಾರಯುಕ್ತ ಮಾತುಗಳನ್ನು ಅವರು ಗ್ರಾಮೀಣ ಜನರು ಬಳಸುವ ದಿನನಿತ್ಯದ ವ್ಯವಹಾರಿಕ ಭಾಷೆಯಿಂದ ಎತ್ತಿಕೊಂಡಿದ್ದಾರೆ. ಜನಪದದ ಸರಳವಾಕ್ಯ, ಸುಂದರಯುಕ್ತಿಗಳನ್ನು ಬಳಸಿರುವುದರಿಂದ ಕಾದಂಬರಿ ಹೆಚ್ಚಿನ ಮಹತ್ವತೆಯನ್ನು ಪಡೆದುಕೊಂಡಿದೆ.

"ಒಂದೊಂದು ಕಂಬನೂ ಹೂವಿನ ಬಳ್ಳಿ ಇದ್ದಂಗs ನೋಡ್ರಿ"(ತೇರು, ಪು.೪)

"ಆಗದೀ ಎದ್ದ ಬರೂಹಂಗ ಕಾಣತಾರು!"(ತೇರು, ಪು.೪)

"ಸೂರ್ಯ ಪರಮಾತಮನಾದರೂ ತನ್ನ ತೇರು ಹೊಡಕೊಂಡು ಪಡುವನ ದಿಕ್ಕಿನ ತುದಿಗೆ ಹೋಗುತಾನೆ" (ತೇರು, ಪು.೨೧)

"ಪಡೂದಿಕ್ಕಿನ ತುದೀಗೆ ಹೋದ ಸೂರ್ಯ ಪರಮಾತಮಾ ತಾಯಿಯ ಮಡಿಲಿನ್ಯಾಗೆ ಸೇರಿಮನಕೊಂಡು ಈ ಭೂಮಿ ಅಂಬುವುದರ ಮ್ಯಾಲೆ ಕತ್ತಲು ಕವಕೊಳ್ಳತೈತಿ"(ತೇರು, ಪು.೨೧)

"ಅಂಗೈಯೊಳಗೆ ಲಿಂಗಯ್ಯನ್ನ ಇಟಗೊಂಡಂಗ ಇಟಗೊಂಡು"(ತೇರು, ಪು.೨೯)

"ಕುಣಕೊಂತ ಬಂದಂಗ ಬರತಾನೆ ಡಂಣಾಯಕ ದೇಸಾಯರ ವಾಡೇಕ್ಕ"(ತೇರು, ಪು.೩೧)

"ಪಾಯಸದೊಳಗಿನ ನೊಣದಂಗೆ"(ತೇರು, ಪು.೩೧)

"ಪರುವತದಂಥಾ ಆ ತೇರಿನ ಎಡದ ಗಾಲೀಗೆ ಆ ಎಳೇಯ ಕಂದಾನ ಅಡ್ಡಲಾಗಿ ಮಲಗಿಸಿ"(ತೇರು, ಪು.೩೪)

"ತೇರೆಂಬುವುದು ಇಳಕಲಿನ್ಯಾಗ ಉಳ್ಳುವ ಗೋಲಿಯ ಗುಂಡದ ಹಂಗ ಸುರಳೀತ ನಡದೀತಲ್ಲೋ ಶಿವನೆ"(ತೇರು, ಪು.೩೪)

"ತನ್ನ ಮಗನ ಎದಿಯ ಮ್ಯಾಲೆ ಸ್ವಾಮಿಯ ತೇರು ಹಾಯತಿದ್ದಂಗೇ ತೇರಿನ್ಯಾಗಿನ ಇಟ್ಟಲ ಸ್ವಾಮಿಯ ಮೀಸೆಗಳು ಕುಣದವೂ"(ತೇರು, ಪು.೩೯)

"ಮುದ್ದಿಯಾಗಿ ಬಿದ್ದ ಮಗನ ನೆನಪು ಬಂದು ಆಕಿಯ ಹೊಟ್ಯಾಗ ಬೆಂಕಿ ಬಿದ್ದಂಗ ಆಗತಿತ್ತು"(ತೇರು, ಪು.೪೧)

"ಆಹಾಹಾ... ಗಂಗವ್ವನ ಮಹಿಮಾ ಏನ ಹೇಳೂದು.. ಕಲ್ಲಗವಿಯೊಳಗಿಂದ ಉಕ್ಕಿ ಬಂದಾಳು... ನಿಂದರದs ಹರೀತಿದ್ದರೂ ನಿಚ್ಚಳs ನಿಂತಂಗ ಕಾಣತಾಳು"(ತೇರು, ಪು.೫೪)

."ಮಾಡ ಇಲ್ಲದ ಮುಗಲದಾಗ ಬೆಳ್ಳಿಯ ತಾಟಿನಂಥಾ ಚಂದ್ರಾಮ!"(ತೇರು, ಪು.೫೪)

“ಮಂಜಿನ ತಿಳವಾದ ಅರವೀ ಹೊದ್ದು ನಿಂತಂಗ ನಿಂತಿದ್ದವು”(ತೇರು, ಪು.೫೪)

“ಅವನ ಎದಿಯೊಳಗ ಅನುಮಾನದ ಮಂಜು ಕವಿಯುವ ಹಂಗ ಮಾಡಿತು”(ತೇರು, ಪು.೫೫)

“ಹಸುವಿನ ಅಗ್ನೀಗೆ ಆಜ್ಯ ಹಾಕೂವಂತೆ”(ತೇರು, ಪು.೫೬)

“ಗಂಗವ್ವ ಕುಣಕೊಂತ ಕೆಳಗೆ ಜಿಗೀಲಿಕ್ಕತ್ಯಾಳ! ಮಂಜುಕವದು ಮಸಕು ಮಸಕು ಆಗಿ... ಕೆಳಗೆ ಜಿಗಿಯುವ ನೀರಿನ ಧಾರೆಯ ಹಿಂದಿನ ಆ ಗುಡ್ಡ, ಮಾದೇವನ ಜಡಿಯ ಹಂಗೆ ಕಾಣಿಸಿತು....”(ತೇರು, ಪು.೫೬)

“ಸೊಗಲದಾಗ ಸೋಮೇಶ್ವರನ ಮುಂದ ಕುಣಕೊಂತ ಸಾಗತಾಳೂ”(ತೇರು, ಪು.೫೬)

“ಚೈತ್ರ ಇನೂ ಬಂದಿರಲಿಲ್ಲವಾದರೂ ಅದರ ಪರಿವಾರ ಮದಲs ಬಂದಿದ್ದವು ಬನದಾಗಿನ ಗಿಡಗೋಳು ಹೊಸ ಚಿಗುರು ಹೊತಗೊಂಡು ನಿಂತಿದ್ದವು....”(ತೇರು, ಪು.೫೭)

“ಆಹಾs...ಥೇಟ್ ಎದ್ದುಬರುವ ಹಂಗ ಕುಂತಂಗ ಕಾಣಿಸಿದಳು ತಾಯಿ....! ಬೆಳ್ಳಿಯ ಕಣಬಟ್ಟುಗಳೊಳಗಿಂದ ಇಷ್ಟಗಲಕಣ್ಣು ತಗದು ತನ್ನನ್ನs ನೋಡಲಿಕ್ಕತ್ಯಾಳೆ”(ತೇರು, ಪು.೫೭)

“ಬಿಳೀ ಪಟಕಾ ಸುತಿಗೊಂಡು ಹಣೀಗೆ ವಿಭೂತಿ ಧರಿಸಿಕೊಂಡ ಪರವಂತರು ದ್ಯಾವಪ್ಪನಿಗೆ ಥೇಟ್ ಅಲ್ಲಮ ಪ್ರಭುವಿನ ಹಂಗ ಕಂಡರು”(ತೇರು, ಪು.೫೮)

“ಅದು ಒಂದು ಪ್ರೇಕ್ಷಣೀಯ ಸ್ಥಳವೇನೋ ಅನ್ನುವಹಂಗೆ....ಕಾರಿನಿಂದ ಇಳಿದು ನೋಡಿದೆವು.”(ತೇರು, ಪು.೬೫)

“ಇಡೀ ಊರಿಗೆ ಊರs ಚಲಸಾಕತ್ತೈತಿ ಅನ್ನುಹಂಗ ರಸ್ತಾದ ತುಂಬ ಬಸ್ಸೂ ಕಾರಗಾಡೀ ಮತ್ತ ಮೋಟರ್ ಸೈಕಲ್ಲಗೋಳು ಭರಂಡೀ ಹೋಗತಾವು”(ತೇರು, ಪು.೭೩)

“ದೇವರೂ ದಿಂಡರೂ ಎಲ್ಲಾ ಔಟ್ ಆಫ್ ಡೇಟ್ ಆಗ್ಯಾವರೀ...! ಔಷಧದ ಬಾಟಲೀ ಮ್ಯಾಗ ಹಾಕಿರತಾರ ನೋಡರಿ.... ಏಕ್ಸಪೈರೀ ಡೇಟು... ಹಂಗ!”(ತೇರು, ಪು.೭೪)

“ಬಾರಾ ಖೂನ ಮಾಡಿದ ಅಪಾರಾಧೀ ಹಂಗ ಸುಮ್ಮನs ಕುಂತು ಬಿಡಿತಿದ್ರಾ...”(ತೇರು, ಪು.೭೫)

“ನಡ ನಡಕ ತೋರಣಾ ಕಟ್ಟಿರುತಾರ....! ಮಾವಿನ ಎಲಿಯ ತೋರಣ ಅಲ್ಲರಿ... ತಂಬಾಕಿನ ಪಾಕೀಟುಗಳ ಸರಪಳೀ ತೂಗು ಹಾಕಿದ ತೋರಣಾ!”(ತೇರು, ಪು.೭೬)

“ನಮ್ಮ ಊರ ಗೌಡನಲ್ಲರೀ.....ಅಂವ ಆ ಗೌಡಂದರs ತಾನು ಬೀಜದ ಹೋರೀ ಅಂತ ತಿಳಿಕೊಂಡದಾನು....”(ತೇರು, ಪು.೭೭)

"ಆಕಾಶದಾಗ ಹಾಂವೂ-ಚೇಳೂ ಆಕಾರದಾಗ ಮತ್ತ ಹೆಂಗ ಬೇಕಾದಂಗ ಕಲ್ಲ ಒಗದಂಗ... ಚಿಕ್ಕೆಗೋಳು ಮೂಡಿದ್ದವು."(ತೇರು, ಪು.೯೬)

"ಅವನ ಮಾತು ನನ್ನ ಕಳ್ಳಿಗೆ ನಾಟಿಧಂಗ ಆತು..."(ತೇರು, ಪು.೯೯)

"ದ್ಯಾವಪ್ಪಣ್ಣ ಬಂಗಾರದಂತಾ ಹುಡುಗ ನನ್ನ ಮಕ್ಕಳರ‍್ಯಾ...."(ತೇರು, ಪು.೧೦೦)

"ನನ್ನ ಕಳ್ಳs ಕತ್ತರಿಸಿದಂಗ ಆಗೊದು ನೋಡ್ರಿ"(ತೇರು, ಪು.೧೦೧)

"ಇಡೀ ಮನಿಗೆ ಲಕವಾ ಹೋಡದಂಗೆ... ಇಡೀ ಮನಿ ಸುಂದಾಗಿ ನಿಂತಿತ್ತು...."(ತೇರು, ಪು.೧೨೩)

"ಅಂವ ಧರಮನಟ್ಟಿಯ ಜನರ ವಿವೇಕ ಪ್ರಜ್ಞೆಯಂತಿದ್ದ....."(ತೇರು, ಪು.೧೨೪)

"ಮುಖಾ ಅಂಬೂದು ಬಿಳಿಚಿಕೊಂಡು ಈಬತ್ತೀ ಉಂಡಿ ಆದಂಗ ಆಗಿತ್ತು...."(ತೇರು, ಪು.೧೩೦)

"ಅವರ ಮೀಸೆಗಳು ಕಿಲಾರಿ ಹೋರಿಗಳ ಕೊಂಬಿನಂಗ ಇದ್ದವು...."(ತೇರು, ಪು.೧೩೧)

"ಪರಶುರಾಮನಗತೆ ತನ್ನ ಅವ್ವನ್ನs ಖೂನೀ ಮಾಡಾಕ ಹೋದಂಥಾ ಮಗಾ ಇಂವಾ...."(ತೇರು, ಪು.೧೩೩)

ಈ ಬಗೆಯ ಅಲಂಕಾರಯುಕ್ತ ಭಾಷೆಯನ್ನು ಉಪಯೋಗಿಸುವುದರ ಜೊತೆಗೆ ರಾಘವೇಂದ್ರ ಪಾಟೀಲರು ನಿರಾಭರಣ ಸುಂದರವಾದ ಸಹಜ ಭಾಷೆಯನ್ನು ಬಳಸಿ "ತೇರು" ಕಾದಂಬರಿಯನ್ನು ಆಕರ್ಷಕಗೊಳಿಸಿರುವುದು ಕಂಡುಬರುತ್ತದೆ.

ಗಾದೆ ಮಾತುಗಳು

ಒಂದು ಸೃಜನಶೀಲ ಬರವಣಿಗೆ ಯಶಸ್ವಿಯಾಗಬೇಕಾದರೆ ಅದು ತಾವು ಹುಟ್ಟಿ ಬೆಳೆದ ಪ್ರದೇಶದ ವಾಗ್ರೂಢಿಗಳನ್ನು ಎಷ್ಟರ ಮಟ್ಟಿಗೆ ಬಳಸಿದ್ದಾರೆ ಎನ್ನುವುರ ಮೇಲೆ ಅಡಗಿರುತ್ತದೆ. ಅದಕ್ಕೆ ಕಾದಂಬರಿ ಕ್ಷೇತ್ರವೂ ಹೊರತಲ್ಲ. ಆಡುನುಡಿಯ ಜೀವಂತ ಪ್ರತೀತಗಳಾದ ಗಾದೆಗಳು ಕಾದಂಬರಿಗೆ ಮೆರಗನ್ನು ತರುತ್ತವೆ. ಆಡುಮಾತಿನ ಕೆನೆಯಂತಿರುವ ಗಾದೆಗಳು ಕಾದಂಬರಿಯಲ್ಲಿ ಸಾಕಷ್ಟು ಸಿಗುತ್ತವೆ. ಹೀಗಾಗಿ ಅವುಗಳ ಬಳಕೆಯಲ್ಲಿ ಪ್ರಾದೇಶಿಕತೆ ತುಂಬಿಕೊಂಡಿರುತ್ತದೆ. "ಗಾದೆ ವೇದಕ್ಕೆ ಸಮಾನ, ವೇದ ಸುಳ್ಳಾದರು, ಗಾದೆ ಸುಳ್ಳಾಗದು ಎಂಬ ಗಾದೆಯಲ್ಲಿ ಗಾದೆಗಳ ಬಗ್ಗೆ ಜನಕ್ಕಿರುವ ಗೌರವವು ವ್ಯಕ್ತವಾಗುತ್ತದೆ. ಗಾದೆ ಒಂದು ಜನಾಂಗದ ನಿತ್ಯಮಾತಿನ ಅಂಗ, ಜನತೆಯ ಬದುಕು ಗಾದೆಗಳಲ್ಲಿ ಹಾಸು ಹೊಕ್ಕಾಗಿ ಸೇರಿಕೊಂಡಿದೆ. ಕಿರಿದರಲ್ಲಿ ಹಿರಿದಾದ ಅರ್ಥತುಂಬಿದ ಗಾದೆಗಳ ಜನಾನುಭವದ

ಸರ್ವಾದರಣೀಯ ಹರಳುಗಳಂತೆ ಕಾಣಿಸಿಕೊಳ್ಳುತ್ತವೆ. ಗಾದೆಗಳಲ್ಲಿ ಬದುಕಿನ ಹಲವು ಮುಖಗಳು ಚಿತ್ರಿತವಾಗಿರುವುದರಿಂದ ಅವುಗಳಿಗೆ ಸಾರ್ವತ್ರಿಕ ಮುದ್ರೆ ಬಿದ್ದರುತ್ತದೆ.''[೮] ಈ ಗಾದೆಗಳನ್ನು ಪಾಟೀಲರು ತಮ್ಮ 'ತೇರು' ಕಾದಂಬರಿಯಲ್ಲಿ ಪ್ರಾದೇಶಿಕ ವಾತಾವರಣ, ಧ್ವನಿ ವೈಶಿಷ್ಟತೆ, ಉಪಮೆ, ಪ್ರತಿಮೆಗಳ ಮೂಲಕ ಸಂದರ್ಭಕ್ಕೆ ತಕ್ಕಂತೆ ಬಳಸಿಕೊಂಡಿದ್ದಾರೆ.

> "ಹಿಂದಿಂದ ತಗೊಂಡು ಹಿತ್ತಲದಾಗ ಅತ್ತರಂತ...."(ತೇರು, ಪು.೬೮)
>
> "ಕಿಂವಿಗೆ ಹಳ್ಳಾಹಚ್ಚಿ ಬುದ್ಧೀ ಹೇಳ್ಯಾರಲ್ಲರೀ...." (ತೇರು, ಪು.೭೧)
>
> "ತಣ್ಣೀರ ಆದರೂ ತಣಿಸಿ ಕುಡೀಬೇಕು ಮಗಳs
> ಅವಸರ ಮಾಡಿ ಬಾಯಿ ಸುಟಗೋಬ್ಯಾಡ...."(ತೇರು, ಪು.೧೦೨)
>
> "ಕತ್ತಿ ತಪ್ಪಿಸಿಕೊಂಡರ ಹಾಳ ಗ್ವಾಡಿ ಅಂತ...." (ತೇರು, ಪು.೧೦೪)
>
> "ಹಸೀ ಹುಲ್ಲಿನ್ಯಾಗ ಉಚ್ಚೀಹೊಯ್ದುಕ್ಯಾರ ಕಡ್ಡೀಗೀರಿ
> ಉರೀ ಹುಚ್ಚೂಗಂಡಮಗಾ ನೀನು...."(ತೇರು, ಪು.೧೧೫)

ಹೀಗೆ ಕಾದಂಬರಿಯಲ್ಲಿ ಅಲ್ಲಲ್ಲಿ ಇಂತಹ ಗಾದೆ ಮಾತುಗಳು ಬರುವುದರಿಂದ ಓದುಗರಿಗೆ ಕಾದಂಬರಿ ಆಪ್ತವಾಗಿ ಓದಿಸಿಕೊಂಡು ಹೋಗುತ್ತದೆ.

ಬೈಗುಳಗಳು

ರಾಘುವೇಂದ್ರ ಪಾಟೀಲರು ತಮ್ಮ 'ತೇರು' ಕಾದಂಬರಿಯಲ್ಲಿ ಗ್ರಾಮೀಣ ಜನರ ಭಾಷೆಯನ್ನು ಸಮರ್ಥವಾಗಿ ಉಪಯೋಗಿಸಿದ್ದಾರೆ. ಈ ಗ್ರಾಮೀಣ ಜನರ ಆಡುಭಾಷೆಯಲ್ಲಿ ಬೈಗುಳಗಳು ಹಾಸುಹೊಕ್ಕಾಗಿವೆ. ಅವುಗಳನ್ನು ಕಾದಂಬರಿಯಲ್ಲಿ ಸನ್ನಿವೇಶಕ್ಕೆ ಹಾಗೂ ಸಂದರ್ಭಕ್ಕೆ ಅನುಗುಣವಾಗಿ ಬಳಸಿಕೊಂಡಿದ್ದಾರೆ. "ಬೈಗುಳಗಳು ಭಾಷಯ ಪರಿಣಾಕಾರಿ ಘಟಕಗಳಾಗಿವೆ. ಅವು ಒಂದು ರೀತಿಯಲ್ಲಿ ಭಾಷಿಕ ಹೊಡೆತ ಎನ್ನಬಹುದು. ಬೈಗುಳವು ಹೊಡೆತಕ್ಕಿಂತ ಸೂಕ್ಷ್ಮವಾದುದು ಮತ್ತು ಸಂಕೀರ್ಣವಾದುದು. ವ್ಯಕ್ತಿಗೆ ದೈಹಿಕ ಮತ್ತು ಮಾನಸಿಕ ಯಾತನೆಯಾದಾಗ ಬೈಗುಳಗಳು ಸೃಷ್ಟಿಯಾಗುತ್ತವೆ. ಬೈಗುಳಗಳಿಗೆ ಸಾಮಾಜಿಕ ಒಪ್ಪಿಗೆ ಬಿದ್ದಾಗ ಅದಕ್ಕೆ ಅರ್ಥಪ್ರಾಪ್ತಿಯಾಗುತ್ತದೆ.''[೯] 'ಕತ್ತೆಗೆ ಲತ್ತಿ ಪೆಟ್ಟು ಮನುಷ್ಯನಿಗೆ ಮಾತಿನ ಪೆಟ್ಟು' ಎಂಬ ಗಾದೆಯಂತೆ ಬೈಗುಳವನ್ನು ಕಾದಂಬರಿಯಲ್ಲಿ ಅವಶ್ಯಕತೆ ಇದ್ದಾಗ ಮಾತ್ರ ಪ್ರಯೋಗಿಸಿದ್ದಾರೆ. "ಬೈಗುಳಗಳಿಗೆ ಭಾಷಿಕ ನಿಯೋಗಗಳಿವೆ. ಯಾರಾದರೂ ಮನಸ್ಸಿಗೆ ನೋವಾಗುವಂತೆ ಬೈದರೆ, ಬೈಯಿಸಿಕೊಂಡವ ಪ್ರತಿಯಾಗಿ ಬೈದರೆ ಮನಸ್ಸಿನ ತಳಮಳ ಉಪಶಮನವಾಗುತ್ತದೆ. ರಕ್ಷಣೆ

ಮತ್ತು ಸಮತೋಲನಕ್ಕೂ ಬೈಗುಳಗಳು ನೆರವಾಗುತ್ತವೆ."[೧೦] ಈ ಮನಸ್ಸಿನ ತಳಮಳ, ಸ್ವರಕ್ಷಣೆ, ಸಮತೋಲನವನ್ನು ಕಾಪಾಡಲು ತೇರು ಕಾದಂಬರಿಯಲ್ಲಿ ಅಲ್ಲಲ್ಲಿ ಬೈಗುಳಗಳು ಕಂಡುಬರುತ್ತವೆ.

"ಬೈಗುಳಗಳಿಗೆ ಭಾಷಿಕರ ಇಲ್ಲವೆ ಭಾಷಾ ಸಮುದಾಯದ ಸುಧಾರಣೆಯ ಗುಣವಿದೆ. "ಬೈದು ಹೇಳಿದವ ಬುದ್ಧಿ ಹೇಳಿದ, ನಕ್ಕು ಹೇಳಿದವ ಕೆಟ್ಟದ್ದು ಹೇಳಿದ", 'ಬೈದು ಹೇಳುವವನನ್ನು ನಂಬು; ನಕ್ಕು ಹೇಳುವವನನ್ನು ನಂಬಬೇಡ' ಇಂತಹ ಗಾದೆಗಳು ಬೈಗುಳಗಳ ಮಹತ್ವವನ್ನು ಎತ್ತಿ ತೋರಿಸುತ್ತವೆ. ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಬೈಗುಳಗಳು ತುಂಬಾ ಪರಿಣಾಮಕಾರಿಯಾಗಿವೆ."[೧೧] ಈ ಬೈಗುಳವನ್ನು ರಾಘವೇಂದ್ರ ಪಾಟೀಲರು ಕಾದಂಬರಿಯಲ್ಲಿ ಸಮರ್ಥವಾಗಿ ಉಪಯೋಗಿಸಿದ್ದಾರೆ.

'ಹುಚ್ಚಪ್ಯಾಲಿ' (ತೇರು, ಪು.೨)

'ಉಸುರುಗರಿಯುವದು ಹಾಳಾಗಲೀ' (ತೇರು, ಪು.೧೭)

'ಮಗ್ಗಲಗೇಡಿ' (ತೇರು, ಪು.೨೩)

'ನನ್ನ ಬಂಗಾರದಂಥಾ ಮಗನ್ನ ನುಂಗಿ ನೀರ ಕುಡಿದಾ (ತೇರು,ಪು.೪೪)

'ಮನ್ಯಾಗ ಹೇಳಿ ಹೋಗಿದ್ದರ ನಿನ್ನ ನಾಲಿಗ್ಗೆ ಮುಳ್ಳ ಮುರೀತಿದ್ದೂ ಏನು..? ಹೆಂತಿ ಮಕ್ಕಳೂ ಬ್ಯಾಡ ಅನ್ನು ಹಂಗಿದ್ದರೆ ಮದವೀ ಯಾಕ ಆದಿ... ಸನ್ಯಸಿ ಆಗಬೇಕಾಗಿತ್ತು...'(ತೇರು, ಪು.೪೪)

'ಹುಚ್ಚಪ್ಪಾ' (ತೇರು, ಪು.೪೪)

'ಈ ಪಿಸರ ಎಮ್ಮಿ ಅಗಸುದ್ದೇಕುಡ್ಯಾಕ ನಾಯಾಕ ಅನ್ನಾಕತ್ತೇತಿ' (ತೇರು, ಪು.೪೫)

'ಅಡ್ಡನಾಡ ಹೆಂಗಸ' (ತೇರು, ಪು.೪೭)

'ಹೋಗೋ ಮಕಳೀ ಹೋಗು' (ತೇರು, ಪು.೭೬)

'ಆ ಬಿಳಿ ಚರ್ಮದ ಹೆಂಗಸ' (ತೇರು, ಪು.೮೫)

'ಕುಡಕಾ' (ತೇರು, ಪು.೯೨)

'ರಂಡೀಬಾಜಿ' (ತೇರು, ಪು.೯೨)

'ಬುಬ್ಬಣಿ' (ತೇರು, ಪು.೯೨)

'ಥೂ ಸೂಳೀ ಮಕ್ಕಳರ್‍ಯಾ' (ತೇರು, ಪು.೯೬)

'ಸೂಳೀ ಮಗಾ' (ತೇರು, ಪು.೯೬)

‘ಮಕಳೀ’ (ತೇರು, ಪು.೯೯)

‘ಚಿನಾಲಿ’ (ತೇರು, ಪು.೯೯)

‘ಛೀ ಹುಚ್ಚೀ...!’ (ತೇರು, ಪು.೧೦೮)

‘ಊರ ಹಲಕಟ ಸೂಳೆ ಮಕ್ಕಳ ಸುದ್ದಿ ನನಗೇನ ಗೊತ್ತ’ (ತೇರು, ಪು.೧೦೦)

‘ದ್ಯಾವನ ಕೀಪು’ (ತೇರು, ಪು.೧೦೦)

‘ಯಾಕೋ ನನ ಹಾಟ್ಯಾನ ಮಗನs’ (ತೇರು, ಪು.೧೧೦)

‘ಗುಡೀ ಒಳಗೆ ಹೋಗಬ್ಯಾಡ ಅಂತ ಹೇಳಾಂವ

ನೀಯಾವ ಬಾಡ್ಯಾನ ಮಗಾs...’(ತೇರು, ಪು.೧೦೦)

‘ನಿನ್ನ ಹೇಲಹಚ್ಚಿ ತಟ್ಟಲೀಲೇ ಹೊಡೀತನ’ (ತೇರು, ಪು.೧೧೪)

‘ಈ ಪಿಸರ ಬಾಡ್ಯಾನ ಮಗಾ’ (ತೇರು, ಪು.೧೧೪)

‘ಏನೋ ನಿನ್ನೌನ’ (ತೇರು, ಪು.೧೧೪)

‘ನಿನ್ನ ಕೈಯ್ಯs ಕಡೀತನು ಬೋಸಡೀ ಮಗನs’ (ತೇರು, ಪು.೧೧೪)

‘ನಿನಗೇನ ಬುದ್ಧಿಗಿದ್ದಿ ಐತಿಲ್ಲೊ’ (ತೇರು, ಪು.೧೧೫)

‘ಏನಂತ ಮಾತಾಡತೀಲೇ ತಲೀ ಮಾಸದ ಸೂಳೀಮಗನs’ (ತೇರು, ಪು.೧೧೬)

‘ಹಂತಾ ಮಾತ ಆಡಿದರ ನಾಲಿಗ್ಗೆ ಹುಳಾ ಬಿದ್ದಾವು’ (ತೇರು, ಪು.೧೧೬)

‘ಏನೋ ನಿನ್ನೌನ ಕೆಸರ ನಾದವನ’ (ತೇರು, ಪು.೧೧೬)

‘ನಿನ್ನ ನಾಲಿಗಿ ಕಿತ್ತ ಕೈಯಾಗ ಕೂಡತನ’ (ತೇರು, ಪು.೧೧೬)

‘ಏ ಮಂಗ್ಯಾ ಸೂಳೀ ಮಗನ ರಾಜಕೀಯ ಮಾಡಿ ಊರ ಹೊಲಸ ಎಬ್ಬೀಸಬ್ಯಾಡ’’ (ಪು.೧೧೯)

‘ಯಾಕೋ ಪಿಸಾಳ್ಯಾ’s (ತೇರು, ಪು.೧೨೦)

‘ನಿಂದು ಎಡಬಿಡಂಗೀ ರೀತಿ ಇದು’ (ತೇರು, ಪು.೧೨೮)

‘ಇನ್ನೇನು ಕಿಸಿಯೂದ್ಯೆತಿ’ (ತೇರು, ಪು.೧೩೩)

‘ಆ ಕುಲಗೇಡಿ ಹೆಂಗಸನ್ನ ಭೆಟ್ಟೆ ಆಗಾಕ ಹೋಗಿ ನೀವ್ಯಾಕ ಮರುವಾದಿ ಕಳಕೊಳ್ಳಾಕ ಹೋಗತಿದ್ದೀರೀ’ (ತೇರು, ಪು.೧೩೫)

'ನಿಮ್ಮಂತ ಮನಿಮುರಕ ಸೂಳೀ ಮಕ್ಕಳು ಆದಾರಂತ ದೇವರಗೋಳು ಊರಬಿಟ್ಟ ಹೊಂಟದಾವ ನೋಡ' (ತೇರು, ಪು.೧೧೫)

ರಾಘವೇಂದ್ರ ಪಾಟೀಲರು ಸಮಾಜದಲ್ಲಿರುವ ಶೋಷಣೆ, ಅನ್ಯಾಯಗಳನ್ನು ಬೈಗುಳಗಳ ಮೂಲಕ ಕಾದಂಬರಿಯಲ್ಲಿ ವ್ಯಕ್ತಪಡಿಸಿದ್ದಾರೆ. ಈ ಎಲ್ಲಾ ಬೈಗುಳಗಳು ಗ್ರಾಮೀಣ ಸಮುದಾಯ ಸಾಂಸ್ಕೃತಿಕ ಚಿತ್ರಣವನ್ನು ನೀಡುವಂತಿದೆ. ಇಂತಹ ಬೈಗುಳಗಳನ್ನು ಈ ರೀತಿ ವರ್ಗೀಕರಿಸಿಕೊಳ್ಳಬಹುದು.

ವ್ಯಕ್ತಿಯ ದೈಹಿಕ ಮತ್ತು ಮಾನಸಿಕ ದೋಷಗಳಿಗೆ ಸಂಬಂಧಿಸಿದ ಬೈಗುಳಗಳು : ಉದಾ : 'ಹುಚ್ಚಪ್ಯಾಲಿ', 'ಉಸುರುಗರಿಯುವದು ಹಾಳಾಗಲೀ', 'ಮಗ್ಗಲಗೇಡಿ', 'ಅಡ್ನಾನಾಡಹೆಂಗಸ', 'ಬಿಳಿಚರ್ಮದ ಹೆಂಗಸ', 'ಮಕಳೀ', 'ಕುಡಕಾ', 'ನಿನ್ನ ಹೇಲ ಹಚ್ಚಿ ತಟ್ಟಲೀಲೇ ಹೊಡಿತನ', 'ಪಿಸರ ಬಾಡ್ಯಾನ ಮಗನ', 'ನಿಮಗೇನ ಬುದ್ದಿಗಿದ್ದಿ ಐತಿಲ್ಲೊ', 'ನಿನ್ನ ನಾಲಿಗಿ ಕಿತ್ತ ಕೈಯಾಗ ಕೊಡತನ', 'ಪಿಸಾಳ್ಯ', 'ಎಡಬಿಡಂಗೀ'. ಅನೈತಿಕತೆಗೆ ಸಂಬಂಧಿಸಿದ ಬೈಗುಳಗಳು : 'ಕುಲಗೇಡಿ ಹೆಂಗಸ', 'ಸೂಳೀ ಮಕ್ಕಳು', 'ನಿನ್ನೌನ', 'ಬೋಸಡೀ ಮಗನ', 'ದ್ಯಾವನ ಕೀಪು', 'ಬುಬ್ಬಣಿ', 'ರಂಡೀಬಾಜಿ', 'ಚಿನಾಲಿ'. ವೃತ್ತಿಗೆ ಸಂಬಂಧಿಸಿದ ಬೈಗುಳಗಳು ಮತ್ತು ಸಂಕೀರ್ಣ ಬೈಗುಳಗಳು : 'ಏನೋ ನಿನ್ನೌನ ಕೆಸರ ನಾದವನ', 'ಏಮಂಗ್ಯಾ ಸೂಳೀ ಮಗನ ರಾಜಕೀಯ ಮಾಡಿ ಊರ ಹೊಲಸ ಎಬ್ಬಿಸಬ್ಯಾಡ', ಈ ರೀತಿಯಲ್ಲಿ ಗ್ರಾಮೀಣ ಸತ್ವವನ್ನು ಹೊತ್ತುಕೊಂಡಿರುವ ರಾಘವೇಂದ್ರ ಪಾಟೀಲರ 'ತೇರು' ಕಾದಂಬರಿಯಲ್ಲಿ ಬೈಗುಳಗಳ ರೂಪ, ವಿನ್ಯಾಸವನ್ನು ಗುರುತಿಸಲಾಗಿದೆ.

ಉಪಭಾಷೆಯ ಪದಗಳು

'ತೇರು' ಕಾದಂಬರಿ ಆಡುನುಡಿಯ ಮೂಲಕ ಸಾಗುವುದರಿಂದ ಪ್ರಾದೇಶಿಕ ವೈವಿಧ್ಯತೆಯ ಶಬ್ದಗಳು ಕಾದಂಬರಿ ಉದ್ದಕ್ಕೂ ದೊರೆಯುತ್ತವೆ ಎಂಬುದರ ಬಗ್ಗೆ ಬೇರೆ ಹೇಳಬೇಕಾಗಿಲ್ಲ. ಕೆಲವೊಂದು ಇಲ್ಲಿ ಕೊಡಲಾಗಿದೆ.

ಅಗಸಿ - ಹೆಬ್ಬಾಗಿಲು; ಮಹಾದ್ವಾರ

ಅರಪಾವು - ಒಂದು ಲೀಟರ್ ಅಳತೆಯ ಸಾಧನ; ಸೇರ

ಈಬತ್ತಿ - ವಿಭೂತಿ

ಉಡಾಳ - ಕಿಡಿಗೇಡಿ

ಉಡದಾರ - ಸೊಂಟದಲ್ಲಿ ಕಟ್ಟಿರುವ ದಾರ

ಎರಕೋ - ಸ್ನಾನಮಾಡು; ಜಳಕಮಾಡು

ಒಂದೀಟ - ಸ್ವಲ್ಪ

ಒಡ್ಲು - ಹೊಟ್ಟೆ

ಕಣಬಟ್ಟ - ಚಿನ್ನದಿಂದ ತಯಾರಿಸಿ ರತ್ನವನ್ನು ಅಳವಡಿಸಿದ ಆಭರಣ

ಕರಚಿಕಾಯಿ - ಎಣ್ಣೆಯಲ್ಲಿ ಕರಿದ ಸಿಹಿಯಾದ ಆಹಾರಪದಾರ್ಥ

ಕುಳ - ಮನೆವನ; ಆಸಾಮಿ

ಕಿಸೇ - ಜೇಬು

ಕುಂಟಿ - ಹೊಲವನ್ನು ಹರಗುವ ಸಾಧನ

ಕೂರಿಗೆ - ಬಿತ್ತನೆಗೆ ಉಪಯೋಗಿಸುವ ಸಾಧನ

ಖರೆ - ಸತ್ಯ; ನಿಜ

ಖಾತ್ರೀ - ನಂಬಿಕೆ

ಖೂನ/ಖೂನೀ - ಕೊಲೆ

ಗರಡೀಮನಿ - ಕುಸ್ತೀ ವ್ಯಾಯಾಮ ಶಾಲೆ

ಗಾಂವಟೀ ಅಗಸುದ್ದೇ - ಆಯುರ್ವೇದಿಕ ಔಷಧ

ಗುಳದಾಳಿ - ತಾಳಿ; ಮಾಂಗಲ್ಯಸರ

ಗೊಟ್ಟಾ - ದನಕರುಗಳಿಗೆ ಔಷಧ ಮುಂತಾದವುಗಳನ್ನು ಕುಡಿಸುವ ಬಿದಿರಿನ ಕೊಳವೆ

ಗೋಮಾಳದ ಮಸಾರಿ - ಕೆಂಪು ಮಣ್ಣಿನ ಫಲವತ್ತಾದ ಭೂಮಿ

ಗೊಂಗಡಿ - ಕಂಬಳಿ

ಛಲೋ - ಒಳ್ಳೆಯ

ಜೋಪಾನ - ಜಾಗರೂಕತೆ; ಎಚ್ಚರಿಕೆಯನ್ನು ಸೂಚಿಸುವ ಪದ.

ಟ್ಯಾಣ - ಠಾಣೆ

ಟಿಕಾಸ - ತಾಳಿಕೆ, ಬಾಳಿಕೆ

ಡೊಗಾರಿ - ಹೊಂಡ, ತಗ್ಗು

ತರಾಸ - ಸಂಕಟ, ತ್ರಾಸ

ತಾಬಡತೋಬಡ - ವೇಗವಾಗಿ; ಆಗಿಂದಾಗಲೇ; ತಕ್ಷಣ

ತಲಬಾಗಲ - ಮುಖ್ಯಬಾಗಿಲು, ಮುಂಬಾಗಿಲು

ತೂರುಬುಟ್ಟಿ - ಧಾನ್ಯವನ್ನು ಗಾಳಿಯ ಎದುರಾಗಿ ಸುರಿದು ಹಸನ ಮಾಡುವ ಪುಟ್ಟಿ, ಬುಟ್ಟಿ.

ತಟ್ಟಲಿ - ಸ್ತ್ರೀಯರು ಉಪಯೋಗಿಸುವ ಪಾದರಕ್ಷೆ, ಚಪ್ಪಲ್ಲ

ತರಬು - ನಿಲ್ಲಿಸು, ಅಡ್ಡಗಟ್ಟು

ತಲೀಮಾಸದ - ಬಾಲ್ಯದ

ತುಡುಗ - ಕಳ್ಳತನ

ದಗದ - ಕೆಲಸ

ದಾಗೀನ - ಆಭರಣ

ದೀಡು - ಒಂದುವರೆ

ದೀಡನೂರು - ಒಂದನೂರಾ ಐವತ್ತು

ನಡಪಟ್ಟಿ - ನಡಕ್ಕೆ ಹಾಕಿದ ಆಭರಣದ ಪಟ್ಟಿಕೆ

ನಸುಕು - ಬೆಳಗಿನ ಜಾವ; ಮುಂಜಾವ

ನೊಗ - ಎತ್ತುಗಳ ಹೆಗಲಿನ ಮೇಲೆ ಹೇರುವ ಮರದದಿಂಡು

ಪಟಕಾ - ಪೇಟಾ

ಪಕ್ತ - ಒಟ್ಟು

ಪತ್ತೇ - ಆಹಾರದಲ್ಲಿಯ ಕಟ್ಟುಪಾಡು, ನಿಯಮ

ಪುಕಟ - ಉಚಿತವಾಗಿ; ಬೆಲೆಯಿಲ್ಲದೆ

ಫಟಫಟಿ - ದ್ವಿಚಕ್ರವಾಹನ

ಬಾರಾ - ಹನ್ನೆರಡು

ಭಾಳನಿವಳ - ಬಹಳಷ್ಟು ಒಳ್ಳೆಯದು

ಬಿಡದಿ - ವಾಸ್ತವ್ಯ ಮಾಡುವ ಸ್ಥಳ

ಬುತ್ತಿಯಗಂಟು - ಊಟದಗಂಟು

ಬೇಹೊಶ - ಮೂರ್ಛೆ

ಬ್ಯಾಟಿ - ಬೇಟೆ

ಬೋಳಬತ್ತಲೆ - ಪೂರ್ಣವಾಗಿ ನಗ್ನತೆ; ದಿಗಂಬರತ್ವ

ಮಾಡ - ಮಹಡಿ; ಉಪ್ಪರಿಗೆ

ಮಡ್ಡಿ - ಸರಿಯಾಗಿ ಬೆಳೆಯದ ಒಣ ಭೂಮಿ

ಮಣಾರ - ಬಹಳಷ್ಟು

ಮುಡಚಟ್ಟು - ಮೈಲಿಗೆ

ಮುಜರೀ - ನಮಸ್ಕಾರ

ಮುಕ್ಕಾಮ-ವಾಸ್ತವ್ಯ

ಮಟ್ಟಿ - ಬಾವಿಯಲ್ಲಿಯ ನೀರನ್ನು ಮೇಲಕ್ಕೆತ್ತಲು ತೊಗಲಿನಿಂದ ತಯಾರಿಸಿದ ಸಾಧನ

ಯಾಂಸೀ ದೀಡೀ - ವಕ್ರವಾದ ಮಾತು

ಯವಸ್ತಾ - ವ್ಯವಸ್ಥೆ

ರಗಡ - ಬಹಳಷ್ಟು; ಶ್ರಮ

ರೊಜ್ಜು - ಕೆಸರು

ಲಢಾಯಿ - ಯುದ್ಧ

ವಜನ - ತೋಕ; ಬಾರ

ವ್ಯಾಳೆ - ವೇಳೆ; ಸಮಯ

ಶೆಲ್ಲೇ - ಶಾಲು; ಉಣ್ಣೆಯಿಂದ ಮಾಡಿದ ಹೊದಿಕೆ

ಸಸಾರ - ಸರಳ

ಸರಪಳಿ - ಸರಪಣಿ

ಸೋಡಚೀಟಿ - ವಿವಾಹ ವಿಚ್ಛೇದನ ಪತ್ರ

ಸಂಜೀಗಡೆ - ಸಾಯಂಕಾಲ; ಸಂಜೆ ಹೊತ್ತು

ಹಕೀಕತ್ತು - ನಿಜಸ್ಥಿತಿ

ಹೊಡಮಳ್ಳಿ - ಹೊರಳಿ; ಮರಳಿ

ಹಣಗಳ - ಸಮಸ್ಯಗಳು

ಹಡರಾಯಿಸಿ - ಅವಸರಯುತವಾಗಿ

ಹೊಂಟ- ಹೊರಟ

ಹರದಾರಿ - ಮೂರು ಮೈಲುಗಳ ಒಂದು ಅಳತೆ

ಹರತಾಟ - ತೊಂದರೆಗಳು

ಹೇಂತಿ - ಹೆಂಡತಿ

ಹರ್‍ಯಾಗ - ಮುಂಜಾನೆ

ಹತಗಡೇ - ಹತ್ತಿರ

ಹಲಕಟ್ಟ - ನೀಚವ್ಯಕ್ತಿ

ಹ್ಯಾಂವ - ದ್ವೇಷ

ಹೀಗೆ ಮುಂತಾದ ಅನೇಕ ಶಬ್ದಗಳು ಸಹಜವಾಗಿ ಬಳಕೆಯಾಗಿವೆ. ಪಾತ್ರಗಳು ಇಂತಹ ಪದಗಳನ್ನು ಬಳಸುವುದರಿಂದ ಓದುಗರಿಗೆ ಹೆಚ್ಚು ಹತ್ತಿರವಾಗಿದೆ. ಕಾದಂಬರಿಕಾರ ಪ್ರಾದೇಶಿಕ ಪ್ರಭೇದವನ್ನು ಬಳಸುವುದರ ಮೂಲಕ ಭಾಷೆಯ ಸಂಕೀರ್ಣತೆ ದೂರಮಾಡಿ ಹೆಚ್ಚು ಘನವಾದ ವಿಷಯ ಸುಲಭವಾಗುವಂತೆ ಮಾಡುತ್ತಾರೆ. ಇದರಿಂದ ವಾಚಕರಿಗೆ ಬರೆಹಗಾರನ ಆಶಯ ಅರ್ಥವಾಗುತ್ತದೆ. ಇದು ಪ್ರಾದೇಶಿಕ ಪದಗಳ ಮಹತ್ವವನ್ನು ಹೇಳುತ್ತದೆ.

ಗ್ರಾಮನಾಮಗಳು

ರಾಘವೇಂದ್ರ ಪಾಟೀಲರ 'ತೇರು' ಕಾದಂಬರಿಯು ಪ್ರಾದೇಶಿಕತೆಯ ಹಿನ್ನಲೆಯಲ್ಲಿ ಬೆಳೆದು ಬಂದಿರುವುದರಿಂದ ಸಹಜವಾಗಿ ಆ ಪ್ರದೇಶದ ಗ್ರಾಮಗಳ ಹೆಸರುಗಳು ಅಡಕವಾಗಿವೆ. ಹಾಗೂ ತನ್ನ ಪ್ರದೇಶದ ಸುತ್ತಮುತ್ತಲಿನ ಸ್ಥಳನಾಮಗಳು. ವ್ಯಕ್ತಿಯ ನಾಮಗಳು ಸೇರಿಕೊಂಡಿವೆ. ''ಕಾದಂಬರಿಯ ಕಥೆ ನಡೆಯುವ ಸ್ಥಳಕ್ಕೆ ಪ್ರದೇಶ ಇಲ್ಲವೇ ಆವರಣವೆಂದು ಕರೆಯುತ್ತೇವೆ. ಪ್ರಾದೇಶಿಕ ಕಾದಂಬರಿಗಳು

ಯಾವುದಾದರೊಂದು ಊರು, ಪ್ರದೇಶಗಳ ಹಿನ್ನಲೆ ಹೊಂದಿರುತ್ತವೆ. ಅಂಥ ಸಮಯದಲ್ಲಿ ಲೇಖಕನು ಆ ಪ್ರದೇಶದ ಊರು, ಕೇರಿ, ಪ್ರದೇಶ, ಕಾಡು, ಬೆಟ್ಟ, ನದಿ, ಹಳ್ಳಕೊಳ್ಳಗಳನ್ನು ಕಾದಂಬರಿಯಲ್ಲಿ ದಾಖಲಿಸುತ್ತಾನೆ."[೨] ಹೀಗೆ ಪ್ರಾದೇಶಿಕ ಕಾದಂಬರಿಯಾದ 'ತೇರು'ವಿನಲ್ಲಿ ದಾಖಲಾಗಿರುವ ಆಯಾ ಪ್ರದೇಶಗಳ ವೈಶಿಷ್ಟ್ಯತೆಗಳನ್ನು ಇಲ್ಲಿ ಗಮನಿಸಬಹುದು.

'ಗೋಕಾವಿ', 'ಸತ್ತಿಗೇರಿ', 'ಮಸಗುಪ್ಪಿ', 'ಧರಮನಟ್ಟಿ', 'ಬೆಳಗಾವಿ', 'ಹುಣಶ್ಯಾಳ', 'ಕಳ್ಳಿಗುದ್ದಿ', 'ತಿಗಡಿ', 'ಘಟಪ್ರಭಾ' 'ಗೂಡಚಿ', 'ಸೂಗಲ', 'ಶಿರಸಂಗಿ', 'ತವಗ', 'ಉದಗಟ್ಟಿ', 'ಕಲ್ಲೋಳ್ಳಿ', 'ಸರೇಬಾನ', 'ಕಡಕೋಳ', 'ಮುರಗೋಡ', 'ನವಿಲತೀರ್ಥ', 'ಬೆಟಗೇರಿ', 'ಮುನವಳ್ಳಿ', 'ಸಾವಳಗಿ', 'ರಾಮದುರ್ಗ' ಮುಂತಾದವುಗಳು.

ತೀರ್ಥಕ್ಷೇತ್ರಗಳ ನಾಮಗಳು

'ಗೂಗೀಕೊಳ್ಳ ಮಲ್ಲಯ್ಯ', 'ಗೊಡಚಿ ಈರಭದ್ರ', 'ಸೊಗಲದ ಸೋಮೇಶ್ವರ', 'ಶಿರಸಂಗಿಯ ಕಾಳವ್ವ', 'ತವಗದ ಬಾಳಯ್ಯ', 'ಉದಗಟ್ಟಿಯ ಉದ್ದವ್ವ', 'ಗುಡ್ಡದ ಎಲ್ಲಮ್ಮ', 'ಕಲ್ಲೊಳ್ಳಿ ಹಣುಮಪ್ಪ', 'ಸುರೇಬಾನದ ಶಬರವ್ವನ ಕೊಳ್ಳ', 'ಕಡಕೋಳ ಬಸವಣ್ಣ', 'ಮುರಗೋಡ ಮಠ', 'ಜೋಗುಳಭಾವಿ ಸತ್ಯವ್ವ', 'ನವಲತೀರ್ಥ', 'ಬೆಟಗೇರಿಯ ಸತ್ಯೆದ ಲಕ್ಕವ್ವ', 'ಮುನವಳ್ಳಿ ಪಂಚಲಿಂಗೇಶ್ವರ', 'ಸಾವಳಗಿಯ ಶಿವಲಿಂಗ', 'ರಾಮದುರ್ಗದ ವೆಂಕಟೇಶ್ವರ', 'ಫಂಡರಪುರ ವಿಠಲ'

ಹೀಗೆ ಪಾಟೀಲರು ಕಾಲ್ಪನಿಕ ಊರುಗಳ ಹೆಸರನ್ನು ದಾಖಲಿಸದೆ ನೈಜ ಊರುಗಳ ನಾಮಗಳನ್ನು ಸೂಚಿಸಿದ್ದಾರೆ. ಅಷ್ಟೇ ಅಲ್ಲದೆ ಗ್ರಾಮನಾಮಗಳ ಜೊತೆಗೆ ದೇವರ ನಾಮವನ್ನು ಸಹ ಕೊಟ್ಟಿರುವುದರಿಂದ ಇಲ್ಲಿ ಬರುವ ಗ್ರಾಮಗಳು ವಿಭಿನ್ನ ಪ್ರಾಕೃತಿಕ, ಐತಿಹಾಸಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಪಡೆದುಕೊಂಡಿವೆ.

ಸಂಭಾಷಣೆ

ಒಂದು ನಾಟಕದಲ್ಲಿ ಹಾಡು, ನೃತ್ಯ, ಸಂಗೀತ ಎಷ್ಟು ಮುಖ್ಯವೊ ಅಷ್ಟೇ ಸಂಭಾಷಣೆಯು ಮುಖ್ಯವಾಗಿದೆ. ಈ ಸಂಭಾಷಣೆಯು ಕಾದಂಬರಿಯಲ್ಲಿ ಕಾಣಿಸಿಕೊಂಡಾಗ ಕಾದಂಬರಿಯ ಚಲನೆ ಮಹತ್ವವನ್ನು ಪಡೆದುಕೊಳ್ಳುತ್ತದೆ. ಕಾದಂಬರಿಯಲ್ಲಿ ಗದ್ಯವೇ ಪ್ರಧಾನವಾದರು ಸಹ ಗದ್ಯಕ್ಕೆ ಒಂದು ಮೆರಗನ್ನು ಅಥವಾ ಜೀವಂತಿಕೆಯನ್ನು ಸಂಭಾಷಣೆಯು ನೀಡುತ್ತದೆ. ಈ ನಾಟಕೀಯವಾದ ಸಂಭಾಷಣೆಯು ಕಾದಂಬರಿಯಲ್ಲಿ ಅಲ್ಲಲ್ಲಿ ಕಂಡುಬರುವುದರಿಂದ ಸಹೃದಯನಿಗೆ ಕಾದಂಬರಿಯ ಬಗ್ಗೆ ಆಸಕ್ತಿ ಹೆಚ್ಚಾಗುತ್ತದೆ. ಕಾದಂಬರಿಕಾರ ತನ್ನ ಸೃಜನಶೀಲ ಪ್ರತಿಭೆಯನ್ನು ಪಾತ್ರ-ಪಾತ್ರಗಳ ನಡುವೆ ನಡೆಯುವ ಸಂಭಾಷಣೆಯನ್ನು

ತರುವುದರಿಂದ ತಾನೇ ಕಾದಂಬರಿಯನ್ನು ಮುನ್ನಡೆಸುವ ಬದಲು ಪಾತ್ರಗಳ ಮೂಲಕ ಮುನ್ನಡೆಸಬಹುದು. ಇದರಿಂದ ಕಾದಂಬರಿಗೆ ಒಂದು ವಿಶಿಷ್ಟವಾದ ಆಕರ್ಷಣೆ ಪ್ರಾಪ್ತವಾಗುತ್ತದೆ. ಈ ಹಿನ್ನಲೆಯಲ್ಲಿ ನಾವು "ತೇರು" ಕಾದಂಬರಿಯನ್ನು ನೋಡಬಹುದಾಗಿದೆ.

ಬೆಂಗಳೂರಿನ ಪತ್ರಕರ್ತ ಪಾಟೀಲನ ಮನೆಗೆ ಆಧುನಿಕ ದ್ಯಾವಪ್ಪ ಬಂದಾಗ ಅವರ ನಡುವೆ ನಡೆಯುವ ಸಂಭಾಷಣೆಯನ್ನು ಇಲ್ಲಿ ಉದಾಹರಿಸಬಹುದು.

"ಕೂಡರೀ...."

"ನನಗರೀ... ಹಚ್ಚಬ್ಯಾಡರೀ ಸಾಹೇಬರs"

"ನೀವೂ...?"

"ನಾ ದ್ಯಾವಪ್ಪರೀ... ಕಳ್ಳೀಗುದ್ಯಾಂವ... ಅದsರೀ ನೀವು ಯೋಳೆಂಟ ವರ್ಷದ ಹಿಂದೆ ನಮ್ಮ ಮನಿಗೆ ಬಂದಿದ್ದಿರಿ ನೋಡರಿ.. ಧರಮನಟ್ಟೀ ತೇರಿನ ಸನದು ನೋಡಲಿಕ್ಕೆ..."

"ಹಾಂ ಹಾಂ.. ಹೌದೂ!...ನಿಮ್ಮ ಅಪ್ಪನ ಹೆಸರೂ...?"

"ಕುಬೇರಪ್ಪರೀ... ತೀರಿಕೊಂಡು ಎರಡು ವರ್ಷ ಆತರೀ..."

"ಹೌದು... ಛೇ... ಛೇ ಮತ್ತ ಈಗ ರಕ್ತ ತಿಲಕದ ಸೇವಾ ನಿಂದs ಇರಬೇಕಲಾ?... ಇಲ್ಲಾ ನಿನಗಿಂತಾ ದೊಡ್ಡ ಮಗಾ ಏನರ ಕುಬೇರಪ್ಪಗ ಅದಾನೋ?"

"ನಾ ಒಬ್ಬs ಗಂಡ ಮಗಾರೀ...'

"ಯಾಕೋ ಗಡ್ಡಾ ಬಿಟ್ಟಿದೀಲಾs?... ನಿಮ್ಮ ನಾಕ್ಕೆದ ತಲಿಮಾರಿನ ಹಿಂದಿನ ಅಜ್ಜಗೋಳಗ ಯಾರೋ ಒಬ್ಬಾಂವ ಅವನ ಹೆಸರೂ ಕುಬೇರಪ್ಪ. ಅಂತನs ಏನೋ... ಅಂವ ತನ್ನ ಮೈಮಾಗ ಕಾವೀ ಶಲ್ಲೇ ಹೊತಗೋತಿದ್ದನಂತ... ಹಂಗs ನೀನೂ ಏನರೇ ಸಾಧೂಗೋಳಗತೆ ಗಡ್ಡಾ ಗಿಡ್ಡಾ ಬೀಡಬೇಕಂತ ಮಾಡಿದೀ ಏನು?"

"ಏ... ಹಂಗೇನಿಲ್ಲರೀ... ಜೈಲಿನ್ಯಾಗ ಇದ್ದಾಗ ದಾಡೀ ಮಾಡಿಕೋಲಿಲ್ಲರಿ ಹಿಂಗಾಗಿ..."

"ಹಾ...! ಜೈಲಿನ್ಯಾಗ ಇದ್ದಿ?" (ತೇರು, ಪು.೬೬-೬೭)

ಹೀಗೆ ಆಧುನಿಕ ದ್ಯಾವಪ್ಪ ಮತ್ತು ಪತ್ರಕರ್ತ ಪಾಟೀಲನ ಜೊತೆ ನಡೆದ ಸಂಭಾಷಣೆ ಕಾದಂಬರಿಯಲ್ಲಿ ರಸವತ್ತಾಗಿ ಮೂಡಿಬಂದಿದೆ. ಮತ್ತು ಕಾದಂಬರಿಯಲ್ಲಿ ಅನೇಕ ಭಾಗಗಳಲ್ಲಿ ಈ ಸಂಭಾಷಣೆಯನ್ನು ಗುರುತಿಸಬಹುದಾಗಿದೆ.

ಗೊಂದಲಿಗರ ಹಾಡಿನಲ್ಲಿ ಡಂಣಾಯಕನ ಹೆಂಡತಿ ಪಾರವ್ವ ಮತ್ತು ಪುರಾಣ ದ್ಯಾವಪ್ಪನ ನಡುವೆ ತೇರಿನ ಬಲಿಯ ಕೊಡುವುದರ ಕುರಿತು ನಡೆದ ಮಾತುಕತೆಗಳಲ್ಲಿ ಈ ಸಂಭಾಷಣೆಯನ್ನು ಉದಾಹರಿಸಬಹುದಾಗಿದೆ.

"ಹಿರಿಯ ಮಗನನ್ನು ಸ್ವಾಮಿ ತೇರಿಗೆ ನೀಡೊ
ಮೂಡಾಲ ಸೀಮೇಲಿ ಮೂರೆಕರೆ ಭೂಮಿ
ಶಿವಶಿವ ಮಾದೇವ್ವೆ" ‖
"ಹಿರಿಯ ಮಗನನ್ನ ನಾನು ಕೊಡಲಾರೆ ತಾಯೆ"
"ಕಡೀಯ ಮಗನನ್ನಾರೆ ಸ್ವಾಮೀಗೆ ಕೊಡುಬಾರೆ
ಪಡುವಾಣ ದಿಕ್ಕಿನ್ಯಾಗೇ ಆರೆಕರೆ ಭೂಮಿ
ಹರ ಹರ ಮಾದೇವ್ವೆ" ‖
"ಮಲಿಯ ಕುಡಿಯುವ ಕಂದ ಕೊಡಲಾರೆ ತಾಯೆ"
"ನಡಕೀನ ಮಗನನ್ನು ಸ್ವಾಮಿಗೆ ಕೊಡು ಬಾರೊ
ತೆಂಕಾನ ದಿಕ್ಕಿನ್ಯಾಗ ಎಂಟೆಕರೆ ಭೂಮೀ
ಶಿವ ಶಿವ ಮಾದೇವ್ವೆ" ‖
"ಕೊಡುತೇನು ಬಿಡು ತಾಯಿ ಐದಾನೆ ಮಗನ
ಸ್ವಾಮಿ ಕೊಟ್ಟದ್ದು ಸ್ವಾಮೀಗೇ ಅರುಪಣಾ"(ತೇರು, ಪು.೩೦)

ಈ ರೀತಿಯಲ್ಲಿ ಕಾದಂಬರಿಯಲ್ಲಿ ಹಲವು ಕಡೆ ಸಂಭಾಷಣೆಯ ರೂಪಕಂಡುಬಂದಿದೆ. ಈ ಎಲ್ಲ ನಾಟಕೀಯ ಸಂಭಾಷಣೆಯ ಅಂಶಗಳನ್ನು ಹೊಂದಿರುವುದರಿಂದಲೇ 'ತೇರು' ಕಾದಂಬರಿಯನ್ನು 'ಎಸ್. ರಾಮಮೂರ್ತಿ'ಅವರು "ತೇರುನಾಟಕ" ಎಂಬ ಹೆಸರನ್ನು ಕೊಟ್ಟು ರಂಗರೂಪಕ್ಕೆ ಅಳವಡಿಸಿದ್ದಾರೆ. ಅಷ್ಟೇ ಅಲ್ಲದೆ "ತಿರುಕರಂಗ" ಸಾಂಸ್ಕೃತಿಕ ವೇದಿಕೆಯಿಂದ ಮಲ್ಲಾಡಿಹಳ್ಳಿಯ ಅನಾಥ ಆಶ್ರಮದ ರಂಗಮಂದಿರದಲ್ಲಿ ನಾಟಕ ಪ್ರದರ್ಶನವನ್ನು ಮಾಡಿದ್ದಾರೆ. ಹೀಗೆ ಕಾದಂಬರಿ ತನ್ನದೇ ಆದ ಭಾಷಿಕ ವೈಶಿಷ್ಟ್ಯತೆಗಳಿಂದ ಕೂಡಿದೆ. ಬೆಳಗಾವಿ ಪ್ರದೇಶದ ಭಾಷಾಧ್ಯಯನಕ್ಕು ಈ ಕೃತಿ ಆಕರವೂ ಆಗುತ್ತದೆ. ಈ ಕಾದಂಬರಿ ರಂಗಭೂಮಿ ಸಂದರ್ಭದಲ್ಲಿ ಹೊಸ ದೃಷ್ಟಿಕೋನಗಳನ್ನು, ಕಲ್ಪನೆಗಳನ್ನು ಹಾಗೂ ವಿನ್ಯಾಸಗಳನ್ನು ನಿರ್ಮಿಸಿದೆ. ಅಲ್ಲದೆ ವಸ್ತು ಮತ್ತು ತಂತ್ರ ನಿರ್ಮಿತಿಯಲ್ಲಿ ಹೊಸ ಅನ್ವೇಷಣೆಗಳತ್ತ ಚಲಿಸುತ್ತಿರುವುದು ಗಮನಾರ್ಹ ಸಂಗತಿಯಾಗಿದೆ.

ಅಡಿಟಿಪ್ಪಣಿಗಳು

೧. ಸಾಹಿತ್ಯ ಸಂಸ್ಕೃತಿ, ನರಹಳ್ಳಿ ಬಾಲಸುಬ್ರಹ್ಮಣ್ಯ, ಅಂಕಿತ ಪ್ರಕಾಶನ, ಬಸವನ ಗುಡಿ, ಬೆಂಗಳೂರು, ೧೯೯೮, ಪು.೧೦೫

೨. ಕನ್ನಡ ಸಾಹಿತ್ಯ ಮೀಮಾಂಸೆ ಸಂಪುಟ-೨, 'ಇಲ್ಲಿ ಯಾರೂ ಮುಖ್ಯರಲ್ಲ', ರಹಮತ್ ತರೀಕೆರೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫, ಪು.೧೮೦

೩. ಅದೇ, ಪು.೧೮೧

೪. ಸಾಮಾನ್ಯ ಭಾಷಾ ವಿಜ್ಞಾನ, ಡಾ.ಕೆ.ಕೆಂಪೇಗೌಡ, ಪ್ರಸಾರಾಂಗ : ಮಾನಸ ಗಂಗೋತ್ರಿ, ಮೈಸೂರು, ೧೯೬೬, ಪು.೧೦೫೩

೫. ಗದ್ಯಶೈಲಿ, ದೇ. ಜವರೇಗೌಡ, ಮೈಸೂರು, ಡಿ.ವಿ.ಕೆ.ಮೂರ್ತಿ, ೧೯೭೮, ಪು.೧೭೦

೬. ವಿಶ್ವಕೋಶ-೧ ಭಾಷೆ, ಕೆ.ವಿ.ನಾರಾಯಣ(ಸಂ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೭, ಪು.೬೪

೭. 'ಮಾತು-ಮಂಥನ', ಮಯೂರ ಮಾಸ ಪತ್ರಿಕೆ, ಅಗಸ್ಟ್, ೨೦೦೭, ಪು.೨೭

೮. ವಚನ ಸಾಹಿತ್ಯ ಭಾಷೆ, ಡಾ.ಎಸ್.ಎಸ್.ಅಂಗಡಿ, ಲಿಂಗಾಯತ ಅಧ್ಯಯನ ಅಕಾಡೆಮಿ ನಾಗಗೂರು ಶ್ರೀ ರುದ್ರಾಕ್ಷಿ ಮಠ, ಬೆಳಗಾವಿ, ೨೦೦೭, ಪು.೫೩

೯. ಅದೇ, ಪು.೩೮

೧೦. ಗ್ರಾಮೀಣ, ಎಂ. ಚಿದಾನಂದ ಮೂರ್ತಿ, ಭಾಸ್ಕೋ ಪ್ರಕಾಸನ, ಬೆಂಗಳೂರು-೧೮, ೧೯೭೭

೧೧. ವಚನ ಸಾಹಿತ್ಯ ಭಾಷೆ, ಡಾ.ಎಸ್.ಎಸ್.ಅಂಗಡಿ, ಲಿಂಗಾಯತ ಅಧ್ಯಯನ ಅಕಾಡೆಮಿ ನಾಗನೂರು, ಶ್ರೀ ರುದ್ರಾಕ್ಷಿ ಮಠ, ಬೆಳಗಾವಿ, ೨೦೦೭, ಪು.೩೮

೧೨. ಕನ್ನಡ ಪ್ರಾದೇಶಿಕ ಕಾದಂಬರಿಗಳ ಜಾನಪದೀಯತೆ ಡಾ.ಪಿ.ಕೆ.ಖಂಡೋಬಾ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯, ಪು.೬೬

ಅಧ್ಯಾಯ ೬

ಸಮಾರೋಪ

೬

ಸಮಾರೋಪ

ಸೃಜನಶೀಲ ಸಾಹಿತ್ಯದಲ್ಲಿ ಅತ್ಯಂತ ಜನಪ್ರಿಯವಾದ ಕಾದಂಬರಿ ಪ್ರಕಾರವು, ತನ್ನ ಹಳೆಯ ಶೈಲಿಯನ್ನು ಕಥನ ಮೂಲಕ ಭಿನ್ನರೂಪದಲ್ಲಿ ಬಿಡಿಸಿಕೊಳ್ಳುತ್ತಾಸಾಗಿದೆ. ಭಾಷಾ ಮಾಧ್ಯಮದ ಮೂಲಕವಾಗಿ ಬದಲಾವಣೆ ಪಡೆಯುತ್ತಿದೆ. ವಸ್ತುವಿನಲ್ಲಿ ಪರಂಪರೆ ಮತ್ತು ಬದಲಾಗುತ್ತಿರುವ ಸಮಾಜದ ನಡುವಿನ ಸಂಘರ್ಷವನ್ನು ರೂಪಾತ್ಮಕವಾಗಿ ಬದಲಿಸಿಕೊಳ್ಳುತ್ತಾ ಸಾಗುತ್ತಿದೆ. ಹೀಗಾಗಿ ರಾಘವೇಂದ್ರ ಪಾಟೀಲ ಅವರ 'ತೇರು' ಕಾದಂಬರಿಯೂ ಸಹ ಈ ಅಂಶವನ್ನು ಸೂಕ್ತವಾಗಿ ತನ್ನ ಒಡಲಲ್ಲಿ ಇಟ್ಟುಕೊಂಡಿದೆ. ಪರಂಪರೆ ಮತ್ತು ಆ ಪರಂಪರೆಯು ಒಡುತ್ತಾ ಬಂದ ಬಹುಕಾಲದ ಮೌಢ್ಯತೆಯನ್ನು ವಾಸ್ತವ ಲೋಕದಲ್ಲಿ ಪುನರ್ ವಿಮರ್ಶಿಸುವ ಮತ್ತು ಅದಕ್ಕೊಂದು ಹೊಸ ವ್ಯಾಖ್ಯಾನವನ್ನು ನೀಡವ ನಿಟ್ಟಿನಲ್ಲಿ ಸಾಗುತ್ತಲೇ ಅನುಭವ ಹಾಗೂ ತಾತ್ವಿಕತೆಯ ನಡುವಿನ ಸಮರವಾಗಿ ರೂಪಾಂತರವನ್ನು ತಾಳಿದೆ. ಪರಂಪರಾಗತವಾದ ಬದುಕನ್ನು ಕತ್ತಲಲ್ಲಿ ಸವೇಸಿದ ವ್ಯಕ್ತಿಗಳು ತಮ್ಮ ಬದುಕನ್ನು ನೋಡುವ ಚಿಂತನ ಕ್ರಮ ಹಾಗೂ ಹೊಸ ದೃಷ್ಟಿಯನ್ನು ಒಳಗೊಂಡು ಪರಂಪರೆಗೆ ತಾತ್ವಿಕತೆಯನ್ನು ತಂದು, ಆ ತಾತ್ವಿಕತೆಯನ್ನು ಮೀರಿ ಬೇರೊಂದು ಸ್ತರದಲ್ಲಿ ಹೊಸದಾದ ಮಾದರಿಯನ್ನು ಈ ಕಾದಂಬರಿ ಒಳಗೊಂಡಿದೆ.

ಪಾಟೀಲರು ತಮ್ಮ ಪ್ರದೇಶದ ವಿವಿಧ ಸಾಂಸ್ಕೃತಿಕ ಆಯಾಮಗಳನ್ನು ಈ ಕಾದಂಬರಿಯಲ್ಲಿ ತರುವ ಮೂಲಕ ಅದಕ್ಕೊಂದು ವಿಶಿಷ್ಟವಾದ ರೂಪವನ್ನು ಕೊಟ್ಟಿದ್ದಾರೆ. ಪ್ರಾದೇಶಿಕ ಘಟನೆ, ವ್ಯಕ್ತಿಗಳು, ಸುತ್ತಮುತ್ತಲಿನ ಪ್ರದೇಶದ ಹೆಸರುಗಳು, ಜನರ ಜೀವನ ಶೈಲಿ ಹಾಗೂ ಭಾಷೆ ಮುಂತಾದವುಗಳನ್ನು ಕೃತಿಯಲ್ಲಿ ತರುವುದರಿಂದ ಆ ಕಾದಂಬರಿಗೆ ತನ್ನದೇ ಆದ ಸಾಂಸ್ಕೃತಿಕ ಮಹತ್ವ ಪ್ರಾಪ್ತವಾಗಿದೆ. ಕಾದಂಬರಿಯ ವಿನ್ಯಾಸವನ್ನು ಗಮನಿಸಿದರೆ ಇದೊಂದು ಗದ್ಯ ಪ್ರಕಾರದ ಭಾವಗೀತೆಯಾಗಿದೆ. ಹಿಂದಿನ ಕಾದಂಬರಿಗಳ ಪ್ರಕಾರಕ್ಕಿಂತ ಭಿನ್ನವಾದ ಹಾಗೂ ಹೊಸ ಸಾಧ್ಯತೆಯ ಪ್ರಯೋಗವನ್ನು ಒಳಗೊಂಡಿದೆ. ಕಾದಂಬರಿಯು ವ್ಯಕ್ತಪಡಿಸುವ ಪ್ರಮುಖವಾದ ಆಶಯ ಪರಂಪರೆಯ ಜೊತೆಗೆ ಸಂಘರ್ಷಕ್ಕೆ ಇಳಿಯುವುದರ ಮೂಲಕ ತನ್ನದೇ ಆದ ಒಂದು ಆದರ್ಶ ಸಮಾಜವನ್ನು ನಿರ್ಮಿಸುವುದಾಗಿದೆ. ಮತ್ತು ಮೂಢನಂಬಿಕೆಗಳು ಊಳಿಗಮಾನ್ಯ ವ್ಯವಸ್ಥೆಯಲ್ಲಿ ಎಲ್ಲವೂ ಭಕ್ತಿಮಯವಾಗಿ ಆ ಭಕ್ತಿಯನ್ನು ಅಂತಃಸತ್ವಕ್ಕೆ ಹಚ್ಚಿಕೊಂಡು

ತನ್ನ ಮುಂದಿನ ಪೀಳಿಗೆಗೂ ಸಹ ಪ್ರೇರೆಪಿಸುತ್ತಾಸಾಗಿ, ಕೊನೆಗೆ ಆ ಸತ್ವವಿಲ್ಲದ ಭಕ್ತಿಯಲ್ಲಿ ಲೀನವಾಗಿ ಹೋಗುವ ವ್ಯಕ್ತಿಗಳನ್ನು ಕಾದಂಬರಿಯಲ್ಲಿ ಕಾಣುತ್ತೇವೆ. ಈ ಭಕ್ತಿಗೆ ಅನುಭಾವಿಯ ನೆಲೆಯ ದೈವಿ ಸ್ವರೂಪದ ಪ್ರಜ್ಞೆಯೂ ಕಾರಣವಾಗಿದೆ. ಇದು ಕಗ್ಗತ್ತಲ್ಲಿನಿಂದ ಕೂಡಿದ ರಕ್ತ ತಿಲಕದ ಭಾಗದಲ್ಲಿ ಗೋಚರಿಸುತ್ತದೆ.

ಕಾದಂಬರಿಯು ಸಾಂಸ್ಕೃತಿಕವಾಗಿ ಹಲವಾರು ಅಂಶಗಳನ್ನು ಒಳಗೊಂಡಿದೆ. ರಾಜಕೀಯ, ಧಾರ್ಮಿಕ, ಜನಪದಕಲೆಗಳು, ಉತ್ಸವಗಳು ಮತ್ತು ಜನರ ಜೀವನ, ಸ್ಥಳೀಯ ಜನರ ಭಾಷೆ ಮುಂತಾದವುಗಳು ಕೃತಿಯಲ್ಲಿ ಸೊಗಸಾಗಿ ನಿರೂಪಿತವಾಗಿವೆ. ಕಾದಂಬರಿಯಲ್ಲಿ ಬರುವ ಪ್ರಮುಖವಾದ ಪಾತ್ರಗಳು ಪುರಾಣ ದ್ಯಾವಪ್ಪ ಮತ್ತು ಆಧುನಿಕ ದ್ಯಾವಪ್ಪ, ಸ್ವಾಂವಜ್ಜ, ಪತ್ರಕರ್ತ ಪಾಟೀಲ ಈ ನಾಲ್ಕು ಪಾತ್ರಗಳು ಇಡೀ ಕಾದಂಬರಿಯಲ್ಲಿ ಮಿಂಚುತ್ತವೆ. ಇಲ್ಲಿಯ ಪಾತ್ರಗಳ ಚಿತ್ರಣವನ್ನು ಪಾಟೀಲರು ಅವುಗಳ ಸ್ವಭಾವ ಹಾಗೂ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ತಂದಿರುವುದರಿಂದ ಕೃತಿಗೆ ಹೆಚ್ಚು ಮಾನ್ಯತೆ ಲಭಿಸಿದೆ. ಕಾದಂಬರಿಯಲ್ಲಿ ವ್ಯಕ್ತವಾದ ಬೆಳಗಾವಿ ಪ್ರಾಂತೀಯ ಭಾಷೆಯು ಎಲ್ಲಿಯೋ ಸ್ವಲ್ಪವು ಕೃತಕವಾಗಿ ಕಂಡುಬರುವುದಿಲ್ಲ. ಇದರ ಜೊತೆಗೆ ಗೊಂದಲಿಗರ ಹಾಡಿನ ಕಥನದ ಪರಿಕಲ್ಪನೆ ಮೆಚ್ಚುವಂತಹದ್ದು. ಒಂದು ವೇಳೆ ಈ ಪ್ರಯೋಗ ಕಾದಂಬರಿಯಲ್ಲಿ ಇಲ್ಲದಿದ್ದರೆ ಅದು ತನ್ನ ಲಯವನ್ನು ಕಳೆದುಕೊಳ್ಳುತ್ತಿತ್ತು. ಅದಕ್ಕಾಗಿ ಪಾಟೀಲರು ಈ ಹೊಸ ಪ್ರಯೋಗವನ್ನು ಸೃಜನಶೀಲತೆಯಿಂದ ಬಳಸಿಕೊಂಡಿದ್ದಾರೆ. ಕೃತಿಯಲ್ಲಿ ಬರುವ ಉಪಭಾಷೆಯ ಪದಗಳು, ಬೈಗುಳಗಳು, ಗಾದೆಗಳು ಹಾಗೂ ಮಿಂಚಿನಂತೆ ಕಂಡುಬರುವ ನಾಟಕೀಯ ಸಂಭಾಷಣೆ, ಅಲಂಕಾರಯುಕ್ತ ಮಾತುಗಳು ಓದುಗರನ್ನು ಸೆರೆ ಹಿಡಿಯುತ್ತವೆ.

ಈ ಎಲ್ಲಾ ಅಂಶಗಳನ್ನು ಒಳಗೊಂಡ ಇಂತಹ ಕೃತಿಯನ್ನು ಕನ್ನಡ ಕಾದಂಬರಿಯ ದೃಷ್ಟಿಯಿಂದ ನೋಡಿದಾಗ ತೇರು ಕಾದಂಬರಿಗೆ ಮಹತ್ವದ ಸ್ಥಾನವಿದೆ. ಅದು ತನ್ನದೇ ಆದ ವಿಶಿಷ್ಟತೆಯನ್ನು ಉಳಿಸಿಕೊಂಡ ಕಾದಂಬರಿಯಾಗಿದೆ. ತನ್ನ ಪ್ರದೇಶದ ಸತ್ವವನ್ನು ಮೈಗೂಡಿಸಿಕೊಂಡು ಈ ನೆಲದ ಸಾಂಸ್ಕೃತಿಕ ಒತ್ತಡದಲ್ಲಿ ಅರಳಿದ ಕಾದಂಬರಿಯಾಗಿದೆ. ಕಾಲದ ಅಗತ್ಯಕ್ಕೆ ತಕ್ಕಂತೆ ವೈವಿಧ್ಯಮಯವಾದ ಪ್ರಯೋಗಗಳ ಮೂಲಕ, ಹೊಸದಾದ ಚಿಂತನೆಯ ಮೂಲಕ ಕನ್ನಡ ಕಾದಂಬರಿಯಲ್ಲಿ ಭಿನ್ನವಾಗಿ ಕಾಣಿಸಿಕೊಂಡಿದೆ. ಈ ಅಧ್ಯಯನ ಹೊಸ ಹೆಜ್ಜೆಗಳನ್ನು ಹೀಗೆ ಕಲೆಹಾಕಲಾಗಿದೆ.

೧. ಮೊದಲನೆಯದಾಗಿ ಭಾಷೆಯಲ್ಲಿ ನವೀನತೆಯನ್ನು ತಂದದ್ದು 'ತೇರು' ಕಾದಂಬರಿಯ ಮುಖ್ಯ ವೈಶಿಷ್ಟತೆಯಾಗಿದೆ. ಆಡು ಭಾಷೆಯನ್ನು ಸಂಸ್ಕೃತಿಯ ಅಭಿವ್ಯಕ್ತಿಗಾಗಿ ಕಾದಂಬರಿಕಾರರು ದುಡಿಸಿಕೊಂಡಿದ್ದಾರೆ. ಆಧುನಿಕ ಭಾಷೆಯ ಶಾಸ್ತ್ರಜ್ಞರು ಬರೆಹದ ಭಾಷೆಗಿಂತ ಆಡುನುಡಿಗೆ ಮಹತ್ವಕೊಟ್ಟಿರುವುದು ಈ ಹಿನ್ನೆಲೆಯಲ್ಲಿಯೇ. ಪ್ರಾದೇಶಿಕ ಭಾಷೆಯ ಲಯ, ನುಡಿಗಟ್ಟು ಅದರ

ಸ್ವರೂಪವನ್ನು ಕೃಷಿ ಮಾಡುವ ಮೂಲಕ 'ತೇರು' ಕಾದಂಬರಿಯಲ್ಲಿ ಹೊಸ ಭಾಷೆ ಸೃಷ್ಟಿಯಾಗಿದೆ.

೨. ಒಂದು ಸಮುದಾಯದ ಬದುಕಿನ ಅನುಭವವನ್ನು ನಾದಮಯತೆಯಿಂದ ಅರ್ಥದ ನೆಲೆಗೆ ಒಯ್ಯುವುದು 'ತೇರು' ಕಾದಂಬರಿಯ ಮುಖ್ಯ ನೆಲೆಯಾಗಿದೆ. ಇದು ಭಾಷೆಯಲ್ಲಿಯೇ ಆದ ಎರಡನೆಯ ಘಟ್ಟವೂ ಆಗಿದೆ. ಕಿಳ್ಳಿಕ್ಯಾತರ ಬದುಕಿನ ಸಂಘರ್ಷಗಳು ಸಮಕಾಲೀನ ಬದುಕಿಗೆ ಹೇಗೆ ಅನ್ವಯವಾಗುತ್ತವೆ ಎಂಬ ಅಂಶವನ್ನು ಕಾದಂಬರಿಕಾರರು ಅಭಿವ್ಯಕ್ತಿಸುವ ರೀತಿ ಮನೋಜ್ಞವಾಗಿದೆ.

೩. ಕಾದಂಬರಿಯಲ್ಲಿ ಸಹಜತೆ, ಸ್ವಭಾವೋಕ್ತಿ ತಂದದ್ದು ತೇರು ಕಾದಂಬರಿಯ ಮೂರನೆಯ ವಿಶಿಷ್ಟತೆಯಾಗಿದೆ. ಇದು 'ತೇರು' ಕಾದಂಬರಿಯ ಮೂರನೆಯ ಹಂತವೂ ಹೌದು. ಪಾತ್ರ ಪಾತ್ರಗಳ ಸಂಭಾಷಣೆಯ ಮೂಲಕ ಭಾವವನ್ನು, ವ್ಯಕ್ತಿತ್ವವನ್ನು ಅದರ ಅಂತಸತ್ವವನ್ನು ಹೊರ ಹಾಕುವ ಗುಣವನ್ನು ಅವರು ಸೃಷ್ಟಿಸುವ ಸಂಭಾಷಣೆಯಲ್ಲಿ ಕಾಣುತ್ತೇವೆ. ಇದು ತೇರು ಕಾದಂಬರಿಯಲ್ಲಿ ಕಾಣಿಸುವ ಮುಖ್ಯನೆಲೆಯಾಗಿದೆ.

೪. ಹೊಸ ದೃಷ್ಟಿಕೋನವೊಂದರ ದರ್ಶನ ಮಾಡಿಸುವುದು 'ತೇರು' ಕಾದಂಬರಿಯ ವೈಶಿಷ್ಟತೆಯಾಗಿದೆ. ಅದು ವಾಸ್ತವತಾವಾದದ ನೆಲೆಯಲ್ಲಿ ಯಾವುದೇ ವಿಷಯವನ್ನು ದೈವದ್ದಕ್ಕೇರಿಸದೆ ಅದನ್ನು ಸಹಜ ಬದುಕಿನ ಜೊತೆಗೆ ಹೊಂದಿಸಿ ನೋಡುವ ಪ್ರಯತ್ನವನ್ನು ಕಾದಂಬರಿಕಾರರು ಈ ಕಾದಂಬರಿಯಲ್ಲಿ ಪ್ರಯೋಗಮಾಡಿ ಯಶಸ್ವಿಯಾಗಿದ್ದಾರೆ. ಒಂದು ನಿರ್ದಿಷ್ಟ ಸಮುದಾಯದ ಬದುಕಿನ ವಿಶ್ಲೇಷಣೆ ಈ ಕಾದಂಬರಿ ವಸ್ತುವಾಗಿದೆ. ಅದರ ಹಿಂದೆ ಇರುವ ಸಾಮಾಜಿಕ ಕಳಕಳಿ ಗುರುತಿಸಬೇಕು.

೫. ಪರಂಪರೆ ಮತ್ತು ಆಧುನಿಕತೆಯ ಸಮನ್ವಯದಲ್ಲಿ ಕಾದಂಬರಿ ಕಟ್ಟಿಕೊಡುವ ವಿಚಾರ ಮುಖ್ಯವಾದ ಸಂಗತಿಯಾಗಿದೆ. ಪರಂಪರೆಯ ಅಂಶಗಳನ್ನು ಅಲ್ಲಿದ್ದಂತೆಯೇ ಸ್ವೀಕರಿಸಿಲ್ಲ. ಪರಂಪರೆಯಿಂದ ಅಗತ್ಯವಾದ ಅಂಶಗಳನ್ನು ಸಮಕಾಲೀನ ವಿದ್ಯಮಾನಕ್ಕೆ ತಕ್ಕಂತೆ ಅಡಗಿಸಿಕೊಂಡು ಕೃತಿ ರಚಿಸಿದ್ದಾರೆ. ದೇಸಿಸಂಸ್ಕೃತಿಯ ಲಯ, ಬಂಧ, ಸ್ವರೂಪವನ್ನು ಬಳಸಿಕೊಂಡೇ ಹೊಸ ಅನುಭವವೊಂದಕ್ಕೆ ಕಾದಂಬರಿಯಲ್ಲಿ ರೂಪ ಕೊಡುವ ಕ್ರಿಯೆಯನ್ನು ಕಾದಂಬರಿಕಾರರು ಮಾಡಿದ್ದಾರೆ.

೬. ಸಾಮಾಜಿಕ ನೆಲೆ 'ತೇರು' ಕಾದಂಬರಿಯ ಮುಖ್ಯವಾದ ನೆಲೆಯಾಗಿದೆ. ಸಮಾಜದಲ್ಲಿ ವ್ಯಕ್ತಿಗಳು ತಮ್ಮ ನೆಲೆಯನ್ನು ಕಂಡುಕೊಳ್ಳಲು ಹೇಗೆ ಪ್ರಯತ್ನಿಸುತ್ತಾರೆ ಎಂಬುದನ್ನು ಸೊಗಸಾಗಿ ನಿರೂಪಿಸುತ್ತದೆ. ಕಾದಂಬರಿಯಲ್ಲಿ ಬರುವ ಪಾತ್ರಗಳು, ಘಟನೆಗಳು, ಕಥಾವಸ್ತು, ಪ್ರಮುಖವಾಗಿ ಸಾಮಾಜಿಕ ಸ್ತರವಿನ್ಯಾಸದಲ್ಲಿಯೇ ರೂಪವನ್ನು ಪಡೆದಿವೆ. ಅವುಗಳನ್ನು ಸಾಮಾಜಿಕ ಸ್ತರವಿನ್ಯಾಸಗಳಲ್ಲಿ ಹಾಗೂ ಸಂಸ್ಕೃತಿಯ ಪ್ರತೀಕವಾಗಿ, ಪ್ರತಿಸಂಸ್ಕೃತಿ ಹೇಗೆ ಜನ್ಮ ತಾಳುತ್ತದೆ ಎಂಬುದನ್ನು 'ತೇರು' ಕಾದಂಬರಿಯು ಸ್ಪಷ್ಟವಾಗಿ ಬಿಚ್ಚಿಡುತ್ತದೆ.

೭. ಸಮಾಜದಲ್ಲಿ ಮೇಲಸ್ತರದ ಜನ ಕೆಳಸ್ತರದಲ್ಲಿರುವ ಜನರನ್ನು ಯಾವ ರೀತಿಯಲ್ಲಿ ಕಾಣುತ್ತಾರೆ ಮತ್ತು ಅವರ ಮೇಲೆ ಯಾವ ರೀತಿಯಲ್ಲಿ ಕಟ್ಟುಪಾಡುಗಳನ್ನು ವಿಧಿಸುತ್ತಾರೆಂಬುದನ್ನು ಸಾಮಾಜಿಕ ಪ್ರಜ್ಞೆ ಅಥವಾ ಮಾನವೀಯ ನೆಲೆಯಲ್ಲಿ ಗುರುತಿಸುವುದು ಕಾದಂಬರಿಯ ಪ್ರಮುಖವಾದ ವಿಚಾರವಾಗಿದೆ.

೮. ಎಷ್ಟೋ ವರ್ಷಗಳಿಂದ ಹಿಂದುಳಿದ ಜನರ ಮೇಲೆ ನಡೆಯುವ ದೌರ್ಜನ, ಕ್ರೌರ್ಯ, ಅತ್ಯಾಚಾರ ಮುಂತಾದವುಗಳಿಂದ ಬಿಡುಗಡೆ ಹೊಂದಿ, ಸ್ವತಂತ್ರವಾಗಿ ಜೀವಿಸಲು ಪ್ರಯತ್ನಿಸುವ ಹಾಗೂ ಸಮಾಜದ ಪರಂಪರೆಯನ್ನು ವಿರೋಧಿಸುವ, ತನ್ನದೇ ಆದ ನವಸಮಾಜವನ್ನು ನಿರ್ಮಿಸುವ ಮಹತ್ವಾಕಾಂಕ್ಷೆಯನ್ನು 'ತೇರು' ಕಾದಂಬರಿ ಹೊಂದಿದೆ.

ಒಟ್ಟಾರೆ, 'ತೇರು' ಕಾದಂಬರಿಯನ್ನು ಒಂದು ಸಾಂಸ್ಕೃತಿಕ ಅಧ್ಯಯನವಾಗಿಯೂ ಗುರುತಿಸಬಹುದು, ಜಾನಪದ ಜನಾಂಗೀಯ ಅಧ್ಯಯನದಲ್ಲಿಯೂ ನೋಡಬಹುದು, ಭಾಷಾಶಾಸ್ತ್ರದ ಮೂಲಕ ಅಧ್ಯಯನವನ್ನು ಕೈಗೊಳ್ಳಬಹುದು. ಹೀಗೆ ಈ ಮೂರು ಪ್ರಮುಖವಾದ ಹಾಗೂ ಇನ್ನು ಹೆಚ್ಚಿನ ಅಧ್ಯಯನವನ್ನು 'ತೇರು' ಕಾದಂಬರಿಯನ್ನು ಕುರಿತು ಮುಂದಿನ ಅಧ್ಯಯನಕಾರರಿಗೆ ಪ್ರೇರೆಪಿಸುತ್ತೇನೆ. ಕೊನೆಯದಾಗಿ 'ತೇರು' ಕಾದಂಬರಿಯು ಕನ್ನಡ ಸಾಹಿತ್ಯರಂಗದಲ್ಲಿ ಒಂದು ಮೇರು ಕೃತಿಯಾಗಿ, ಹಲವು ಕೃತಿಗಳ ದಾಖಲೆಯನ್ನು ಮುರಿಯುವಷ್ಟು ಶಕ್ತಿಶಾಲಿಯಾದ ಕೃತಿಯಾಗಿದೆ. ಈ ಕಾದಂಬರಿಯ ಅಧ್ಯಯನವನ್ನು ಮಾಡುತ್ತಿದ್ದರೆ, ಒಮ್ಮಿಗಲೇ ಎಲ್ಲ ಸಾಹಿತ್ಯಿಕ ಅಂಶಗಳನ್ನು ಸಂಸ್ಕೃತಿಯ ಅಂಶಗಳನ್ನು, ಜನಪದ ಜನಾಂಗೀಯ ಅಂಶಗಳನ್ನು ಬಿಟ್ಟುಕೊಡದೆ, ಪದೇ ಪದೇ ಓದಿಸಿಕೊಂಡು ಹೋಗುತ್ತಾ ಒಂದೊಂದು ಅಂಶವನ್ನು ಕ್ರಮೇಣ ಬಿಟ್ಟುಕೊಡುತ್ತಾ ಹೋಗುತ್ತದೆ. ಅದಕ್ಕಾಗಿ ನನ್ನ ಅಧ್ಯಯನದಲ್ಲಿಯೂ ಸಹ ಸಂಪೂರ್ಣವಾಗಿ ಸೆರೆ ಹಿಡಿಯಲು ಆಗಿಲ್ಲ ಎನ್ನುವ ಒಳತುಡಿತದೊಂದಿಗೆ ನಾನು ಮುಂದಿನ ಅಧ್ಯಯನಕಾರರಿಗೆ ಭಾರವನ್ನು ಕಡಿಮೆ ಮಾಡಿದ್ದೇನೆ ಎನ್ನುವ ನನ್ನಮನದಾಳದ ಮಾತಿನೊಂದಿಗೆ ಈ ಅಧ್ಯಯನವನ್ನು ಮುಗಿಸುತ್ತೇನೆ.

ಅನುಬಂಧಗಳು

೧. ರಾಘುವೇಂದ್ರಪಾಟೀಲ ಅವರ ಸಾಹಿತ್ಯ : ವಿದ್ವಾಂಸರು ಕಂಡಂತೆ

೨. ರಾಘುವೇಂದ್ರಪಾಟೀಲ ಅವರ ವಂಶವೃಕ್ಷ

೩. ರಾಘುವೇಂದ್ರಪಾಟೀಲ ಅವರ ಬದುಕಿನ ಮುಖ್ಯ ಘಟನೆಗಳು

೪. ರಾಘುವೇಂದ್ರಪಾಟೀಲ ಅವರ ಕೃತಿ ಸೂಚಿ

೫. ಗ್ರಂಥ ಋಣ

೧

ರಾಘವೇಂದ್ರಪಾಟೀಲ ಅವರ ಸಾಹಿತ್ಯ : ವಿದ್ವಾಂಸರು ಕಂಡಂತೆ

"ರಾಘವೇಂದ್ರ ಪಾಟೀಲರು ನಿಡುಗಾಲದಿಂದಲೂ ಸಾಹಿತ್ಯದ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಕತೆ, ವಿಮರ್ಶೆಗಳ ಮೂಲಕ ಕನ್ನಡ ಸಾಹಿತ್ಯದಲ್ಲಿ ಅವರು ತನ್ನದೇ ಸ್ಥಾನವನ್ನು ಕಂಡುಕೊಂಡಿದ್ದಾರೆ. ಸದಭಿರುಚಿಯ ಪತ್ರಿಕೆಯನ್ನು ನಡೆಸಿಕೊಂಡು ಬರುವುದರ ಮೂಲಕ ಸೃಜನಶೀಲ ಸಾಹಿತ್ಯಕ್ಕೆ ಪೂರಕವಾದ ಒಂದು ವಾತಾವರಣವನ್ನು ಅವರು ಪ್ರತೀತಗೊಳಿಸಿದ್ದಾರೆ. ಅನಗತ್ಯವಾದ ವಾದ-ವಿವಾದಗಳಿಂದ ಸದಾ ದೂರ ಉಳಿದಿರುವ ಅವರು ಸಾಹಿತ್ಯದ ದೂರಗಾಮೀ ಪ್ರಭಾವಗಳ ಬಗೆಗೆ ಗಂಭೀರವಾಗಿ ಚಿಂತಿಸುತ್ತಲೇ ಬಂದಿದ್ದಾರೆ. ತಮ್ಮ ಪ್ರಕಾಶನದ ಮೂಲಕ ಅವರು ಪ್ರಕಟಿಸಿದ ವಿವಿಧ ಕೃತಿಗಳು ಕೂಡ ಪಾಟೀಲರ ಸೃಜನಶೀಲತೆಯ ಇನ್ನೊಂದು ಆಯಾಮವನ್ನು ಸಂಕೇತಿಸುತ್ತವೆ. ಸಾಹಿತ್ಯದ ವಾತಾವರಣ ಕಲುಷಿತಗೊಂಡಿರುವ ಇಂದಿನ ಸಂದರ್ಭದಲ್ಲಿ ಪಾಟೀಲರ ಹಾಗೆ ಅಕಳಂಕಿತರಾಗಿ ಉಳಿಯುವುದು ಒಂದು ದೊಡ್ಡ ಸಂಗಾತಿಯೇ ಆಗಿದೆ. ಸಮಕಾಲೀನ ಒತ್ತಡಗಳಿಂದ ಸಿಡಿದು ದೂರ ಉಳಿದಿರುವ ಪಾಟೀಲರು ಆ ಕಾರಣಕ್ಕೇನೇ ನನ್ನಂಥ ಅನೇಕರಿಗೆ ತುಂಬಾ ಇಷ್ಟವಾಗಿದ್ದಾರೆ."

-ಪುರುಷೋತ್ತಮ ಬಿಳಿಮಲೆ

(ತೇರ ಬೆನ್ನಿಗೆ ನಿಂತು... ತೇರು ಪುಟ.೧೪೩)

"ಕಥೆಗಾರ ರಾಘವೇಂದ್ರ ಪಾಟೀಲರು ತೇರು ಕಾದಂಬರಿಯ ಮೂಲಕ ಕಥನದ ಹೊಸದಾರಿಗಳನ್ನು ನಿರ್ಮಿಸಿದ್ದಾರೆ. ಇಲ್ಲಿನ ಕಥಾನಕದ ಮೂಲಕ ನಮ್ಮನ್ನು ಒಮ್ಮೆಲೇ ಬೆರಗಿನ ಅರಮನೆಯ ಮುಂದೆ ಕೊಂಡೊಯ್ದು ನಿಲ್ಲಿಸುತ್ತಾರೆ."

-ಮಲ್ಲೇಪುರಂ ಜಿ.ವೆಂಕಟೇಶ್

(ತೇರು ಕನ್ನಡಕ್ಕೊಂದು ವಿಶಿಷ್ಟ ಕಾದಂಬರಿ)

ಹಸಿರು ಕ್ರಾಂತಿ ಸಾಪ್ತಾಹಿಕ ಸಂಪದ, ೧೦-೨-೨೦೦೬, ಪು.೫)

"ರಾಘವೇಂದ್ರ ಪಾಟೀಲರು ಬರೆದುದು ಹೊರನೋಟಕ್ಕೆ ಒಂದಿಷ್ಟು ಕಡಿಯೆನಿಸಿದರೂ ಬರೆದಷ್ಟು ಬಂಗಾರ! ಅವರು ನನಗೆ ಪ್ರಿಯರಾಗಲು ಕಾರಣ ಯಾವಾಗಲೂ ತೆರೆದ ಹೃದಯ, ಉದಾತ್ತ ಜೀವನದೃಷ್ಟಿ, ಯುವ ಪ್ರತಿಭೆಗಳನ್ನು ಗುರುತಿಸುವ ಪ್ರೋತ್ಸಾಹಿಸುವ ಅಪರೂಪದ ಕಾರ್ಯಮೆಚ್ಚುವಂಥದ್ದು. ರಾಘವೇಂದ್ರ ಪಾಟೀಲರ 'ತೇರು' ಕೃತಿಗೆ ೨೦೦೫ರ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗರಿ.

ಇದೀಗ ಗೋಕಾವಿ ನಾಡಿನ ತೇರಿಗೆ ದಿಲ್ಲಿಯ ಸಂಭ್ರಮವೆಂದಾಗ ನನಗಂತೂ ಅಪಾರ ಹೆಮ್ಮೆ, ಅಷ್ಟೇ ಸಂತೋಷ. ನನ್ನ ಆತ್ಮೀಯ ಮಿತ್ರರೊಬ್ಬರು ಅತ್ಯುನ್ನತ ಗೌರವ ಪಡೆದರಲ್ಲಾ ಎಂಬುದೇ ಆನಂದ!!"

-ಬಾಳೇಶ ಲಕ್ಷೆಟ್ಟಿ

(ಗೋಕಾವಿ ನಾಡಿನ ತೇರಿಗೆ ದಿಲ್ಲಿಯ ಸಂಭ್ರಮ)

ಹಸಿರುಕಾಂತ್ರಿ ಸಾಪ್ತಾಹಿಕ ಸಂಪದ ೧೦-೨-೨೦೦೬, ಪು.೫

"ಕನ್ನಡದ ಜವಾರಿ ಕಥೆಗಾರ ರಾಘವೇಂದ್ರ ಪಾಟೀಲ"

ಡಾ.ಎಚ್.ಎಸ್.ವೆಂಕಟೇಶಮೂರ್ತಿ

(ತೇರು ಕಾದಂಬರಿ ಬೆನ್ನುಡಿ)

'ಹತ್ತು ಕಟ್ಟೊಬದಲು ಒಂದು ಮುತ್ತು ಕಟ್ಟು' ಅನ್ನುವ ಗಾದೆ ಸಾಹಿತಿ ಮಿತ್ರರಾದ ರಾಘವೇಂದ್ರ ಪಾಟೀಲರಿಗೆ ಚೆನ್ನಾಗಿ ಒಪ್ಪುತ್ತದೆ. ಅವರು ಪ್ರಕಟಿಸಿದ ಕೃತಿಗಳ ಸಂಖ್ಯೆ ಬೆರಳಣಿಕೆಯಷ್ಟು. ಆದರೆ ಅವುಗಳಿಗೆ ಪ್ರಶಸ್ತಿಗಳು ಬೇಕಾದಷ್ಟು ಲಭಿಸಿವೆ. ಆ ಎಲ್ಲ ಪ್ರಶಸ್ತಿಗಳಿಗೂ ಕಲಶವಿಟ್ಟಂತೆ ಇದೀಗ ಪಾಟೀಲರ 'ತೇರು' ಕಾದಂಬರಿಗೆ ಕೇಂದ್ರ ಸಾಹಿತ್ಯ ಆಕಾಡೆಮಿ ಬಹುಮಾನ ಬಂದಿದೆ.

'ತೇರು' ಎಲ್ಲ ರೀತಿಯಿಂದಲೂ ಪ್ರಶಸ್ತಿಗೆ ಅರ್ಹವಾದ ಕೃತಿ. ಪ್ರಶಸ್ತಿಯ ಮತ್ತು ನಿರ್ಣಾಯಕರ ಗೌರವನ್ನು ಹೆಚ್ಚಿಸುವಂಥ ಕೃತಿ. ಅದನ್ನು ಓದಿದಾಗಲೇ ಈ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬರುತ್ತದೆ ಅಂತ ಪಾಟೀಲರಿಗೆ ನಾನು ಪತ್ರ ಬರೆದು ತಿಳಿಸಿದ್ದೆ. ಅವರಿಗೆ ಪ್ರಶಸ್ತಿ ಬಂದ ಸಂತಸ. ನನಗೆ ಒಳ್ಳೆಯ ಕಾದಂಬರಿಗೆ, ಪ್ರತಿಭಾವಂತ ಸಾಹಿತಿ ಮಿತ್ರರಿಗೆ ಪ್ರಶಸ್ತಿ ಸಿಕ್ಕಿತಲ್ಲ ಎಂಬ ಸಂತೋಷದ ಜತೆಗೆ ನನ್ನ ಭವಿಷ್ಯ ನಿಜವಾದ ಖುಷಿ! ರಾಘವೇಂದ್ರ ಪಾಟೀಲರಿಗೆ ಅಭಿನಂದನೆಗಳು. ಇನ್ನು ನಿಲ್ಲುಹಂಗಿಲ್ಲ ಪಾಟೀಲರ ಸಾಹಿತ್ಯ ತೇರು."

-ಎಚ್.ದುಂಡಿರಾಜ್

(ಮಲ್ಲಾಡಿಹಳ್ಳಿಯಿಂದ ದಿಲ್ಲಿಗೆ ತಲುಪಿದ ತೇರು)

ಹಸಿರು ಕ್ರಾಂತಿ ಸಾಪ್ತಾಹಿಕ ಸಂಪದ, ೧೦-೨-೨೦೦೬, ಪು.೫

"ತನ್ನದೇ ಕಥೆ ವ್ಯಥೆಯ
ವಿಸಂಗತಿಯ ಈ ತೇರು
ಬೆಟಗೇರಿ ಮೂಲದ
ಏಕವ್ಯಕ್ತಿ ದೈತ್ಯ ಸಾಹಸದಲ್ಲಿ
ದಿಲ್ಲಿ ಸೇರಿ
ಕರ್ನಾಟಕಕ್ಕೆ ಕರ್ನಾಟಕವೇ
ನಿಬ್ಬೆರಗಾಗುವಂತೆ
ಸ್ಪರ್ಧಾ ವಿಜೇತಗೊಂಡದ್ದು

ರಾಘುವೇಂದ್ರ ಪವಾಡದಿಂದಲ್ಲ
ಗೌಡಕೀ ಪಾಟೀಲನ ಜೋರಿನಿಂದಲೂ
ಅಲ್ಲ
ಹಾಗೆಂದೇ ಮಲ್ಲಾಡಿಹಳ್ಳಿಯ
ಈ 'ರಾಪಾ'ಗೆ ಈ ಕವನ ರೂಪದ
ಅಭಿನಂದನೆಗಳು''

- ರವಿ ಉಪಾಧ್ಯ
(ಈ ತೇರು)
ಹಸಿರುಕ್ರಾಂತಿ ಸಾಪ್ತಾಹಿಕ ಸಂಪದ ೧೦-೨-೨೦೦೬, ಪು.೫

''ಕಥೆಯ ಶಕ್ತಿಯ ಬಗ್ಗೆ ಇರುವ ನಂಬಿಕೆಯೇ ರಾಘುವೇಂದ್ರ ಪಾಟೀಲರ ಸೃಜನಶೀಲತೆಯ ಹಿಂದೆ ಕೆಲಸ ಮಾಡಿರುವ ಪ್ರಮುಖ ದ್ರವ್ಯ. ಕಥೆ ಎಂಬುದು ಕೇವಲ ಹೇಳುವವರ ಹಂಬಲ ಹಾಗೂ ಕೇಳುವವರ ಆಸಕ್ತಿ ಮಾತ್ರವಾಗದೆ, ಒಂದು ಕಥೆ ಸೃಷ್ಟಿಯಾಗುವ ಕ್ರಮದಲ್ಲೇ ಅದು ಮೂಡಿಸುವ ಹಲವು ಸಾಧ್ಯತೆಗಳ ಬಗ್ಗೆ ಪಾಟೀಲರಿಗೆ ಆಸಕ್ತಿ. ತಮ್ಮ ಸುತ್ತಮುತ್ತಲ ಸಂಗತಿಗಳು, ಘಟನೆಗಳು, ಜನಗಳು ಕಥೆಯಾಗಿ ಬಿಡುವ ಕ್ರಮವನ್ನು ಅವರು ಕುತೂಹಲದಿಂದ ನೋಡುತ್ತಾರೆ. ಕಥೆ ಇತಿಹಾಸವಾಗಿ ಬಿಡುವ, ಕಥೆ ಮತ್ತೊಂದು ಕಥೆ ಹೇಳುವ, ಕಥೆ ದಾಖಲೆಯಾಗುವ ವಿಭಿನ್ನ ಬಗೆಗಳನ್ನು ಅನ್ವೇಷಿಸಲು ಪಾಟೀಲರು ಪ್ರಯತ್ನಿಸುತ್ತಾರೆ. ಕೆಲವೊಮ್ಮೆ ಅವರ ಈ ಪ್ರಯತ್ನದಲ್ಲಿ ಕವಿ ಮನಸ್ಸಿಗೆ ಸಂವಾದಿಯಾಗುವ ಬೆರಗಿದ್ದರೆ, ಮತ್ತೆ ಕೆಲವೊಮ್ಮೆ ಅವರ 'ನೋಟ' ದಾಖಲೆಗಾರನ ಒಣವಿವರಗಳಲ್ಲಿ ನೆಟ್ಟಿರುತ್ತದೆ. ಕಥೆ ಕೆಲವೊಮ್ಮೆ ನಿಗೂಢ ಲೋಕವೊಂದನ್ನು ಸೃಷ್ಟಿಸಿದರೆ, ಮತ್ತೆ ಕೆಲವೊಮ್ಮೆ ಕೇವಲ ಒಗಟಿನ ರಹಸ್ಯ ಮಾತ್ರವಾಗಿ ಬಿಡುತ್ತದೆ. ಈ 'ಕಾಣ್ಕೆ-ಕಣ್ಕಟ್ಟು'ಗಳ ಅಂತರದಲ್ಲೇ ಪಾಟೀಲರ ಶಕ್ತಿ ಹಾಗೂ ಮಿತಿಗಳಿವೆ.''

-ನರಹಳ್ಳಿ ಬಾಲಸುಬ್ರಹ್ಮಣ್ಯ
(ಸಾಹಿತ್ಯ ಸಂಸ್ಕೃತಿ, ಪು.೧೦೧)

''ಶ್ರೀಪಾಟೀಲ ಅವರು ಸಣ್ಣಕತೆಯ ಬಂಧದಲ್ಲಿ ಈಗಾಗಲೇ ಗಮನಾರ್ಹ ಹೆಜ್ಜೆಗಳನ್ನು ದಾಖಲಿಸಿದ್ದಾರೆ. ಅವರ ಈ ಕಥನ ಇನ್ನೊಂದು ಮುಖ್ಯ ಹೆಜ್ಜೆ ಎಂದು ನಾನು ತಿಳಿಯುತ್ತೇನೆ.''

-ಡಾ.ಕೆ.ವಿ.ನಾರಾಯಣ
(ಬಾಳವ್ವನ ಕನಸುಗಳು ಮುನ್ನುಡಿ)

''ಕತೆಗಳನ್ನು ಓದಿದ್ದು ಸಾರ್ಥಕವಾಯಿತು ಅನ್ನಿಸುವಂಥ ಭಾವನೆ ಮೂಡುವ ಹಾಗೆ ಬರೆಯುವವರು ನೀವು. ನಿಮ್ಮ ಕಥೆಗಳನ್ನು ಒಳ್ಳೆಯ ಕವಿತೆಗಳನ್ನು ಓದುವಂತೆಯೇ ಓದಬೇಕು. ಅಥವಾ ಕೇಳಬೇಕು. ಮುಂದೆ ನೀವು ಕತೆ ಬರೆಯುವುದು 'ಹಗರ ಅಂತ ತಿಳಕೋಬ್ಯಾಡ್ರಿ.... ಇನ್ನ ಮುಂದಿಂದು ಇನ್ನಾ ಹೆಚ್ಚಿನ ತೂಕದ್ದು... ಹಂಗs ಸಾಧಿಸಿಕೋತs ಹೋದಂಗ ಹೋದಂಗ... ಇನ್ನೂ ಮುಂದ ಉಳದs ಇರತೈತಿ.

ಕತೆಗಾರನ ಶರೀರಾನ ಆವಾಸ ಮಾಡಿಕೊಂಡಿರುವ ಕತೆಗಳನ್ನು ಬಡಿದು ಎಬ್ಬಿಸಬೇಕು...' ಅಂತ ನಿಮ್ಮದೇ ಕತೆಯ ಮಾತುಗಳನ್ನು ನಿಮಗೆ ಹೇಳಬಹುದ ಅಷ್ಟೆ."

-ಓ.ಎಲ್.ನಾಗಭೂಷಣಸ್ವಾಮಿ

(ಮಾಯಿಯ ಮುಖಗಳು ಮುನ್ನುಡಿ)

" 'ಒಡಪುಗಳು' ಎಂಬ ನಿಮ್ಮ ಮೊದಲ ಕಥಾ ಸಂಕಲನ ಓದಿದಂದಿನಿಂದ ನಿಮ್ಮನ್ನು ನಾನು ನಮ್ಮ ಈಚಿನ ಅತ್ಯಂತ ಸಕ್ತ ಕಥೆಗಾರರು ಎಂದುಭಾವಿಸಿದ್ದೇನೆ. ಇಂಥ ಕೆಲವು ಕನ್ನಡದ ಉತ್ತಮ ಕಥೆಗಳನ್ನು ಬರೆದಿರುವ ನಿಮ್ಮ ಪ್ರತಿಭೆಯನ್ನು ಸ್ವಂತ ಕಥೆಗಾರನಾಗಿ ನಾನು ಮೆಚ್ಚಿಕೊಂಡಿರುವ ಮುಖ್ಯ ಗುಣವೆಂದರೆ, ಪ್ರಯೋಗಶೀಲತೆ, ಕಥೆ ಹೇಳುವ ಕ್ರಮದಲ್ಲೆ ನಿಮಗೆ ಗಾಢ ಆಸಕ್ತಿಯಿರುವುದು ನಿಮ್ಮ ಉತ್ತಮ ಕಥೆಗಳಲ್ಲೆಲ್ಲ ಕಾಣಬಹುದು. ಕಥಾಲೋಕದಲ್ಲಿ ನಿಜವಾದ ಹೊಸದನ್ನು ಹೇಳಬಲ್ಲವರೆಲ್ಲೆಲ್ಲ ಈ ಆಸಕ್ತಿ ಇರಲೇ ಬೇಕಾಗುತ್ತದೆ."

-ಯು.ಆರ್.ಅನಂತಮೂರ್ತಿ

(ನವ್ಯಲೋಕ, ಪು.೧೨೧)

"ಇಂದಿನ ಬದುಕು ಹಾಗೂ ಕಲೆಗಳ ನಡುವಿನ ಅರ್ಥಪೂರ್ಣ ನಂಟನ್ನು ಸಾಧಿಸುವ ಹಾದಿಯಲ್ಲಿ ನೀವು ಗಾವುದಗಟ್ಟಲೆ ನಡೆದಿದ್ದೀರಿ. 'ಲಯ' ಕಥೆ ಬರೆದ ಘಳಿಗೆ ನಿಮ್ಮ ಜೀವನದ ಸಾರ್ಥಕತೆಯ ಕ್ಷಣಗಳಲ್ಲಿ ಒಂದು ಅನುಮಾನವೇ ಇಲ್ಲ."

-ಎಚ್.ಎಸ್.ರಾಘವೇಂದ್ರರಾವ್

(ದೇಶಗತಿ ಬೆನ್ನುಡಿ)

"ರಾಘವೇಂದ್ರ ಪಾಟೀಲರು ನಮ್ಮ ಈಚಿನ ಶಕ್ತಕತೆಗಾರರಲ್ಲಿ ಒಬ್ಬರು. ಕತೆ ಹೇಳುತ್ತಲೇ ಅನುಭವದ ಆಳಕ್ಕೆ ಓದುಗರನ್ನು ಅದ್ದಿಬಿಡುವ ಶಕ್ತಿ ಲೇಖಕರ ವೈಶಿಷ್ಟ್ಯ."

-ಕೃತಿ

(ಪ್ರತಿಮೆಗಳ ಬೆನ್ನುಡಿಯಲ್ಲಿ)

"ಚಮತ್ಕಾರವನ್ನು ಮೋಹಿಸದೆ ಸುತ್ತ ಆಗುತ್ತಿರುವ ಮಾರ್ಪಾಡುಗಳನ್ನು ಗುರುತಿಸಿ, ಆ ಆವರಣದಲ್ಲಿ ವ್ಯಕ್ತಿಯ ಒಳ ಜಗತ್ತಿನ ವ್ಯಾಪಾರಗಳನ್ನು ಭಾಷೆಯ ಮೂಲಕ ಬಿಡಿಸಿ ಕಾಣುವ ಪ್ರಯತ್ನವನ್ನು ಯಶಸ್ವಿಯಾಗಿ ಹಲವು ಕತೆಗಳಲ್ಲಿ ಸಾಧಿಸಿರುವ ಕತೆಗಾರರು."

-ಪ್ರೊ.ಎಲ್.ಎಸ್.ಶೇಷಗಿರಿರಾವ್

(ಒಡಪುಗಳು ಮುನ್ನುಡಿ)

"ನವ್ಯೋತ್ತರ ಸಾಹಿತ್ಯದ ಪ್ರಮುಖ ಲೇಖಕರಲ್ಲಿ ಒಬ್ಬರೆಂದು ಗುರುತಿಸಿಕೊಂಡ ಶ್ರೀ ರಾಘವೇಂದ್ರ ಪಾಟೀಲರದು ನವ್ಯರಲ್ಲಿಯೇ ವಿಶಿಷ್ಟವಾದ ವ್ಯಕ್ತಿತ್ವ. ನವ್ಯದಲ್ಲಿಯೇ ತಮ್ಮ ಬರವಣಿಗೆಯನ್ನು ಶುರು

ಮಾಡಿದವರಾದರೂ ನವ್ಯದ ಸಾಧ್ಯತೆಗಳನ್ನು ಮೀರುವ ಪ್ರಯತ್ನ ಮಾಡುತ್ತಲೇ ತಮ್ಮ ಕಥನ ಪ್ರತಿಭೆಯ ಸೃಷ್ಟಿಶೀಲತೆಯನ್ನು ಮೆರೆದ ಅಪರೂಪದ ಬರೆಹಗಾರರು."

-ಡಾ.ಪಿ.ಕೆ.ನಾವಲಗಿ

(ನವ್ಯೋತ್ತರದ ಕಥನ ಪ್ರತಿಭೆ : ರಾಘವೇಂದ್ರ ಪಾಟೀಲ)

ಹಸಿರುಕ್ರಾಂತಿ ಸಾಪ್ತಾಯಿಕ ಸಂಪದ, ೧೦-೨-೨೦೦೬, ಪು.೬

"ನಮ್ಮ ಶ್ರೇಷ್ಠ ಕತೆಗಾರರಲೊಬ್ಬರಾದ ರಾಘವೇಂದ್ರ ಪಾಟೀಲರು ದೂರದ ಮಲ್ಲಾಡಿಯಲ್ಲಿದ್ದು ಕೊಂಡು, ಸಾಂಸ್ಕೃತಿಕವಾಗಿ ಮಾಡುತ್ತಿರುವ ಮಹತ್ವದ ಕೆಲಸ ಮುಖ್ಯವಾದುದು. ಕನ್ನಡ ಮನಸ್ಸು ದಿಟ್ಟವಾಗಿಡಲು, ಚರ್ಚೆಗೆ ಪ್ರೇರೇಪಿಸಲು ಸೂಕ್ಷ್ಮತೆ ಕಳೆದುಕೊಳ್ಳದೆ ಅತ್ಯುತ್ತಮವಾದುದನ್ನು ಗುರ್ತಿಸಲು ಬೇಕಾದ ಒಂದು ವಾತಾವರಣವನ್ನು ಸೃಷ್ಟಿಸಲು ರಾಘವೇಂದ್ರ ಪಾಟೀಲರು ಯಾವ ಬಗೆಯ ಸದ್ದುಗದ್ದಲ ಪ್ರಚಾರಗಳ ಹಂಗಿಲ್ಲದೆ ಶ್ರಮಿಸುತ್ತಿದ್ದಾರೆ."

-ನರಹಳ್ಳಿ ಬಾಲಸುಬ್ರಹ್ಮಣ್ಯ

(ನೆಲಸಂಸ್ಕೃತಿ, ಪು.೧೯೨)

" 'ತೇರು' ಓದುತ್ತ ನನ್ನ ಮೂಲವಿಶ್ವಾಸವೊಂದು ಮತ್ತೆ ದೃಢವಾಗುತ್ತಿದೆ : ಅದೆಂದರೆ ನಮ್ಮ ಪ್ರಾದೇಶಿಕ ಕನ್ನಡಗಳಲ್ಲಿ ಎಷ್ಟೊಂದು ವ್ಯಂಜನ ಶಕ್ತಿಯಿದೆ ಎನ್ನುವುದು. ಪಾಟೀಲರು ಉಪಯೋಗಿಸುವ ಪ್ರಾದೇಶಿಕ ಕನ್ನಡದ ಪ್ರತಿಯೊಂದು ಪದವೂ ಎಲ್ಲರಿಗೂ ಅರ್ಥವಾಗುತ್ತದೆ ಎನ್ನಲಾಗದು. ಆದರೆ 'ತೇರು' ಓದಲು ಅದೊಂದು ತಡೆಯೆನಿಸುವುದಿಲ್ಲ.

-ಕೆ.ವಿ.ತಿರುಮಲೇಶ್

(ತೇರು : ಒಂದು ಐತಿಹ್ಯದ ನಿರಚನೆ)

ವಿಜಯಕರ್ನಾಟಕ, ೨೯-೮-೨೦೦೮, ಪು.೬

"ರಾಘವೇಂದ್ರ ಪಾಟೀಲರು ತಮ್ಮ ಸಣ್ಣಕತೆಗಳ ಮೂಲಕ ಹೊಸ ಪೀಳಿಗೆಯ ಮುಖ್ಯ ಲೇಖಕರಲ್ಲಿ ಒಬ್ಬರೆಂದು ಈಗಾಗಲೇ ಹೆಸರು ಮಾಡಿರುವವರು. ತಮ್ಮ ಬರವಣಿಗೆಯ ಪ್ರಾದೇಶಿಕ ಎನ್ನಬಹುದಾದಂಥ ಕಸುವು, ಸೂಕ್ಷ್ಮ ವಿವರಗಳ ಸಂಯೋಜನೆಯಿಂದ ಬದುಕಿನ ಅನುಕ್ತ ಸಂಗತಿಗಳನ್ನು ನಿರಾಯಾಸವಾಗಿ ಹೊಳೆಸುವ ಸಾಮರ್ಥ್ಯ, ಒಂದು ಬಗೆಯ ಹಳ್ಳಿತನದಿಂದ ಮಾತ್ರ ಸಾಧ್ಯವಾಗುವ ಗಟ್ಟಿಗತನ, ವಿಷಾದವನ್ನು ಉಡಿಯಲ್ಲಿ ಹಾಕಿಕೊಂಡು ಹಾಸ್ಯ ಈ ಮೊದಲಾದ ಗುಣಗಳಿಂದ ಈತ ನಾನು ಓದಲು ಆಸೆ ಪಡುವ ಹೊಸಕತೆಗಾರರಲ್ಲಿ ಮುಖ್ಯರಾಗಿದ್ದಾರೆ."

-ಎಚ್.ಎಸ್.ವೆಂಕಟೇಶಮೂರ್ತಿ

(ಅಜ್ಞಾತ ಮುಂಬಯಿ, ಮುನ್ನುಡಿ, ಪು.೮)

"ಉತ್ತರ ಕರ್ನಾಟಕದ ವಿಶೇಷವಾಗಿ ಬೆಳಗಾವಿ ವಿಭಾಗದ ಆಡುಭಾಷೆಯ ಸತ್ವವನ್ನು

ಮೈಗೂಡಿಸಿಕೊಂಡಿರುವ ಪಾಟೀಲರ ಬರವಣಿಗೆ ನಮ್ಮ ಮೌಖಿಕ ಕಥಾ ಪರಂಪರೆಯನ್ನು ನೆನಪಿಸುತ್ತದೆ. ಭಾಷೆಯ ಲಯ, ಛಂದ, ಕುಣಿತ, ಮಣಿತಗಳನ್ನು ಅರ್ಥವತ್ತಾಗಿ ದುಡಿಸಿಕೊಳ್ಳಬಲ್ಲ ಪ್ರತಿಭೆ ಅನನ್ಯವಾಗಿದೆ. ಒಟ್ಟಾರೆ ಪಾಟೀಲರ ಬರವಣಿಗೆಗೆ ಪರಿಪಾಕ ಪ್ರಾಪ್ತವಾಗಿದೆ."

-ಮಲ್ಲಿಕಾರ್ಜುನ ಹಿರೇಮಠ

(ಬಹುಮಾನಿತ ಕೃತಿಗಳು, ೧೯೯೮, ಪು.೧೧೩)


"ರಾಘವೇಂದ್ರ ಪಾಟೀಲರು ಕಥೆಗಳ ಬರವಣಿಗೆ ಒಂದು ಅಪೂರ್ವಸಿದ್ಧಿ ಎಂಬುದನ್ನು ಸ್ಪಷ್ಟವಾಗಿಯೇ ತೋರುತ್ತಾರೆ. ಕನ್ನಡ ಕಥಾ ಪರಂಪರೆಗೆ ಹೊಸದೆನಿಸುವ ಶೈಲಿಯೊಂದು ದೇಸಗತಿ ಸಂಕಲನದಿಂದ ಇಲ್ಲಿಯೂ ಮುಂದುವರಿದಿದೆ. ಉತ್ತರಾದಿ ಹಿಂದುಸ್ತಾನಿ ಶೈಲಿಯಲ್ಲಿ ರಾಗವೊಂದು ತನ್ನ ಸ್ವರಗಳ ಆಟದಲ್ಲಿ ಆಲಾಪಗೊಳ್ಳುವಂತೆ ಈ ಕಥೆಗಳಲ್ಲಿ ಒಂದು ಕಿರಿದಾದ ಚೌಕಟ್ಟನ್ನು ವಿವರಗಳ ತಾನದಲ್ಲಿ ಕಥನವಾಗಿಸುತ್ತ ನಡೆದು, ಮುಂದ್ರದಿಂದ ತೀವ್ರಕ್ಕೆ ಸ್ವರಗಳು ಉಕ್ಕೇರುವಂತೆ ತೀನ್‌ತಾಲ್‌ನ ಬಿಗುವಿಗೆ ಈ ಕಥೆಗಳು ಜಿಗಿಯುತ್ತವೆ. ಹೀಗಾಗಿಯೇ ಈ ಕಥೆಗಳಲ್ಲಿ ನಾದದ ಝುರಿಯೊಂದು ಸುಪ್ತವಾಗಿ ಪ್ರವಹಿಸುತ್ತದೆ. ಆಶ್ಚರ್ಯವೆಂದರೆ ಇಂಥ ಹೊಸ ಶೈಲಿಯನ್ನು ಪಾಟೀಲರು ಸೃಜಿಸುವುದು ಶಿಷ್ಟ ಭಾಷೆಯಲ್ಲಲ್ಲ. ಗೋಕಾವಿ ಪ್ರಾಂತ್ಯದ ಜನಪದ ನುಡಿಗಟ್ಟುಗಳಲ್ಲಿ ಗೋಕಾವಿ ಭಾಷೆ ಈ ಕಥನದ ಹರಿಯುವಿಕೆಗೆ ಪುಷ್ಠಿಯನ್ನಿಡುತ್ತದೆ. ಕುಮಾರ ಗಂಧರ್ವರು ದೇವಾಸ್ ಪ್ರಾಂತ್ಯದ ಜಾನಪದ ಸಂಗೀತವನ್ನು ತಮ್ಮ ಅದ್ಭುತ ಪ್ರತಿಭೆಯಿಂದ ಹಳೇ ರಾಗಗಳೊಂದಿಗೆ ಮೇಳೈಸಿ ಮಾಧುರ್ಯದ ಹೊಸ ಶೈಲಿಯೊಂದನ್ನು ರೂಪಿಸಿ, ಹೊಸ ರಾಗಗಳನ್ನು ಸೃಜಿಸಿದಂಥ ಸಾಧನೆಯೇ ಪಾಟೀಲರ ಕಥೆಗಳ ಬರವಣಿಗೆಯಲ್ಲಿಯೂ ಕಾಣುತ್ತದೆ."


-ಲಿಂಗರಾಜು

(ಮಾಯಿಯ ಮುಖಗಳು, ಬೆನ್ನುಡಿ)

೨

ರಾಘವೇಂದ್ರಪಾಟೀಲ ಅವರ ವಂಶವೃಕ್ಷ





ಕೃಪೆ The Betigeris-Family Tree Compiled by: Balwant B.Betigeri and Dr.Madhukar G.Betigeri, Jan-2005 Edition

೩

ರಾಘುವೇಂದ್ರ ಪಾಟೀಲ ಅವರ ಬದುಕಿನ ಮುಖ್ಯ ಘಟನೆಗಳು

೧೬.೦೪.೧೯೫೧	:	ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಬೆಟಗೇರಿಯಲ್ಲಿ ಜನನ ತಂದೆ ಬಲವಂತರಾವ್, ತಾಯಿ ಇಂದಿರಾ
೨೨.೦೫.೧೯೫೭	:	ಪ್ರಾಥಮಿಕ ಶಿಕ್ಷಣ, ಬೆಟಗೇರಿ
೧೯೬೪ ಜೂನ್	:	ಮಾಧ್ಯಮಿಕ ಶಿಕ್ಷಣ, ಮಮದಾಪೂರ
೧೯೬೫	:	೯ನೆಯ ತರಗತಿಯಲ್ಲಿದ್ದಾಗ ಎರಡು ಸಣ್ಣಕಥೆಗಳ ಬರಹ, ಮಾಸ್ತಿಯವರ ನಿಜಗಲ್ಲಿನ ರಾಣಿ ಕಥೆಯ ನಾಟಕ ರೂಪಾಂತರ, ಆಕಾಶವಾಣಿ ನಾಟಕ ಸ್ಪರ್ಧೆಗಾಗಿ ಆನಂದಕಂದರಿಂದ ಆ ನಾಟಕ ಮೌಖಿಕ ವಿಮರ್ಶೆ ಮತ್ತು ಅರಕೆಗಳ ಬಗ್ಗೆ ತಿಳುವಳಿಕೆ
೧೯೬೬	:	ಗೋಕಾಕದ ಎಂ.ಎಚ್.ಹೈಸ್ಕೂಲಿನಲ್ಲಿ ೧೦ನೇ ತರಗತಿ ಶಿಕ್ಷಣ
೧೯೬೭	:	ಎಸ್.ಎಸ್.ಎಲ್.ಸಿ.ಪರೀಕ್ಷೆಯಲ್ಲಿ ಹೈಸ್ಕೂಲಿಗೆ ೩ನೇ ರ್‍ಯಾಂಕ ಪಡೆದು ಪಾಸಾಗಿ, ಜೆ.ಎಸ್.ಎಸ್.ಕಾಲೇಜ್ ಗೋಕಾಕದಲ್ಲಿ ಪಿ.ಯು.ಸಿ.ವಿಜ್ಞಾನ ವಿಷಯ ಪಡೆದು ಪ್ರವೇಶ
೧೯೬೯	:	ಬೆಳಗಾವಿಯ ಗೋವಿಂದರಾವ್ ಶಕ್ಸೇರಿಯಾ ಕಾಲೇಜಿನಲ್ಲಿ ಬಿ.ಎಸ್.ಸಿ. ದ್ವಿತೀಯ ವರ್ಷಕ್ಕೆ ಪ್ರವೇಶ
೧೯೭೩	:	ಸ್ನಾತಕೋತ್ತರ ಪದವಿ ಪ್ರಾಣಿಶಾಸ್ತ್ರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೨೯.೦೭.೧೯೭೩	:	ಚಿತ್ರದುರ್ಗ ಜಿಲ್ಲೆಯ ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮದ ಪದವಿಪೂರ್ವ ಕಾಲೇಜಿನಲ್ಲಿ ಉಪನ್ಯಾಸಕ ವೃತ್ತಿ ಆರಂಭ
೧೯೭೪	:	ಕೇರ್‌ಟೇಕರ್ ಎನ್.ಸಿ.ಸಿ.ಆಫೀಸರ್ ಆಗಿ ಪದವಿಪೂರ್ವ ಕಾಲೇಜಿನಲ್ಲಿ ಸಿನೀಯರ್ ಡಿವಿಜನ್ ಎನ್.ಸಿ.ಸಿ.ಆರಂಭಿಸಿದ್ದು

೨೮.೦೪.೧೯೭೫ ರಿಂದ ೨೭.೭.೧೯೭೫ರವರೆಗೆ	:	ನಾಗಪೂರ ಜಿಲ್ಲೆಯ ಕಾಮಟಿ ಮಿಲಿಟರಿ ಕೇಂದ್ರದಲ್ಲಿ (ಆಫೀಸರ್ಸ್ ಟ್ರೇನಿಂಗ್ ಸ್ಕೂಲ್) ತರಬೇತಿ ಮತ್ತು ಎನ್.ಸಿ.ಸಿ.ಆಫೀಸ್‌ರಾಗಿ ರೂಪ ಗೊಂಡದ್ದು
೧೯೭೫	:	ಕವಿತಾ ರಚನೆ ಆರಂಭ
೧೯೭೬	:	ಜಯಶ್ರೀ ಅವರೊಂದಿಗೆ ವಿವಾಹ
೧೯೭೭	:	ಮೊದಲ ಕಥೆ ಒಡಪುಗಳು ಉದಯವಾಣಿ ದೀಪಾವಳಿ ಕಥಾ ಸ್ಪರ್ಧೆಯಲ್ಲಿ ಬಹುಮಾನ
೩.೦೪.೧೯೭೭	:	ಮಗ ಶ್ರೀ ಹರ್ಷನ ಜನನ
೧೯೭೮	:	ಒಡಪುಗಳು ಪ್ರಥಮ ಕಥಾ ಸಂಕಲನ ಪ್ರಕಟಣೆ
೦೧.೦೧.೧೯೭೯	:	ಪ್ರಜಾವಾಣಿ ಹೊಸವರ್ಷದ ವಿಶೇಷ ಸಂಚಿಕೆಯ ಕಥಾ ಸ್ಪರ್ಧೆಯಲ್ಲಿ 'ಪ್ರತಿಮೆಗಳು' ಕಥೆಗೆ ಪ್ರಥಮ ಸ್ಥಾನ
೧೯೭೯	:	ಸಂಕಿರಣ ಕೃತಿ ಪ್ರಕಟಣೆ
೧೯೭೯	:	ಹೊಸಕಾವ್ಯದ ಮುನ್ನೆಲೆ ಭಾಗ ೧ ಮತ್ತು ೨ ಪ್ರಕಟಣೆ
೩೦.೦೯.೧೯೭೯	:	ಮಗಳು ವರ್ಧನಾಳ ಜನನ
೧೯೮೨	:	ಸುಧಾ ಯುಗಾದಿ ಕಾದಂಬರಿಯ ಸ್ಪರ್ಧೆಯಲ್ಲಿ ಕಳಕೊಂಡವಳು (ಬಾಳವ್ವನಕನಸುಗಳು) ಮೆಚ್ಚುಗೆಯ ಬಹುಮಾನ
೧೯೮೨	:	ಪ್ರತಿಮೆಗಳು ಕೃತಿ ಪ್ರಕಟಣೆ
೧೯೮೪	:	ಬಾಳವ್ವನ ಕನಸುಗಳು(ಕಳಕೊಂಡವಳು) ಕೃತಿ ಪ್ರಕಟಣೆ
೧೯೮೫	:	ಡಿ.ಎಸ್.ನಾಗಭೂಷಣ ಮತ್ತು ಇತರರೊಂದಿಗೆ ಸೇರಿ ಸಾಹಿತ್ಯ ಸಂವಾದ (ಸಾಹಿತ್ಯಿಕ, ಸಾಂಸ್ಕೃತಿಕ) ದ್ವೈಮಾಸಿಕ ಪತ್ರಿಕೆಯನ್ನು ಆರಂಭಿಸಿದ್ದು
೧೯೮೯	:	ಕರ್ನಾಟಕ ಸಾಹಿತ್ಯ ಅಕಾಡೆಮಿಯು ಲೇಖಕರಿಗೆ ನೀಡುವ ಪ್ರವಾಸ ಅನುದಾನ ಪಡೆದು ಮಹಾರಾಷ್ಟ್ರದ ಮುಂಬಯಿ ಪ್ರವಾಸ ಕೈಗೊಂಡಿದ್ದು
೧೯೯೦	:	ಕಾಡಿನ ಹುಡುಗ ಕೃಷ್ಣ ಕೃತಿ ಪ್ರಕಟಣೆ
೧೯೯೧	:	ಅಜ್ಞಾತ ಮುಂಬಯಿ ಪ್ರವಾಸ ಕಥನ ಪ್ರಕಟಣೆ

೧೯೯೨ : ಮಾಸ್ತಿ ಸಾಹಿತ್ಯ ಸಮಗ್ರದರ್ಶನ ಕೃತಿ ಪ್ರಕಟಣೆ

೧೯೯೩ : ವಾಗ್ವಾದ ವಿಮರ್ಶಾಕೃತಿ ಪ್ರಕಟಣೆ

೧೯೯೪ : ನವಮೇಘರೂಪಿ ಕೃತಿ ಪ್ರಕಟಣೆ

೧೯೯೫ : ದೇಸಗತಿ ಕಥಾ ಸಂಕಲನ ಪ್ರಕಟಣೆ

೧೯೯೫ : ಆನಂದಕಂದ ಗ್ರಂಥಮಾಲೆ ಸ್ಥಾಪನೆ

೧೯೯೬ : ದೇಸಗತಿ ಕೃತಿಗೆ ಸಿರಿಗನ್ನಡ ಪ್ರಶಸ್ತಿ

೧೯೯೭ : ಆನಂದಕಂದ ಕೃತಿ ಪ್ರಕಟಣೆ

೧೯೯೭ : ದೇಸಗತಿ ಕೃತಿಗೆ ಕಾರಂತ ಪುರಸ್ಕಾರ

೧೯೯೮ : ಮಾಯಿಯ ಮುಖಗಳು ಕಥಾ ಸಂಕಲನ ಪ್ರಕಟಣೆ

೧೯೯೮ : ಮಾಯಿಯ ಮುಖಗಳು ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೧೯೯೮ : ಮಾಯಿಯ ಮುಖಗಳು ಕೃತಿಗೆ ಬಸು ಪಟ್ಟೇದ ಪ್ರಶಸ್ತಿ

೨೦೦೦ : ಮಾಯಿಯ ಮುಖಗಳು ಕೃತಿಗೆ ಚದುರಂಗ ಪ್ರಶಸ್ತಿ

೨೦೦೧ : ಬೋದಿಲೇರನ ಸಖಿ ಕೃತಿ ಪ್ರಕಟಣೆ

೦೨.೦೭.೨೦೦೨ : ಮಗಳು ವರ್ಧನಾಳ ವಿವಾಹ ಡಾ.ರಾಮಪ್ರಸಾದರೊಂದಿಗೆ

೧೩.೦೭.೨೦೦೩ : ಅನಾಥ ಸೇವಾಶ್ರಮದ ಆಡಳಿತಾಧಿಕಾರಿಯಾಗಿ ನೇಮಕ

೩೧.೦೭.೨೦೦೩ : ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾಗಿ ನೇಮಕ

೨೦೦೩ : ತೇರು ಕೃತಿ ಪ್ರಕಟಣೆ

೨೦೦೩ : ತೇರು ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೨೦೦೩ : ತಿರುಕರಂಗ ಸಾಂಸ್ಕೃತಿಕ ವೇದಿಕೆ ಸ್ಥಾಪನೆ

೨೦೦೩ : ತೇರು ಕೃತಿಗೆ ಸಿರಿಗನ್ನಡ ಪ್ರಶಸ್ತಿ

೨೦೦೪ : ಕುಮಟಾದಲ್ಲಿ ನಡೆದ ಕರ್ನಾಟಕ ಸಾಹಿತ್ಯ ಅಕಾಡೆಮಿ ಕಥಾ ಕಮ್ಮಟದ ಸಹ ನಿರ್ದೇಶಕರಾಗಿ ಸೇವೆ

೨೪.೧೦.೨೦೦೪ : ಮೊಮ್ಮಗ ಪರಿತೋಷನ ಜನನ (ಮಗಳಮಗ)

೨೦೦೫ : ತೇರು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ

೨೦೦೫ : ಪ್ರತ್ಯಭಿಜ್ಞಾನ ಕೀರ್ತಿ ಕೃತಿ ಪ್ರಕಟಣೆ

೨೦೦೫	:	ತೇರು ಕಾದಂಬರಿಗೆ ನಾಟಕರೂಪ ತಿರುಕರಂಗ ಸಾಂಸ್ಕೃತಿಕ ವೇದಿಕೆಯಿಂದ ಮಲ್ಲಾಡಿಹಳ್ಳಿಯಲ್ಲಿ ಪ್ರದರ್ಶನ
೨೦೦೬	:	ತುದಿಯೆಂಬೋ ತುದಿಯಿಲ್ಲ ಕಥೆಗೆ ನಾಟಕ ರೂಪ ತಿರುಕರಂಗ ಸಾಂಸ್ಕೃತಿಕ ವೇದಿಕೆಯಿಂದ ಮಲ್ಲಾಡಿಹಳ್ಳಿಯಲ್ಲಿ ಪ್ರದರ್ಶನ
೨೦೦೬	:	ಗೋಕಾವಿ ನಾಡಿನ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ ಹಾಗೂ ವಿಚಾರಗೋಷ್ಠಿಯ ಅಧ್ಯಕ್ಷತೆ. ಕರ್ನಾಟಕ ನಾಟಕ ಅಕಾಡೆಮಿ, ಹೊಳಲ್ಕೆರೆಯ ರೋಟರಿ ಕ್ಲಬ್, ಸಾಣೆಹಳ್ಳಿ ಮತ್ತು ಸಿರಿಗೆರೆಯ ತರಳಬಾಳು ಬೃಹನ್ಮಠ ಚಿತ್ರದುರ್ಗದ ಮುರುಘರಾಜೇಂದ್ರ ಬೃಹನ್ಮಠ, ಗುಲ್ಬರ್ಗಾ, ಚಿಕ್ಕಮಂಗಳೂರು, ದಾವಣಗೆರೆಯಲ್ಲಿ ಸನ್ಮಾನ
೨೧.೦೨.೨೦೦೬	:	ದೆಹಲಿಯ ಕಾಮನಿ ಆಡಿಟೋರಿಮ್‌ನಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸ್ವೀಕಾರ
೨೦೦೬	:	ತೇರು ಕಾದಂಬರಿಯ ವಿಚಾರ ಸಂಕಿರಣ, ಬಾಗಲಕೋಟೆಯಲ್ಲಿ
೨೦೦೬	:	ಚಿತ್ರದುರ್ಗದ ಅಭಿರುಚಿ ಸಾಹಿತ್ಯಿಕ ಸಾಂಸ್ಕೃತಿಕ ವೇದಿಕೆಯಿಂದ ತೇರುಕೃತಿ ವಿಚಾರಗೋಷ್ಠಿ
೨೦೦೬	:	ತೇರುಕೃತಿ ಎರಡನೆಯ ಮುದ್ರಣ
೯.೦೪.೨೦೦೬	:	ಚಿತ್ರದುರ್ಗ ಜಿಲ್ಲಾ ಉತ್ಸವದ ವಿಚಾರಗೋಷ್ಠಿಯ ಅಧ್ಯಕ್ಷತೆ
೧೦.೦೪.೨೦೦೬	:	ಚಿತ್ರದುರ್ಗ ಜಿಲ್ಲಾ ಉತ್ಸವದಲ್ಲಿ ಸನ್ಮಾನ
೨೦೦೭	:	ತೇರು ಕೃತಿ ಮೂರನೆಯ ಮುದ್ರಣ
೨೦೦೭	:	ಲಯ ಕಥೆಗೆ ನಾಟಕರೂಪ ತಿರುಕರಂಗ ಸಾಂಸ್ಕೃತಿಕ ವೇದಿಕೆಯಿಂದ ಮಲ್ಲಾಡಿಹಳ್ಳಿಯಲ್ಲಿ ಪ್ರದರ್ಶನ
೨.೦೩.೨೦೦೮	:	ಮಗ ಶ್ರೀಹರ್ಷನ ವಿವಾಹ ರೂಪಲಕ್ಷ್ಮಿಯವರೊಂದಿಗೆ
೨೦೦೮	:	ತೇರು ಕೃತಿಗೆ ರಂಗಶ್ರೀ ಪ್ರಶಸ್ತಿ
೨೦೦೮	:	ತೇರು ಕೃತಿ ನಾಲ್ಕನೆಯ ಮುದ್ರಣ
೨೦೦೮	:	ತೇರು ಕಾದಂಬರಿ, ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯ ಬಿ.ಎ.ದ್ವಿತೀಯ ಸೆಮಿಸ್ಟರ್ ತರಗತಿಗೆ ಪಠ್ಯಪುಸ್ತಕ

೪

ರಾಘವೇಂದ್ರ ಪಾಟೀಲ ಅವರ ಕೃತಿ ಸೂಚಿ

ಕಥಾಸಂಕಲನಗಳು

೧. ಒಡಪುಗಳು ೧೯೭೮, ಕನ್ನಡ ಸಂಘ, ಶೇಷಾದ್ರಿಪುರಂ ಕಾಲೇಜು, ಬೆಂಗಳೂರು

೨. ಪತ್ರಿಮೆಗಳು, ೧೯೮೨, ಕೃತಿ ಪ್ರಕಾಶನ, ಬೆಂಗಳೂರು

೩. ದೇಸಗತಿ, ೧೯೯೫, ಸಂವಾದ ಪ್ರಕಾಶನ ಮಲ್ಲಾಡಿಹಳ್ಳಿ, ಚಿತ್ರುದುರ್ಗ

೪. ಮಾಯಿಯ ಮುಖಗಳು, ೧೯೯೮, ಆನಂದಕಂದ ಗ್ರಂಥಮಾಲೆ ಮಲ್ಲಾಡಿಹಳ್ಳಿ, ಚಿತ್ರದುರ್ಗ

ಕಾದಂಬರಿ

೧. ಬಾಳವ್ವನ ಕನಸುಗಳು, ೧೯೮೪, ಸುಂದರ ಪುಸ್ತಕ ಪ್ರಕಾಶನ, ಮಾಲಮಡ್ಡಿ, ಧಾರವಾಡ

೨. ತೇರು, ೨೦೦೩, ಆನಂದಕಂದ ಗ್ರಂಥಮಾಲೆ ಮಲ್ಲಾಡಿಹಳ್ಳಿ, ಚಿತ್ರದುರ್ಗ

ವಿಮರ್ಶೆ

೧. ವಾಗ್ವಾದ, ೧೯೯೩, ಸಂವಾದ ಪ್ರಕಾಶನ, ಮಲ್ಲಾಡಿ ಹಳ್ಳಿ, ಚಿತ್ರದುರ್ಗ

೨. ಆನಂದಕಂದ, ೧೯೯೭, ಸಾಹಿತ್ಯ ಅಕಾಡೆಮಿ, ರವೀಂದ್ರಭವನ, ನವದೆಹಲಿ

ಪ್ರವಾಸ ಕಥನ

೧. ಅಜ್ಞಾತ ಮುಂಬಯಿ, ೧೯೯೧, ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ

ಸಂಪಾದಿಸಿದ ಕೃತಿಗಳು

ಅ. ಸ್ವತಂತ್ರವಾಗಿ ಸಂಪಾದಿಸಿದ ಕೃತಿಗಳು

೧. ನವಮೇಘರೂಪಿ, ಕನ್ನಡ ಕಾವ್ಯೋದ್ಯಾನದಲ್ಲಿ ಒಂದು ವಿಹಾರ ೧೯೯೪, ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ

೨. ಬೋದಿಲೇರನ ಸಖ, ಲಂಕೇಶ್ ನೆನಪಿನ ಸಂಪುಟ, ೨೦೦೧, ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ

೩. ಪ್ರತ್ಯಭಿಜ್ಞಾನದ ಕೀರ್ತಿ, ಕೀರ್ತಿನಾಥ ಕುರ್ತಕೋಟಿ ನೆನಪಿನ ಸಂಪುಟ, ೨೦೦೫, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ, ಚಿತ್ರದುರ್ಗ

ಆ. ಇತರರ ಜೊತೆ ಸಂಪಾದಿಸಿದ ಕೃತಿಗಳು

೧. ಸಂಕಿರಣ, ಜ್ಞಾನಪೀಠ ಪ್ರಶಸ್ತಿ ಪಡೆದ ಮೂವರು ಲೇಖಕರ ಕುರಿತು ವಿಮರ್ಶೆ, ಎನ್.ಎಸ್. ಚಿದಂಬರರಾವ್ ಜೊತೆ ಸೇರಿ, ೧೯೭೮, ಸಾಹಿತ್ಯ ಸಂಘ, ಜೂನಿಯರ್ ಕಾಲೇಜು, ಮಲ್ಲಾಡಿಹಳ್ಳಿ, ಚಿತ್ರದುರ್ಗ

೨. ಹೊಸ ಕಾವ್ಯದ ಮುನ್ನೆಲೆ ೧ ಮತ್ತು ೨, ನವ್ಯಕವಿಗಳನ್ನು ಕುರಿತು ವಿಮರ್ಶೆ, ಡಾ.ಎಚ್.ಎಸ್.ವೆಂಕಟೇಶಮೂರ್ತಿ ಅವರೊಂದಿಗೆ, ೧೯೭೮, ಕ್ರಿಯಾ ಪ್ರಕಾಶನ, ೧೦೧, ಗಣೇಶ ಮಂದಿರ ರಸ್ತೆ, ೨ನೇ ಬ್ಲಾಕ್, ತ್ಯಾಗರಾಜನಗರ, ಬೆಂಗಳೂರು

೩. ಕಾಡಿನ ಹುಡುಗ ಕೃಷ್ಣ, ಆಲನಹಳ್ಳಿ ಕೃಷ್ಣ ನೆನಪಿನ ಸಂಪುಟ, ಡಿ.ಎಸ್.ನಾಗಭೂಷಣ ಮತ್ತು ಸ.ಉಷಾ ಅವರೊಂದಿಗೆ, ೧೯೯೦, ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ

೪. ಮಾಸ್ತಿ ಸಾಹಿತ್ಯ ಸಮಗ್ರದರ್ಶನ, ಡಿ.ಎಸ್.ನಾಗಭೂಷಣ ಮತ್ತು ಉಷಾ ಅವರೊಂದಿಗೆ, ೧೯೯೨, ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ

೫

ಗ್ರಂಥ ಋಣ

೧. ಅಂಗಡಿ ಎಸ್.ಎಸ್., ೧೯೯೮, ಶೋಧನ, ಪಾರ್ವತಮ್ಮ ಪ್ರಕಾಶನ, ಯರಝುರವಿ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ

೨. ಅಂಗಡಿ ಎಸ್.ಎಸ್., ೨೦೦೭, ವಚನ ಸಾಹಿತ್ಯ ಭಾಷೆ, ಲಿಂಗಾಯತ ಅಧ್ಯಯನ ಅಕಾಡೆಮಿ, ನಾಗನೂರು ಶ್ರೀ ರುದ್ರಾಕ್ಷಿಮಠ, ಬೆಳಾಗವಿ

೩. ಅಮೂರ ಜಿ.ಎಸ್., ೨೦೦೩, ಕನ್ನಡ ಕಥನ ಸಾಹಿತ್ಯ ಸಣ್ಣಕಥೆ, ಪ್ರಿಯದರ್ಶಿನಿ, ಪ್ರಕಾಶನ, ಬೆಂಗಳೂರು

೪. ಕೆಂಪೇಗೌಡ ಕೆ., ೧೯೬೬, ಸಾಮಾನ್ಯ ಭಾಷಾವಿಜ್ಞಾನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೫. ಖಂಡೋಬಾ ಪಿ.ಕೆ., ೧೯೯೯, ಕನ್ನಡ ಪ್ರಾದೇಶಿಕ ಕಾದಂಬರಿಗಳ ಜಾನಪದೀಯತೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೬. ಗೋವಿಂದರಾಜ ಗಿರಡ್ಡಿ(ಸಂ), ೧೯೯೮, ಬಹುಮಾನಿತ ಕೃತಿಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೭. ಚಿದಾನಂದಮೂರ್ತಿ ಎಂ., ೧೯೭೭, ಗ್ರಾಮೀಣ, ಬಾಸ್ಕೋ ಪ್ರಕಾಶನ, ಬೆಂಗಳೂರು

೮. ಜವರೇಗೌಡ ದೇ., ೧೯೭೮, ಗದ್ಯಶೈಲಿ, ಡಿ.ವಿ.ಕೆ.ಮೂರ್ತಿ, ಮೈಸೂರು

೯. ತರೀಕೆರೆ ರಹಮತ್(ಸಂ), ೨೦೦೫, ಕನ್ನಡ ಸಾಹಿತ್ಯ ಮೀಮಾಂಸೆ, ಸಂಪುಟ ೨, ಇಲ್ಲಿ ಯಾರು ಮುಖ್ಯರಲ್ಲ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦. ದಳವಾಯಿ ರಾಜಪ್ಪ(ಸಂ), ೨೦೦೩, ಕನ್ನಡ ಸಾಹಿತ್ಯಕೋಶ, ಕದಿರು ಪ್ರಕಾಶನ, ಮೈಸೂರು

೧೧. ನಾರಾಯಣ ಕೆ.ವಿ.(ಸಂ), ೨೦೦೭ ಭಾಷೆ ವಿಶ್ವಕೋಶ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೨. ಪಾಟೀಲ ರಾಘವೇಂದ್ರ, ೨೦೦೧ ಆನಂದಕಂದ (ಬೆಟಗೇರಿಕೃಷ್ಣಶರ್ಮ), ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ

೧೩. ಬಾಲಸುಬ್ರಹ್ಮಣ್ಯ ನರಹಳ್ಳಿ, ೧೯೯೮, **ಸಾಹಿತ್ಯ ಸಂಸ್ಕೃತಿ**, ಅಂಕಿತ ಪ್ರಕಾಶನ, ಬಸನವಗುಡಿ, ಬೆಂಗಳೂರು

೧೪. ಬಾಲಸುಬ್ರಹ್ಮಣ್ಯ ನರಹಳ್ಳಿ, ೨೦೦೭, **ನೆಲಸಂಸ್ಕೃತಿ**, ಸಮುಖ ಪ್ರಕಾಶನ, ಬೆಂಗಳೂರು

೧೫. ಬೋರಲಿಂಗಯ್ಯ ಹಿ.ಚಿ.(ಸಂ), ೧೯೯೬, **ಕರ್ನಾಟಕ ಜನಪದ ಕಲೆಗಳ ಕೋಶ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೬. ಮರಿಗುದ್ದಿ ಗುರುಪಾದ, ೧೯೮೯, **ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ**, ಸಹ್ಯಾದ್ರಿ ಪ್ರಕಾಶನ, ಜಯಲಕ್ಷ್ಮಿಪುರಂ, ಮೈಸೂರು

೧೭. ಯಲಗಟ್ಟಿ, ಬಾಳಪ್ಪ ಮಲ್ಲಪ್ಪ, ೧೯೮೩, **ಶ್ರೀ ಚೆನ್ನಬಸವಸ್ವಾಮಿಗಳವರ ಚರಿತ್ರಾಮೃತ**, ಶ್ರೀ ಮ.ನಿ.ಪ್ರ.ಸ್ವ ಬಸವಸ್ವಾಮಿಗಳವರು ಸಂಪಾದನಮಠ, ಗೋಕಾವಿ

೧೮. ವೆಂಕಟಸುಬ್ಬಯ್ಯ ಜಿ.(ಸಂ), ೧೯೭೫, **ಕನ್ನಡ ನಿಘಂಟು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೧೯. Betigeri B.B. & Betigeri M.G., 2005, **The Betigeris Family Tree**, Jan 2005 Edition

ಪತ್ರಿಕೆಗಳು

೨೦. ಕೃಷ್ಣಮೂರ್ತಿಬಾಬು(ಸಂ), ೨೦೦೬, **ಕರ್ಮವೀರ** ದೀಪಾವಳಿ ವಿಶೇಷಾಂಕ

೨೧. ತರೀಕೆರೆ ರಹಮತ್(ಸಂ), ಅಕ್ಟೋಬರ್ ೨೦೦೧-ಮಾರ್ಚ್ ೨೦೦೨ **ಕನ್ನಡ ಅಧ್ಯಯನ ಚಳಿ-ಗಾಳಿ ಸಂಯುಕ್ತ ಸಂಚಿಕೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೨. ಪಾಟೀಲ ರಾಘವೇಂದ್ರ(ಸಂ), **ಜನವರಿ-ಮಾರ್ಚ್ ೨೦೦೫ ಸಾಹಿತ್ಯ ಸಂವಾದ ೬೦-೬೧ ದ್ವೈಮಾಸಿಕ ಪತ್ರಿಕೆ**, ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ

೨೩. ಪಾಟೀಲ ರಾಘವೇಂದ್ರ(ಸಂ), ಏಪ್ರಿಲ್-ಜೂನ್ ೨೦೦೫, **ಸಾಹಿತ್ಯ ಸಂವಾದ ೬೨, ದ್ವೈಮಾಸಿಕ ಪತ್ರಿಕೆ**, ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ

೨೪. ರಾಮಕೃಷ್ಣ ಜಿ.(ಸಂ), **ಜೂನ್ ೨೦೦೮, ಹೊಸತು** ಮಾಸಪತ್ರಿಕೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು

೨೫. **ಮಯೂರ**, ಮಾಸಪತ್ರಿಕೆ, ಆಗಸ್ಟ್ ೨೦೦೭

೨೬. ವಿಜಯ **ಕರ್ನಾಟಕ**, ದಿನಪತ್ರಿಕೆ ೨೯.೦೮.೨೦೦೮

೨೭. **ಹಸಿರು ಕ್ರಾಂತಿ**, ದಿನಪತ್ರಿಕೆ, ಸಾಪ್ತಾಹಿಕ ಸಂಪದ, ೧೦.೦೨.೨೦೦೬